ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ-೧

ಮೊದಲನೆಯ ಅಧ್ಯಾಯ (ಸಮನ್ವಯಾಧ್ಯಾಯ)

ಪ್ರೊ|| ಎಸ್. ವೆಂಕಟೇಶಮೂರ್ತಿ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಭಾಗ - 1

ಮೊದಲನೆಯ ಅಧ್ಯಾಯ (ಸಮನ್ವಯಾಧ್ಯಾಯ)

ಶ್ರೀಮಜ್ಜಯತೀರ್ಥರ ಶ್ರೀಮನ್ನ್ಯಾಯಸುಧಾನುಸಾರಿ

ಕನ್ನಡದಲ್ಲಿ ಅರ್ಥ ಮತ್ತು ವಿವರಣೆ ಸಹಿತ

ರಾಯದುರ್ಗದ ಮಂದಿರ ಗ್ರಂಥಾಲಯ
ಬಳ್ಳಾರಿ

ಲೇಖಕರು

ಪ್ರೊ ಎಸ್. ವೆಂಕಟೇಶ ಮೂರ್ತಿ, ಎಂ. ಎಸ್‌ಸಿ

ಪ್ರಕಾಶಕರು

ಪವನಜ ಪ್ರಕಾಶನ

ನಂ. 1625, 5 ನೇ ಬಿ ಕ್ರಾಸ್, ಎರಡನೆಯ ಬ್ಲಾಕ್,

ಬನಶಂಕರಿ ಮೊದಲನೆಯ ಸ್ಟೇಜ್, ಬೆಂಗಳೂರು 560050

Sri Madhvacharya's

Śrīmadanuvyākhyānam

Part - 1

Rendered in Kannada by:
Prof. S. Venkatesha Murthy, M. Sc.
Published by:
Pavanaja Prakashana,
#1625, 5th B Cross, II Block, Banashankari First Stage,
Bangalore 560050; **Phone: 6600932**

First Edition: 2002
Pages:248
Price: Rs. 60/-

ಶ್ರೀಮನ್ಮಧ್ವಾಚಾರ್ಯ ವಿರಚಿತ
ಶ್ರೀಮದನುವ್ಯಾಖ್ಯಾನಮ್ ಭಾಗ 1

ಮೊದಲನೆಯ ಮುದ್ರಣ : 2002

ಪುಟಗಳು : 248

ಬೆಲೆ : ರೂ. 60/-

ಮುದ್ರಕರು :
ಪರಿಮಳ ಮುದ್ರಣಾಲಯ,
ಹನುಮಂತನಗರ,
ಬೆಂಗಳೂರು 560019

ಮುನ್ನುಡಿ

ಭಗವಾನ್ ವೇದವ್ಯಾಸರಿಂದ ವಿರಚಿತವಾದ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ವ್ಯಾಖ್ಯಾನರೂಪವಾಗಿ ಶ್ರೀಮಧ್ವಾಚಾರ್ಯರು ಬ್ರಹ್ಮಸೂತ್ರಭಾಷ್ಯ, ಅಣುಭಾಷ್ಯ, ಅನುವ್ಯಾಖ್ಯಾನ ಮತ್ತು ನ್ಯಾಯವಿವರಣ ಎಂಬುದಾಗಿ ನಾಲ್ಕು ಸೂತ್ರಾರ್ಥ ನಿರ್ಣಾಯಕ ಗ್ರಂಥಗಳನ್ನು ರಚಿಸಿದ್ದಾರೆ. (ಬ್ರಹ್ಮಮೀಮಾಂಸಾ ಶಾಸ್ತ್ರದ ಬಗ್ಗೆ ವಿವರವಾದ ಪ್ರಸ್ತಾವನೆಗೆ ನಮ್ಮಿಂದ ಈಗಾಗಲೇ ಪ್ರಕಟವಾಗಿರುವ ಬ್ರಹ್ಮಸೂತ್ರದೀಪಿಕಾ ಗ್ರಂಥವನ್ನು ನೋಡಿರಿ). ಸೂತ್ರಭಾಷ್ಯದಲ್ಲಿ ಶ್ರುತಿ ಸ್ಮೃತಿ ಪುರಾಣ ವಾಕ್ಯಗಳ ಆಧಾರದಿಂದ ಬ್ರಹ್ಮಸೂತ್ರಗಳ ಅರ್ಥವನ್ನು ಯಾವುದೇ ಸಂದಿಗ್ಧವಿಲ್ಲದಂತೆ ನಿರ್ಣಯಿಸುವುದರ ಜೊತೆಯಲ್ಲಿಯೇ ಇತರ ಭಾಷ್ಯಕಾರರು ಎಲ್ಲಿ ಎಡವಿದ್ದಾರೆ ಹಾಗೂ ಅವರ ವ್ಯಾಖ್ಯಾನಗಳು ಯಾವ ರೀತಿಯಲ್ಲಿ ಸೂತ್ರಕಾರರಿಗೆ ಸಮ್ಮತವಾಗಿಲ್ಲ ಎನ್ನುವುದನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಅಣುಭಾಷ್ಯವು ಸೂತ್ರಭಾಷ್ಯದ ಸಾರಸಂಗ್ರಹವಾಗಿದೆ. ಕೇವಲ ೩೨ ಶ್ಲೋಕಗಳಲ್ಲಿ ಇಡೀ ಸೂತ್ರಭಾಷ್ಯದ ಸಾರವನ್ನು ಬಹಳ ಸುಂದರವಾಗಿ ಸಂಗ್ರಹಿಸಿರುವ ಇಂಥಹ ಮತ್ತೊಂದು ಕೃತಿಯು ಬೇರೆ ಯಾವುದೇ ಭಾಷ್ಯಕಾರರಿಂದ ರಚಿಸಲ್ಪಟ್ಟಿಲ್ಲ. ಸೂತ್ರಬಾಷ್ಯದಲ್ಲಿ ಸಂಕ್ಷೇಪವಾಗಿ ಸೂಚಿಸಿದ ಕೇಲವು ತತ್ವಶಾಸ್ತ್ರದ ಸಮಸ್ಯೆಗಳನ್ನು ಅನುವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಸೂತ್ರಬಾಷ್ಯದಲ್ಲಿ ಸೂತ್ರಾರ್ಥನಿರ್ಣಯ ಮುಖ್ಯವಾಗಿದ್ದರೆ ಅನುವ್ಯಾಖ್ಯಾನದಲ್ಲಿ ಪರಕೀಯರ ಸಿದ್ಧಾಂತಗಳ ವಿಮರ್ಶೆಯ ಮೂಲಕ ಅಪವ್ಯಾಖ್ಯಾನಗಳ ಖಂಡನೆ ಮತ್ತು ಸತ್ಸಿದ್ಧಾಂತದ ಮಂಡನೆಯು ಮುಖ್ಯ ಉದ್ದೇಶವಾಗಿದೆ. ನ್ಯಾಯವಿವರಣದಲ್ಲಿ ಪ್ರತಿಯೊಂದು ಅಧಿಕರಣದಲ್ಲಿ ಪ್ರತಿಪಾದಿತವಾಗಿರುವ ಪೂರ್ವಪಕ್ಷ ಮತ್ತು ಸಿದ್ಧಾಂತ ನ್ಯಾಯಗಳನ್ನು ಸಂಗ್ರಹಿಸಿ ಬ್ರಹ್ಮಮೀಮಾಂಸಾ ಶಾಸ್ತ್ರದ ಸಾರಸಂಗ್ರಹವನ್ನು ನೀಡಲಾಗಿದೆ.

ಅನುವ್ಯಾಖ್ಯಾನವು ಶ್ರೀಮದಾಚಾರ್ಯರಿಂದ ರಚಿತವಾದ ಅತ್ಯಂತ ಪ್ರೌಢಶೈಲಿಯಲ್ಲಿರುವ ಶ್ಲೋಕರೂಪದ ಪ್ರಬಂಧ ಗ್ರಂಥ. ಇದು ಸರ್ವಮೂಲ ಗ್ರಂಥಗಳಲ್ಲಿ ಬಹಳ ಮಹತ್ವವನ್ನು ಪಡೆದಿದೆ. ಗಹನವಾದ ಬ್ರಹ್ಮಮೀಮಾಂಸಾ ಶಾಸ್ತ್ರದ ವಿಮರ್ಶೆಗಾಗಿ ಪದ್ಯರೂಪದಲ್ಲಿ ರಚಿತವಾದ ಗ್ರಂಥ ಬೇರೊಂದಿಲ್ಲ. ಸೂತ್ರಭಾಷ್ಯದ ಭಾವವನ್ನು ವಿಶದೀಕರಿಸುವ ಅನುವ್ಯಾಖ್ಯಾನವು ೧೯೮೫ ಗ್ರಂಥ

ಪರಿಮಾಣವುಳ್ಳದ್ದಾಗಿದೆ. ಅಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದನ್ನು ಇಲ್ಲಿ ವಿಸ್ತರಿಸಲಾಗಿದೆ. ಅಲ್ಲಿ ಹೇಳದೇ ಬಿಟ್ಟಿದ್ದನ್ನು ಇಲ್ಲಿ ಹೇಳಲಾಗಿದೆ. ಮಧ್ವಾಚಾರ್ಯರ ಸಮಗ್ರ ವ್ಯಾಖ್ಯಾನ ಕೌಶಲ ಹಾಗೂ ಪರಮತ ವಿಮರ್ಶೆಯ ಹರಿತಮತಿಗೆ ಇದೊಂದು ಶ್ರೇಷ್ಠ ನಿದರ್ಶನ. ಇದರ ಒಂದೊಂದು ವರ್ಣ, ಪದ, ಪದಪುಂಜಗಳೂ ಅನೇಕಾರ್ಥ ಗರ್ಭಿತವಾದದ್ದು. "ಗ್ರಂಥೋಽಯಮಪಿ ಬಹ್ವರ್ಥೋ ಭಾಷ್ಯಂ ಚಾತ್ಯರ್ಥ ಮಿತ್ತರಮ್ । ಬಹುಜ್ಞಾ ಏವ ಜಾನಂತಿ ವಿಶೇಷೇಣಾರ್ಥಮೇತಯೋಃ ।।" ಎಂದು ಶ್ರೀಮದಾಚಾರ್ಯರೇ ಅಪ್ಪಣೆ ಕೊಡಿಸಿದ್ದಾರೆ. ಶ್ರೀಮದಾಚಾರ್ಯರ ಪರಮಾಪ್ತ ಶಿಷ್ಯರಾದ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಈ ಗ್ರಂಥವನ್ನು ಕುರಿತು 'ತತ್ವ ಪ್ರದೀಪ' ಎಂಬ ಟೀಕಾ ಗ್ರಂಥದಲ್ಲಿ "ಮಿತಪದಗಳಾದರೂ ಅಮಿತಾರ್ಥಗಳ ಆಸಂದಿಗ್ಧ ವಿರೂಪಣಾ ಸಾಮರ್ಥ್ಯದಲ್ಲಿ ತೋರಿಬರುವ ಅದ್ಭುತ ಚಿಂತನಾ ಸಾಮರ್ಥ್ಯಕ್ಕೆ ಸರಿಸಾಟಿಯಾದ ಗ್ರಂಥ ಮತ್ತೊಂದಿಲ್ಲ" ಎಂದು ಹೇಳಿದ್ದಾರೆ.

ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ಸಂಪೂರ್ಣವಾಗಿ ಮನಸೋತು, ಅದುವರೆಗೆ ತಾವು ನಂಬಿದ್ದ ಅದ್ವೈತ ಮತವನ್ನು ಕೈಬಿಟ್ಟು, ಶ್ರೀಮಧ್ವಾಚಾರ್ಯರ ನೆಚ್ಚಿನ ಶಿಷ್ಯರೆಂಬ ಕೀರ್ತಿಗೆ ಪಾತ್ರರಾಗಿ ಮಧ್ವಮತದ ಪರಮದೀಕ್ಷೆಯನ್ನು ಹೊಂದಿದ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರ ಪ್ರಾರ್ಥನೆ ಮೇರೆಗೆ ಶ್ರೀಮದಾಚಾರ್ಯರು ಈ ಅನುವ್ಯಾಖ್ಯಾನ ಗ್ರಂಥವನ್ನು ರಚಿಸಿದರೆಂದು ಪ್ರತೀತಿ. ಸುಮಧ್ವವಿಜಯದಲ್ಲಿ ಇದರ ಉಲ್ಲೇಖ ಬಂದಿದೆ (೧೫ನೇ ಸರ್ಗ, ಶ್ಲೋಕ ೮೬-೮೯) -

"ಅಪರೋಽಪೀಷ್ಯತೇಽಸ್ಮಾಭಿರ್ಗ್ರಂಥೇಷ್ವೇತೇಷು ಸತ್ಸ್ವಪಿ ।
ಸತ್ಸ್ವಪೀಂದ್ರಾದಿಷು ಪುರಾ ತಾರಕಾರಿರಿವಾಮರೈಃ ।।೮೬।।
ಗ್ರಂಥೇಭ್ಯ ಏಭ್ಯೋಽಗಾಧೇಭ್ಯೋ ಯುಕ್ತಯೋ ನೋ ದುರುದ್ಧರಾಃ ।
ಮನೋಮಾಂದ್ಯಾತ್ತತೋ ಗ್ರಂಥಂ ವ್ಯಕ್ತತರ್ಕತತಿಂ ಕುರು ।।೮೭।।
ಇತ್ಯರ್ಥಿತೋ ವ್ಯದಾನ್ಮಧ್ವಃ ಸೋಽನುವ್ಯಾಖ್ಯಾಂ ಸತಾಂ ಸುಧಾಮ್ ।
ದುರ್ವಾದಿಗರ್ವಾದ್ರಿಪವಿಂ ಮಾಯಿಧ್ವಾಂತರವಿದ್ಯುತಿಮ್ ।।೮೮।।
ಯುಗಪದ್ರಚಯನ್ನೇವಾಂ ಕದಾಚಿತ್ಸ ನಿರಂತರಮ್ ।
ಚತುರಶ್ಚತುರಃ ಶಿಷ್ಯಾಂಲ್ಲೀಲಯಾಽಲೇಖಯತ್ ಖಲು ।।೮೯।।"

ಮೇಲಿನ ಶ್ಲೋಕಗಳಲ್ಲಿ ಉಕ್ತವಾಗಿರುವ ಪ್ರಕಾರ, ಅನುವ್ಯಾಖ್ಯಾನವು ಸಜ್ಜನರ ಪಾಲಿಗೆ ಅಮೃತದಂತೆ ಸುಖಕರವೂ, ದುರ್ವಾದಿಗಳ ಗರ್ವವೆಂಬ ಪರ್ವತಕ್ಕೆ ವಜ್ರಾಯುಧ ಸದೃಶವೂ, ಮಾಯಾವಾದವೆಂಬ ಕತ್ತಲೆಯನ್ನು ನಾಶಮಾಡುವ

ಸೂರ್ಯಪ್ರಕಾಶದಂತೆಯೂ ಇರುವ ಅಪೂರ್ವ ಗ್ರಂಥ. ಚತುರಧ್ಯಾಯಗಳಿಂದ ಕೂಡಿರುವ ಈ ಗ್ರಂಥವನ್ನು ಚತುರರಾದ ಶ್ರೀಮಧ್ವಾಚಾರ್ಯರು ಒಂದೇ ಸಲಕ್ಕೆ ಚತುರರಾದ ಚತುಃಸಂಖ್ಯಾತ ಶಿಷ್ಯರಿಂದ ನಿರಂತರವಾಗಿ ಅನಾಯಾಸವಾಗಿ ಬರೆಯಿಸಿದರು. ಏಕಕಾಲದಲ್ಲಿ ಒಬ್ಬೊಬ್ಬರಿಗೆ ಒಂದು ಅಧ್ಯಾಯದಂತೆ ಹೇಳುತ್ತ ರಚಿಸಿದ ಅದ್ಭುತ ಗ್ರಂಥವಿದು. ಇಂಥಹ ಅಲೌಕಿಕವಾದ ಕೌಶಲ ಭಾವಿಚತುರ್ಮುಖರಾದ ಆಚಾರ್ಯ ಮಧ್ವರಿಗಲ್ಲದೆ ಬೇರೆ ಯಾರಿಗೆ ತಾನೇ ಸಾಧ್ಯವಾದೀತು?

ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು ಎಲ್ಲ ದರ್ಶನಗಳ ವಿಮರ್ಶೆ ಮಾಡಿದ್ದಾರಾದರೂ, ವಿಶೇಷವಾಗಿ ಮಾಯಾವಾದವನ್ನು ಕೂಲಂಕುಷ ವಿಮರ್ಶೆಗೆ ಒಳಪಡಿಸಿದ್ದಾರೆ. ಅದ್ವೈತಸಿದ್ಧಾಂತದ ವಿವಿಧ ಪ್ರಕ್ರಿಯೆಗಳನ್ನು ವಿಶದವಾಗಿ ವಿವೇಚಿಸಿ ಅದರ ದೋಷಗಳನ್ನು ಎತ್ತಿ ತೋರಿಸಿದ್ದಾರೆ. ಜೀವಬ್ರಹ್ಮೈಕ್ಯ, ಬ್ರಹ್ಮನ ನಿರ್ವಿಶೇಷತ್ವ, ಅನಿರ್ವಚನೀಯತ್ವ, ಅದ್ವೈತಮತದ ಪ್ರಕಾರ ಖ್ಯಾತಿವಾದ, ಅಜ್ಞಾನವಾದ, ಜಗನ್ಮಿಥ್ಯಾತ್ವ, ಭೇದಕ್ಕೆ ಅಪ್ರಾಮಾಣ್ಯ - ಇವೇ ಮುಂತಾದ ಅದ್ವೈತಿಗಳ ವಿಚಾರಗಳನ್ನು ಸಪ್ರಮಾಣ ಸಯುಕ್ತಿಕವಾಗಿ ಖಂಡಿಸಿದ್ದಾರೆ.

ಮೊದಲನೆಯ ಅಧ್ಯಾಯದಲ್ಲಿ ಎಲ್ಲ ರೀತಿಯ ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುವ ಮೂಲಕ ಬ್ರಹ್ಮನು ಸಕಲಗುಣಪೂರ್ಣ ಎನ್ನುವ ಪ್ರಮೇಯವನ್ನು ದೃಢಪಡಿಸಲಾಗಿದೆ. ಆದಕಾರಣ ಈ ಅಧ್ಯಾಯಕ್ಕೆ ಸಮನ್ವಯಾಧ್ಯಾಯವೆಂದು ಹೆಸರು. ಇದು ನಾಲ್ಕು ಪಾದಗಳಿಂದ ಕೂಡಿದೆ. ಮೊದಲನೆಯ ಪಾದದ ಮೊದಲ ಐದು ಅಧಿಕರಣಗಳು ಪೀಠಿಕಾ ಭಾಗವಾಗಿವೆ, ಆನಂದಮಯಾಧಿಕರಣದಿಂದ ಸಮನ್ವಯವು ಪ್ರಾರಂಭ. ಪೀಠಿಕಾ ಭಾಗದಲ್ಲಿ ಬ್ರಹ್ಮವಿಚಾರದ ಅವಶ್ಯಕತೆ, ಬ್ರಹ್ಮನ ಲಕ್ಷಣ, ಬ್ರಹ್ಮನನ್ನು ತಿಳಿಸುವ ಪ್ರಮಾಣ ಇತ್ಯಾದಿ ವಿಷಯಗಳನ್ನು ಚರ್ಚಿಸಿ, ಆನಂದಮಯಾಧಿಕರಣದಿಂದ ಮೊದಲನೆಯ ಅಧ್ಯಾಯದ ಕೊನೆಯವರೆಗೆ ಅನಂತಕಲ್ಯಾಣಗುಣಪೂರ್ಣನಾದ ಬ್ರಹ್ಮನು ಸೃಷ್ಟ್ಯಾದಿಕರ್ತನು ಎಂಬ ವಿಷಯದಲ್ಲಿ ಶ್ರುತಿ ಸಮನ್ವಯವನ್ನು ತೋರಿಸಿರುವರು. ಶ್ರೀಮದಾಚಾರ್ಯರ ವ್ಯಾಖ್ಯಾನ ಶೈಲಿಯನ್ನು ಗ್ರಂಥ ನೋಡಿಯೇ ಸವಿಯಬೇಕು.

ಅತ್ಯಂತ ಪ್ರೌಢವಾದ ಈ ಗ್ರಂಥಕ್ಕೆ ಅಷ್ಟೇ ಪ್ರೌಢವಾದ ಶೈಲಿಯಲ್ಲಿ ರಚಿತವಾದ ಟೀಕಾ ಗ್ರಂಥವೇ ಶ್ರೀಮಜ್ಜಯತೀರ್ಥರ ಶ್ರೀಮನ್ನ್ಯಾಯಸುಧಾ. ಇದಕ್ಕೆ

ಟಿಪ್ಪಣಿಯಾಗಿ ರಚಿತವಾಗಿರುವುದೇ ಶ್ರೀ ರಾಘವೇಂದ್ರ ತೀರ್ಥರ ನ್ಯಾಯಸುಧಾ ಪರಿಮಳ. ಇವುಗಳನ್ನು ಆಧಾರವಾಗಿಟ್ಟುಕೊಂಡು, ಹಿರಿಯ ವಿದ್ವಾಂಸರ ಮಾರ್ಗದರ್ಶನವನ್ನು ಪಡೆದು, ಪಾಠ ಹೇಳಿದ ಗುರುಗಳ ಆಶೀರ್ವಾದದ ಬಲದಿಂದ ಪ್ರಸ್ತುತ ಅನುವಾದ ಗ್ರಂಥವನ್ನು ಪ್ರಕಾಶಪಡಿಸುವ ಸಾಹಸಕ್ಕೆ ಕೈಹಾಕಿದ್ದೇನೆ. ನಾನೇನು ದೊಡ್ಡ ಪಂಡಿತವಲ್ಲ. ಹೆಚ್ಚಿನ ವ್ಯಾಕರಣ ತಿಳಿದಿಲ್ಲ. ಆದರೂ ಶ್ರೀಮದಾಚಾರ್ಯರ ಸೇವೆಯ ಮಾಡುವ ಪರಮೋದ್ದೇಶದಿಂದ ಸರ್ವಮೂಲಗ್ರಂಥಗಳ ಅಧ್ಯಯನವನ್ನು ಮಾಡುತ್ತ ಜ್ಞಾನಪಿಪಾಸುಗಳಾದ ಸಜ್ಜನರಿಗೆ ಅವುಗಳ ಭಾವಸಂಗ್ರಹವನ್ನು ನೀಡುವ ಕಾರ್ಯವನ್ನು ಕೈಗೊಂಡಿದ್ದೇವೆ. ಶ್ರೀಹರಿವಾಯುಗಳೇ ನನ್ನೊಳಗೆ ನಿಂತು ಮಡಿಸುತ್ತಿದ್ದಾರೆ. ಅವರು ಪ್ರೇರಣೆ ಮಾಡಿದಂತೆ ನಾನು ಲೇಖಿಸುತ್ತಿದ್ದೇನೆ.

ಶ್ರೀಮದಣುವ್ಯಾಖ್ಯಾನದ ಮೊದಲನೆಯ ಭಾಗವಾಗಿ ಮೊದಲನೆಯ ಅಧ್ಯಾಯದ ಕನ್ನಡಾನುವಾದವನ್ನು ಶ್ರೀಮನ್ನ್ಯಾಯಸುಧಾ ಹಾಗೂ ಪರಿಮಳ ಗ್ರಂಥಗಳ ಸಂಕ್ಷಿಪ್ತ ಸಾರ ಸಹಿತ ಈಗ ಜಿಜ್ಞಾಸುಗಳ ಮುಂದೆ ಇಡುತ್ತಿದ್ದೇನೆ. ಪ್ರಸ್ತುತ ಮೊದಲನೆಯ ಭಾಗದಲ್ಲಿ ಶ್ರೀಮದಣುವ್ಯಾಖ್ಯಾನದ ಎಲ್ಲ ಶ್ಲೋಕಗಳಿಗೂ ಶ್ರೀಮನ್ನ್ಯಾಯಸುಧಾದಲ್ಲಿ ಹೇಳಿರುವ ಪ್ರಕಾರ ಅವತರಣಿಕೆ, ಭಾವಾನುವಾದ, ಸಂಕ್ಷಿಪ್ತವಾಗಿ ವಿಶೇಷ ವಿವರಣೆಗಳನ್ನು ಆದಷ್ಟು ಸರಳವಾದ ಭಾಷೆಯಲ್ಲಿ ನೀಡಿದ್ದೇನೆ. ಎಷ್ಟಾದರೂ ಇದು ಶಾಸ್ತ್ರ ಗ್ರಂಥವಾದ್ದರಿಂದ ಕ್ಲಿಷ್ಟತೆ ಇರುವುದು ಸಹಜವೇ. ಒಮ್ಮೆ ಪಾಠ ಕೇಳಿದವರಿಗೆ ಇದು ಸುಲಭ ಗ್ರಾಹ್ಯವಾಗಿದ್ದರೂ, ಉಳಿದವರೂ ಈ ಗ್ರಂಥದ ಸಾಮಾನ್ಯ ಪರಿಚಯವನ್ನು ಈ ಅನುವಾದದಿಂದ ಪಡೆಯಬಹುದಾಗಿದೆ. ಮುಂದಿನ ಮೂರು ಭಾಗಗಳಲ್ಲಿ ಉಳಿದ ಮೂರು ಅಧ್ಯಾಯಗಳ ಅನುವಾದವನ್ನು ಆದಷ್ಟು ಬೇಗ ಪ್ರಕಟಿಸುವ ಉದ್ದೇಶವಿದೆ. ಈ ಪ್ರಕಟಣೆಯ ಕಾರ್ಯ ಕ್ಲುಪ್ತ ಸಮಯದಲ್ಲಿ ಪೂರ್ಣಗೊಳ್ಳುವಂತೆ ಶ್ರೀಹರಿವಾಯುಗಳು ಅನುಗ್ರಹಿಸಬೇಕು.

ಪ್ರಸ್ತುತ ಅನುವಾದಕ್ಕೆ ವಿದ್ವಾಂಸರಾದ ಹೆ ಕೃ ರಂಗನಾಥಾಚಾರ್ಯರಿಂದ ಸಂಪಾದಿತವಾದ ಹಾಗೂ ಮುಳಬಾಗಿಲಿನ ಶ್ರೀಪ್ರಸನ್ನರಾಘವೇಂದ್ರ ಮಠದಿಂದ ಪ್ರಕಟಗೊಂಡಿರುವ ಪರಿಮಳ ಟಿಪ್ಪಣಿ ಸಹಿತ ಶ್ರೀಮನ್ನ್ಯಾಯಸುಧಾ ಗ್ರಂಥವನ್ನೇ ಮುಖ್ಯವಾಗಿ ಆಧರಿಸಿದ್ದೇನೆ. ವಿದ್ವಾಂಸ ಪ್ರೊ।। ಕೆ ಟಿ ಪಾಂಡುರಂಗಿಯವರಿಂದ ಸಂಪಾದಿತವಾದ ಶ್ರೀಮದಣುವ್ಯಾಖ್ಯಾನ ಮೂಲ, ವಿದ್ವಾಂಸ ಡಾ।। ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಸಂಪಾದಿತವಾಗಿ ಪ್ರಕಟಿಸಲ್ಪಟ್ಟಿರುವ ಮೂಲ ಗ್ರಂಥ,

ಉಡುಪಿ ಶ್ರೀಮಧ್ವಮುನಿ ಸೇವಾಸಂಘದಿಂದ ಪ್ರಕಟವಾಗಿರುವ ವಿದ್ವಾಂಸ ಅಗ್ರಹಾರ ನಾರಾಯಣ ತಂತ್ರಿಯವರಿಂದ ರಚಿತವಾದ ಶ್ರೀಮದನುವ್ಯಾಖ್ಯಾನದ ಕನ್ನಡ ಅನುವಾದ - ಈ ಗ್ರಂಥಗಳನ್ನೂ ಪರಾಮರ್ಶಿಸಿದ್ದೇನೆ. ಇವೆಲ್ಲ ಗ್ರಂಥಗಳ ಲೇಖಕರನ್ನೂ ಪ್ರಕಾಶಕರನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ನನ್ನ ಎಲ್ಲ ಗ್ರಂಥಗಳ ಪ್ರಕಟಣೆಗಳಲ್ಲಿ ಬಹಳ ಉತ್ಸಾಹದಿಂದ ಸಹಕರಿಸಿ ಉತ್ತೇಜನ ನೀಡುತ್ತಿರುವ ಎಲ್ಲ ಹಿತೈಷಿಗಳನ್ನೂ, ನಮ್ಮ ಕುಟುಂಬದವರನ್ನೂ ಈ ಸಂದರ್ಭದಲ್ಲಿ ಬಹಳ ಆದರದಿಂದ ಸ್ಮರಿಸುತ್ತೇನೆ. ಈ ಗ್ರಂಥವನ್ನು ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟಿರುವ ಪರಿಮಳ ಮುದ್ರಣಾಲಯದ ಶ್ರೀಯುತ ಪ್ರಭಾಕರ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಸಹೃದಯ ಜಿಜ್ಞಾಸುಗಳ ಹಾಗೂ ಪಂಡಿತರ ಅಭಿಪ್ರಾಯಗಳನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

ಇಂತಿ ಸಜ್ಜನವಿಧೇಯ

ಎಸ್. ವೆಂಕಟೇಶಮೂರ್ತಿ

॥ಶ್ರೀಗುರುಭ್ಯೋ ನಮಃ॥ ಹರಿಃ ಓಂ॥

ಮಂಗಲ ಶ್ಲೋಕಗಳು

ಶ್ರೀಮನ್ನ್ಯಾಯಸುಧಾ

ಶ್ರಿಯಃಪತ್ಯೇ ನಿತ್ಯಾಗಣಿತಗುಣಮಾಣಿಕ್ಯವಿಶದ-
ಪ್ರಭಾಜಾಲೋಲ್ಲಾಸೋಪಹತ ಸಕಲಾವದ್ಯತಮಸೇ ।
ಜಗಜ್ಜನ್ಮಸ್ಥೇಮಶ್ರಲಯರಚನಾಶೀಲವಪುಷೇ
ನಮೋಽಶೇಷಾಮ್ನಾಯ ಸ್ಮೃತಿಹೃದಯದೀಪ್ತಾಯ ಹರಯೇ ॥೧॥

ಯೇನ ಪ್ರಾದುರಭಾವಿ ಭೂಮಿವಲಯೇ ವ್ಯಸ್ತಾರಿ ಗೋಸಂತತಿಃ
ಪ್ರಾಬೋಧಿ ಶ್ರುತಿಪಂಕಜಂ ಕರುಣಯಾ ಪ್ರಾಕಾಶಿ ತತ್ವಂ ಪರಂ ।
ಧ್ವಾಂತಂ ಧ್ವಂಸಮನಾಯಿಸಾಧು ನಿಕರಃ ಚಾಕಾರಿ ಸನ್ಮಾರ್ಗಗಃ
ತೇನ ವ್ಯಾಸದಿವಾಕರೇಣ ಸತತಂ ಮಾತ್ಯಾಜಿ ಮೇ ಮಾನಸಂ ॥೨॥

ವ್ಯಾಕ್ತಿರ್ಯಸ್ಯ ನಿಜೇ ನಿಜೇನ ಮಹಸಾ ಪಕ್ಷೇ ಸಪಕ್ಷೇ ಸ್ಥಿತಿಃ
ವ್ಯಾವೃತ್ತಿಶ್ಚ ವಿಪಕ್ಷತೋಽಥವಿಷಯೇ ಸಕ್ತಿರ್ನವೈ ಬಾಧತೇ ।
ನೈವಾಸ್ತಿ ಪ್ರತಿಪಕ್ಷಯುಕ್ತಿರತುಲಂ ಶಬ್ದಪ್ರಮಾಣಂ ಸ ಮೇ
ಭೂಯಾತ್ತತ್ವವಿನಿರ್ಣಯಾಯ ಭಗವಾನ್ ಆನಂದತೀರ್ಥೋ ಮುನಿಃ ॥೩॥

ಭವತಿ ಯದನುಭಾವಾದೇಡಮೂಕೋಽಪಿ ವಾಗ್ಮೀ
ಜಡಮತಿರಪಿ ಜಂತುಃ ಜಾಯತೇ ಪ್ರಾಜ್ಞಮೌಲಿಃ ।
ಸಕಲವಚನಚೇತೋ ದೇವತಾ ಭಾರತೀ ಸಾ
ಮಮ ವಚಸಿ ನಿಧತ್ತಾಂ ಸನ್ನಿಧಿಂ ಮಾನಸೇ ಚ ॥೪॥

ರಮಾನಿವಾಸೋಚಿತವಾಸಭೂಮಿಃ ಸನ್ನ್ಯಾಯರತ್ನಾವಳಿ ಜನ್ಮಭೂಮಿಃ ।
ವೈರಾಗ್ಯಭಾಗ್ಯೋ ಮಮ ಪದ್ಮನಾಭತೀರ್ಥಾಮೃತಾಬ್ಧಿಭವತಾದ್ವಿಭೂತ್ಯೈ ॥೫॥

ಪದವಾಕ್ಯಪ್ರಮಾಣಜ್ಞಾನ್ ಪ್ರತಿವಾದಿಮದಚ್ಛಿದಃ ।
ಶ್ರೀಮದಕ್ಷೋಭ್ಯತೀರ್ಥಾಖ್ಯಾನುಪತಿಷ್ಠೇ ಗುರೂನ್ಮಮ ॥೬॥

ಶ್ರೀಮದಾನಂದತೀರ್ಥಾರ್ಯಸನ್ಮನಃ ಸರಸೀಭುವಿ ।
ಅನುವ್ಯಾಖ್ಯಾನನಳಿನೇ ಚಂಚರಿಕತಿ ಮೇ ಮನಃ ॥೭॥

ನ ಶಬ್ದಾಬ್ಧೌ ಗಾಢಾ ನ ಚ ನಿಗಮಚರ್ಚಾಸು ಚತುರಾ
ನ ಚ ನ್ಯಾಯೇ ಪ್ರೌಢಾ ನ ಚ ವಿದಿತವೇದ್ಯಾ ಅಪಿ ವಯಂ ।
ಪರಂ ಶ್ರೀಮತ್ಪೂರ್ಣಪ್ರಮತಿಗುರುಕಾರುಣ್ಯಸರಣಿಂ
ಪ್ರಪನ್ನಾ ಮಾನ್ಯಾಃ ಸ್ಮಃ ಕಿಮಪಿ ಚ ವದಂತೋಽಪಿ ಮಹತಾಂ ॥೮॥

*

ಶ್ರೀಮನ್ನ್ಯಾಯಸುಧಾ ಪರಿಮಳ

ಪೂರ್ಣಾಗಣ್ಯಗುಣೋದಾರಮೂರ್ತಯೇ ಪುಣ್ಯಕೀರ್ತಯೇ ।
ನಮಃ ಶ್ರೀಪತಯೇ ಭಕ್ತದತ್ತಸ್ವಾನಂದಮೂರ್ತಯೇ ॥೧॥
ಪೂರ್ಣಾಗಣ್ಯಗುಣೋದಾರನಿತ್ಯಸುಂದರಮೂರ್ತಿನೇ ।
ಶ್ರೀಬ್ರಹ್ಮವೀಂದ್ರಪೂರ್ವೇಡ್ಯಕೀರ್ತಿನೇ ಬ್ರಹ್ಮಣೇ ನಮಃ ॥೨॥
ವಿಶ್ವಂ ಯಸ್ಯ ವಶೇ ಸರ್ವಮನಿಶಂ ಶಂಕರಾದಿಕಮ್ ।
ತಸ್ಯ ವಾಯೋಸ್ತೃತೀಯಾಂಶಮಾಶ್ರಯೇ ಶಮವಾಪ್ತಯೇ ॥೩॥
ಸತ್ಪದ್ಮಬಂಧವೋ ಯಸ್ಯ ಗಾವೋ ವಿಶ್ವತಮೋನುದಃ ।
ಸ ಸ್ಯಾತ್ ತತ್ವಪ್ರಕಾಶಾಯ ಜಯತೀರ್ಥರವಿರ್ಮಮ ॥೪॥
ಪದವಾಕ್ಯಪ್ರಮಾಣಜ್ಞೋ ದುರ್ಮತಧ್ವಾಂತಭಾಸ್ಕರಃ ।
ವ್ಯಾಸತೀರ್ಥಮುನೀಂದ್ರೋ ಮೇ ಭೂಯಾತ್ ಜ್ಞಾನಸಮೃದ್ಧಯೇ ॥೫॥
ಅಸ್ಮದ್ದೇಶಿಕಪಾದಾನಾಂ ಪ್ರಣಮ್ಯ ಚರಣಾಂಬುಜಮ್ ।
ಶ್ರೀಮನ್ನ್ಯಾಯಸುಧಾವಾಕ್ಯವ್ಯಾಖ್ಯಾಂ ಕುರ್ಮೋ ಯಥಾಮತಿ ॥೬॥

*

ಶ್ರೀಮದನುವ್ಯಾಖ್ಯಾನಮ್

ನಾರಾಯಣಂ ನಿಖಿಲಪೂರ್ಣಗುಣೈಕದೇಹಂ
ನಿರ್ದೋಷಮಾಪ್ತತಮಮಪ್ಯಖಿಲೈಃ ಸುವಾಕ್ಯೈಃ ।
ಅಸ್ಯೋದ್ಭವಾದಿದಮಶೇಷವಿಶೇಷತೋಪಿ
ವಂದ್ಯಂ ಸದಾ ಪ್ರಿಯತಮಂ ಮಮ ಸನ್ನಮಾಮಿ ॥

* * *

ವಿಷಯಾನುಕ್ರಮಣಿಕೆ

ಮೊದಲನೆಯ ಪಾದ	೧–೧೩೪
ಮಂಗಲಾಚರಣೆ	೧
ಬ್ರಹ್ಮಸೂತ್ರಗಳು ಪರವಿದ್ಯೆ ಹಾಗೂ ಪರಮಪ್ರಮಾಣ	೬
ಓಂಕಾರವು ಸೂತ್ರಾವಯವ ಹಾಗೂ ಮಂಗಲಸೂಚಕ	೯
ಜಿಜ್ಞಾಸಾಧಿಕರಣ	೧೧
ಗುಣಪೂರ್ಣತ್ವವೇ ಓಂಕಾರದ ಅರ್ಥ	೧೧
ಗುಣಪೂರ್ಣವೇ ಜಿಜ್ಞಾಸ್ಯನು	೧೧
ಅತಃ ಶಬ್ದಕ್ಕೆ ವ್ಯಾಖ್ಯಾನ	೧೪
ವಿಷ್ಣುವಿನ ಪ್ರಸಾದದಿಂದಲೇ ಮೋಕ್ಷ	೧೫
ಬಂಧಮಿಥ್ಯಾತ್ವ ಖಂಡನೆ	೧೬
ಸದಸದ್ವಿಲಕ್ಷಣತ್ವದ ವಿರಾಸೆ	೧೮
ಭ್ರಾಂತಿಯ ಸ್ವರೂಪ	೧೯
ಪಂಚಾಖ್ಯಾತಿ ವಾದ	೨೦
ಅಸತ್ತಿಗೂ ಪ್ರತೀತಿಯುಂಟು	೨೬
ಅಜ್ಞಾನ ವಾದ	೨೭
ಜೀವಬ್ರಹ್ಮೈಕ್ಯ ಶಾಸ್ತ್ರಕ್ಕೆ ವಿಷಯವಲ್ಲ	೩೦
ವಿಷ್ಣುಪ್ರಸಾದದಿಂದಲೇ ಬಂಧವಿವೃತ್ತಿ	೩೩
ಕಾರ್ಯತಾ ವಾದ	೩೪
ವೇದಪ್ರಾಮಾಣ್ಯ ಸಮರ್ಥನೆ	೪೨
ವೇದಾಪೌರುಷೇಯತ್ವ ಸಮರ್ಥನೆ	೪೫
ವಾಕ್ಯಾರ್ಥಬೋಧಕತ್ವ	೪೯
ಬ್ರಹ್ಮತರ್ಕ ವಿಷಯ ಸಂಗ್ರಹ	೫೧

ಬ್ರಹ್ಮ ಶಬ್ದ ವಿಷ್ಣುವನ್ನೇ ಹೇಳುತ್ತದೆ ೫೩
ಜನ್ಮಾಧಿಕರಣ ೫೬
ವಿಷ್ಣುವೇ ಜಗಜ್ಜನ್ಮಾದಿಕಾರಣ ೫೬
ವಿಷ್ಣುವಿಗೆ ಜನ್ಮಾದಿ ದೋಷವಿಲ್ಲ ೫೭
ಅನ್ಯ ದೇವತೆಗಳು ದೋಷಯುಕ್ತರು ೫೯
ಜನ್ಮಾದಿಕಾರಣತ್ವ ಬ್ರಹ್ಮನ ಸ್ವಲಕ್ಷಣ ೬೦
ಜೀವಬ್ರಹ್ಮೈಕ್ಯ ವಾದ ನಿರಾಕರಣೆ ೬೧
ಬ್ರಹ್ಮನು ನಿರ್ವಿಶೇಷನಲ್ಲ ೬೭
ವಿಶೇಷದ ನಿರೂಪಣೆ ೬೮
ಶಾಸ್ತ್ರಯೋನಿತ್ವಾಧಿಕರಣ ೬೯
ಜನ್ಮಾದಿಕಾರಣತ್ವಕ್ಕೆ ಶಾಸ್ತ್ರವೇ ಪ್ರಮಾಣ ೬೯
ಕೇವಲಾನುಮಾನವು ಪ್ರಮಾಣವಲ್ಲ ೭೦
ಸಮನ್ವಯಾಧಿಕರಣ ೭೨
ಸಮನ್ವಯ ಶಬ್ದಾರ್ಥ ೭೩
ಈಕ್ಷತ್ಯಧಿಕರಣ ೭೪
ಬ್ರಹ್ಮನು ಅವಾಚ್ಯನಲ್ಲ ೭೪
ಶ್ರುತ್ಯರ್ಥ ಪರಿತ್ಯಾಗದಿಂದ ಮಹಾ ಅನರ್ಥ ೭೯
ಗೌಣಾತ್ಮನು ಆತ್ಮಶಬ್ದ ವಾಚ್ಯನಲ್ಲ ೮೦
ಪ್ರಾಕೃತ ಗುಣರಹಿತ ಶುದ್ಧಬ್ರಹ್ಮನೇ ವಾಚ್ಯನು ೮೨
ಗುಣಪೂರ್ಣನೇ ಜಿಜ್ಞಾಸ್ಯನು ೮೫
ನಿರ್ಗುಣನು ಶಾಸ್ತ್ರಕ್ಕೆ ವಿಷಯನಲ್ಲ ೮೭
ಆನಂದಮಯಾಧಿಕರಣ ೮೮
ಅನ್ಯತ್ರ ಪ್ರಸಿದ್ಧ ನಾಮಾತ್ಮಕ ಶಬ್ದಗಳ ಸಮನ್ವಯ ೯೦
ಆನಂದಮಯಾದಿ ಶಬ್ದಗಳು ವಿಷ್ಣುವನ್ನೇ ಹೇಳುತ್ತವೆ ೯೧
ಪರಬ್ರಹ್ಮ ವಾಚ್ಯತ್ವ ರುದ್ರಾದಿಗಳಲ್ಲಿ ಕೂಡುವುದಿಲ್ಲ ೯೪
ಬ್ರಹ್ಮನೇ ಆನಂದಮಯಾದಿ ಶಬ್ದವಾಚ್ಯ ೯೮

ಪ್ರಾಚುರ್ಯಾರ್ಥದಲ್ಲಿ ಮಯಟ್ ಶಬ್ದ	೯೮
ಹೇತ್ವಂತರದಿಂದ ಆನಂದಮಯತ್ವ ಪ್ರತಿಪಾದನೆ	೧೦೨
ಅನ್ನಮಯಾದಿ ಶಬ್ದವಾಚ್ಯನೇ ಮಂತ್ರವರ್ಣೋಕ್ತನು	೧೦೪
ಅನ್ನಮಯಾದಿ ಪ್ರತಿಪಾದ್ಯರು ಜೀವಾದಿಗಳಲ್ಲ	೧೦೭
ವಿಷ್ಣುವೇ ಪುರುಷ ಶಬ್ದವಾಚ್ಯನು	೧೦೮
ವಿಷ್ಣುವೇ ಚತುರ್ವಿಧ ಆಕಾಶಾದಿ ಶಬ್ದವಾಚ್ಯನು	೧೦೯
ಜನಿಸ್ವರೂಪ ನಿರೂಪಣೆ	೧೧೧
'ತಸ್ಯೇದಮೇವ ಶಿರ' ಇತ್ಯಾದಿ ಶ್ರುತ್ಯರ್ಥ	೧೧೨
'ಸ ವಾ ಏಷ' ಶ್ರುತ್ಯರ್ಥ	೧೧೩
ಜೀವಬ್ರಹ್ಮರ ಅಭೇದ ಇಲ್ಲಿ ವಿವಕ್ಷಿತವಲ್ಲ	೧೧೩
ಕಾಮಾಚಾರಿಯಾದ ಅನುಮಾನ ಅಭೇದಸಾಧಕವಲ್ಲ	೧೧೪
ಅನ್ನಮಯಾದಿಗಳ ಕೋಶಪರತ್ವ ನಿರಾಕರಣೆ	೧೧೬
ಭೃಗು-ವರುಣ ಸಂವಾದ	೧೧೮
ಅಧಿಕರಣಾರ್ಥ ಉಪಸಂಹಾರ	೧೨೩
ಸಕಲ ಶಬ್ದಗಳಿಗೆ ಭಗವಂತನಲ್ಲಿಯೇ ಸಮನ್ವಯ	೧೨೩
ಅಂತಸ್ತದ್ಧರ್ಮಾಧಿಕರಣ	೧೨೫
ಅಧಿದೈವಗತ ಶಬ್ದಗಳ ಸಮನ್ವಯ	೧೨೬
ಆಕಾಶಾಧಿಕರಣ	೧೨೭
ಅಧಿಭೂತ ಶಬ್ದಗಳ ಸಮನ್ವಯ	೧೨೭
ಪ್ರಾಣಾಧಿಕರಣ	೧೨೯
ಪ್ರಾಣಾದಿ ಆಧ್ಯಾತ್ಮಿಕ ಶಬ್ದಗಳ ಸಮನ್ವಯ	೧೨೯
ಜ್ಯೋತಿರಧಿಕರಣ	೧೩೦
ಗಾಯತ್ರ್ಯಧಿಕರಣ	೧೩೦
ಅಧಿವೇದಗತ ಶಬ್ದಗಳ ಸಮನ್ವಯ	೧೩೦
ಪಾದಾಂತ್ಯ ಪ್ರಾಣಾಧಿಕರಣ	೧೩೨
ಪಾದಾರ್ಥ ಉಪಸಂಹಾರ	೧೩೩

ಎರಡನೆಯ ಪಾದ ೧೩೫–೧೫೨
ಸರ್ವಗತತ್ವಾಧಿಕರಣ ೧೩೫
ಸತ್ತಾಲಿಂಗ ಸಮನ್ವಯ ೧೩೫
ಈ ಪಾದದಲ್ಲಿನ ಅಧಿಕರಣಗಳ ಉಪಾಧಿಗಳು ೧೩೮
ಅತೃತ್ವಾಧಿಕರಣ ೧೩೮
ಕ್ರಿಯಾಲಿಂಗ ಸಮನ್ವಯ ೧೩೮
ಗುಹಾಧಿಕರಣ ೧೪೦
ಫಲಭೋಗರೂಪ ಕ್ರಿಯಾಲಿಂಗ ಸಮನ್ವಯ ೧೪೦
ಅಂತರಾಧಿಕರಣ ೧೪೨
ಕ್ರಿಯಾಭಾವರೂಪ ಲಿಂಗ ಸಮನ್ವಯ ೧೪೨
ಚಕ್ಷುರಂತಸ್ಥನು ವಿಷ್ಣುವೇ ೧೪೩
ಅಂತರ್ಯಾಮ್ಯಧಿಕರಣ ೧೪೪
ರಮಣರೂಪ ಕ್ರಿಯಾಲಿಂಗ ಸಮನ್ವಯ ೧೪೪
ಅದೃಶ್ಯತ್ವಾಧಿಕರಣ ೧೪೬
ಅದೃಶ್ಯತ್ವಾದಿ ಗುಣಗಳ ಸಮನ್ವಯ ೧೪೬
ಅನ್ಯೋನ್ಯಾಭಾವದ ವಿವರಣೆ ೧೪೭
ವೈಶ್ವಾನರಾಧಿಕರಣ ೧೫೧
ವೈಶ್ವಾನರಾಧಿಕರಣದ ತಾತ್ಪರ್ಯ ೧೫೨
ಮೂರನೆಯ ಪಾದ ೧೫೩–೧೬೪
ದ್ಯುಭ್ವಾದ್ಯಧಿಕರಣ ೧೫೩
ಆತ್ಮ ಶಬ್ದ ವಾಚ್ಯನು ವಿಷ್ಣುವೇ ೧೫೪
ಭೂಮಾಧಿಕರಣ ೧೫೪
ಭೂಮ ಶಬ್ದ ವಾಚ್ಯನು ವಿಷ್ಣುವೇ ೧೫೫
ಅಕ್ಷರಾಧಿಕರಣ ೧೫೫
ಅಣುತ್ವ ಮಹತ್ವಾದಿ ಧರ್ಮಗಳಿಗೆ ಬ್ರಹ್ಮನಲ್ಲಿ ವಿರೋಧವಿಲ್ಲ ೧೫೬
ಬ್ರಹ್ಮನಿಗೆ ಅಸ್ವಭಾವತ್ವವಿಲ್ಲ ೧೫೬

ಅಧಿಕರಣಗಳಲ್ಲಿನ ಪೂರ್ವಪಕ್ಷವ್ಯಾಯಗಳು ೧೫೮
ಸೂತ್ರಗಳಲ್ಲಿ ಸೂಚಿತವಾಗಿರುವ ಸಿದ್ಧಾಂತವ್ಯಾಯಗಳು ೧೫೯
ದೇವತಾಧಿಕರಣ ೧೬೧
ದೇವತೆಗಳಿಗೂ ವೇದವಿದ್ಯಾಧಿಕಾರವುಂಟು ೧೬೨
ಜೈಮಿನಿ ಮತ್ತು ಬಾದರಾಯಣರ ಮತಗಳಿಗೆ ವಿರೋಧವಿಲ್ಲ ೧೬೨
ಪರಮೇಶ್ವರನಿಂದ ಇತರರು ಸರ್ವಜ್ಞರಲ್ಲ ೧೬೩
ನಾಲ್ಕನೆಯ ಪಾದ ೧೬೫-೨೨೮
ಆನುಮಾನಿಕಾಧಿಕರಣ ೧೬೫
ದುಃಖ ಬದ್ಧ ಇತ್ಯಾದಿ ಶಬ್ದಗಳ ಸಮನ್ವಯ ೧೬೫
ಜ್ಯೋತಿರುಪಕ್ರಮಾಧಿಕರಣ ೧೬೯
ಕ್ರಿಯಾವಾಚಕ ಶಬ್ದಗಳ ಸಮನ್ವಯ ೧೭೦
ಪ್ರಕೃತ್ಯಧಿಕರಣ ೧೭೪
ಅಧಿಕರಣಗಳ ಉಪಾಧಿಗಳು ೧೭೫
ಪೂರ್ವಪಕ್ಷಯುಕ್ತಿಗಳು ೧೭೫
ಸಿದ್ಧಾಂತಯುಕ್ತಿಗಳು ೧೭೬
ಶಬ್ದಪ್ರವೃತ್ತಿಯ ಪ್ರಭೇದಗಳು ೧೭೭
ವಿಷ್ಣುವಿಗೆ ಸರ್ವಶಬ್ದ ವಾಚ್ಯತ್ವ ೧೮೨
ಶ್ರುತಿಯಿಂದ ಸರ್ವಶಬ್ದ ವಾಚ್ಯತ್ವ ಸಮರ್ಥನೆ ೧೮೪
ಪ್ರಧಾನಕ್ಕೆ ಶಬ್ದವಾಚ್ಯತ್ವ ವಿಷೇಧಿಸಲ್ಪಟ್ಟಿಲ್ಲ ೧೮೫
ಅಜಾದಿ ಶಬ್ದಗಳು ಪರಮಮುಖ್ಯವೃತ್ತಿಯಿಂದ ಬ್ರಹ್ಮಪರ ೧೮೭
ವ ಸಂಖ್ಯಾಧಿಕರಣದ ಅಪವ್ಯಾಖ್ಯಾನ ವಿರಾಸೆ ೧೮೯
ಬ್ರಹ್ಮವು ಉಪಾದಾನಕಾರಣವಲ್ಲ ೧೯೧
ವಿಕಾರದ ಪ್ರಭೇದಗಳು ೧೯೨
ಬ್ರಹ್ಮನಿಗೆ ಉಪಾದಾನಕಾರಣತ್ವ ಸಮರ್ಥನೆ ೧೯೫
'ಸಚ್ಚ ತ್ಯಚ್ಚ' ಇತ್ಯಾದಿ ಶ್ರುತ್ಯರ್ಥ ೨೦೨
ಪರಿಣಾಮವಾದದ ವಿರಾಸೆಯ ಉಪಸಂಹಾರ ೨೦೪

ವಿವರ್ತವಾದದ ನಿರಾಸೆ	೨೦೫
ಜೀವಬ್ರಹ್ಮ ಭೇದ ಭ್ರಾಂತಿಕಲ್ಪಿತವಲ್ಲ	೨೦೭
ಸ್ವಪ್ನ ಮಿಥ್ಯೆಯಲ್ಲ	೨೦೮
ವಿಶ್ವಸತ್ಯತ್ವ ಪ್ರತಿಪಾದಕ ಶ್ರುತಿಗಳು	೨೧೨
ಸಾಕ್ಷಿಪ್ರತ್ಯಕ್ಷವು ಅಬಾಧಿತ	೨೧೩
ಏಕಜೀವವಾದ ನಿರಾಸೆ	೨೧೭
'ಪ್ರಪಂಚೋ ಯದಿ ವಿದ್ಯೇತ' ಇತ್ಯಾದಿ ಶ್ರುತ್ಯರ್ಥ	೨೧೮
ಪಂಚಭೇದ ನಿರೂಪಣೆ	೨೧೯
ವಾಚಾರಂಭಣಂ ಶ್ರುತ್ಯರ್ಥ	೨೨೨

* * *

ಶ್ರೀಮದ್ಧನುಮಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಮೊದಲನೆಯ ಅಧ್ಯಾಯ (ಸಮನ್ವಯಾಧ್ಯಾಯ)

ಮಂಗಲಾಚರಣೆ

ನಿತ್ಯಾಪರೋಕ್ಷಿಗಳಾದ ಶ್ರೀಮದಾಚಾರ್ಯರಿಗೆ ಯಾವುದೇ ವಿಘ್ನಗಳು ಇಲ್ಲವಾದರೂ, ಯಾವುದೇ ಗ್ರಂಥಾರಂಭದಲ್ಲಿ ನಿರ್ವಿಘ್ನ ಪರಿಸಮಾಪ್ತಿಗಾಗಿ ಮಂಗಳವನ್ನು ಆಚರಿಸಬೇಕೆಂದು ಶಿಷ್ಯರಿಗೆ ತಿಳಿಸುವುದಕ್ಕಾಗಿ ಅನುವ್ಯಾಖ್ಯಾನದ ಪ್ರಾರಂಭದಲ್ಲಿ 'ನಾರಾಯಣಂ ನಿಖಿಲಪೂರ್ಣಗುಣೈಕದೇಹಂ' ಇತ್ಯಾದಿ ಶ್ರೀಮನ್ನಾರಾಯಣನ ಸ್ತೋತ್ರರೂಪವಾದ ಮಂಗಲಾಚರಣೆಯನ್ನು ಮಾಡಿದ್ದಾರೆ.

ನಾರಾಯಣಂ ನಿಖಿಲಪೂರ್ಣಗುಣೈಕದೇಹಂ
ನಿರ್ದೋಷಮಾಪ್ತಮಮಪಾಖಿಲೈಃ ಸುವಾಕ್ಯೈಃ ।
ಅಸ್ಮೋದ್ಭವಾದಿದಮಶೇಷವಿಶೇಷತೋಽಪಿ
ವಂದ್ಯಂ ಸದಾ ಪ್ರಿಯತಮಂ ಮಮ ಸನ್ನಮಾಮಿ ॥೧॥

ನಾರಾಯಣನು ಸಮಸ್ತವೂ ಪೂರ್ಣವೂ ಆದ ಗುಣಗಳೇ ದೇಹವನ್ನಾಗಿ ಹೊಂದಿರುವನು. (ನಮ್ಮಂತೆ ಪ್ರಾಕೃತವಾದ ಜಡದೇಹ ಅವನಿಗಿಲ್ಲ.) ಅವನು ಪಾರತಂತ್ರ್ಯಾದಿ ದೋಷರಹಿತನು. ಶೋಭನವಾದ ಸಮಸ್ತ ವೇದವಾಕ್ಯಗಳಿಂದ ಮುಖ್ಯವಾಗಿ ಪ್ರತಿಪಾದ್ಯನು. ಎಲ್ಲರಿಂದಲೂ ಹೊಂದಲ್ಪಡತಕ್ಕವನು. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾಗಿರುವ ಸತ್ಯವಾದ ಈ ಜಡಾಜಡಾತ್ಮಕವಾದ ಸಮಸ್ತ ಪ್ರಪಂಚಕ್ಕೆ ಪ್ರಾಮಾಣಿಕವಾದ ಎಲ್ಲ ರೀತಿಯ ಭೇದ ಮತ್ತು ತಾರತಮ್ಯಗಳಿಗೆ ಅನುಸಾರವಾಗಿ ಯೋಗ್ಯತಾನುಸಾರ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳನ್ನು ಹೊಂದಿಸುವವನು. ರಮಾ ಬ್ರಹ್ಮಾದಿ ಎಲ್ಲರಿಂದಲೂ ವಿಶೇಷವಾಗಿ

ವಂದ್ಯನು. ನನಗೆ ಯಾವಾಗಲೂ ಅತ್ಯಂತ ಪ್ರೀತಿಪಾತ್ರನು. ಇಂತಹ ನಾರಾಯಣನಿಗೆ ಅತಿಶಯವಾದ ಭಕ್ತ್ಯಾದಿ ವಿಶೇಷಗಳಿಂದ ನಮಸ್ಕರಿಸುತ್ತೇನೆ.

ವಿವರಣೆ: ಸರ್ವೋತ್ತಮನಾದ ನಾರಾಯಣನಿಗೆ ಅತಿಶಯವಾದ ಭಕ್ತ್ಯಾದಿಗಳಿಂದ ನಮಸ್ಕಾರ ಮಾಡುವುದರಿಂದ ಎಲ್ಲ ಅಭೀಷ್ಟಗಳು ಸಿದ್ಧಿಸುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಸರ್ವೋತ್ತಮನಾಗಿರುವುದರಿಂದ, ಸಕಲಶಾಸ್ತ್ರಗಳಿಂದ ಪ್ರತಿಪಾದ್ಯನಾಗಿರುವುದರಿಂದ, ಮೋಕ್ಷಾದಿ ಸಕಲ ಪುರುಷಾರ್ಥಗಳನ್ನು ನೀಡುವುದರಿಂದ ಹಾಗೂ ಅತ್ಯಂತ ಪ್ರೀತಿಗೆ ಪಾತ್ರನಾದ್ದರಿಂದ ನಾರಾಯಣನು ಎಲ್ಲರಿಂದಲೂ ನಮಸ್ಕರಿಸಿಕೊಳ್ಳುವುದಕ್ಕೆ ಅತ್ಯಂತ ಯೋಗ್ಯನಾಗಿರುವನು.

ಅನುಬಂಧ ಚತುಷ್ಟಯವನ್ನು ಹೊಂದಿರುವ ಗ್ರಂಥವು ಅಧ್ಯಯನಕ್ಕೆ ಯೋಗ್ಯ. ಆದುದರಿಂದ ಶ್ರೀಮದಾಚಾರ್ಯರು ಈ ಮಂಗಲಶ್ಲೋಕದಲ್ಲಿ ತಮ್ಮ ಇಷ್ಟದೇವತೆಯಾದ ನಾರಾಯಣನನ್ನು ನಮಸ್ಕರಿಸುವುದರೊಂದಿಗೆ ಅಧಿಕಾರ, ವಿಷಯ, ಪ್ರಯೋಜನ ಮತ್ತು ಇವುಗಳ ಸಂಬಂಧ ಎಂಬ ಅನುಬಂಧ ಚತುಷ್ಟಯವನ್ನೂ ಸೂಚಿಸಿದ್ದಾರೆ. 'ಸನ್ನಮಾಮಿ' ಎನ್ನುವುದರಿಂದ ಅಧಿಕಾರಿಯನ್ನೂ, 'ನಾರಾಯಣಂ' ಎನ್ನುವುದರಿಂದ ವಿಷಯವನ್ನೂ, 'ಆಪ್ತತಮಂ' ಎನ್ನುವುದರಿಂದ ಪ್ರಯೋಜನವನ್ನೂ, 'ಉದ್ಭವಾದಿದಂ' ಎನ್ನುವುದರಿಂದ ವಿಷಯ ಪ್ರಯೋಜನಗಳಿಗೆ ಕೊಡುವ ಮತ್ತು ಪಡೆದುಕೊಳ್ಳುವ ದಾತೃ-ದೇಯರೂಪವಾದ ಸಂಬಂಧವನ್ನೂ ಸೂಚಿಸಿದ್ದಾರೆ.

ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನರೂಪವಾದ ಈ ಗ್ರಂಥದಲ್ಲಿ ನಾಲ್ಕು ಅಧ್ಯಾಯಗಳಲ್ಲಿ ಪ್ರತಿಪಾದ್ಯವಾಗಿರುವ ವಿಷಯವನ್ನು ಮಂಗಲಶ್ಲೋಕದಲ್ಲಿಯೇ ಸಂಗ್ರಹವಾಗಿ ನಿರೂಪಿಸಿದ್ದಾರೆ. 'ನಿಖಿಲಪೂರ್ಣಗುಣೈಕದೇಹಂ' ಎನ್ನುವುದರಿಂದ ಮೊದಲನೆಯ ಸಮನ್ವಯಾಧ್ಯಾಯದ ಅರ್ಥವನ್ನೂ, 'ನಿರ್ದೋಷಂ' ಎನ್ನುವುದರಿಂದ ಎರಡನೆಯ ಅವಿರೋಧಾಧ್ಯಾಯದ ಅರ್ಥವನ್ನೂ, 'ಆಪ್ತತಮಮಪ್ಯಖಿಲೈಃ ಸುವಾಕ್ಯೈಃ' ಎನ್ನುವುದರಿಂದ ಮೂರನೆಯ ಸಾಧನಾಧ್ಯಾಯದ ಅರ್ಥವನ್ನೂ, 'ಅಸ್ಯೋದ್ಭವಾದಿದಂ' ಎನ್ನುವುದರಿಂದ ನಾಲ್ಕನೆಯ ಫಲಾಧ್ಯಾಯದ ಅರ್ಥವನ್ನೂ ಸಂಗ್ರಹವಾಗಿ ತಿಳಿಸಿದ್ದಾರೆ.

ನಾರಾಯಣ ಎಂಬ ಒಂದು ಶಬ್ದದಿಂದಲೇ ಈ ಮಂಗಲ ಶ್ಲೋಕದಲ್ಲಿ ಹೇಳಿರುವ ನಾರಾಯಣನ ಎಲ್ಲ ಮಹಿಮೆಗಳೂ ಪ್ರತಿಪಾದಿತವಾಗಿವೆ. 'ಅರ' ಎಂದರೆ ದೋಷವೆಂದು ಅರ್ಥವಿರುವುದರಿಂದ 'ನಾರ' ಎಂದರೆ ನಿರ್ದೋಷನೆಂದೂ, ನಾರ ಎಂದರೆ ಗುಣವೆಂದು ಅರ್ಥವಿರುವುದರಿಂದ ನಾರಾಯಣ ಎಂದರೆ ಸಕಲ ಗುಣಗಳಿಗೆ ಆಶ್ರಯನು ಅಥವಾ ಗುಣಪರಿಪೂರ್ಣನೆಂದೂ ವ್ಯಾಖ್ಯಾನ ಮಾಡಿದಂತಾಯಿತು. ನಾರ ಶಬ್ದಕ್ಕೆ ನಿರ್ದೋಷವಾದ ವಾಕ್ಯಗಳಿಂದ ಕೂಡಿದ ವೇದಗಳು ಎಂದು ಅರ್ಥಮಾಡಬಹುದು. ಆದ್ದರಿಂದ ನಾರಾಯಣನು ಸಕಲ ವೇದಪ್ರತಿಪಾದ್ಯನು ಎಂಬುದೂ ನಾರಾಯಣ ಶಬ್ದದಿಂದ ವೇದ್ಯವಾಗುತ್ತದೆ. 'ನಾರ' ಎಂದರೆ ನರರಿಗೆ ಸಂಬಂಧಿಸಿದ ಸೃಷ್ಟ್ಯಾದಿಗಳು. ಇವುಗಳಿಗೆ ಕಾರಣನಾದ್ದರಿಂದ ನಾರಾಯಣ. 'ನರ' ಎಂದರೆ ಮನುಷ್ಯಸಮುದಾಯ ಅಂದರೆ ಜೀವರು. ಎಲ್ಲ ಜೀವರುಗಳಿಂದ ವಂದ್ಯನಾದ್ದರಿಂದಲೂ ನಾರಾಯಣ. ನಾರ ಶಬ್ದವಾಚ್ಯರಾದ ಜೀವೋತ್ತಮರಾದ ವಾಯುದೇವರಿಗೆ ಪ್ರಿಯತಮನಾದ್ದರಿಂದಲೂ ನಾರಾಯಣ. ಹೀಗೆ ಮಂಗಲಶ್ಲೋಕದಲ್ಲಿ ಉಕ್ತವಾಗಿರುವ ನಾರಾಯಣನಿಗೆ ಸಂಬಂಧಿಸಿದ ಎಲ್ಲ ವಿಶೇಷಣಗಳೂ ನಾರಾಯಣ ಶಬ್ದವೊಂದರಲ್ಲೇ ಸೇರಿಕೊಂಡಿವೆ.

ದೈಹಿಕವಾಗಿ ಮತ್ತು ಮಾನಸಿಕವಾಗಿ ಪರಮಾತ್ಮನಲ್ಲಿ ಭಕ್ತಿಪೂರ್ವಕವಾಗಿ ಬಾಗುವಿಕೆಯೇ ವಂದನೆ. ಮನನ ಅಥವಾ ಜಿಜ್ಞಾಸೆಯೂ ವಂದನೆಯೇ ಎನಿಸುವುದು. ಈ ಅರ್ಥದಲ್ಲಿ 'ಸದಾ ವಂದ್ಯಂ' ಎನ್ನುವುದರಿಂದ ಬ್ರಹ್ಮಜಿಜ್ಞಾಸೆಯನ್ನು ಸದಾ ಮಾಡಬೇಕು ಎಂಬ ಮೊದಲನೆಯ ಸೂತ್ರದ ಅರ್ಥವು ಸೂಚಿತವಾಗಿದೆ. 'ನಿಖಿಲಪೂರ್ಣಗುಣೈಕದೇಹಂ' ಮತ್ತು 'ನಿರ್ದೋಷಂ' ಎನ್ನುವುದರಿಂದ ಬ್ರಹ್ಮ ಶಬ್ದವು ವ್ಯಾಖ್ಯಾತವಾಯಿತು. 'ಅಸ್ಯೋದ್ಭವಾದಿದಂ' ಎನ್ನುವುದರಿಂದ ಎರಡನೆಯ ಜನ್ಮಾದ್ಯಧಿಕರಣವು ವ್ಯಾಖ್ಯಾತವಾಯಿತು. ಹಾಗೆಯೇ 'ಆಪ್ತತಮಮಪ್ಯಖಿಲೈಃ ಸುವಾಕ್ಯೈಃ' ಎನ್ನುವುದು ಮೂರನೇ ಶಾಸ್ತ್ರಯೋನಿತ್ವಾಧಿಕರಣದ ವ್ಯಾಖ್ಯಾನ. ಇದರ ವಿಸ್ತಾರ ಮತ್ತು ವ್ಯಾಖ್ಯಾನವೇ ಉಳಿದ ಎಲ್ಲ ಸೂತ್ರಗಳು. ಹೀಗೆ ಮೊದಲನೆಯ ಮಂಗಲಶ್ಲೋಕದಿಂದಲೇ ಶ್ರೀಮದಾಚಾರ್ಯರು ಇಡೀ

ಬ್ರಹ್ಮಸೂತ್ರಗಳ ಸಂಕ್ಷಿಪ್ತವಾದ ಸಾರವನ್ನು ನೀಡಿದ್ದಾರೆ.

ಇಷ್ಟದೇವತೆಗೆ ನಮಸ್ಕರಿಸುವುದರೊಂದಿಗೆ ಶಾಸ್ತ್ರೋಪದೇಶಕ ಗುರುವಿಗೆ ನಮಸ್ಕರಿಸಬೇಕಾದ್ದು ಅತ್ಯವಶ್ಯಕ ಎಂಬುದನ್ನು ಶಿಷ್ಯರಿಗೆ ಬೋಧಿಸುವುದಕ್ಕಾಗಿ ಶ್ರೀಮದಾಚಾರ್ಯರು ಎರಡನೆಯ ಶ್ಲೋಕದಲ್ಲಿ ತಮಗೆ ದೇವತೆಯೂ ಗುರುವೂ ಆಗಿರುವ ನಾರಾಯಣನ ಅವತಾರವೇ ಆದ ಹಾಗೂ ಪ್ರಕೃತ ವ್ಯಾಖ್ಯೇಯ ಗ್ರಂಥವಾದ ಬ್ರಹ್ಮಮೀಮಾಂಸಾ ಶಾಸ್ತ್ರವನ್ನು ರಚಿಸಿರುವ ಭಗವಾನ್ ಶ್ರೀವೇದವ್ಯಾಸರನ್ನು ನಮಸ್ಕರಿಸುತ್ತ ತಾವು ಬ್ರಹ್ಮಮೀಮಾಂಸಾ ಗ್ರಂಥಕ್ಕೆ ವ್ಯಾಖ್ಯಾನ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಾರೆ.

ತಮೇವ ಶಾಸ್ತ್ರಪ್ರಭವಂ ಪ್ರಣಮ್ಯ
ಜಗದ್ಗುರೂಣಾಂ ಗುರುಮಂಜಸೈವ ।
ವಿಶೇಷತೋ ಮೇ ಪರಮಾಖ್ಯವಿದ್ಯಾ-
ವ್ಯಾಖ್ಯಾಂ ಕರೋಮ್ಯನ್ವಪಿ ಚಾಹಮೇವ ॥೨॥

ಬ್ರಹ್ಮಮೀಮಾಂಸಾ ಶಾಸ್ತ್ರವನ್ನು ನಿರ್ಮಿಸಿದ ಹಾಗೂ ವೇದಾದಿ ಶಾಸ್ತ್ರಗಳನ್ನು ಜಗತ್ತಿಗೆ ಮೊಟ್ಟಮೊದಲಿಗೆ ಪ್ರಕಾಶಗೊಳಿಸಿದ ಭಗವಾನ್ ವೇದವ್ಯಾಸರು ಜಗದ್ಗುರುಗಳಾದ ಬ್ರಹ್ಮಾದಿಗಳಿಗೆ ಮುಖ್ಯವಾಗಿ ಶಾಸ್ತ್ರೋಪದೇಶಕ ಗುರುಗಳು. ವಿಶೇಷವಾಗಿ ನನಗೂ ಸಾಕ್ಷಾತ್ತಾಗಿ ಗುರುಗಳಾದ ಹಾಗೂ ಈ ಪೂರ್ವದಲ್ಲಿ ನಮಸ್ಕರಿಸಲ್ಪಟ್ಟ ಶ್ರೀನಾರಾಯಣನ ಅವತಾರರಾದ ವೇದವ್ಯಾಸರನ್ನು ಪುನಃ ಭಕ್ತ್ಯಾದಿಪೂರ್ವಕವಾಗಿ ನಮಸ್ಕರಿಸಿ, ನಾನು ಪರವಿದ್ಯೆಯಾದ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ವ್ಯಾಖ್ಯಾನವನ್ನು ಮಾಡುತ್ತೇನೆ.

ವಿವರಣೆ:

ಮೊದಲನೆಯ ಶ್ಲೋಕದಲ್ಲಿ ಶಾಸ್ತ್ರಪ್ರತಿಪಾದ್ಯನೆಂಬ ಅಭಿಪ್ರಾಯದಿಂದ ನಾರಾಯಣನಿಗೆ ನಮಸ್ಕಾರ. ಎರಡನೆಯ ಶ್ಲೋಕದಲ್ಲಿ ಅದೇ ನಾರಾಯಣನಿಗೆ ಶಾಸ್ತ್ರಪ್ರವಕ್ತೃತ್ವ ರೂಪದಿಂದ ನಮಸ್ಕಾರ ಮಾಡಿದ್ದು ಅತನ ಅತಿಶಯ ಪ್ರೀತಿಗಾಗಿ. ಆದ್ದರಿಂದ ಒಬ್ಬನೇ ವ್ಯಕ್ತಿಗೆ ಎರಡುಸಲ ನಮಸ್ಕಾರ ಮಾಡಿರುವುದು ಉಚಿತವೇ ಆಗುತ್ತದೆ. 'ಶಾಸ್ತ್ರಪ್ರಭವಂ' ಎನ್ನುವುದರಿಂದ

ಶ್ರೀನಾರಾಯಣನಿಗೆ ಗುರುತ್ವವನ್ನು ಸಮರ್ಥಿಸಿದ್ದಾರೆ. ಸಮಸ್ತ ಪ್ರಪಂಚವನ್ನು ಸೃಷ್ಟಿಸಿ ಪೋಷಿಸುವುದರಿಂದಲೂ, ವಿಘ್ನಗಳನ್ನು ನಿವಾರಿಸುವುದರಿಂದಲೂ, ಮನಸ್ಸನ್ನು ಪ್ರೇರೇಪಿಸುವುದರಿಂದಲೂ, ಯೋಗ್ಯ ಗುರುಗಳನ್ನು ಹೊಂದಿಸಿಕೊಟ್ಟು ಮೋಕ್ಷಕಾರಕ ಜ್ಞಾನವನ್ನು ಅನುಗ್ರಹಿಸುವುದರಿಂದಲೂ ಶ್ರೀನಾರಾಯಣನೇ ಎಲ್ಲರಿಗೂ ಮುಖ್ಯಗುರು ಎಂಬುದನ್ನು 'ಅಂಜಸ್ತೈವ ಜಗದ್ಗುರೂಣಾಂ ಗುರುಂ' ಎಂದು ಸೂಚಿಸಿದ್ದಾರೆ. ತನಗೆ ವೇದವ್ಯಾಸರೂಪಿಯಾದ ನಾರಾಯಣನೇ ಸಾಕ್ಷಾತ್ತಾಗಿ ಗುರುವು ಎಂಬುದನ್ನು 'ವಿಶೇಷತೋ ಮೇ' ಎಂಬುದರಿಂದ ಸೂಚಿಸಿದ್ದಾರೆ. ಪರಮ ಶ್ರೇಷ್ಠವಾದ ವಿದ್ಯೆಯಾದ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ವ್ಯಾಖ್ಯಾನ ಮಾಡಲು ಇತರರಿಗೆ ಶಕ್ಯವಿಲ್ಲವೆಂಬುದನ್ನು 'ಅಹಮೇವ' ಎಂಬುದರಿಂದ ಸೂಚಿಸಿದ್ದಾರೆ. ಪರವಿದ್ಯೆ ಮತ್ತು ಅಪರವಿದ್ಯೆ ಎಂಬುದಾಗಿ ಎರಡು ರೀತಿಯ ವಿದ್ಯೆವುಂಟು. ಯಾವ ವಿದ್ಯೆಯಿಂದ ಪರಬ್ರಹ್ಮನು ತಿಳಿಯಲ್ಪಡುತ್ತಾನೋ ಅದು ಪರವಿದ್ಯೆ. ಈ ದೃಷ್ಟಿಯಿಂದ ಬ್ರಹ್ಮಮೀಮಾಂಸಾ ಶಾಸ್ತ್ರವು ಪರವಿದ್ಯೆಯೆನಿಸುತ್ತದೆ. ಋಗ್ವೇದಾದಿಗಳು ಅಪರವಿದ್ಯೆ ಎನಿಸುತ್ತವೆ. ಯಥಾರ್ಥಜ್ಞಾನ ಮತ್ತು ಅದಕ್ಕೆ ಸಾಧನವಾದದ್ದು ವಿದ್ಯೆ. ಪರಮ ಪ್ರಮಾಣವಾದ ವಿದ್ಯೆ ಪರಮವಿದ್ಯೆ. ಬ್ರಹ್ಮಮೀಮಾಂಸಾ ಶಾಸ್ತ್ರವು ಪರಮ ಪ್ರಾಮಾಣ್ಯವನ್ನು ಹೊಂದಿದೆ ಎಂಬುದನ್ನು ಶ್ರೀಮದಾಚಾರ್ಯರು ಇಲ್ಲಿ 'ಪರಮಾಖ್ಯವಿದ್ಯಾಂ' ಎಂಬುದರಿಂದ ಸಮರ್ಥಿಸಿದ್ದಾರೆ. ಈಗಾಗಲೇ ಈ ಗ್ರಂಥಕ್ಕೆ ಭಾಷ್ಯರೂಪವಾದ ವ್ಯಾಖ್ಯಾನವನ್ನು ರಚಿಸಿದ್ದರೂ, ವಿಶೇಷ ಪ್ರಯೋಜನವಿರುವುದರಿಂದ ಮತ್ತೆ ಈ ವ್ಯಾಖ್ಯಾನವನ್ನು ಮಾಡಲು ಹೊರಟಿದ್ದೇವೆ ಎಂಬುದನ್ನು 'ಅನ್ವಪಿ ಚ' ಎಂದು ಸೂಚಿಸಿದ್ದಾರೆ.

ಯಾವುದೇ ಗ್ರಂಥದ ವ್ಯಾಖ್ಯಾನವನ್ನು ಆರಂಭಿಸುವುದರ ಮೊದಲು ಅದರ ಪ್ರಾಮಾಣ್ಯವನ್ನು ಶ್ರುತಪಡಿಸಬೇಕು. ಆಗ ಮಾತ್ರ ವ್ಯಾಖ್ಯಾನಕ್ಕೆ ಮಹತ್ವ ಬರುತ್ತದೆ. ಆದುದರಿಂದ ಶ್ರೀಮದಾಚಾರ್ಯರು ಮಂಗಲಾಚರಣೆಯ ನಂತರ ಮುಂದಿನ ಶ್ಲೋಕಗಳಲ್ಲಿ ಬ್ರಹ್ಮಸೂತ್ರಗಳಿಗೆ ಪ್ರಾಮಾಣ್ಯವನ್ನು ಸಮರ್ಥಿಸಿ ಗ್ರಂಥದ ಮಹತ್ವವನ್ನು ವಿವರಿಸುತ್ತಾರೆ.

11/7/04

ಬ್ರಹ್ಮಸೂತ್ರಗಳು ಪರವಿದ್ಯೆ ಹಾಗೂ ಪರಮಪ್ರಮಾಣ

ಪ್ರಾದುರ್ಭೂತೋ ಹರಿರ್ವ್ಯಾಸೋ ವಿರಿಂಚಭವಪೂರ್ವಕೈಃ ।
ಅರ್ಥಿತಃ ಪರವಿದ್ಯಾಖ್ಯಂ ಚಕ್ರೇ ಶಾಸ್ತ್ರಮನುತ್ತಮಮ್ ॥೩॥
ಗುರುರ್ಗುರೂಣಾಂ ಪ್ರಭವಃ ಶಾಸ್ತ್ರಾಣಾಂ ಬಾದರಾಯಣಃ ।
ಯತಸ್ತದುದಿತಂ ಮಾನಮಜಾದಿಭ್ಯಸ್ತದರ್ಥತಃ ॥೪॥
ವಕ್ತೃಶ್ರೋತೃಪ್ರಸಕ್ತೀನಾಂ ಯದಾಪ್ತಿರನುಕೂಲತಾ ।
ಆಪ್ತವಾಕ್ಯತಯಾ ತೇನ ಶ್ರುತಿಮೂಲತಯಾ ತಥಾ ॥೫॥
ಯುಕ್ತಿಮೂಲತಯಾ ಚೈವ ಪ್ರಾಮಾಣ್ಯ ತ್ರಿವಿಧಂ ಮಹತ್।
ದೃಶ್ಯತೇ ಬ್ರಹ್ಮಸೂತ್ರಾಣಾಮೇಕಧಾಽನ್ಯತ್ರ ಸರ್ವಶಃ ॥೬॥
ಅತೋ ನೈತಾದೃಶಂ ಕಿಂಚಿತ್ಪ್ರಮಾಣತಮಮಿಷ್ಯತೇ ।

ಬ್ರಹ್ಮ ರುದ್ರ ಮೊದಲಾದ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಶ್ರೀಹರಿಯು ವೇದವ್ಯಾಸರೂಪದಿಂದ ಅವತರಿಸಿ, ಪರವಿದ್ಯೆ ಎಂಬುದಾಗಿ ಕರೆಯಲ್ಪಡುವ ಸರ್ವೋತ್ತಮವಾದ ಬ್ರಹ್ಮಮೀಮಾಂಸಾಶಾಸ್ತ್ರವನ್ನು ರಚಿಸಿದನು.

ಶ್ರೀ ವೇದವ್ಯಾಸರು ಜಗತ್ತಿಗೆ ಶಾಸ್ತ್ರೋಪದೇಶಕರಾದ ಬ್ರಹ್ಮಾದಿಗಳಿಗೂ ಗುರುಗಳು. ಮಹಾಭಾರತಾದಿ ಶಾಸ್ತ್ರಗಳ ನಿರ್ಮಾತರು. ವೇದಾದಿ ಶಾಸ್ತ್ರಗಳಿಗೆ ಮುಖ್ಯವಾಗಿ ಪ್ರವರ್ತಕರು. ಉತ್ಕೃಷ್ಟ ಶ್ರೋತೃಗಳಾದ ಬ್ರಹ್ಮಾದಿಗಳಿಗೆ ಮೋಕ್ಷಾಖ್ಯ ಪ್ರಯೋಜನಕ್ಕಾಗಿ ಶ್ರೀವೇದವ್ಯಾಸರಿಂದ ಈ ಬ್ರಹ್ಮಮೀಮಾಂಸಾ ಶಾಸ್ತ್ರವು ಉಪದಿಷ್ಟವಾಗಿದೆ. ಈ ಕಾರಣಗಳಿಂದಾಗಿ , ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ಪ್ರಾಮಾಣ್ಯವು ಸಿದ್ಧಿಸುತ್ತದೆ.

ಯಾವ ವಾಕ್ಯದಲ್ಲಿ ಉಪದೇಶ ಮಾಡುವವರು, ಅದನ್ನು ಕೇಳುವವರು, ಉಪದೇಶದ ಪ್ರಸಂಗ ಮತ್ತು ಉಪದೇಶಕರಿಗೆ ತಾವು ಹೇಳುವ ವಿಷಯದಲ್ಲಿ ಪರಿಣತಿ ಹಾಗೂ ಶಿಷ್ಯರ ವಿಷಯದಲ್ಲಿ ಆಪ್ತತ್ವ (ಪ್ರಿಯತ್ವ ಮತ್ತು ತತ್ತ್ವ ತಿಳಿಸಬೇಕೆಂಬ ಕಳಕಳಿ) ಇವುಗಳು ಅನುಕೂಲವಾಗಿರುವುವೋ, ಅಂಥಹ ವಾಕ್ಯವು ಆಪ್ತವಾಕ್ಯ ಎನಿಸುತ್ತದೆ. ಆಪ್ತವಾಕ್ಯತ್ವ ಎನ್ನುವುದು ಪ್ರಾಮಾಣ್ಯಕ್ಕೆ ಒಂದು ಮುಖ್ಯ ಹೇತು (ಕಾರಣ). ಶ್ರುತಿ ಹಾಗೂ ಯುಕ್ತಿಮೂಲತ್ವಗಳು ಉಳಿದೆರಡು ಪ್ರಮುಖ ಹೇತುಗಳು. ಆಪ್ತವಾಕ್ಯತ್ವ, ಶ್ರುತಿಮೂಲತ್ವ ಮತ್ತು

ಯುಕ್ತಿಮೂಲತ್ವ ಎಂಬ ಮೂರು ಬಗೆಯ ಪ್ರಾಮಾಣ್ಯಹೇತುಗಳೂ ಈ ಬ್ರಹ್ಮಸೂತ್ರಗಳಿಗೆ ಮಾತ್ರ ಕಂಡುಬರುತ್ತವೆ. ಬೇರೆ ಎಲ್ಲ ಕಡೆಗಳಲ್ಲಿ ಕೇವಲ ಒಂದು ಬಗೆಯ ಪ್ರಾಮಾಣ್ಯ ಕಂಡು ಬರುತ್ತದೆ. ಈ ರೀತಿಯ ಪರಮಪ್ರಾಮಾಣ್ಯವನ್ನು ಹೊಂದಿರುವ ಇಂಥಹ ಒಂದು ಶಾಸ್ತ್ರಗ್ರಂಥವು ಬೇರೆ ಯಾವುದೂ ಇಲ್ಲದಿರುವುದರಿಂದ ಬ್ರಹ್ಮಸೂತ್ರಗಳು ಸರ್ವೋತ್ತಮವಾದ ಶಾಸ್ತ್ರವೆನಿಸುತವೆ.

ವಿವರಣೆ:

ಯಾವುದೇ ಗ್ರಂಥವು ಪ್ರಮಾಣ ಎನಿಸಬೇಕಾದರೆ ಉಪದೇಶಕನಾದ ಗ್ರಂಥಕರ್ತನಿಗೆ ತಾನು ಹೇಳುವ ವಿಷಯಗಳ ಬಗ್ಗೆ ಯಥಾರ್ಥವಾದ ತಿಳಿವಳಿಕೆ (1) ಇರಬೇಕು. ಜೊತೆಗೆ ಯೋಗ್ಯರಿಗೆ ತತ್ವವನ್ನು ತಿಳಿಸಬೇಕೆಂಬ ಕಳಕಳಿ (2) ಇರಬೇಕು. ಇಂದ್ರಿಯಪಾಟವವನ್ನೂ (3) ಹೊಂದಿರಬೇಕು. ಕೇವಲ ಗುರುವು ತತ್ವಜ್ಞಾನಿಯಾಗಿದ್ದರೆ ಸಾಲದು, ಶಿಷ್ಯರಿಗೆ ಅದನ್ನು ತಿಳಿಯುವ ಅರ್ಹತೆಯೂ (4) ಇರಬೇಕು. ಶಿಷ್ಯರು ಯೋಗ್ಯರಾಗಿದ್ದರೂ ಗುರುವಿಗೆ ಅವರಲ್ಲಿ ಪ್ರೀತಿಯಿಲ್ಲದಿದ್ದರೆ (5) ಸರಿಯಾದ ತತ್ವವನ್ನು ಗುರುವು ಉಪದೇಶಿಸದೇ ಹೋಗಬಹುದು. ಹೇಳುವವರಲ್ಲೂ ಕೇಳುವವರಲ್ಲೂ ಮೇಲೆ ತಿಳಿಸಿದ ಅನುಕೂಲ್ಯಗಳ ಅವಶ್ಯಕತೆಯ ಜೊತೆಗೆ ಪ್ರಸಂಗವೂ (6) ತಾತ್ವಿಕ ಚಿಂತನೆಗೆ ಪ್ರಶಸ್ತವಾಗಿರಬೇಕು. ಸರ್ವಜ್ಞನಾದ ಗುರು, ಯೋಗ್ಯನೂ ಪರಮ ಪ್ರಿಯನೂ ಆದ ಶಿಷ್ಯ, ತತ್ವಜ್ಞಾನ ಉಪದೇಶಕ್ಕೆ ಸೂಕ್ತವಾದ ಸಂದರ್ಭ ಇವುಗಳ ಸಮಾಗಮವನ್ನೇ ಶಾಸ್ತ್ರದಲ್ಲಿ ವಕ್ತೃ, ಶ್ರೋತೃ, ಪ್ರಸಕ್ತಿಗಳ ಅನುಕೂಲತೆಯೆಂದು ಕರೆಯಲಾಗಿದೆ. ಅಂಥಹ ಸಂದರ್ಭದಲ್ಲಿ ಯಾವುದೇ ಅಜ್ಞಾನ, ಭ್ರಾಂತಿ, ವಂಚನೆಗಳು ಕಂಡುಬರುವುದಿಲ್ಲ. ಇಂಥಹ ಸಂದರ್ಭದಲ್ಲಿ ಉಪದಿಷ್ಟವಾದ ಗ್ರಂಥವನ್ನೇ ಆಪ್ತವಾಕ್ಯ ಎಂದು ಕರೆಯುತ್ತಾರೆ.

ಬ್ರಹ್ಮಮೀಮಾಂಸಾ ಶಾಸ್ತ್ರವನ್ನು ರಚಿಸಿದ ವೇದವ್ಯಾಸರು ಸರ್ವಜ್ಞನಾದ ಶ್ರೀಹರಿಯ ಅವತಾರವೇ ಆಗಿದ್ದಾರೆ. ವೇದಗಳನ್ನು ಬ್ರಹ್ಮಾದಿಗಳಿಗೆ ಉಪದೇಶಿಸಿದ ಹಾಗೂ ಮಹಾಭಾರತಾದಿ ಉದ್ಗ್ರಂಥಗಳನ್ನು ರಚಿಸಿದ ಶ್ರೀವೇದವ್ಯಾಸರಿಗೆ ಅಜ್ಞಾನ ಭ್ರಾಂತಿಗಳು ಇರಲು ಸಾಧ್ಯವೇ ಇಲ್ಲ.

ಬಹುಸಂಖ್ಯಾಕ ಶಾಸ್ತ್ರಗ್ರಂಥಗಳನ್ನು ರಚಿಸಿರುವ ಶ್ರೀವೇದವ್ಯಾಸರಿಗೆ ತತ್ವಜ್ಞಾನೋಪದೇಶದ ಕಳಕಳಿ ಅತ್ಯಂತ ಹೆಚ್ಚಿನದಾಗಿರುತ್ತದೆ ಎಂದು ಊಹಿಸಬಹುದು. ಇವರಲ್ಲಿ ಇಂದ್ರಿಯ ದೋಷಗಳನ್ನು ಎಣಿಸುವುದೂ ಮಹಾಪರಾಧವಾಗುತ್ತದೆ. ಬ್ರಹ್ಮಮೀಮಾಂಸಾ ಶಾಸ್ತ್ರದ ಉಪದೇಶವನ್ನು ಪಡೆದ ಬ್ರಹ್ಮಾದಿಗಳು ಜಗತ್ತಿಗೆ ಗುರುಗಳು ಎನಿಸುವುದರಿಂದ ಅವರ ಯೋಗ್ಯತೆಯ ಬಗ್ಗೆ ಸಂದೇಹ ಪಡಲು ಸಾಧ್ಯವೇ ಇಲ್ಲ. ಅವರು ಭಗವಂತನ ಪರಮ ಪ್ರೀತಿಗೆ ಪಾತ್ರರೂ ಆಗಿದ್ದಾರೆ. ಲೋಕದಲ್ಲಿ ತತ್ವಜ್ಞಾನದ ಲೋಪವುಂಟಾಗಿ ಸಜ್ಜನರೆಲ್ಲ ಪರಿತಪಿಸುತ್ತಿರುವುದನ್ನು ಕಂಡು ಪರಮಕಾರುಣ್ಯದಿಂದ ಲೋಕೋದ್ಧಾರಕ್ಕಾಗಿ ಬ್ರಹ್ಮಾದಿ ದೇವತೆಗಳು ಪ್ರಾರ್ಥಿಸಿದಾಗ, ಭಗವಂತನು ವೇದವ್ಯಾಸರೂಪದಿಂದ ಈ ಗ್ರಂಥವನ್ನು ಉಪದೇಶಿಸಿರುವುದರಿಂದ ಈ ಗ್ರಂಥಕ್ಕೆ ಪ್ರಸಂಗಾನುಕೂಲ್ಯವೂ ಸಿದ್ಧವಾಗುತ್ತದೆ. ವೇದಗಳಲ್ಲಿ ಹೇಳಿದ ವಿಷಯಗಳನ್ನು ಯುಕ್ತಿಗಳಿಂದ ಸಮರ್ಥಿಸುವ ಈ ಗ್ರಂಥಕ್ಕೆ ಆಗಮ ಮತ್ತು ಯುಕ್ತಿಗಳ ಸಮರ್ಥನೆಯೂ ಇದೆ. ಶ್ರೇಷ್ಠ ವಕ್ತಾರ, ಶ್ರೇಷ್ಠ ಶ್ರೋತಾರ, ಉತ್ತಮ ಸಂದರ್ಭಗಳಿಂದಾಗಿ ಆಪ್ತತ್ವ, ವೇದ ಮತ್ತು ಯುಕ್ತಿಗಳ ಸಂವಾದತ್ವ ಎಂಬ ಮೂರು ರೀತಿಯ ಪ್ರಾಮಾಣ್ಯಗಳನ್ನೂ ಹೊಂದಿರುವುದರಿಂದ ಬ್ರಹ್ಮಮೀಮಾಂಸಾ ಶಾಸ್ತ್ರವು ಪರಮಪ್ರಮಾಣವೆನಿಸಿದ್ದು ಸರ್ವೋತ್ಕೃಷ್ಠ ಶಾಸ್ತ್ರವಾಗಿದೆ.

ಈಗಾಗಲೇ ಸೂತ್ರಗಳಿಗೆ ಭಾಷ್ಯ ರೂಪದ ವ್ಯಾಖ್ಯಾನವನ್ನು ಮಾಡಿರುವುದರಿಂದ ಈಗ ಪುನಃ ಈ ವ್ಯಾಖ್ಯಾನದ ಅವಶ್ಯಕತೆಯಿದೆಯೇ, ಹೀಗೆ ಮಾಡುವುದು ಪುನರುಕ್ತಿಯೆನಿಸುವುದಿಲ್ಲವೇ ಎಂದರೆ-

ಸ್ವಯಂಕೃತಾಪಿ ತದ್ವ್ಯಾಖ್ಯಾ ಕ್ರಿಯತೇ ಸ್ಪಷ್ಟತಾರ್ಥತಃ ॥೭॥

ಈ ವ್ಯಾಖ್ಯಾನವನ್ನು ರಚಿಸುವ ಮುನ್ನವೇ ಬ್ರಹ್ಮಸೂತ್ರಗಳ ವ್ಯಾಖ್ಯಾನವು ಭಾಷ್ಯರೂಪದಲ್ಲಿ ನನ್ನಿಂದ ಮಾಡಲ್ಪಟ್ಟಿದ್ದರೂ, ಇನ್ನೂ ಹೆಚ್ಚು ಸ್ಪಷ್ಟಗೊಳಿಸುವ ಉದ್ದೇಶದಿಂದ ಈಗ ಪುನಃ ಈ ವ್ಯಾಖ್ಯಾನವು ರಚಿಸಲ್ಪಡುತ್ತದೆ.

ವಿವರಣೆ: ಭಾಷ್ಯದಲ್ಲಿ ಸ್ಪಷ್ಟವಾಗದಿರುವ ಅರ್ಥವನ್ನು ಸ್ಪಷ್ಟೀಕರಿಸಲು ಅನುವ್ಯಾಖ್ಯಾನವನ್ನು ಮಾಡಿದ್ದೇವೆ ಎಂಬುದಾಗಿ ಶ್ರೀಮದಾಚಾರ್ಯರು

ಹೇಳಿದ್ದಾರೆ. ಕೆಲವು ಕಡೆ ಹೇಳದೇ ಬಿಟ್ಟ ಅಂಶವನ್ನು ಹೇಳುವುದು, ಅತಿಸಂಕ್ಷೇಪವಾಗಿ ಹೇಳಿದ್ದನ್ನು ವಿಸ್ತಾರ ಮಾಡುವುದು, ವಿಸ್ತಾರವಾಗಿ ಹೇಳಿದ್ದನ್ನು ಮತ್ತೆ ಬುದ್ಧಿಯಲ್ಲಿ ಉಳಿಯುವಂತೆ ಸಂಕ್ಷಿಪ್ತವಾಗಿ ಹೇಳುವುದು, ವಿಕ್ಷಿಪ್ತವಾಗಿ ಅಂದರೆ ಅಲ್ಲಲ್ಲಿ ಹೇಳಿದ್ದನ್ನು ಸಂಕಲಿಸಿ ಒಂದೇ ಕಡೆಯಲ್ಲಿ ಹೇಳುವುದು, ಅಲ್ಲಿ ಹೇಳಿದ್ದನ್ನೇ ಮತ್ತೆ ಸಮರ್ಥಿಸುವುದು ಮತ್ತು ಅಪವ್ಯಾಖ್ಯಾನಗಳನ್ನು ನಿರಾಕರಿಸಿ ದೃಢೀಕರಿಸುವುದು, ಹೀಗೆ ಸ್ಪಷ್ಟೀಕರಣದಲ್ಲಿ ಅನೇಕ ರೀತಿಗಳಿವೆ.

ಮಂಗಲಾಚರಣೆ ಮಾಡಿ ಪ್ರಾರಂಭಿಸಲ್ಪಟ್ಟ ಕಾರ್ಯಗಳು ನಿರ್ವಿಘ್ನವಾಗಿ ಪೂರ್ತಿಗೊಳ್ಳುತ್ತವೆ. ಮಂಗಲಾಚರಣೆಗೂ ಗ್ರಂಥದ ನಿರ್ವಿಘ್ನ ಸಮಾಪ್ತಿಗೂ ಕಾರ್ಯಕಾರಣ ಸಂಬಂಧವಿರುವುದಾಗಿ ಶ್ರುತಿಗಳಿಂದ ಸಿದ್ಧವಾಗಿದೆ. ಆದ್ದರಿಂದ ಮಂಗಾಚರಣೆಯಿಲ್ಲದ , ಗ್ರಂಥಗಳಿಗೆ ವ್ಯಾಖ್ಯಾನವು ಆರ್ಯಸಮ್ಮತವಲ್ಲ. ಬ್ರಹ್ಮಸೂತ್ರಗಳಿಗೆ ಮಂಗಲಾಚರಣೆಯು ಮಾಡಿಲ್ಲವಾದ್ದರಿಂದ ಅದಕ್ಕೆ ವ್ಯಾಖ್ಯಾನವು ಮಾಡತಕ್ಕದ್ದಲ್ಲ ಎಂದು ಆಶಂಕಿಸಿದರೆ ಬ್ರಹ್ಮಸೂತ್ರಗಳ ಆದಿಯಲ್ಲಿರುವ ಓಂಕಾರವು ಸೂತ್ರಾವಯವವಾಗಿದ್ದು ಮಂಗಲವಾಚಕವಾಗಿದೆ ಎಂದು ಹೇಳುತ್ತಾರೆ.

ಓಂಕಾರವು ಸೂತ್ರಾವಯವ ಹಾಗೂ ಮಂಗಲಸೂಚಕ

तत्र ताराथमूलत्वं सर्वशास्त्रस्य चेष्यते ।
सर्वत्रानुगतत्वेन पृथगोंक्रियतेऽखिलैः ॥६॥

ಪ್ರಥಮ ಸೂತ್ರದ ಆದಿಯಲ್ಲಿ ಉಚ್ಚರಿತವಾಗಿರುವ ಓಂಕಾರ ಮತ್ತು ಅಥ ಶಬ್ದಗಳು ಎಲ್ಲ ಶಾಸ್ತ್ರಗಳಿಗೆ ಆದಿಯಾಗಿಯೂ (ಮಂಗಲಾಚರಣೆಯ ರೂಪದಲ್ಲಿ), ಅಂಗವಾಗಿಯೂ ಸೂತ್ರಕಾರರಿಂದ ಅಂಗೀಕೃತವಾಗಿದೆ. ಓಂಕಾರವನ್ನು ಎಲ್ಲ ಸೂತ್ರಗಳ ಆದಿಯಲ್ಲೂ ಉಚ್ಚರಿಸಬೇಕು ಎಂಬುದನ್ನು ತಿಳಿಸಲು ಎಲ್ಲ ಸೂತ್ರಪಠಣಕಾರರಿಂದಲೂ ಓಂಕಾರವು ಪ್ರಥಮ ಸೂತ್ರದೊಂದಿಗೆ ಸಂಧಿಮಾಡದೆ ಪ್ರತ್ಯೇಕವಾಗಿ ಉಚ್ಚರಿಸಲ್ಪಡುತ್ತದೆ.

ವಿವರಣೆ: ಸೂತ್ರಕಾರರು ಮಂಗಲಾಚರಣೆ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಮೊದಲನೆಯ ಸೂತ್ರದ ಆದಿಯಲ್ಲೇ ಮಾಂಗಲಿಕ ಸ್ವರೂಪವಾದ

ಓಂ ಮತ್ತು ಅಥ ಶಬ್ದಗಳ ಮೂಲಕ ಮಂಗಲಾಚರಣೆಯನ್ನು ಮಾಡಿದ್ದಾರೆ. ಎಲ್ಲಕ್ಕೂ ಪೂರ್ವದಲ್ಲಿ ಓಂಕಾರ ಮತ್ತು ಅಥ ಶಬ್ದಗಳು ಪರಬ್ರಹ್ಮನ ಕಂಠವನ್ನು ನಿರ್ಭೇದಿಸಿ ಹೊರಟವು. ಆದ್ದರಿಂದ ಇವುಗಳು ಮಂಗಲ ಸೂಚಕಗಳು(ಓಂಕಾರಶ್ಚಾಥಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ ಕಂಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲಿಕಾವುಭೌ). ಸೂತ್ರದ ಆದಿಯಲ್ಲಿ ಓಂಕಾರ ಮತ್ತು ಅಥ ಶಬ್ದಗಳನ್ನು ಸೂತ್ರಕಾರರು ಪ್ರಯೋಗಿಸಿರುವುದರಿಂದ ಈ ಗ್ರಂಥಕ್ಕೆ ಮಂಗಲಾಚರಣೆ ಮಾಡಿದಂತೆಯೇ ಆಗಿದೆ.

ಓಂಕಾರ ಮತ್ತು ಅಥ ಶಬ್ದಗಳು ಕೇವಲ ಮಾಂಗಲಿಕ ಅರ್ಥದಲ್ಲಿರುವುದಾದರೆ ಅವುಗಳಿಗೆ ಪ್ರಥಮ ಸೂತ್ರದ ಅವಯವತ್ವ ಬರುವುದಿಲ್ಲ. ಇದರಿಂದಾಗಿ ಶಾಸ್ತ್ರಜಿಜ್ಞಾಸೆಗೆ ಅತ್ಯವಶ್ಯ ಅಂಗವಾದ ಅಧಿಕಾರ್ಯಾದಿಗಳು ಪ್ರತಿಪಾದಿತವಾಗದೇ ಇರುವುದರಿಂದ ಪ್ರಥಮಸೂತ್ರಕ್ಕೆ ನ್ಯೂನತೆ ಬರುತ್ತದೆ. ಅಧಿಕಾರ, ವಿಷಯಾದಿಗಳು ಪ್ರಸ್ತಾಪಿತವಾಗದಿದ್ದರೆ ಶಾಸ್ತ್ರಕ್ಕೆ ಆರಂಭಣೀಯತ್ವ ಕೂಡುವುದಿಲ್ಲ ಎಂದರೆ –

ಓಂಕಾರ ಮತ್ತು ಅಥ ಶಬ್ದಗಳು ಕೇವಲ ಮಾಂಗಲಿಕಾರ್ಥದಲ್ಲಿ ಮಾತ್ರ ಇಲ್ಲಿ ಪ್ರಯೋಗವಾಗಿಲ್ಲ, ಪರಂತು ಮೊದಲನೆಯ ಸೂತ್ರದ ಅವಯವಗಳೇ ಆಗಿವೆ. ಈ ಶಬ್ದಗಳಿಂದ ಸೂತ್ರಕ್ಕೆ ವಿಷಯ, ಅಧಿಕಾರ್ಯಾದಿಗಳು ಹೇಳಲ್ಪಟ್ಟವೆ. ಆದ್ದರಿಂದ ಈ ಗ್ರಂಥಕ್ಕೆ ಆರಂಭಣೀಯತ್ವ ಕೂಡುತ್ತದೆ. ಓಂಕಾರವನ್ನು ಉಚ್ಚರಿಸುವಾಗ ಸೂತ್ರದ ಮುಂದಿನ ಶಬ್ದದೊಂದಿಗೆ ಸಂಧಿಯನ್ನು ಮಾಡದೆ ಪ್ರತ್ಯೇಕವಾಗಿ ಹೇಳುವುದರಿಂದ ಇದು ಸೂತ್ರದ ಅವಯವವಾಗುವುದು ಹೇಗೆ ಎಂದು ಸಂದೇಹ ಉಂಟಾಗಬಹುದು. ಆದರೆ ಸೂತ್ರದ ಆರಂಭದಲ್ಲಿ ಓಂಕಾರವನ್ನು ಉಚ್ಚರಿಸುವ ಪರಂಪರೆ ಬಹಳ ಹಿಂದಿನಿಂದಲೂ ಬಂದಿರುವುದರಿಂದ ಅದನ್ನು ಸೂತ್ರದ ಅಂಗವೆಂದೇ ಸ್ವೀಕರಿಸಬೇಕು. 'ಸ್ರವತ್ಯನೋಂಕೃತಂ ಬ್ರಹ್ಮ ಪರಸ್ತಾಚ್ಚ ವಿಶೀರ್ಯತೇ'. ಆದಿಯಲ್ಲಿ ಓಂಕಾರವಿಲ್ಲದೆ ಉಚ್ಚರಿತವಾದ ಬ್ರಹ್ಮವಿದ್ಯೆಯು ಪುಣ್ಯಫಲಕ್ಕೆ ಕಾರಣವಾಗುವುದಿಲ್ಲ ಮತ್ತು ಅಂತ್ಯದಲ್ಲಿ ಓಂಕಾರವನ್ನು ಉಚ್ಚರಿಸದಿದ್ದರೆ ಬಂದಿದ್ದ ಫಲ ಸೋರಿಹೋಗುತ್ತದೆ. ಆದುದರಿಂದ ಸೂತ್ರದ ಆದ್ಯಂತಗಳಲ್ಲಿ

ಓಂಕಾರವನ್ನು ಉಚ್ಚರಿಸಬೇಕು(ಆದ್ಯಂತಯೋರೋಂಕುರ್ಯಾತ್) ಎಂಬುದಾಗಿ ವಿಧಿವಾಕ್ಯವಿದೆ. ಎಲ್ಲ ಸೂತ್ರಗಳ ಪಠಣದಲ್ಲಿಯೂ ಆದಿ ಮತ್ತು ಅಂತ್ಯಗಳಲ್ಲಿ ಸಂಪುಟಾಕಾರವಾಗಿ ಓಂಕಾರವನ್ನು ಉಚ್ಚರಿಸಬೇಕು. ಈ ನಿಯಮ ಎಲ್ಲ ಸೂತ್ರಗಳಿಗೂ ಅನ್ವಯವಾಗುತ್ತದೆ ಎಂಬುದನ್ನು ಸೂಚಿಸಲು ಪ್ರಥಮ ಸೂತ್ರದ ಆದಿಯಲ್ಲಿ ಓಂಕಾರವನ್ನು ಸಂಧಿಮಾಡದೆ ಪ್ರತ್ಯೇಕವಾಗಿ ಹೇಳಲಾಗಿದೆ.

ಜಿಜ್ಞಾಸಾಧಿಕರಣ

ಸೂತ್ರ: ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ (೧-೧-೧)

ಅಧ್ಯಯನ ಶಮದಮಾದಿ ರೂಪವಾದ ಅಧಿಕಾರವು ಸಿದ್ಧಿಸಿದ ಮೇಲೆ (ಅಥ), ಪ್ರಸನ್ನನಾದ ಶ್ರೀಹರಿಯಿಂದ ಅಪರೋಕ್ಷಜ್ಞಾನ ಮತ್ತು ಮೋಕ್ಷಾಖ್ಯ ಫಲವು ಲಭಿಸುವುದೆಂಬ ಪ್ರಯೋಜನವಿರುವುದರಿಂದ (ಅತಃ), ಗುಣಪರಿಪೂರ್ಣನಾದ ವಿಷ್ಣುವಿನ (ಓಂ ಬ್ರಹ್ಮ) ವಿಚಾರವು ಮಾಡತಕ್ಕದ್ದು (ಜಿಜ್ಞಾಸಾ ಕರ್ತವ್ಯಾ).

ಗುಣಪೂರ್ಣತ್ವವೇ ಓಂಕಾರದ ಅರ್ಥ

ಓತತ್ವವಾಚೀ ಹ್ಯೋಂಕಾರೋ ವಕ್ತೃಸೌ ತದ್ಗುಣೋತತಾಮ್ ।

ಸರ್ವಗತತ್ವ ಅಥವಾ ಪ್ರವಿಷ್ಟತ್ವವನ್ನು ಪ್ರತಿಪಾದಿಸುವ ಕಾರಣದಿಂದ ಓಂಕಾರವು ಅನಂದಾದಿ ಅನಂತಕಲ್ಯಾಣಗುಣಗಳಿಂದ ಪ್ರವಿಷ್ಟತ್ವವನ್ನು ಹೇಳುತ್ತದೆ. ಆದ್ದರಿಂದ ಅನಂತಕಲ್ಯಾಣಗುಣಪೂರ್ಣತ್ವವೇ ಓಂಕಾರದ ಅರ್ಥ.

ಗುಣಪೂರ್ಣನೇ ಜಿಜ್ಞಾಸ್ಯನು

ಸ ಏವ ಬ್ರಹ್ಮಶಬ್ದಾರ್ಥೋ ನಾರಾಯಣಪದೋದಿತಃ ॥೯॥

ಸ ಏವ ಭರ್ಗಶಬ್ದಾರ್ಥೋ ವ್ಯಾಹೃತೀನಾಂ ಚ ಭೂಮತಃ ।

ಭಾವನಾಚ್ಚೈವ ಸುತ್ವಾಚ್ಚ ಸೋಽಯಂ ಪುರುಷ ಇತ್ಯಪಿ ॥೧೦॥

ಸ ಏವ ಸರ್ವವೇದಾರ್ಥೋ ಜಿಜ್ಞಾಸ್ಯೋಽಯಂ ವಿಧೀಯತೇ ।

ಗುಣಪೂರ್ಣತ್ವವೇ ಬ್ರಹ್ಮ ಶಬ್ದದ ಅರ್ಥವು. ನಾರಾಯಣ ಶಬ್ದದಿಂದಲೂ ಅದೇ ಉಕ್ತವಾಗಿದೆ. ಭರಣ ಮತ್ತು ಗಮನ ಶಬ್ದಗಳ ಯೋಗದಿಂದ ಭರ್ಗಶಬ್ದಾರ್ಥನೂ ಗುಣಪೂರ್ಣನಾದ ಬ್ರಹ್ಮನೇ.

ಪೂರ್ಣತ್ವದ ನಿಮಿತ್ತವಾಗಿಯೂ(ಭೂಮತಃ), ಜಗತ್ತನ್ನು ಸೃಷ್ಟಿಸುವುದರಿಂಧಲೂ (ಭಾವನಾಚ್ಚೈವ), ಸುಖರೂಪತ್ವದ ಕಾರಣದಿಂದಲೂ (ಸುತ್ವಾಚ್ಚ), ಆ ವಿಷ್ಣುವೇ ವ್ಯಾಹೃತಿಗಳ ಅರ್ಥವು. ಪೂರ್ಣತ್ವದ ಕಾರಣದಿಂದಲೇ ಪುರುಷ ಶಬ್ದವಾಚ್ಯನು ನಾರಾಯಣನೇ ಆಗಿರುವನು. ಸರ್ವವೇದಗಳ ಮುಖ್ಯ ತಾತ್ಪರ್ಯನೂ ಅವನೇ. ಹೀಗೆ ಅನಂತಕಲ್ಯಾಣಗುಣ ಪರಿಪೂರ್ಣನೂ ಸಮಸ್ತ ವೇದಪ್ರತಿಪಾದ್ಯನೂ ಹಾಗೂ ಸಮಸ್ತ ವೇದಾರ್ಥನೂ ಆದ ಶ್ರೀಹರಿಯೇ ಮುಖ್ಯವಾಗಿ ವಿಚಾರ್ಯನು (ಜಿಜ್ಞಾಸ್ಯಃ) ಎಂಬುದಾಗಿ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿದೆ.

ವಿವರಣೆ:

ಓಂಕಾರ ಮತ್ತು ಬ್ರಹ್ಮ ಇವೆರಡು ಶಬ್ದಗಳೂ ಗುಣಪರಿಪೂರ್ಣತ್ವವನ್ನೇ ಪ್ರತಿಪಾದಿಸುತ್ತವೆ. 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋ ಹ್ಯಸ್ಮಿನ್ ಗುಣಾಃ' ಇತ್ಯಾದಿ ಶ್ರುತಿಗಳು ಇದಕ್ಕೆ ಪ್ರಮಾಣವಾಗಿವೆ. ಜೀವ ಮತ್ತು ಜಡಗಳಿಗೆ ಗುಣಪರಿಪೂರ್ಣತ್ವವು ಕೂಡುವುದಿಲ್ಲವಾದ್ದರಿಂದ ಬ್ರಹ್ಮನು ಇವುಗಳಿಗಿಂತ ವಿಲಕ್ಷಣನಾದ ಪರಪುರುಷನೆಂಬುದು ಸಿದ್ಧವಾಗುತ್ತದೆ. ಜೀವಜಡಾತ್ಮಕ ಪ್ರಪಂಚಕ್ಕಿಂತ ಅತ್ಯಂತ ಭಿನ್ನನಾದ ಬ್ರಹ್ಮನನ್ನು ಪ್ರತ್ಯಕ್ಷ ಮತ್ತು ಅನುಮಾನಗಳಿಂದ ತಿಳಿಯಲು ಸಾಧ್ಯವಿಲ್ಲವಾದ್ದರಿಂದ ಶಾಸ್ತ್ರಗಳ ಅಧ್ಯಯನದ ಮೂಲಕ ಬ್ರಹ್ಮನ ಜಿಜ್ಞಾಸೆ ಮಾಡಬೇಕು. 'ನಾರಾಯಣಂ ಮಹಾಜ್ಞೇಯಂ' ಇತ್ಯಾದಿ ಶ್ರುತಿಗಳಲ್ಲಿ ನಾರಾಯಣನು ಜಿಜ್ಞಾಸ್ಯನೆಂದು ಹೇಳಲ್ಪಟ್ಟಿದ್ದಾನೆ. ನಾರಾಯಣ ಶಬ್ದವೂ ಗುಣಪರಿಪೂರ್ಣತ್ವವನ್ನೇ ಹೇಳುತ್ತದೆ. ಆದ್ದರಿಂದ ಮೊದಲನೆಯ ಸೂತ್ರದಲ್ಲಿ ಜಿಜ್ಞಾಸ್ಯನೆಂದು ಹೇಳಲ್ಪಟ್ಟಿರುವ ಬ್ರಹ್ಮನೇ ನಾರಾಯಣನು. 'ಆತ್ಮಾನಮೇವ ಲೋಕಮುಪಾಸೀತ' ಇತ್ಯಾದಿ ಶ್ರುತಿಗಳಲ್ಲಿ ಆತ್ಮಾದಿ ಶಬ್ದಗಳೂ ಜಿಜ್ಞಾಸ್ಯವೆಂದು ಶ್ರುತವಾಗಿವೆ. ಸರ್ವಗತತ್ವಾದಿ ಧರ್ಮಗಳನ್ನು ಪ್ರತಿಪಾದಿಸುವ ವಿಷ್ಣು ಮೊದಲಾದ ಶಬ್ದಗಳೂ ಜಿಜ್ಞಾಸ್ಯನಾದ ಬ್ರಹ್ಮನನ್ನೇ ಹೇಳುತ್ತವೆ. ಈ ಕಾರಣಗಳಿಂದ ಈ ಸೂತ್ರದಲ್ಲಿರುವ ಬ್ರಹ್ಮ ಶಬ್ದಕ್ಕೆ ವಿಷ್ಣುವೆಂದೇ ಅರ್ಥಮಾಡಬೇಕು, ಜೀವ ಅಥವಾ ಚತುರ್ಮುಖಬ್ರಹ್ಮನೆಂದಲ್ಲ.

'ಓಮಿತಿ ಬ್ರಹ್ಮ' ಇತ್ಯಾದಿ ಶ್ರುತಿಗಳಿಂದ ಓಂಕಾರವು ಗುಣಪರಿಪೂರ್ಣನಾದ ಪರಮೇಶ್ವರನನ್ನೇ ಪ್ರತಿಪಾದಿಸುತ್ತದೆ. 'ಪ್ರಣವಾರ್ಥಾ ವ್ಯಾಹೃತಯಃ ವ್ಯಾಹೃತ್ಯರ್ಥಾ ಋಗಾದಯಃ' ಎನ್ನುವ ಆಗಮದಿಂದ ಓಂಕಾರವು ಸಮಸ್ತ ವೇದಾರ್ಥವನ್ನು ಪ್ರತಿಪಾದಿಸುತ್ತದೆ ಎಂದು ತಿಳಿಯುತ್ತದೆ. ಅದು ಹೇಗೆಂದರೆ, **ಭೂಃ, ಭುವಃ,** ಮತ್ತು **ಸುವಃ** ಎನ್ನುವ ಮೂರು ವ್ಯಾಹೃತಿಗಳು **ಅ, ಉ** ಮತ್ತು **ಮ** ಎನ್ನುವ ಮೂರು ವರ್ಣಗಳ ಸ್ವರೂಪವಾದ ಪ್ರಣವ ಅಥವಾ ಓಂಕಾರದ ವ್ಯಾಖ್ಯಾನವಾಗಿವೆ. ಮೂರು ವ್ಯಾಹೃತಿಗಳಿಗೆ ಮೂರು ಪಾದಗಳ ಗಾಯತ್ರಿಯು ವ್ಯಾಖ್ಯಾನ. 'ತದ್ಭೇದಃ ಪೌರುಷಂ ಸೂಕ್ತಂ ವೇದಾಃ ಪುರುಷಸೂಕ್ತಗಾಃ' ಎಂಬ ಆಗಮದಿಂದ ಮೂರು ವರ್ಗಗಳುಳ್ಳ ಪುರಷಸೂಕ್ತವು ಮೂರು ಪಾದಗಳುಳ್ಳ ಗಾಯತ್ರಿಯ ವ್ಯಾಖ್ಯಾನವೆಂದು ಸಿದ್ಧವಾಗುತ್ತದೆ. ಅದರ ಅರ್ಥವನ್ನೇ ಸಮಸ್ತ ವೇದಗಳೂ ಪ್ರತಿಪಾದಿಸುತ್ತವೆ. ಓಂಕಾರಾರ್ಥವೇ ಬ್ರಹ್ಮನು. ಇದರಿಂದ ಓಂಕಾರವಾಚ್ಯನಾದ ಬ್ರಹ್ಮನೇ ಸಮಸ್ತ ವೇದಾರ್ಥನು ಎಂದು ನಿರ್ಣೀತವಾಗುತ್ತದೆ.

ಪರಮೇಶ್ವರನ ವಿಷಯದಲ್ಲಿ ವೇದಗಳೇ ಪ್ರಮಾಣವಾಗಿದ್ದರೆ ಅವುಗಳಿಂದಲೇ ನಿಶ್ಚಯವಾಗಿ ತಿಳಿಯಲು ಸಾಧ್ಯವಿದ್ದಮೇಲೆ ಮತ್ತೆ ಮೀಮಾಂಸಾ ಏತಕ್ಕೆ ಎಂದು ಕೇಳುವುದು ಸರಿಯಲ್ಲ. ವೇದಾರ್ಥವು ಸರಿಯಾಗಿ ನಿರ್ಣಯವಾಗದೇ ಬ್ರಹ್ಮನ ವಿಷಯ ನಿರ್ಧಾರವಾಗದು. ವೇದಾರ್ಥನಿರ್ಣಯಕ್ಕಾಗಿ ಮೀಮಾಂಸೆಯು ಅವಶ್ಯಕ. ವೇದಾಧ್ಯಯನದಿಂದ ಪರಮೇಶ್ವರನ ಸ್ವರೂಪವನ್ನು ನಿರ್ಣಯಿಸುವಾಗ ಅಡ್ಡಿಯಾಗುವ ಕೆಲವು ನಿರ್ಬಂಧಗಳುಂಟು. ಕೆಲವರು ವೇದಗಳು ಪ್ರಮಾಣವೆಂದೇ ಒಪ್ಪುವುದಿಲ್ಲ. ಇನ್ನೂ ಕೆಲವರು ವೇದಪ್ರಾಮಾಣ್ಯವನ್ನು ಒಪ್ಪಿದರೂ ವೇದಗಳು ಜೀವ ಮತ್ತು ಕರ್ಮಗಳಿಗೆ ಸಂಬಂಧಿಸಿದ ವಿಷಯಗಳನ್ನಷ್ಟೇ ಹೇಳುತ್ತವೆ ಎಂದು ಪ್ರತಿಪಾದಿಸುವ ಮೂಲಕ ಪರಮೇಶ್ವರನನ್ನೇ ಅಲ್ಲಗೆಳೆಯುವರು. ಮತ್ತೆ ಕೆಲವರು ವೇದಪ್ರಾಮಾಣ್ಯ ಮತ್ತು ಪರಮಾತ್ಮನ ಅಸ್ತಿತ್ವವನ್ನು ಒಪ್ಪಿದರೂ ಅವನು ನಿರ್ಗುಣ ಎನ್ನುವರು. ಪರಮಾತ್ಮನನ್ನು ಸಗುಣನೆಂದು ಒಪ್ಪಿದವರಲ್ಲೂ ಕೆಲವರು, ಅವನು ಜಗತ್ತಿಗೆ ಕಾರಣನಲ್ಲ ಎನ್ನುವರು. ಇನ್ನೂ

ಕೆಲವರು ಅವನು ನಿಮಿತ್ತಕಾರಣನೆಂದು ಒಪ್ಪಿ, ಅವನಿಗೂ ಅವನ ಗುಣಗಳಿಗೂ ಭೇದವನ್ನು ಹೇಳುವರು. ಹೀಗೆ ವಿರುದ್ಧಜ್ಞಾನ ಹುಟ್ಟಿಸುವಂತಹ ಅನೇಕ ವಿಧದ ತತ್ವಸಮ್ಮತವಲ್ಲದ ವ್ಯಾಖ್ಯಾನಗಳಿರುವುದರಿಂದ ವೇದಗಳಿಂದ ಸರಿಯಾದ ತತ್ವಜ್ಞಾನವನ್ನು ಪಡೆಯಲು ಜಿಜ್ಞಾಸೆಯು ಅತ್ಯವಶ್ಯವಾಗಿದೆ.

ಮಂಗಲಾಸ್ರವಣೇ ಯುಕ್ತಿವಿಶೇಷದ್ಯೋತನಂ ತಥಾ । ಮೀಮಾಂಸಾನು-
ಗ್ರಾಹ್ಯಮಾನ ಕೀರ್ತನಂ ಪೂರ್ವತಂತ್ರತಃ । ಅಗತಾರ್ಥಾ ಸೂಚನಂ ಚೇತ್ಯೇವಂ
ಪಂಚಪ್ರಯೋಜನಃ । ಸೌತ್ರಪ್ರಾಥಮಿಕೋಂಕಾರಃ ಶ್ರುತಿಸಿದ್ಧೋವಧಾರಿತಃ ॥

ಸೂತ್ರದಲ್ಲಿನ ಪ್ರಥಮ ಓಂಕಾರವು - ಮಂಗಲ, ಅಸ್ರವಣ (ಅಂದರೆ ಸೋರಿಹೋಗದಿರುವುದು), ಯುಕ್ತಿವಿಶೇಷವನ್ನು ತೋರಿಸುವುದು, ಈ ಶಾಸ್ತ್ರಕ್ಕೆ ಅನುಗ್ರಾಹ್ಯ ಪ್ರಮಾಣವನ್ನು ಸೂಚಿಸುವುದು ಮತ್ತು ಈ ಶಾಸ್ತ್ರವು ಬೇರೆ ಶಾಸ್ತ್ರಗಳಿಂದ ಗತಾರ್ಥವಾಗಲಿಲ್ಲ, ಅಂದರೆ ಬೇರೆಕಡೆ ಹೇಳಿರುವ ವಿಷಯಗಳೇ ಪುನರುಕ್ತಿಯಾಗಿಲ್ಲ ಎಂದು ಸೂಚಿಸುವುದು - ಹೀಗೆ ಐದುರೀತಿಯ ಪ್ರಯೋಜನಗಳನ್ನು ಹೊಂದಿದೆಯೆಂದು ಸಿದ್ಧವಾಗಿದೆ.

ಅತಃ ಶಬ್ದಕ್ಕೆ ವ್ಯಾಖ್ಯಾನ

ಈ ಶಾಸ್ತ್ರಕ್ಕೆ ವಿಶೇಷ ಪ್ರಯೋಜನಗಳಿವೆ ಎಂಬುದನ್ನು ಮೇಲೆ ಹೇಳಿರುವ ಪ್ರಕಾರ ಉಪಪಾದಿಸಿ, ಸೂತ್ರದಲ್ಲಿನ ಅಥ ಶಬ್ದಕ್ಕೆ ಭಾಷ್ಯದಲ್ಲಿಯೇ ಅರ್ಥ ವಿವರಣೆಗಳನ್ನು ನೀಡಿರುವುದರಿಂದ ಹಾಗೂ ಇಲ್ಲಿ ಹೇಳಬೇಕಾದ ವಿಶೇಷಾಂಶಗಳು ಬೇರೆ ಇಲ್ಲವಾದ್ದರಿಂದ, ಸೂತ್ರದ **ಅತಃ** ಎಂಬ ಶಬ್ದಕ್ಕೆ ಇಲ್ಲಿ ವಿಶೇಷವಾಗಿ ವ್ಯಾಖ್ಯಾನ ಮಾಡುವರು. 'ಜ್ಞಾನೀ ಪ್ರಿಯತಮೋತೋ ಮೇ' ಎನ್ನುವುದರಿಂದ ಆರಂಭಿಸಿ 'ಸ್ವಯಂ ಭಗವತಾ ವಿಷ್ಣುಃ' ಎನ್ನುವವರೆಗೆ ಅತಃ ಶಬ್ದದ ವ್ಯಾಖ್ಯಾನ.

೧. ಜ್ಞಾನ ಮತ್ತು ಹರಿಯ ಪ್ರಸಾದಗಳ ಮೂಲಕ ಮುಕ್ತಿರೂಪ ಫಲವು ಇರುವುದರಿಂದ,

೨. ಬಂಧವು ಸತ್ಯವಾಗಿರುವುದರಿಂದ,

೩. ವೇದವು ಸಿದ್ಧಾರ್ಥಬೋಧಕವಾಗಿರುವುದರಿಂದ,

೪. ವೇದಕ್ಕೆ ಪರಮಪ್ರಾಮಾಣ್ಯವಿರುವುದರಿಂದ ಹಾಗೂ

೫. ಶಬ್ದಗಳಿಗೆ ವಾಕ್ಯಾರ್ಥಬೋಧಕತ್ವ ಸ್ವಯಂಸಿದ್ಧವಾಗಿರುವುದರಿಂದ, ಹೀಗೆ ಅತಃ ಶಬ್ದಕ್ಕೆ ಇದುರೀತಿಯ ಸಾರ್ಥಕ್ಯವನ್ನು ಶ್ರೀಮದಾಚಾರ್ಯರು ಇಲ್ಲಿ ಸೂಚಿಸಿದ್ದಾರೆ.

ವಿಷ್ಣುವಿನ ಪ್ರಸಾದದಿಂದಲೇ ಮೋಕ್ಷ

ಜ್ಞಾನೀ ಪ್ರಿಯತಮೋಽತೋ ಮೇ ತಂ ವಿದ್ವಾನೇವ ಚಾಮೃತಃ ॥೧೧॥

ವೃಣುತೇ ಯಂ ತೇನ ಲಭ್ಯಃ ಇತ್ಯಾದ್ಯುಕ್ತಿಬಲೇನ ಹಿ ।

ಜಿಜ್ಞಾಸೋತ್ಥಜ್ಞಾನಜಾತ್ತತ್ಪ್ರಸಾದಾದೇವ ಮುಚ್ಯತೇ ॥೧೨॥

'ಜ್ಞಾನಿಯು ನನಗೆ ಪರಮಪ್ರಿಯನು ಆದುದರಿಂದ' 'ವಿಷ್ಣುವನ್ನು ತಿಳಿದವನೇ ಮುಕ್ತನಾಗುವನು' 'ಯಾರನ್ನು ಶ್ರೀಹರಿಯು ಭಕ್ತನನ್ನಾಗಿ ಸ್ವೀಕರಿಸುವನೋ ಅಂಥವನು ಮಾತ್ರ ಅವನನ್ನು ಹೊಂದಲರ್ಹನು' ಇತ್ಯಾದಿ ಆಗಮೋಕ್ತಿಗಳ ಸಾಮರ್ಥ್ಯದಿದಂಲೇ 'ಬ್ರಹ್ಮಜಿಜ್ಞಾಸೆಯಿಂದ ಹುಟ್ಟುವ ಜ್ಞಾನದಿಂದ ಮತ್ತು ಆ ಜ್ಞಾನದಿಂದ ಲಭಿಸುವ ಶ್ರೀಹರಿಯ ಪರಮಾನುಗ್ರಹರೂಪವಾದ ಪ್ರಸಾದದಿಂದಲೇ ಜ್ಞಾನಿಯು ಸಂಸಾರದಿಂದ ಮುಕ್ತನಾಗುತ್ತಾನೆ' ಎಂಬುದು ಸಿದ್ಧವಾಗುತ್ತದೆ.

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।

ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥೧೩॥

ದ್ರವ್ಯ (ಪ್ರಕೃತಿ ಮೊದಲಾದ ತತ್ವಗಳು), ಕರ್ಮ (ಧರ್ಮಾಧರ್ಮಗಳು), ಕಾಲ, ಸ್ವಬಾವ (ಪ್ರಕೃತ್ಯಾದಿಗಳ ಪರಿಣಾಮಗಳು) ಮತ್ತು ಪ್ರಕೃತ್ಯಾದಿ ತತ್ವಗಳ ಮತ್ತು ಅದರ ಪರಿಣಾಮಗಳ ಅಭಿಮಾನಿಯಾದ ಸರ್ವಚೇತನ ಸಮೂಹವೂ ಶ್ರೀಹರಿಯ ಅನುಗ್ರಹದಿಂದಲೇ ಇರುತ್ತವೆ ಮತ್ತು ಅವನ ಉಪೇಕ್ಷೆಗೊಳಗಾದರೆ ಅಸ್ತಿತ್ವ ಕಳೆದುಕೊಳ್ಳುತ್ತವೆ.

ನತೇ ತ್ವತ್ಕೃಯತೇ ಕಿಂಚನೇತ್ಯಾದೇರ್ನ ಹರಿಂ ವಿನಾ ।

ಜ್ಞಾನಸ್ವಭಾವತೋಽಪಿ ಸ್ಯಾನ್ಮುಕ್ತಿಃ ಕಸ್ಯಾಪಿ ಹಿ ಕ್ವಚಿತ್ ॥೧೪॥

ಆ ಹರಿಯನ್ನು ಬಿಟ್ಟು ಯಾವೊಂದೂ ಕಾರ್ಯನಿರ್ವಹಿಸದು ಎಂದು 'ನ ಋತೇ ತ್ವತ್ಕೃಯತೇ ಕಿಂಚನಾರೇ' ಎನ್ನುವ ಶ್ರುತಿಯಿಂದ ತಿಳಿಯಲ್ಪಡುತ್ತದೆ. ಆದುದರಿಂದ ಶ್ರೀಹರಿಯ ಪ್ರಸಾದದ ಹೊರತು ಕೇವಲ ಜ್ಞಾನಸ್ವಭಾವದಿಂದ

ಮೋಕ್ಷವು ಯಾರಿಗೂ ಎಲ್ಲಿಯೂ ಯಾವ ಕಾರಣಕ್ಕೂ ಆಗಲಾರದು.

ಅಜ್ಞಾನಾಂ ಜ್ಞಾನದೋ ವಿಷ್ಣುರ್ಜ್ಞಾನಿನಾಂ ಮೋಕ್ಷದಶ್ಚ ಸಃ ।
ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥೧೫॥

ವಿಷ್ಣುವು ಅಜ್ಞಾನಿಗಳಿಗೆ ಜ್ಞಾನವನ್ನು ಕೊಡುವನು. ಜ್ಞಾನಿಗಳಿಗೆ ಮೋಕ್ಷವನ್ನು ಕೊಡುವನು. ಆ ಜನಾರ್ದನನೊಬ್ಬನೇ ಮುಕ್ತಿಯನ್ನು ಹೊಂದಿದವರಿಗೆ ಆನಂದವನ್ನೂ ಕೊಡುವನು. ಹೀಗೆ ಸಾಧನೆಯ ಪ್ರತಿಹಂತದಲ್ಲಿಯೂ ಪ್ರಸನ್ನನಾದ ಶ್ರೀಹರಿಯ ಅನುಗ್ರಹದಿಂದಲೇ ಸಾಧಕರುಗಳಿಗೆ ಯೋಗ್ಯವಾದ ಫಲಪ್ರಾಪ್ತಿಯಾಗುವುದು ಎಂಬುದಾಗಿ ಆಗಮಗಳು ಹೇಳುತ್ತವೆ.

ಬಂಧಮಿಥ್ಯಾತ್ವ ಖಂಡನೆ

ಇತ್ಯುಕ್ತೇರ್ಬಂಧಮಿಥ್ಯಾತ್ವಂ ನೈವ ಮುಕ್ತಿರಪೇಕ್ಷತೇ ।
ಮಿಥ್ಯಾತ್ವಮಪಿ ಬಂಧಸ್ಯ ನ ಪ್ರತ್ಯಕ್ಷವಿರೋಧತಃ ॥೧೬॥
ಮಿಥ್ಯಾತ್ವಂ ಯದಿ ದುಃಖಾದೇಸ್ತದ್ವಾಕ್ಯಸ್ಯಾಗ್ರತೋ ಭವೇತ್ ।

ಹೀಗೆ ಸಂಸಾರಬಂಧದಿಂದ ಮುಕ್ತಿಯು ಭಗವತ್ಪ್ರಸಾದಿಂದ ಮಾತ್ರ ಸಾಧ್ಯ ಎಂದು ಹೇಳಿರುವುದರಿಂದ, ಸಂಸಾರಬಂಧವು ಮಿಥ್ಯಾ ಅಥವಾ ಸುಳ್ಳು ಎಂಬ ವಾದವನ್ನು ಮುಕ್ತಿಯು ಅಪೇಕ್ಷಿಸುವುದಿಲ್ಲ. ಪ್ರತ್ಯಕ್ಷಕ್ಕೆ ವಿರೋಧ ಬರುವುದರಿಂದಲೂ ಸಂಸಾರಬಂಧವು ಸುಳ್ಳು ಎಂಬುದು ಕೂಡುವುದಿಲ್ಲ. ದುಃಖ ಮೊದಲಾದವುಗಳಿಗೆ ಮಿಥ್ಯಾತ್ವವಿದೆ ಎಂದು ಹೇಳುವುದಾದರೆ ಬ್ರಹ್ಮಾತಿರಿಕ್ತವಾದ ಎಲ್ಲವೂ ಮಿಥ್ಯಾ ಎಂದು ಪ್ರತಿಪಾದಿಸಲು ಪ್ರಮಾಣವಾಗಿ ನೀವು ಹೇಳುವ 'ನೇಹ ನಾನಾಸ್ತಿ ಕಿಂಚನ' ಎಂಬಿತ್ಯಾದಿ ವಾಕ್ಯಗಳಿಗೆ ಎಲ್ಲಕ್ಕೂ ಮೊದಲಿಗೆ ಮಿಥ್ಯಾತ್ವವು ಬರಬೇಕಾಗುವುದು.

ಮಿಥ್ಯಾಯಾಃ ಸಾಧಕತ್ವಂ ಚ ನ ಸಿದ್ಧಂ ಪ್ರತಿವಾದಿನಃ ॥೧೭॥
ತಚ್ಚ ಮಿಥ್ಯಾಪ್ರಮಾಣೇನ ಸತಾ ವಾ ಸಾಧ್ಯತೇ ತ್ವಯಾ ।
ಸತಾ ಚೇದ್ ದ್ವೈತಸಿದ್ಧಿಃ ಸ್ಯಾನ್ನ ಸಿದ್ಧಂ ಚಾನ್ಯಸಾಧನಮ್ ॥೧೮॥
ಸಾಧಕತ್ವಂ ಸತಸ್ತೇನ ಸಾಕ್ಷಿಣಾ ಸಿದ್ಧಿಮಿಚ್ಛತಾ ।
ಸ್ವೀಕೃತಂ ಹಿ .....॥

(3) ಶ್ರುತಿವಾಕ್ಯಗಳು ಸುಳ್ಳು ಎಂದು ಹೇಳುವ ಪ್ರತಿವಾದಿಗಳಿಗೆ ಅಂಥಹ ಶ್ರುತಿಗಳಿಗೆ ಸಾಧಕತ್ವವು ಸಿದ್ಧವಾಗುವುದಿಲ್ಲ. ಮಿಥ್ಯೆಯಾದುದಕ್ಕೆ ಸಾಧಕತ್ವವು ನಿನ್ನಿಂದ ಮಿಥ್ಯೆಯಾದ ಪ್ರಮಾಣದಿಂದಲೇ ಸಾಧಿಸಲ್ಪಡುವುದೋ ಅಥವಾ ಸತ್ಯವಾದ ಪ್ರಮಾಣದಿಂದ ಸಾಧಿಸಲ್ಪಡುವುದೋ? ಬ್ರಹ್ಮಾತಿರಿಕ್ತವಾದ ಸತ್ಯವಾದ ಪ್ರಮಾಣದಿಂದ ಸಾಧಿಸುವುದಾದರೆ ದ್ವೈತವು (ಆತ್ಮಾರಿಕ್ತವಾದ ಎರಡನೆಯ ಪದಾರ್ಥವು) ಸಿದ್ಧಿಸುವುದು. ಮಿಥ್ಯಾಭೂತವಾದ ಸಾಧನದಿಂದ ಎಂದು ಹೇಳುವುದಾದರೆ ಮಿಥ್ಯೆಯಾದುದಕ್ಕೆ ನಾವು ಸಾಧಕತ್ವವನ್ನು ಒಪ್ಪುವುದಿಲ್ಲ. ಸಾಕ್ಷಿಯಿಂದ ಭಾವರೂಪ ಅಜ್ಞಾನದ ಸಿದ್ಧಿಯನ್ನು ಇಚ್ಛಿಸುವ ಮಾಯಾವಾದಿಯಿಂದ ಸತ್ಪದಾರ್ಥಕ್ಕೆ ಸಾಧಕತ್ವವು ಅಂಗೀಕೃತವಾಗಿದೆಯಷ್ಟೆ.

.....ಅವಿಶೇಷಸ್ಯ ಸಾಧ್ಯಾ ಸಾಧಕತಾ ಪುನಃ ॥೧೯॥

ತಚ್ಚಾವಿಶೇಷಮಾನೇನ ಸಾಧ್ಯಮಿತ್ಯನವಸ್ಥಿತಿಃ ।

ಅನಂಗೀಕುರ್ವತಾಂ ವಿಶ್ವಸತ್ಯತಾಂ ತನ್ನ ವಾದಿತಾ ॥೨೦॥

(4) ನಿರ್ವಿಶೇಷಕ್ಕೆ ಸಾಧಕತ್ವವು ಪುನಃ ನಿನ್ನಿಂದ ಸಾಧಿಸಲ್ಪಡತಕ್ಕದ್ದು. ಅದಾದರೋ ನಿರ್ವಿಶೇಷ ಪ್ರಮಾಣದಿಂದ ಸಾಧಿತವಾಗಬೇಕು. ಅದನ್ನು ಸಾಧಿಸಲು ಮತ್ತೊಂದು ಪ್ರಮಾಣ. ಹೀಗೆ ಅನವಸ್ಥಿತಿಗೆ ಅಂದರೆ ಕೊನೆಯಿಲ್ಲದ ಪರಂಪರೆಗೆ ಕಾರಣವಾಗುವುದು. ಮಿಥ್ಯೆಯಾದುದಕ್ಕೆ ಸಾಧಕತ್ವವು ಕೂಡದಿರುವ ಕಾರಣ, ಪ್ರಪಂಚಕ್ಕೆ ಸತ್ಯತ್ವವನ್ನು ಅಂಗೀಕರಿಸದಿರುವ ನಿನ್ನ ಮತದ ಪ್ರಕಾರ 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ವಾಕ್ಯಗಳಿಗೂ ಮಿಥ್ಯಾತ್ವವು ಬರುವುದರಿಂದ ಅವು ಸಾಧಕತ್ವವು ಆಗಲಾರವು.

ತಸ್ಮಾದ್ ವ್ಯವಹೃತಿಃ ಸರ್ವಾ ಸತ್ಯೇತ್ಯೇವ ವ್ಯವಸ್ಥಿತಾ ।

ವ್ಯಾವಹಾರಿಕಮೇತಸ್ಮಾತ್ಸತ್ಯಮಿತ್ಯೇವ ಚಾಗತಮ್ ॥೨೧॥

ವ್ಯವಹಾರಸತಶ್ಚಾಪಿ ಸಾಧಕತ್ವಂ ತು ಪೂರ್ವವತ್ ।

ಆದುದರಿಂದ ನಿನಗೆ ವಾದಿತ್ವವು ಕೂಡಬೇಕಾದರೆ ವಾದಕಥೆಯ ವ್ಯವಹಾರಕ್ಕೆ ಪೂರಕವಾದ ಪ್ರಮಾಣಾದಿಗಳೆಲ್ಲವೂ ಸತ್ಯ ಎಂಬುದಾಗಿಯೇ ನಿಶ್ಚಿತವಾಗಬೇಕು. ವ್ಯವಹಾರಕ್ಕೆ ಸತ್ಯತ್ವವಿರಲಿ, ದುಃಖಾದಿ ಬಂಧವು ಮಿಥ್ಯೆಯಾಗಲಿ ಎಂದರೆ ಹಾಗೆ ಹೇಳುವುದು ಸರಿಯಲ್ಲ. ಪ್ರಮಾಣಾದಿ

ವ್ಯವಹಾರವು ಸತ್ಯವೆಂದು ಒಪ್ಪಿದಮೇಲೆ ವ್ಯವಹಾರಕ್ಕೆ ವಿಷಯವಾದ ದುಃಖಾದಿಗಳಿಗೂ ಸತ್ಯತ್ವವೇ ಬರುವುದು.

ಮಿಥ್ಯೆಯಾದುದಕ್ಕೆ ಸಾಧಕತ್ವವು ಕೂಡುವುದಿಲ್ಲ ಎಂಬುದಾಗಿ ಹಿಂದೆ ಹೇಳಿದ ರೀತಿಯಲ್ಲಿಯೇ ವ್ಯಾವಹಾರಿಕಸತ್ಯಕ್ಕೂ ಸಾಧಕತ್ವವು ಕೂಡುವುದಿಲ್ಲ. ಆದಪ್ರಯುಕ್ತ ವ್ಯಾವಹಾರಿಕಸತ್ಯ ಎನ್ನುವುದೂ ಮಿಥ್ಯೆಯೇ ಆಗುವುದು.

ಸತ್ತ್ರೈವಿಧ್ಯಂ ಚ ಮಾನೇನ ಸಿದ್ಧ್ಯೇತ್ಕೇನೇತಿ ಪೃಚ್ಛ್ಯತೇ ॥೨೨॥

ತಸ್ಯಾಪ್ಯುಕ್ತಪ್ರಕಾರೇಣ ನೈವ ಸಿದ್ಧಿಃ ಕಥಂಚನ ।

ಪಾರಮಾರ್ಥಿಕ, ವ್ಯಾವಹಾರಿಕ ಮತ್ತು ಪ್ರಾತಿಭಾಸಿಕ ಎಂಬುದಾಗಿ ಸತ್ ಪದಾರ್ಥಗಳಲ್ಲಿ ಮೂರು ವಿಧ ಎಂದು ನೀನು ಹೇಳುವುದು ಯಾವ ಪ್ರಮಾಣದಿಂದ ಸಿದ್ಧಿಸುತ್ತದೆ ಎಂದು ನಾವು ಕೇಳುತ್ತೇವೆ. ಸತ್ ತ್ರೈವಿಧ್ಯವು ಯಾವ ರೀತಿಯಿಂದಲೂ ಸಿದ್ಧಿಯಾಗದು. (ಹಿಂದೆ ಅಸತ್ತನ್ನು ಸಾಧಿಸಲು ನೀನು ಮಾಡಿದ ವ್ಯರ್ಥ ಪ್ರಯತ್ನದಂತೆಯೇ ಆಗುವುದು).

ಸದಸದ್ವಿಲಕ್ಷಣತ್ವದ ನಿರಾಸೆ

ವೈಲಕ್ಷಣ್ಯಂ ಸದಸತೋರಪ್ಯೇತೇನ ನಿಷಿದ್ಧ್ಯತೇ ॥೨೩॥

ಈ ಜಗತ್ತು ಸದಸದ್ವಿಲಕ್ಷಣ ಎಂಬ ನಿನ್ನ ವಾದವೂ ಪ್ರಮಾಣಗಳಿಗೆ ವಿರೋಧವಾಗಿರುವುದರಿಂದ ನಿಷೇಧಿಸಲ್ಪಡುತ್ತದೆ.

ವೈಲಕ್ಷಣ್ಯಂ ಸತಶ್ಚಾಪಿ ಸ್ವಯಂ ಸದ್ಭೇದವಾದಿನಃ ।

ಅಸತಶ್ಚಾಪಿ ವಿಶ್ವಸ್ಯ ತೇನಾನಿಷ್ಟಂ ಕಥಂ ಭವೇತ್ ॥೨೪॥

ಯದ್ಯುಚ್ಯತೇಽಪಿ ಸರ್ವಸ್ಮಾದಿತಿ ಸದ್ಭೇದಸಂಸ್ಥಿತಿಃ ।

ಸನ್ಮಾತ್ರತ್ವಂ ಬ್ರಹ್ಮಣೋಽಪಿ ತಸ್ಮಾತ್ತದಪಿ ನೋ ಭವೇತ್ ॥೨೫॥

ಭಾವಸ್ವರೂಪವಾದ ಜಗತ್ತಿಗೆ (ಸತಃ) ಅಭಾವದ ದೆಶೆಯಿಂದ ಭೇದವೂ ಕೂಡ (ವೈಲಕ್ಷಣ್ಯಂ ಚಾಪಿ) ಭೇದಸತ್ಯತ್ವವನ್ನು ಹೇಳುವ ನಮಗೆ ಸ್ವಾಭಾವಿಕವಾದುದೇ ಆಗಿದೆ. ಅಭಾವರೂಪವಾದ ಜಗತ್ತಿಗೆ ಭಾವದ ದೆಶೆಯಿಂದ ವೈಲಕ್ಷಣ್ಯವೂ ಕೂಡ ನಮ್ಮ ಮತದಲ್ಲಿ ಸ್ವಾಭಾವಿಕವಾದುದೇ. ಅದರಿಂದ ನಮಗೆ ಅನಿಷ್ಟವೇನೂ ಆಗದು. ಎಲ್ಲ ಪದಾರ್ಥಗಳಿಂದಲೂ ವೈಲಕ್ಷಣ್ಯವು ಹೇಳಲ್ಪಟ್ಟರೆ, ಅನೇಕ ಸತ್ ಪದಾರ್ಥಗಳು ಹಾಗೂ ಅವುಗಳಿಗೆ

ಪರಸ್ಪರ ಭೇದವೂ ಪ್ರಾಪ್ತವಾಗುವುದರಿಂದ ನೀವೂ ಕೂಡ ಅನೇಕತ್ವವನ್ನು ಒಪ್ಪಲೇಬೇಕಾಗುವುದು. ಆಗ ಭೇದಸಿದ್ಧಾಂತವು ಚೆನ್ನಾಗಿಯೇ ಸಿದ್ಧಿಸುವುದು. ಸ್ವರೂಪಸತ್ವವು ಬ್ರಹ್ಮನಿಗೂ ಇರುವ ಕಾರಣ, ಜಗತ್ತಿಗೆ ಆ ಬ್ರಹ್ಮನಿಂದ ವೈಲಕ್ಷಣ್ಯವಿದೆ ಎನ್ನುವುದು ನಮಗೆ ಸಮ್ಮತವಾಗುವುದು. ಹೀಗೆ ಯಾವ ಪ್ರಕಾರದಿಂದ ನೋಡಿದರೂ ನಿಮಗೆ ಅಪಸಿದ್ಧಾಂತವು.

ವಿವರಣೆ:

ಪ್ರಾತಿಭಾಸಿಕ, ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಎಂಬುದಾಗಿ ಸತ್ತುಗಳಲ್ಲಿ ಮೂರು ವಿಧವಿದೆ ಎನ್ನುವುದಕ್ಕೆ ಪ್ರಮಾಣವೇನೆಂದು ಪ್ರಶ್ನಿಸಬೇಕು. ಯಾವುದು ಎಂದಿಗೂ ಯಾವಪ್ರಕಾರದಿಂದಲೂ ಬಾಧಿತವಾಗುವುದಿಲ್ಲವೋ ಅದು ಸತ್ಯವು ಎಂಬುದಾಗಿ ಅದ್ವೈತಿಗಳೇ ಹೇಳುತ್ತಾರೆ. ಈ ಅರ್ಥದಲ್ಲಿ ವ್ಯಾವಹಾರಿಕ ಮತ್ತು ಪ್ರಾತಿಭಾಸಿಕ ಸತ್ಯಗಳಿಗೆ ಸತ್ಯತ್ವವೇ ಕೂಡುವುದಿಲ್ಲ. ಪಾರಮಾರ್ಥಿಕ ಸತ್ಯ ಎಂದರೆ, ಆತ್ಮ ಹೊರತಾದ ಪಾರಮಾರ್ಥಿಕ ಸತ್ಯವೋ ಅಥವಾ ಆತ್ಮರೂಪವಾದ ಪಾರಮಾರ್ಥಿಕ ಸತ್ಯವೋ ಎಂದು ಕೇಳಬೇಕು. ಮೊದಲನೆಯ ವಿಕಲ್ಪದಲ್ಲಿ ದ್ವೈತವು ಪ್ರಾಪ್ತವಾಗುವುದರಿಂದ ಅದನ್ನು ಒಪ್ಪುವ ಹಾಗಿಲ್ಲ. ಆತ್ಮರೂಪವಾದ ಪಾರಮಾರ್ಥಿಕ ಸತ್ಯವನ್ನು ಒಪ್ಪಿದರೆ ಬ್ರಹ್ಮನಿಗೆ ನಿರ್ವಿಶೇಷತ್ವವನ್ನು ಹೇಳುವ ಅದ್ವೈತಸಿದ್ಧಾಂತಕ್ಕೇ ವಿರೋಧ ಬರುತ್ತದೆ. ಆದ್ದರಿಂದ ಮೂರು ವಿಧದ ಸತ್ಯತ್ವವನ್ನು ಒಪ್ಪಿಕೊಳ್ಳುವ ಹಾಗಿಲ್ಲ. ಬ್ರಹ್ಮನ ಹೊರತಾದ ಸಮಸ್ತವೂ ಸತ್ಯವೂ ಅಲ್ಲ, ಅಸತ್ಯವೂ ಅಲ್ಲ, ಅನಿರ್ವಚನೀಯ ಅಥವಾ ಸದಸದ್ವಿಲಕ್ಷಣ ಎನ್ನುವದು ಯಾವ ರೀತಿಯಿಂದಲೂ ಕೂಡುವುದಿಲ್ಲ. 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತಿಗಳು ಜಗತ್ತು ಸದಸದ್ವಿಲಕ್ಷಣವಾದ ಅನಿರ್ವಚನೀಯವೆಂದು ಹೇಳುವುದಿಲ್ಲ. ಆದ್ದರಿಂದ ಸದಸದ್ವಿಲಕ್ಷಣತ್ವವನ್ನು ಯಾವ ಪ್ರಮಾಣದಿಂದಲೂ ಸಾಧಿಸಲು ಸಾಧ್ಯವಿಲ್ಲ.

ಭ್ರಾಂತಿಯ ಸ್ವರೂಪ

ಜ್ಞಾನಬಾಧ್ಯತ್ವಮಪಿ ತು ನ ಸಿದ್ಧಂ ಪ್ರತಿವಾದಿನಃ ।
ವಿಜ್ಞಾತಸ್ಯಾನ್ಯಥಾ ಸಮ್ಯಗ್ ವಿಜ್ಞಾನಂ ಹ್ಯೇವ ತನ್ಮತಮ್ ॥೨೬॥

ಬೇರೆ ರೀತಿಯಾಗಿ ತಿಳಿಯಲ್ಪಟ್ಟದ್ದನ್ನು ಸರಿಯಾಗಿ ಅಂದರೆ ಯಥಾರೀತಿ

ತಿಳಿದುಕೊಳ್ಳುವುದೇ ನಮ್ಮ ರೀತಿಯಲ್ಲಿ ಜ್ಞಾನಬಾಧ್ಯತ್ವವು. ಅಂಥಹ ಬಾಧ್ಯತ್ವವು ನಮಗೆ ಸಮ್ಮತವು. ಅನ್ಯಥಾ ವಿಜ್ಞಾನವೇ ಭ್ರಾಂತಿ. ಅದಕ್ಕೆ ಸಮ್ಯಕ್ ವಿಜ್ಞಾನವೇ ಬಾಧವು. ಇಂಥಹ ಬಾಧ್ಯತ್ವವು ಶುಕ್ತಿರಜತಾದಿಗಳಲ್ಲಿ ನಮಗೆ ಒಪ್ಪಿಗೆಯೇ ಆಗಿದೆ. ಅದ್ವೈತಿಗಳು ಹೇಳುವ ಅನಿರ್ವಚನೀಯ ಅಥವಾ ಸದಸದ್ವಿಲಕ್ಷಣತ್ವ ರೂಪವಾದ ಜ್ಞಾನಬಾಧ್ಯತ್ವವು ನಮಗೆ ಸಿದ್ಧವಾಗಲಿಲ್ಲ.

×××ಪಂಚಾಖ್ಯಾತಿ ವಾದ

ಒಂದು ವಸ್ತುವು ಅದು ಹೇಗಿದೆಯೋ ಹಾಗೆಯೇ ತೋರಿದರೆ ಅಂತಹ ಜ್ಞಾನವು ಯಥಾರ್ಥವೆಂದೂ, ಪ್ರಮಾಣವೆಂದೂ ಕರೆಯುತ್ತೇವೆ. ಒಂದು ಅಧಿಷ್ಠಾನದಲ್ಲಿ ಇಲ್ಲದಿರುವ ವಸ್ತುವು ಇದ್ದಂತೆ ತೋರಿದಾಗ ಅದು ಭ್ರಾಂತಿ ಅಥವಾ ಭ್ರಮಾತ್ಮಕಜ್ಞಾನ. ಈ ಭ್ರಾಂತಿಯ ಸ್ವರೂಪದ ಬಗ್ಗೆ ದಾರ್ಶನಿಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಸಿದ್ಧಾಂತಿಗಳು ಅಂಗೀಕರಿಸಿರುವ ಭ್ರಮಾತ್ಮಕಜ್ಞಾನವನ್ನು ಅಖ್ಯಾತಿವಾದಿಗಳೆಂದು ಪ್ರಸಿದ್ಧರಾದ ಪ್ರಾಭಾಕರ ಮೊದಲಾದ ಐದು ವಾದಿಗಳು ಒಪ್ಪುವುದಿಲ್ಲ. ಇವರು ಪ್ರತಿಪಾದಿಸಿರುವ ಪಂಚಾಖ್ಯಾತಿವಾದವನ್ನು ಶ್ರೀಮನ್ನ್ಯಾಯಸುಧಾದಲ್ಲಿ ಶ್ರೀಮಜ್ಜಯತೀರ್ಥರು ವಿಸ್ತಾರವಾಗಿ ವಿವೇಚನೆ ಮಾಡಿದ್ದಾರೆ. ಪಂಚಾಖ್ಯಾತಿವಾದ ಎಂದು ಪ್ರಸಿದ್ಧವಾಗಿರುವ ಭ್ರಾಂತಿಸ್ವರೂಪದ ವಿಮರ್ಶೆಯ ಸಾರಾಂಶವನ್ನು ಮಾತ್ರ ಇಲ್ಲಿ ನೀಡಲಾಗುವುದು.

೧. **ಪ್ರಾಭಾಕರರ** ಪ್ರಕಾರ ಎಲ್ಲ ಜ್ಞಾನವೂ ಯಥಾರ್ಥವಾದುದೇ ಆಗಿರುವುದು. ಇಲ್ಲದ ವಸ್ತುವು ಭ್ರಮೆಯಲ್ಲಿ ತೋರುತ್ತದೆಯೆಂಬುದನ್ನು ಅವರು ಒಪ್ಪುವುದಿಲ್ಲ. ಭ್ರಮಾತ್ಮಕವಾದ ಖ್ಯಾತಿ ಎಂಬುದಿಲ್ಲ ಎನ್ನುವ ಅವರು ಅಖ್ಯಾತಿವಾದಿಗಳು. ಅವರ ಮತದ ಪ್ರಕಾರ ಅಸತ್ತಿಗೆ ಪ್ರತೀತಿಯು ಕೂಡುವುದಿಲ್ಲ. ಇಂದ್ರಿಯ ಮೊದಲಾದ ಜ್ಞಾನಸಾಧನಗಳು ಯಥಾರ್ಥವಾದ ಜ್ಞಾನವನ್ನೇ ಉಂಟುಮಾಡುವ ಸ್ವಭಾವವುಳ್ಳದ್ದಾಗಿರುತ್ತವೆ. ಅವು ಭ್ರಮಾತ್ಮಕ ಜ್ಞಾನವನ್ನು ಉಂಟುಮಾಡಲಾರವು. ಹಾಗಾದರೆ ಕಪ್ಪೆಚಿಪ್ಪನ್ನು (ಶುಕ್ತಿಯನ್ನು) ದೂರದಿಂದ ಕಂಡಾಗ ಅಲ್ಲಿ ಅಸತ್ಯವಾದ ಬೆಳ್ಳಿಯು(ರಜತವು) ತೋರುವುದು ಭ್ರಮಾತ್ಮಕ ಜ್ಞಾನವಲ್ಲವೇ ಎಂದು ಪ್ರಶ್ನಿಸಿದರೆ ಅವರು ತಮ್ಮ ವಾದವನ್ನು

ಉಳಿಸಿಕೊಳ್ಳಲು ಬಹಳ ವಿಚಿತ್ರವಾದ ಉತ್ತರವನ್ನು ಕೊಡುತ್ತಾರೆ. ದೂರದಿಂದ ಶುಕ್ತಿಯನ್ನು ನೋಡಿದಾಗ ಮೊದಲಿಗೆ ಅದು ಒಂದು ಬೆಳ್ಳಗಿನ ಹೊಳೆಯುವ ವಸ್ತು ಎಂಬ ಸಾಮಾನ್ಯ ಜ್ಞಾನವುಂಟಾಗುತ್ತದೆ. ಕೂಡಲೇ ಅವನಿಗೆ ಬೆಳ್ಳಗೆ ಹೊಳೆಯುವ ಗುಣವುಳ್ಳ ರಜತದ ಸ್ಮರಣೆ ಉಂಟಾಗುತ್ತದೆ. ಶುಕ್ತಿಗೆ ಸಂಬಂಧಿಸಿದಂತೆ 'ಇದು' ಎಂಬ ಜ್ಞಾನ, 'ರಜತ' ಎಂಬ ಮತ್ತೊಂದು ಜ್ಞಾನ ಹೀಗೆ ಎರಡು ಪ್ರತ್ಯೇಕ ಜ್ಞಾನಗಳು ಉಂಟಾಗುತ್ತವೆ. ಆದರೆ ಅವನಿಗೆ ಎರಡು ರೀತಿಯ ಜ್ಞಾನಗಳಿಗೆ ಇರುವ ಪ್ರತ್ಯೇಕತೆಯು ತಿಳಿಯುವುದಿಲ್ಲ. ಇದು ಎಂಬ ಜ್ಞಾನವೂ ಅಸತ್ಯವಲ್ಲ, ಬೆಳ್ಳಿ ಎಂಬ ಜ್ಞಾನವೂ ಅಸತ್ಯವಲ್ಲ. ಎರಡು ಜ್ಞಾನಗಳೂ ಯಥಾರ್ಥವೇ. ಹತ್ತಿರ ಹೋಗಿ ನೋಡಿದಾಗ ಅಲ್ಲಿರುವ ಶುಕ್ತಿಯೂ ತನ್ನ ಸ್ಮರಣೆಗೆ ಬಂದ ರಜತವೂ ಬೇರೆ ಬೇರೆ ಎಂಬ ವಾಸ್ತವತೆ ಅರಿವಾಗುತ್ತದೆ. ಆದ್ದರಿಂದ ಶುಕ್ತಿಯನ್ನು ನೋಡಿ ರಜತ ಎಂದು ತಿಳಿಯುವುದು ಭ್ರಮಾತ್ಮಕಜ್ಞಾನ ಎನಿಸುವುದಿಲ್ಲ.

ಪ್ರಾಭಾಕರರ ವಿವರಣೆಯು ನಮ್ಮ ಅನುಭವಕ್ಕೆ ವಿರುದ್ಧವಾಗಿರುವ ತರ್ಕದ ಆಧಾರದ ಮೇಲೆ ಮಂಡಿತವಾಗಿದೆ. ಯಾವುದೇ ವಸ್ತುವನ್ನು ನೋಡಿದಾಗ ಎರಡು ಯಥಾರ್ಥವಾದ ವಿಭಿನ್ನ ಜ್ಞಾನಗಳು ಉಂಟಾಗುವುದು ನಮಗೆ ಎಲ್ಲೂ ಕಂಡಿಲ್ಲ. ಶುಕ್ತಿ-ರಜತದಲ್ಲಿಯೂ ಒಂದೇ ಕಾಲಕ್ಕೆ ಒಂದೇ ಜ್ಞಾನವುಂಟಾಗುವುದು. ಮೊದಲಿಗೆ ಇದು ಬೆಳ್ಳಿ ಎಂದೂ ಅನಂತರ ಸಮೀಪದಿಂದ ನೋಡಿದಾಗ ಇದು ಕಪ್ಪೆಚಿಪ್ಪೆಂದೂ ಜ್ಞಾನವುಂಟಾಗಿ, ಮೊದಲು ನಾನು ಬೆಳ್ಳಿಯೆಂದು ತಿಳಿದದ್ದು ಕೇವಲ ಭ್ರಮೆ ಎಂಬ ಜ್ಞಾನ ಉಂಟಾಗುತ್ತದೆ. ಬಹಳ ಹೋಲಿಕೆಯಿರುವುದರಿಂದ ಕಪ್ಪೆಚಿಪ್ಪು ದೂರದಿಂದ ನಿಜವಾದ ಬೆಳ್ಳಿ ಎಂದೇ ಭ್ರಮೆಯುಂಟಾಗುವುದು. ವಾಸ್ತವ ಬೆಳ್ಳಿಯಂತೆ ತೋರದೆ ಕೇವಲ ಬೆಳ್ಳಿಯ ಸ್ಮರಣೆಯಷ್ಟೇ ಬಂದರೆ, ಕೇವಲ ಸ್ಮರಣೆಯಲ್ಲಿದ್ದು ಎದುರಿಗೆ ಇಲ್ಲದಿರುವ ವಸ್ತುವಿನ ಬಗ್ಗೆ ಯಾವ ಮೂರ್ಖನಿಗೂ ಪ್ರವೃತ್ತಿ ಹುಟ್ಟುವುದಿಲ್ಲ. ಮೊದಲು ಕಂಡ ಬೆಳ್ಳಿ ಎಂಬ ಜ್ಞಾನಕ್ಕೆ ಅನಂತರ ಅದು ಬೆಳ್ಳಿಯಲ್ಲ ಎಂಬ ಬಾಧಬರುವುದರಿಂದ ಆ ಜ್ಞಾನವು ಯಥಾರ್ಥವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಕಪ್ಪೆಚಿಪ್ಪಿನಲ್ಲಿ

ತೋರಿದ ಬೆಳ್ಳಿಯು ಕೇವಲ ಭ್ರಮೆ ಎಂಬುದನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ.

೨. **ರಾಮಾನುಜೀಯರು** ಅಯಥಾರ್ಥಜ್ಞಾನವನ್ನು ಒಪ್ಪುವುದಿಲ್ಲ. ಅವರ ಪ್ರಕಾರವು ಎಲ್ಲ ಜ್ಞಾನವೂ ಯಥಾರ್ಥವೇ. ಭ್ರಮೆಯಲ್ಲಿ 'ಇದಂ ರಜತಂ' ಎಂಬುದಾಗಿ ಶುಕ್ತಿಯಲ್ಲಿ ಕಾಣುವ ರಜತವು ಅಸತ್ಯವಲ್ಲ. ಏಕೆಂದರೆ 'ತ್ರಿವೃತ್ಕರಣ' ಪ್ರಕ್ರಿಯೆಯನ್ನು ಹೇಳುವ ಶ್ರುತಿಗಳ ಪ್ರಕಾರ ಸೃಷ್ಟಿಯ ಆದಿಯಲ್ಲಿ ಪೃಥಿವೀ, ನೀರು ಮತ್ತು ತೇಜಸ್ಸು ಈ ಮೂರು ಮೂಲಭೂತ ವಸ್ತುಗಳು, ಉಪಲಕ್ಷಣದಿಂದ ಗಾಳಿ ಮತ್ತು ಆಕಾಶವನ್ನೂ ಸೇರಿಸಿದರೆ ಪಂಚಮಹಾಭೂತಗಳು ಮಿಶ್ರಣಗೊಂಡು ನಾನಾ ರೀತಿಯ ವಿಭಿನ್ನ ಪದಾರ್ಥಗಳು ನಿರ್ಮಾಣಗೊಳ್ಳುವುವು. ಎಲ್ಲ ವಸ್ತುಗಳಲ್ಲಿರುವ ಮೂಲಭೂತ ವಸ್ತುಗಳು ಒಂದೇ ಆಗಿವೆ. ಆದರೆ ಅವುಗಳ ಮಿಶ್ರಣವಾಗಿರುವ ಅಂಶಗಳಲ್ಲಿ ಮಾತ್ರ ಭೇದವಿದೆ. ಆದ್ದರಿಂದ ಯಾವುದೇ ವಸ್ತುವನ್ನು ತೆಗೆದುಕೊಂಡರೂ ಅದರಲ್ಲಿ ಮಿಕ್ಕ ಎಲ್ಲ ವಸ್ತುಗಳ ಅಂಶವೂ ಇರುವುದು. ಯಾವುದರಲ್ಲಿ ಆ ವಸ್ತುವಿನ ಅತಿ ಹೆಚ್ಚು ಅಂಶವಿರುತ್ತದೋ ಅದು ಆ ವಸ್ತುವಾಗಿ ಗುರುತಿಸಲ್ಪಡುತ್ತದೆ. ಕೆಲವು ಸಂದರ್ಭಗಳಲ್ಲಿ ವಸ್ತುವಿನಲ್ಲಿರುವ ಅದರ ಹೆಚ್ಚಿನ ಭಾಗ ಕಾಣದೆ ಸೂಕ್ಷ್ಮಭಾಗ ಮಾತ್ರ ಕಂಡಾಗ ಅದನ್ನು ಬೇರೆ ವಸ್ತುವೆಂದು ಭ್ರಮಿಸುತ್ತೇವೆ. ಇದೇ ಪ್ರಕಾರವಾಗಿ ಶುಕ್ತಿಯಲ್ಲಿಯೂ ರಜತದ ಅಂಶವಿರುವುದರಿಂದಲೇ ನಾವು ದೂರದಿಂದ ಶುಕ್ತಿಯನ್ನು ನೋಡಿದಾಗ ಅದು ರಜತವೆಂದು ಭಾವಿಸುತ್ತೇವೆ. ಕಪ್ಪೆಚಿಪ್ಪಿನಲ್ಲಿ ಅದರ ಅಂಶ ಅತ್ಯಂತ ಹೆಚ್ಚಾಗಿದ್ದು, ಬೆಳ್ಳಿ ಮುಂತಾದ ಇತರ ವಸ್ತುಗಳ ಅಂಶ ಬಹಳ ಕಡಿಮೆ ಇರುತ್ತದೆ. ಇಂದ್ರಿಯ ಮತ್ತಿತರ ದೋಷಗಳಿಂದಾಗಿ ಹೆಚ್ಚಿನ ಭಾಗದ ವಸ್ತು ತೋರದೆ ಅದರಲ್ಲಿರುವ ಕಡಿಮೆ ಅಂಶದ ವಸ್ತು ಮಾತ್ರ ನಮಗೆ ತೋರುವುದರಿಂದ ಅದು ಭ್ರಮೆಯೆನಿಸುವುದು. ಆ ಭ್ರಮೆಯಲ್ಲಿಯೂ ವಾಸ್ತವವಾಗಿ ಶುಕ್ತಿಯಲ್ಲಿರುವ ರಜತಾಂಶವೇ ನಮಗೆ ತೋರುವುದಲ್ಲದೆ ಅಲ್ಲಿಲ್ಲದ ವಸ್ತುವು ತೋರುವುದಿಲ್ಲ. ರಜತವೆಂದು ತಿಳಿದು ಅದನ್ನು ಹೊಂದಲು ಪ್ರವೃತ್ತರಾಗಿ, ಸಮೀಪ ಹೋಗಿ ನೋಡಿದಾಗ ವಸ್ತುವಿನ ಹೆಚ್ಚಿನ ಭಾಗವಾದ ಶುಕ್ತಿಯೇ ತೋರುವುದರಿಂದ, ನಾವು ಹಿಂದೆ ನೋಡಿದ್ದು ಅತ್ಯಲ್ಪ

ಭಾಗವಾದ ನಮಗೆ ಪ್ರಯೋಜನಕ್ಕೆ ಬಾರದ ರಜತ ಎಂಬುದು ಮನವರಿಕೆಯಾಗಿ ನಮ್ಮ ಜ್ಞಾನದ ದೋಷವನ್ನು ಅರಿತುಕೊಂಡು ಹಿಂತಿರುಗುತ್ತೇವೆ. ಆದ್ದರಿಂದ ಶುಕ್ತಿಯಲ್ಲಿ 'ಇದಂ ರಜತಂ' ಎಂಬ ಜ್ಞಾನ ಯಥಾರ್ಥವೇ ಹೊರತು ಅದು ಭ್ರಮಾತ್ಮಕಜ್ಞಾನವಲ್ಲ.

ಎಲ್ಲ ವಸ್ತುಗಳೂ ಪಂಚಮಹಾಭೂತಗಳಿಂದಲೇ ಆಗಿವೆಯೆಂದು ಉಪನಿಷತ್ತುಗಳು ಹೇಳುವುದನ್ನು ನಾವು ಒಪ್ಪುತ್ತೇವೆ. ಹಾಗೆಂದ ಮಾತ್ರಕ್ಕೆ ಎಲ್ಲ ವಸ್ತುಗಳಲ್ಲೂ ಮಿಕ್ಕ ಎಲ್ಲ ವಸ್ತುಗಳ ಅಂಶವೂ ಇರುವುದೆಂಬುದಾಗಿ ನಮ್ಮ ಅನುಭವಕ್ಕೆ ವಿರುದ್ಧವಾಗಿ ಸಾಧಿಸುವುದು ಒಪ್ಪತಕ್ಕದ್ದಲ್ಲ. ಕಪ್ಪೆಚಿಪ್ಪಿನಲ್ಲಿ ಬೇರೆ ಎಲ್ಲ ವಸ್ತುಗಳೂ ಇರುವುದಾದರೆ, ಅಲ್ಲಿ ಬೆಳ್ಳಿಯೇ ಏಕೆ ಕಾಣಬೇಕು, ಕಬ್ಬಿಣ ಮತ್ತಿತರ ವಸ್ತುಗಳು ಏಕೆ ಭಾಸವಾಗಬಾರದು? ಬೆಳ್ಳಿಗೂ ಕಪ್ಪೆಚಿಪ್ಪಿಗೂ ಹೊಲಿಕೆ ಇರುವುದರಿಂದ ಅಲ್ಲಿ ಬೆಳ್ಳಿ ಕಾಣುತ್ತದೆ ಎನ್ನುವುದಾದರೆ, ಇದೇ ರೀತಿ ಹೋಲಿಕೆಯಿಂದಾಗಿ ನಾವು ಹಗ್ಗವನ್ನು ನೋಡಿದಾಗ ಅದು ಹಾವು ಎಂಬ ಭ್ರಮೆಗೊಳಗಾಗುತ್ತೇವೆ. ಈ ಭ್ರಮೆಗೆ ಹಗ್ಗದಲ್ಲಿರುವ ಹಾವಿನ ಅಂಶವೇ ಕಾರಣ ಎಂದು ಹೇಳುವುದು ಮೂರ್ಖತನದ ಪರಮಾವಧಿಯಾಗುವುದು. ಭ್ರಮೆಯಲ್ಲಿ ಹಗ್ಗದಲ್ಲಿ ಇಲ್ಲದ ಹಾವು ನಮಗೆ ಕಂಡಿತು ಎಂದು ಒಪ್ಪಿಕೊಳ್ಳಬೇಕೇ ಹೊರತು, ಸತ್ಯವಾದ ಆದರೆ ಅತ್ಯಲ್ಪ ಪ್ರಮಾಣದಲ್ಲಿರುವ ಹಾವಿನ ಅಂಶವು ಅಲ್ಲಿ ಕಂಡಿತು ಎಂದು ವಾದಿಸುವುದನ್ನು ಯಾವ ಪ್ರಜ್ಞಾವಂತನೂ ಒಪ್ಪಲಾರ. ಆದುದರಿಂದ ಭ್ರಮೆಯಲ್ಲಿ ಅಸತ್ಯವಾದ ವಸ್ತುವು ತೋರುವುದು ಎಂಬ ವಿಚಾರವನ್ನು ಒಪ್ಪದೇ ವಿಧಿಯಿಲ್ಲ.

೩. **ತಾರ್ಕಿಕರು** (ನೈಯಾಯಿಕರು ಮತ್ತು ವೈಶೇಷಿಕರು) ಅಸತ್ತಿಗೆ ಪ್ರತೀತಿಯನ್ನು ಒಪ್ಪುವುದಿಲ್ಲ. ಶುಕ್ತಿಯನ್ನು ನೋಡಿದಾಗ ನಮಗೆ ಉಂಟಾಗುವ ಇದಂ ರಜತಂ ಎಂಬ ಭ್ರಮೆಯಲ್ಲಿ ಕಪ್ಪೆಚಿಪ್ಪಿನಲ್ಲಿ ಬೆಳ್ಳಿ ಇಲ್ಲದಿದ್ದರೂ ನಾವು ಬೇರೆ ಕಡೆ ನೋಡಿದ್ದ ಬೆಳ್ಳಿಯೇ ಅಲ್ಲಿ ಕಾಣುತ್ತದೆ. ಅಸತ್ಯವಾದ ವಸ್ತುವು ಕಾಣುವುದಿಲ್ಲ. ಭ್ರಮೆಯೆಂದರೆ ಅಸತ್ಯದ ದರ್ಶನವಲ್ಲ, ವಸ್ತುವಿನ ಅನ್ಯಥಾದರ್ಶನ. ಬೇರೆ ಕಡೆಯಲ್ಲಿ ಇರುವ ಬೆಳ್ಳಿಗೂ

ಎದುರಿಗಿರುವ ಕಪ್ಪೆಚಿಪ್ಪಿಗೂ ಇರುವ ಭೇದವು ತಿಳಿಯದಿರುವುದರಿಂದ ನಾವು ಅದನ್ನು ಬೆಳ್ಳಿಯೆಂದು ಭಾವಿಸುತ್ತೇವೆ. ಆಲ್ಲಿರುವ ಕಪ್ಪೆಚಿಪ್ಪು ಹಾಗೂ ಅಲ್ಲಿ ಕಂಡ ಬೇರೆ ಕಡೆಯಿರುವ ಬೆಳ್ಳಿ ಇವೆರಡೂ ಸತ್ಪದಾರ್ಥಗಳೇ. ಅಂತೂ ಭ್ರಮೆಯಲ್ಲಿ ಅಸತ್ಯವಾದ ವಸ್ತುವಿನ ಜ್ಞಾನ ಉಂಟಾಗುವುದಿಲ್ಲ. ಅಸತ್ತಿಗೆ ಪ್ರತೀತಿಯನ್ನು ಒಪ್ಪದ ಇವರ ವಾದವು ಪ್ರಾಭಾಕರರ ವಾದಕ್ಕಿಂತ ಬೇರೆಯೇನಲ್ಲ, ಅದರ ಇನ್ನೊಂದು ರೀತಿಯ ನಿರೂಪಣೆಯಷ್ಟೆ.

ಎದುರಿಗಿರುವ ಕಪ್ಪೆಚಿಪ್ಪಿಗೂ, ಅಲ್ಲಿ ಕಾಣುವ ಬೆಳ್ಳಿಗೂ ತಾದಾತ್ಮ್ಯ ಅಥವಾ ಅಭೇದ ತೋರಿದಾಗ ಮಾತ್ರ 'ಇದಂ ರಜತಂ' ಎಂಬ ಭ್ರಮಾತ್ಮಕಜ್ಞಾನ ಉಂಟಾಗುವುದು. ಅಲ್ಲಿ ಕಂಡ ಅಭೇದವು ಅಸತ್ಯವೆನ್ನುವುದರಲ್ಲಿ ಯಾರಿಗೂ ವಿವಾದವಲ್ಲ. ಅಭೇದವು ಅಸತ್ಯ ಎಂದು ಒಪ್ಪಿದರೆ ಅದಕ್ಕೆ ಕಾರಣವಾದ ಬೆಳ್ಳಿಯೂ ಅಸತ್ಯವೇ ಆಗಬೇಕಾಗುತ್ತದೆ. ಅಂದಮೇಲೆ ಅಯಥಾರ್ಥಜ್ಞಾನವೇ ಭ್ರಮೆಗೆ ಕಾರಣ ಎಂದು ಒಪ್ಪಿಕೊಳ್ಳಬೇಕಾದ್ದು ಅನಿವಾರ್ಯ. ಈ ಹಿಂದೆ ಬೆಳ್ಳಿಯನ್ನು ನೋಡಿ ಪರಿಚಯವಿದ್ದವನಿಗೆ ಶುಕ್ತಿಯಲ್ಲಿ ಅಲ್ಲಿಲ್ಲದ ಬೆಳ್ಳಿಯ ಭ್ರಮೆ ಬರವುದಲ್ಲದೆ, ಬೆಳ್ಳಿಯ ಪರಿಚಯವಿಲ್ಲದವನಿಗೆ ಬರಲಾರದು. ಶುಕ್ತಿಯಲ್ಲಿ ಕಂಡ ಬೆಳ್ಳಿಯು ಬೇರೆ ಕಡೆ ಇರಲೇ ಬೇಕೆಂದೇನಿಲ್ಲ, ಆದರ ಸಂಸ್ಕಾರವಿದ್ದರೆ ಸಾಕು. ಅಸತ್ಯವಾದ ವಸ್ತುವೇ ಇಂದ್ರಿಯ ಮತ್ತಿತರ ದೋಷ ಹಾಗೂ ವಸ್ತುವಿನ ಸಂಸ್ಕಾರಗಳಿಂದಾಗಿ ನಿಜವಾದ ವಸ್ತುವಿನಂತೆ ತೋರುತ್ತದೆ. ಅಸತ್ಯಕ್ಕೂ ಪ್ರತೀತಿಯುಂಟು ಎಂಬುದೇ ಸರಿಯಾದ ಸಿದ್ಧಾಂತ.

೪. ಬೌದ್ಧಮತದ ಒಂದು ಪ್ರಭೇದಕ್ಕೆ ಸೇರಿದ ವಿಜ್ಞಾನವಾದಿಗಳು ಭ್ರಮೆಗೆ ಇನ್ನೊಂದು ರೀತಿಯ ವ್ಯಾಖ್ಯಾನವನ್ನು ಕೊಡುತ್ತಾರೆ. ಅವರು ಹೇಳುವಂತೆ, ಶುಕ್ತಿಯಲ್ಲಿ ಕಂಡ ಬೆಳ್ಳಿಯು ನಮ್ಮ ಎದುರಿಗೂ ಇಲ್ಲ, ದೂರದಲ್ಲಿಯೂ ಇಲ್ಲ. ಶುಕ್ತಿಯನ್ನು ನೋಡಿದಾಗ ನಮ್ಮ ಮನಸ್ಸಿನಲ್ಲಿ ಬೆಳ್ಳಿಯ ಜ್ಞಾನ ಮೂಡುವುದರಿಂದ ಅದೇ ಬಾಹ್ಯದಲ್ಲಿ ಬೆಳ್ಳಿಯಾಗಿ ತೋರುತ್ತದೆ. ಇಲ್ಲದ ಯಾವ ವಸ್ತುವಿನ ಜ್ಞಾನವೂ ಆಗುವುದಿಲ್ಲ. ಅಂತರಂಗದಲ್ಲಿರುವ ಬೆಳ್ಳಿಯನ್ನು ಬಾಹ್ಯದಲ್ಲಿರುವ ಶುಕ್ತಿಯಲ್ಲಿ ಭಾವಿಸುವುದೇ ಭ್ರಮೆ.

ಇಲ್ಲದ ವಸ್ತುವು ಪ್ರತೀತಿಗೆ ವಿಷಯವಾಗದು ಎಂಬ ಪೂರ್ವಾಗ್ರಹದಿಂದ ಅವರು ಮಂಡಿಸುವ ಈ ರೀತಿಯ ವಾದ ಅಂಗೀಕಾರ್ಹವಲ್ಲ. ಆಂತರಿಕ ವಸ್ತುವಾದ ಬೆಳ್ಳಿಗೆ ಎಂದೂ ಇಲ್ಲದ ಬಾಹ್ಯತೆ ಹೇಗೆ ಉಂಟಾಗಲು ಸಾಧ್ಯ? ಈ ರೀತಿಯ ಅಸತ್ಯವನ್ನು ಒಪ್ಪುವ ಬದಲಿಗೆ ಅಸತ್ಯವಾದ ಬೆಳ್ಳಿಯೇ ಭ್ರಮೆಯಲ್ಲಿ ಕಾಣುತ್ತದೆ ಎಂಬ ಸತ್ಯವಾದ ಸಂಗತಿಯನ್ನು ಒಪ್ಪುವುದೇ ಸೂಕ್ತ.

ಬೌದ್ಧರ ಇನ್ನೊಂದು ಪ್ರಭೇದವಾದ **ಶೂನ್ಯವಾದಿಗಳು** ಭ್ರಮೆಯಲ್ಲಿ ಅಸತ್ಯವಾದ ಬೆಳ್ಳಿಯೇ ತೋರುತ್ತದೆ ಎಂಬ ವಾಸ್ತವ ಸಂಗತಿಯನ್ನು ಒಪ್ಪುತ್ತಾರೆ. ಆದರೆ ಭ್ರಮೆಯಲ್ಲಿ ತೋರುವುದೆಲ್ಲವೂ ಅಸತ್ಯವೇ ಎಂಬುದಾಗಿ ಹೇಳುವ ಅತಿರೇಕವನ್ನು ತಲುಪಿದ್ದಾರೆ.

ಅಲ್ಲಿ ಕಾಣುವ ಬೆಳ್ಳಿ ಮಾತ್ರ ಅಸತ್ಯ ಹೊರತು, ಕಪ್ಪೆಚಿಪ್ಪು ಅದಕ್ಕೆ ಆಧಾರವಾದ ನೆಲ ಮುಂತಾದವು ಅಸತ್ಯವಾಗಿರಲು ಹೇಗೆ ಸಾಧ್ಯ? ವಸ್ತುವೇ ಇಲ್ಲದಿದ್ದರೆ ಇಂದ್ರಿಯಗಳೊಂದಿಗೆ ಸಂಪರ್ಕ ಹೇಗೆ ಸಾಧ್ಯ? ವಸ್ತುವಿಗೂ ಇಂದ್ರಿಯಕ್ಕೂ ಸಂಬಂಧವಾಗದೇ ಜ್ಞಾನ ಬರುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಶೂನ್ಯವಾದಿಗಳ ಸಿದ್ಧಾಂತವನ್ನು ಒಪ್ಪಲು ಸಾಧ್ಯವಿಲ್ಲ.

೫. **ಮಾಯಾವಾದಿಗಳು** ಹೇಳುವ ಪ್ರಕಾರ, ಭ್ರಮೆಯಲ್ಲಿ ತೋರುವ ಬೆಳ್ಳಿಯು ಸತ್ಯವೂ ಅಲ್ಲ, ಅಸತ್ಯವೂ ಅಲ್ಲ. ಅದೊಂದು ಅಜ್ಞಾನದ ಕೂಸು ಎನಿಸಿರುವ ಅನಿರ್ವಚನೀಯ ವಸ್ತು.

ಸದಸದ್ವಿಲಕ್ಷಣರೂಪವಾದ ಅನಿರ್ವಚನೀಯ ವಸ್ತುವಿದೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಶುಕ್ತಿಯನ್ನು ನೋಡಿದಾಗ ಅದು ಅನಿರ್ವಚನೀಯ ರಜತ ಎಂಬ ಭ್ರಮೆಯು ಮೊದಲಿಗೆ ಬಂದು, ಅನಂತರ ಅದು ಅನಿರ್ವಚನೀಯ ವಸ್ತುವಲ್ಲ ಎಂಬ ಬಾಧಜ್ಞಾನವೂ ಬರಬೇಕಾದೀತು. 'ಇದಂ ರಜತಂ' ಎಂಬ ಭ್ರಮೆಯೂ 'ನೇದಂ ರಜತಂ' ಎಂಬ ಬಾಧಜ್ಞಾನವೂ ಬಾರದೆ ಹೋಗಬೇಕಾದೀತು. ಆದರೆ ಭ್ರಮೆಯಲ್ಲಿ ನಮಗೆ ಅದು ರಜತವೆಂಬ ಸತ್ಯವಸ್ತುವಾಗಿಯೇ ತೋರುವುದು. ಅದು ರಜತವಲ್ಲ ಎಂಬ ಬಾಧಜ್ಞಾನ ಬಂದಮೇಲೆ ಭ್ರಮೆಯಲ್ಲಿ ಕಂಡ ಬೆಳ್ಳಿಯು ಅಸತ್ಯ ಎಂಬ ಜ್ಞಾನವಾಗುವುದು. ಏಕಕಾಲದಲ್ಲಿ ಒಂದು ವಸ್ತುವು ಸತ್ಯವೂ ಅಲ್ಲ, ಅಸತ್ಯವೂ

ಅಲ್ಲ ಅನಿರ್ವಚನೀಯ ಎಂಬ ಜ್ಞಾನ ಬರಲು ಸಾಧ್ಯವೇ ಇಲ್ಲ. ಒಂದೋ ಅದು ಸತ್ಯವಾಗಿರಬೇಕು, ಇಲ್ಲ ಅಸತ್ಯವಾಗಿರಬೇಕು. ಆದ್ದರಿಂದ ಭ್ರಮೆಯಲ್ಲಿ ಅಸತ್ಯವಾದ ವಸ್ತುವಿನ ಜ್ಞಾನವಾಗುವುದು ಎಂಬುದನ್ನು ಒಪ್ಪಲೇಬೇಕು.

ಅಸತ್ತಿಗೂ ಪ್ರತೀತಿ ಉಂಟು

ಅಸತ್ತಿಗೆ ಪ್ರತೀತಿಯಿಲ್ಲ, ಸದಸದ್ವಿಲಕ್ಷಣತ್ವಕ್ಕಾದರೋ ಪ್ರತೀತಿಯುಂಟು ಎಂಬ ವಾದವನ್ನು ಮುಂದಿನ ಶ್ಲೋಕಗಳಲ್ಲಿ ನಿರಾಕರಿಸುತ್ತಾರೆ.

ಅಸದ್ವಿಲಕ್ಷಣಜ್ಞಪ್ತ್ಯೈ ಜ್ಞಾತವ್ಯಮಸದೇವ ಹಿ ।
ತಸ್ಮಾದಸತ್ಪ್ರತೀತಿಶ್ಚ ಕಥಂ ತೇನ ನಿವಾರ್ಯತೇ ॥೨೭॥
ಅನ್ಯಥಾತ್ವಮಸತ್ತಸ್ಮಾದ್ಭ್ರಾಂತಾವೇವ ಪ್ರತೀಯತೇ ।
ಸತ್ತ್ವಸ್ಯಾಸತ ಏವಂ ಹಿ ಸ್ವೀಕಾರ್ಯೈವ ಪ್ರತೀತತಾ ॥೨೮॥
ತಸ್ಮಾನಿರ್ವಚನೀಯತ್ವೇ ಸ್ಯಾದೇವ ಹ್ಯನವಸ್ಥಿತಿಃ ।

ಈ ವಸ್ತುವು ಅಸತ್ತಿಗಿಂತ ಭಿನ್ನವಾಗಿದೆ ಎಂದು ಜ್ಞಾತವಾಗಬೇಕಾದರೆ ಅದಕ್ಕೆ ಮುಂಚೆ ಅಸತ್ತಿನ ಜ್ಞಾನವಾಗಿರಬೇಕು. ಆದಕಾರಣ ಶುಕ್ತಿರಜತಾದಿಗಳು ಅಸತ್ತಿಗಿಂತ ವಿಲಕ್ಷಣ ಎಂದು ತಿಳಿಯುವುದರಿಂದ ಅಸತ್ತಿನ ಜ್ಞಾನವು ಹೇಗೆ ತಾನೇ ನಿವಾರಿಸಲ್ಪಡುತ್ತದೆ?

ಶುಕ್ತಿಯಲ್ಲಿ ರಜತವನ್ನು ತಿಳಿಯುವ ಅನ್ಯಥಾಜ್ಞಾನವು ಅಸತ್ತಾದ್ದರಿಂದಲೇ ಭ್ರಾಂತಿಯಲ್ಲಿ ಮಾತ್ರ ಅದು ತೋರುತ್ತದೆ. ಅಪರೋಕ್ಷವಾಗಿ ಸತ್ತೆಂದು ತೋರುತ್ತದೆ. ಹಾಗೆ ಸತ್ತೆಂದು ತೋರದಿದ್ದಲ್ಲಿ ವ್ಯವಹಾರವೇ ಕೂಡುವುದಿಲ್ಲ. ಹೇಗೆ ಅನ್ಯಥಾಜ್ಞಾನಕ್ಕೆ ಅಪರೋಕ್ಷವಾಗಿ ಸತ್ತೆಂದು ಪ್ರತೀತಿಯು ಸ್ವೀಕರಿಸತಕ್ಕುದೋ ಹಾಗೆಯೇ ಅಸತ್ತಾದ ತತ್ವಕ್ಕೂ ಪ್ರತೀತಿಯು ಸ್ವೀಕರಿಸತಕ್ಕುದೇ.

ಶುಕ್ತಿರಜತಜ್ಞಾನಕ್ಕೆ ಅನಿರ್ವಚನೀಯತ್ವವನ್ನು ಒಪ್ಪಿಕೊಂಡರೆ ಅನವಸ್ಥಿತಿ ಉಂಟಾಗುತ್ತದೆ. ಅಂದರೆ, ಒಂದು ಅನಿರ್ವಚನೀಯ ವಸ್ತುವನ್ನು ದೃಢೀಕರಿಸಲು ಇನ್ನೊಂದು ಅನಿರ್ವಚನೀಯವಸ್ತು ಅದಕ್ಕೆ ಮತ್ತೊಂದು ಹೀಗೆ ಮುಗಿಯದ ಪರಂಪರೆ ಉಂಟಾಗುತ್ತದೆ. ಅಸತ್ತಿಗೆ ಪ್ರತೀತಿಯನ್ನು ಒಪ್ಪಿಕೊಳ್ಳುವುದರಿಂದ ಈ ಅನವಸ್ಥಾವನ್ನು ತಪ್ಪಿಸಬಹುದು.

ಅಜ್ಞಾನವಾದ

ಹೀಗೆ ಬಂಧವು ಮಿಥ್ಯಾ ಎಂಬ ಪರರ ವಾದವನ್ನು ನಿರಾಕರಿಸಿದರು. ಈಗ ಪರರ ಮತದಲ್ಲಿ ಅಜ್ಞಾನವೇ ಕೂಡುವುದಿಲ್ಲವಾದ್ದರಿಂದ ಅವರ ಮತದ ಪ್ರಕಾರ ಶಾಸ್ತ್ರಗಳಿಗೆ ವಿಷಯ ಪ್ರಯೋಜನಾದಿಗಳೂ ಕೂಡುವುದಿಲ್ಲ ಎಂದು ಹೇಳುತ್ತಾರೆ.

ನಿರ್ವಿಶೇಷೇ ಸ್ವಯಂ ಭಾತೇ ಕಿಮಜ್ಞಾನಾವೃತಂ ಭವೇತ್ ॥೨೯॥
ಮಿಥ್ಯಾವಿಶೇಷೋಽಪ್ಯಜ್ಞಾನಸಿದ್ಧಿಮೇವ ಹ್ಯಪೇಕ್ಷತೇ ।
ನ ಚಾವರಣಮಜ್ಞಾನಮಸತ್ಯೇ ತೇನ ಚೀಷ್ಯತೇ ॥೩೦॥
ಅಪ್ರಕಾಶಸ್ವರೂಪತ್ವಾಜ್ಜಡೇಽಜ್ಞಾನಂ ನ ಮನ್ಯತೇ ।
ಅಜ್ಞಾನಾಭಾವತಃ ಶಾಸ್ತ್ರಂ ಸರ್ವಂ ವ್ಯರ್ಥೀಭವಿಷ್ಯತಿ ॥೩೧॥
ಅಜ್ಞಾನಸ್ಯ ಚ ಮಿಥ್ಯಾತ್ವಮಜ್ಞಾನಾದಿತಿ ಕಲ್ಪನೇ ।
ಅನವಸ್ಥಿತಿಸ್ತಥಾ ಚ ಸ್ಯಾದನ್ಯೋನ್ಯಾಶ್ರಯತಾಽಥವಾ ॥೩೨॥
ಸ್ವಭಾವಾಜ್ಞಾನವಾದಸ್ಯ ನಿರ್ದೋಷತ್ವಾನ್ನ ತದ್ಭವೇತ್ ।

ಬ್ರಹ್ಮನು ಸ್ವಯಂಪ್ರಕಾಶನಾಗಿರುವುದರಿಂದ ಅವನಿಗೆ ಯಾವುದೇ ಆವರಣವು ಇರಲು ಸಾಧ್ಯವಿಲ್ಲ. ಆದಕಾರಣ ಅಜ್ಞಾನವು ಆವರಕವಾಗಲಾರದು. ಆರೋಪಿತವಾದ ವಿಶೇಷವೂ ಕೂಡ ಅಜ್ಞಾನದ ಸಿದ್ಧಿಯನ್ನೇ ಅಪೇಕ್ಷಿಸುತ್ತದೆ.

ಅದ್ವೈತಿಗಳ ಪ್ರಕಾರ ಜಡವು ಅಸತ್ಯವಾದುದರಿಂದ ಅಜ್ಞಾನವು ಜಡಕ್ಕೆ ಆವರಕವಾಗುವುದನ್ನು ಅವರು ಇಚ್ಛಿಸುವುದಿಲ್ಲ. ಅಪ್ರಕಾಶಸ್ವರೂಪತ್ವದ ನಿಮಿತ್ತ ಜಡದಲ್ಲಿ ಅಜ್ಞಾನವನ್ನು ಅವರು ಒಪ್ಪಲಾರರು. ಹೀಗೆ ಅಜ್ಞಾನವೇ ಇಲ್ಲದಿರುವುದರಿಂದ ವೇದಾದಿ ಎಲ್ಲ ಶಾಸ್ತ್ರವೂ ವಿಷಯಪ್ರಯೋಜನಾದಿಗಳ ಅಭಾವದಿಂದಾಗಿ ಅಪ್ರಯೋಜಕಗಳಾಗುತ್ತವೆ.

ಅಜ್ಞಾನಕ್ಕೆ ಮಿಥ್ಯಾತ್ವವು ಅಥವಾ ಆರೋಪಿತತ್ವವು ಅಜ್ಞಾನದಿಂದಲೇ ಎಂದು ಕಲ್ಪನೆ ಮಾಡಿದರೆ, ಅಂದರೆ ಉಪಾದಾನಕಾರಣವಾದ ಅಜ್ಞಾನಕ್ಕೆ ಪುನಃ ಅಜ್ಞಾನವೇ ಉಪಾದಾನಕಾರಣ, ಹೀಗೆ ಅನವಸ್ಥಿತಿ ಉಂಟಾಗುತ್ತದೆ. ಅಥವಾ ಮೊದಲನೆಯ ಅಜ್ಞಾನ ಎರಡನೆಯದಕ್ಕೆ ಉಪಾದಾನಕಾರಣ ಎಂದು

ಎರಡೇ ಅಜ್ಞಾನಗಳಿಗೆ ಪರಸ್ಪರ ಕಾರ್ಯಕಾರಣಭಾವವನ್ನು ಒಪ್ಪಿದರೆ ಅನ್ಯೋನ್ಯಾಶ್ರಯತ್ವವು ಬರುತ್ತದೆ. ಅಥವಾ ಒಂದೇ ಅಜ್ಞಾನವು ತನಗೆ ತಾನೇ ಉಪಾದಾನಕಾರಣ ಎಂದರೆ ಆತ್ಮಾಶ್ರಯ ಎಂಬ ದೋಷವು ಬರುವುದು.

ಅಜ್ಞಾನವು ಜ್ಞಾನಸ್ವರೂಪನಾದ ಜೀವನನ್ನು ಆಶ್ರಯಿಸಿದ್ದು ಅವನಿಗೆ ಆವರಕವೂ ಆಗಿದೆ ಎನ್ನುವ ನಮ್ಮ ವಾದಕ್ಕೆ ಮೇಲೆ ಹೇಳಿದ ಯಾವ ದೋಷವೂ ಬರುವುದಿಲ್ಲವಾದ್ದರಿಂದ ನಮ್ಮ ಮತದಲ್ಲಿ ಶಾಸ್ತ್ರಕ್ಕೆ ವೈಯರ್ಥ ಬರುವುದಿಲ್ಲ.

ವಿವರಣೆ:

ಪರರ ಮತದ ಪ್ರಕಾರ ಬ್ರಹ್ಮನಲ್ಲಿ ವಿಶೇಷಗಳೇ ಇಲ್ಲವೆಂದಮೇಲೆ ಅಜ್ಞಾನವು ಯಾವುದನ್ನು ಆವರಿಸಬಲ್ಲುದು? ಮಿಥ್ಯಾಭೂತವಾದ ವಿಶೇಷವನ್ನು ಅಜ್ಞಾನವು ಆವರಿಸುತ್ತದೆ ಎಂದು ಒಪ್ಪಿದಲ್ಲಿ ಅನ್ಯೋನ್ಯಾಶ್ರಯ ದೋಷ ಬರುತ್ತದೆ. ಮಿಥ್ಯಾಭೂತವಾದ ಧರ್ಮವು ಅಜ್ಞಾನಸಿದ್ಧಿಯನ್ನು ಆಶ್ರಯಿಸಿದೆ. ಅಜ್ಞಾನವಾದರೋ ಮಿಥ್ಯಾಭೂತವಾದ ಧರ್ಮವನ್ನು ಆಶ್ರಯಿಸಿದೆ. ಹೀಗೆ ಅನ್ಯೋನ್ಯಾಶ್ರಯ. ಬ್ರಹ್ಮವ್ಯತಿರಿಕ್ತವಾದುದು ಮಿಥ್ಯೆಯಾದ್ದರಿಂದ, ಅದು ಅಜ್ಞಾನದಿಂದ ಆವರಕವಾಗುವುದು ಎಂಬುದೂ ಮಿಥ್ಯೆಯೇ ಆಗುವುದು. ಜೀವನೂ ಅಜ್ಞಾನಕಲ್ಪಿತನಾದ ಕಾರಣ ಅನ್ಯೋನ್ಯಾಶ್ರಯ ಬರುವ ಪ್ರಯುಕ್ತ ಜೀವನಿಗೆ ಅಜ್ಞಾನವು ಆವರಕವಾಗುವುದು ಎಂಬುದು ಕೂಡುವುದಿಲ್ಲ. ಮಿಥ್ಯೆಯಾದ್ದರಿಂದ ಜಡಕ್ಕೂ ಸಹ ಆವರಣರೂಪವಾದ ಅಜ್ಞಾನವು ಕೂಡುವುದಿಲ್ಲ. ಅದಕ್ಕೂ ಅನ್ಯೋನ್ಯಾಶ್ರಯ ದೋಷವು ಬರುವುದು. ಅದ್ವೈತಿಗಳೂ ಕೂಡ ಜಡವನ್ನು ಅಸತ್ಯ ಮತ್ತು ಅಪ್ರಕಾಶತ್ವಸ್ವರೂಪ ಎಂದು ತಿಳಿದಿರುವುದರಿಂದ ಜಡಕ್ಕೆ ಅಜ್ಞಾನದ ಆವರಕವನ್ನು ಒಪ್ಪುವುದಿಲ್ಲ. ಈಶ್ವರನಲ್ಲಿ ಅಜ್ಞಾನವನ್ನು ಒಪ್ಪಲು ಸಾಧ್ಯವಿಲ್ಲ. ಅಸತ್ಪದಾರ್ಥಗಳಾದ ಜೀವ, ಜಡಗಳಿಗೂ ಅಜ್ಞಾನ ಕೂಡುವುದಿಲ್ಲ. ಅಜ್ಞಾನವೇ ಇಲ್ಲವೆಂದಾದಮೇಲೆ, ಅಜ್ಞಾನವನ್ನು ತೆಗೆದುಹಾಕುವುದು ಎಂಬುದು ಅರ್ಥಶೂನ್ಯ. ಅಜ್ಞಾನವನ್ನು ನಿವಾರಿಸಿ ಯಥಾರ್ಥಜ್ಞಾನವನ್ನು ಉಂಟುಮಾಡುವುದೇ ಶಾಸ್ತ್ರಗಳ ಉದ್ದೇಶ. ಅಜ್ಞಾನವನ್ನು ಒಪ್ಪದಿದ್ದರೆ ಶಾಸ್ತ್ರಗಳಿಗೆ ಅಪ್ರಯೋಜಕತ್ವವು ಬರುತ್ತದೆ.

ನಮ್ಮ ಮತದ ಪ್ರಕಾರ ಅಜ್ಞಾನವು ಸಾಕ್ಷಿವೇದ್ಯವಾದುದು. ಆದ್ದರಿಂದ ಅದು ಸತ್ಯವೇ ಆಗಿದೆ. ಜೀವನು ಸ್ವಾಭಾವಿಕವಾಗಿಯೇ ಈಶ್ವರನಿಂದ ಭಿನ್ನನೂ ಹಾಗೂ ಜ್ಞಾನಸ್ವರೂಪನೂ ಆಗಿರುತ್ತಾನೆ. ಜೀವನು ಪರತಂತ್ರನಾಗಿರುವುದರಿಂದ, ಸ್ವಪ್ರಕಾಶನಾಗಿದ್ದರೂ, ಸ್ವತಂತ್ರನಾದ ಈಶ್ವರನ ಇಚ್ಛೆಯಿಂದ ಈಶ್ವರನ ವಿಷಯದಲ್ಲಿಯೂ ಹಾಗೂ ತನ್ನ ಪಾರತಂತ್ರ್ಯಾದಿ ಧರ್ಮಗಳಲ್ಲಿಯೂ ಅವನಿಗೆ ಅಜ್ಞಾನವು ಆವರಕವಾಗಿ ಇರುತ್ತದೆ. ಅಜ್ಞಾನವು ಸತ್ಯವೇ ಆಗಿದ್ದರೂ ಪರಮೇಶ್ವರನ ಪ್ರಸಾದದಿಂದ ಉಂಟಾಗುವ ಜ್ಞಾನದಿಂದ ಅದಕ್ಕೆ ನಿವೃತ್ತಿ ಕೂಡುತ್ತದೆ. ಅಜ್ಞಾನದ ನಿವೃತ್ತಿಗೆ ಶಾಸ್ತ್ರಾಭ್ಯಾಸರೂಪವಾದ ಜಿಜ್ಞಾಸೆ ಅವಶ್ಯ. ಆದ್ದರಿಂದ ನಮ್ಮ ಮತದಲ್ಲಿ ಶಾಸ್ತ್ರಗಳಿಗೆ ವೈಯರ್ಥ್ಯ ಬರುವುದಿಲ್ಲ.

'ದುರ್ಘಟತ್ವಮವಿದ್ಯಾಯಾ ಭೂಷಣಂ ನ ತು ದೂಷಣಂ। ಅವಿದ್ಯಾಯಾ ಅವಿದ್ಯಾತ್ವಮಿದಮೇವ ಹಿ ಲಕ್ಷಣಂ ಯದ್ವಿಚಾರಾಸಹಿಷ್ಣುತ್ವಂ॥' ನಮ್ಮ ಮತದಲ್ಲಿ ಅನಿದ್ಯೆಯು ಅಸಹಿಷ್ಣುತೆ ಸ್ವಭಾವವುಳ್ಳದ್ದು (ದುರ್ಘಟತ್ವವುಳ್ಳದ್ದು). ಈ ಅಸಹಿಷ್ಣುತೆಯು ಅವಿದ್ಯೆಗೆ ಭೂಷಣವೇ ಹೊರತು ದೂಷಣವಲ್ಲ. ಅವಿದ್ಯೆಗೆ ಅವಿದ್ಯಾತ್ವ ಅಥವಾ ವಿಚಾರ ಅಸಹಿಷ್ಣುತೆ ಎಂಬುದೇ ಲಕ್ಷಣ. ಆದುದರಿಂದ ಅವಿದ್ಯೆಗೆ ಆಶ್ರಯ ವಿಷಯಾದಿಗಳು ಇಲ್ಲವೆಂಬ ಅನುಪಪತ್ತಿಯು ಅವಿದ್ಯೆಯ ಸಿದ್ಧಿಗೆ ಬಾಧಕವಾಗುವುದಿಲ್ಲ ಎಂಬುದಾಗಿ ಮಾಯಾವಾದಿಗಳು ಹೇಳಿದರೆ, ಅವರ ಮತದ ಪ್ರಕಾರ ವಿಷಯಾದಿಗಳೇ ಕೂಡುವುದಿಲ್ಲ ಎಂದು ಹೇಳುತ್ತಾರೆ.

ಅವಿದ್ಯಾದುರ್ಘಟತ್ವಂ ಚೇತ್ಸ್ಯಾದಾತ್ಮಾಪಿ ಹಿ ತಾದೃಶಃ ॥೩೩॥

ಅತೋಽಧಿಕಾರಿವಿಷಯಫಲಯೋಗಾದಿವರ್ಜಿತಮ್ ।

ಅನಂತದೋಷದುಷ್ಟಂ ಚ ಹೇಯಂ ಮಾಯಾಮತಂ ಶುಭೈಃ ॥೩೪॥

ಅವಿದ್ಯೆಗೆ ದುರ್ಘಟತ್ವವು ಸ್ವಭಾವವೆಂದು ಒಪ್ಪಿದರೆ ಆತ್ಮನೂ ಕೂಡ ಅವಿದ್ಯೆಯಂತೆ ಮಿಥ್ಯಾಭೂತನು ಆಗುವನು. ಪರರ ಮತದಲ್ಲಿ ಅವಿದ್ಯೆಯು ಕೂಡದಿರುವುದರಿಂದ, ಅಧಿಕಾರಿ, ವಿಷಯ, ಫಲ ಮತ್ತು ಪರಸ್ಪರ ಸಂಬಂಧ ಮೊದಲಾದವುಗಳು ಇಲ್ಲವಾಗುವುದರಿಂದ, ಅನಂತವಾದ ದೋಷಗಳಿಂದ

ದುಷ್ಟವಾದ ಮಾಯಾವಾದಿಗಳ ಮತವು ಸಜ್ಜನರಿಂದ ತ್ಯಾಜ್ಯವು.

ವಿವರಣೆ:

ಮಾಯಾವಾದಿಗಳು ಹೇಳುವ ಪ್ರಕಾರ ಅವಿದ್ಯೆಯು ದುರ್ಘಟ ಸ್ವಭಾವವುಳ್ಳದ್ದು ಎಂದು ಒಪ್ಪಿಕೊಂಡ ಪಕ್ಷದಲ್ಲಿ, ಅದಕ್ಕೆ ಸಾಕ್ಷಿಯೂ ಬೇಡ, ಅಧಿಷ್ಠಾನವೂ ಬೇಡ ಎಂದಾಗುತ್ತದೆ. ಅವಿದ್ಯೆಗೆ ಅಧಿಷ್ಠಾನ ಮತ್ತು ಸಾಕ್ಷಿಯ ಅಪೇಕ್ಷೆಯಿಲ್ಲವೆಂದರೆ ಆತ್ಮನ ಅಸ್ತಿತ್ವವನ್ನೇ ಒಪ್ಪಬೇಕಾಗಿಲ್ಲ. ಅದು ಶೂನ್ಯವಾದವೇ ಅಲ್ಲದೆ ಮತ್ತೇನು? ಅಜ್ಞಾನವಿದ್ದರೆ, ಸಂಶಯ ವಿಪರ್ಯಗಳಿಂದ ಗ್ರಸ್ತನಾದ ಅಜ್ಞಾನಿಯು ಶಾಸ್ತ್ರದಲ್ಲಿ ಅಧಿಕಾರಿಯಾಗುವನು. ಅಜ್ಞಾತವಾದುದು ವಿಷಯವಾಗುವುದು. ಶಾಸ್ತ್ರಕ್ಕೆ ಅಜ್ಞಾನನಿವೃತ್ತಿಯು ಪ್ರಯೋಜನವಾಗುವುದು. ಅಧಿಕಾರಿ ವಿಷಯಾದಿಗಳು ಇಲ್ಲವಾದರೆ ಸಂಬಂಧವು ಕೂಡುವುದಿಲ್ಲ. ಅನುಬಂಧಚತುಷ್ಟಯರಹಿತವಾದ ಮಾಯಾವಾದಿಗಳ ಮತವು ಸರ್ವಥಾ ಅನಾದರಣೀಯವೂ ಅತ್ಯಂತ ಹೇಯವೂ ಆಗಿರುವುದು. (ಅಜ್ಞಾನಕ್ಕೇನೇ ಮಾಯಾ, ಅವಿದ್ಯಾ ಎಂಬುದಾಗಿ ಅವಸ್ಥಾ ಭೇದದಿಂದ ಎರಡು ಹೆಸರು.)

ಜೀವಬ್ರಹ್ಮೈಕ್ಯವು ಶಾಸ್ತ್ರಕ್ಕೆ ವಿಷಯವಲ್ಲ

ಸತ್ಯತ್ವಾತ್ತೇನ ದುಃಖಾದೇಃ ಪ್ರತ್ಯಕ್ಷೇಣ ವಿರೋಧತಃ ।
ನ ಬ್ರಹ್ಮತಾಂ ವದೇದ್ವೇದೋ ಜೀವಸ್ಯ ಹಿ ಕಥಂಚನ ॥೩೫॥

'ತತ್ತ್ವಮಸಿ' ಇತ್ಯಾದಿ ವೇದವು ಯಾವರೀತಿಯಿಂದಲೂ (ಮುಖ್ಯವೃತ್ತಿ ಅಥವಾ ಲಕ್ಷಣಾವೃತ್ತಿಯಿಂದಲೂ) ಜೀವನಿಗೆ ಬ್ರಹ್ಮತ್ವವನ್ನು ಹೇಳುವುದಿಲ್ಲ. ಹಾಗೆ ಹೇಳುವುದು ಪ್ರತ್ಯಕ್ಷಕ್ಕೆ ವಿರೋಧ. ಏಕೆಂದರೆ, ದುಃಖ ಮೊದಲಾದವುಗಳಿಗೆ ಸತ್ಯತ್ವವು ಪ್ರತ್ಯಕ್ಷದಿಂದ ನಿಶ್ಚಿತವಾಗಿದೆ.

ಯಜಮಾನಪ್ರಸ್ತರತ್ವಂ ಯಥಾ ನಾರ್ಥಃ ಶ್ರುತೇರ್ಭವೇತ್ ।
ಬ್ರಹ್ಮತ್ವಮಪಿ ಜೀವಸ್ಯ ಪ್ರತ್ಯಕ್ಷಸ್ಯಾವಿಶೇಷತಃ ॥೩೬॥

'ಯಜಮಾನಪ್ರಸ್ತರಃ' ಎನ್ನುವ ಶ್ರುತಿಯಲ್ಲಿ ಯಜಮಾನನಿಗೆ ದರ್ಭೆಮುಷ್ಟಿ ಎಂಬ ವಿಶೇಷಣವನ್ನು ಹೇಳಿರುವಂತೆ ತೋರುವುದು. ಈ ಪ್ರತಿಪಾದನೆಯು ಪ್ರತ್ಯಕ್ಷಕ್ಕೆ ವಿರುದ್ಧವಾಗಿರುವುದರಿಂದ ಶ್ರುತಿಗೆ ಪ್ರತೀತವಾದ ಅರ್ಥವನ್ನು

ಪರಿತ್ಯಾಗ ಮಾಡಬೇಕು. ಜೊತೆಗೆ ಯಜಮಾನನ ಸ್ವರೂಪವನ್ನು ತಿಳಿಸುವುದರಿಂದ ದರ್ಭೆಮುಷ್ಟಿಯ ವಿಶೇಷಣಕ್ಕೆ ಉಪಜೀವ್ಯ ವಿರೋಧವೂ ಬರುವುದು. ಉಪಜೀವ್ಯ-ಉಪಜೀವಕಗಳಲ್ಲಿ ಉಪಜೀವ್ಯವೇ ಪ್ರಬಲ. ತತ್ತ್ವಮಸಿ ಎನ್ನುವಲ್ಲಿ ತತ್ ಶಬ್ದವಾಚ್ಯನಾದ ಬ್ರಹ್ಮನು ಉಪಜೀವ್ಯ, ತ್ವಂ ಶಬ್ದವಾಚ್ಯನಾದ ಜೀವನು ಉಪಜೀವಕ. ಜೀವನಿಗೆ ದುಃಖಾದಿಗಳು ಸತ್ಯ ಎನ್ನುವುದು ಪ್ರತ್ಯಕ್ಷಕ್ಕೆ ಸಿದ್ಧವಾಗುವ ಪ್ರಮೇಯ. ಬ್ರಹ್ಮನು ದುಃಖಾದಿ ದೋಷರಹಿತನು. ಪ್ರಬಲವಾದ ಉಪಜೀವ್ಯಕ್ಕೆ ವಿರೋಧವಿರುವುದರಿಂದಲೇ ತತ್ತ್ವಮಸಿ ಇತ್ಯಾದಿ ಮೇಲ್ನೋಟಕ್ಕೆ ಐಕ್ಯ ಹೇಳುವಂತೆ ಕಾಣುವ ವಾಕ್ಯಗಳು ಜೀವಬ್ರಹ್ಮರಿಗೆ ಐಕ್ಯವನ್ನು ಪ್ರತಿಪಾದಿಸುವುದಕ್ಕೆ ಪ್ರಮಾಣವಾಗಲಾರವು.

ಬ್ರಹ್ಮನನ್ನು ಅನುವಾದಮಾಡಿಕೊಂಡು ಬ್ರಹ್ಮನಿಗೆ ಜೀವೈಕ್ಯವನ್ನು ಪ್ರತಿಪಾದಿಸುವಂತೆ ಕಾಣುವ 'ತದ್ಯೋಽಹಂ ಸೋಽಸೌ ಯೋಽಸೌ ಸೋಽಹಂ' ಇತ್ಯಾದಿ ಶ್ರುತಿಗಳೂ ಐಕ್ಯಪರವಲ್ಲ ಎಂಬುದಾಗಿ ಮುಂದಿನ ವಾಕ್ಯಗಳಲ್ಲಿ ಸಮರ್ಥಿಸಲಾಗಿದೆ.

ಸಾರ್ವಜ್ಞಾದಿಗುಣಂ ಜೀವಾದ್ಭಿನ್ನಂ ಜ್ಞಾಪಯತಿ ಶ್ರುತಿಃ ।
ಈಶಂ ತಾಮುಪಜೀವ್ಯೈವ ವರ್ತತೇ ಹ್ಯೈಕ್ಯವಾದಿನೀ ॥೩೭॥
ಉಪಜೀವ್ಯವಿರೋಧೇನ ನಾಸ್ಯಾಸ್ತನ್ಮಾತಾ ಭವೇತ್ ।

ಯಾವ ಶ್ರುತಿಯು ಪರಮೇಶ್ವರನನ್ನು ಸರ್ವಜ್ಞತ್ವಾದಿ ಗುಣ ವಿಶಿಷ್ಟನನ್ನಾಗಿಯೂ ಜೀವನಿಂದ ಭಿನ್ನನನ್ನಾಗಿಯೂ ತಿಳಿಸಿಕೊಡುತ್ತದೋ ಆ ಶ್ರುತಿಯನ್ನು ಉಪಜೀವಿಸಿಕೊಂಡೇ ಐಕ್ಯಪ್ರತಿಪಾದಕಶ್ರುತಿಯು ಇರುವುದು. ಆದಕಾರಣ 'ತದ್ಯೋಹಂ' ಇತ್ಯಾದಿ ಶ್ರುತಿಗಳು ಉಪಜೀವ್ಯಪ್ರಮಾಣಕ್ಕೆ ವಿರೋಧವಾದುದರಿಂದ ಜೀವಬ್ರಹ್ಮೈಕ್ಯ ಸಾಧನೆಗೆ ಪ್ರಮಾಣವಾಗಲಾರವು.

ವಿವರಣೆ:

ಈಶ್ವರನೊಂದಿಗೆ ಜೀವೈಕ್ಯವನ್ನು ಪ್ರತಿಪಾದಿಸುವ ಶ್ರುತಿಯು ಮೊದಲಿಗೆ ಈಶ್ವರನ ಸಿದ್ಧಿಯನ್ನು ಅಪೇಕ್ಷಿಸುತ್ತದೆ. 'ಯಃ ಸರ್ವಜ್ಞಃ' ಮೊದಲಾದ ಶ್ರುತಿಗಳೇ ಇದಕ್ಕೆ ಉಪಜೀವ್ಯ ಪ್ರಮಾಣಗಳು. ಆ ಶ್ರುತಿಗಳು ಅಲ್ಪಜ್ಞನಾದ ಜೀವನಿಗೂ ಸರ್ವಜ್ಞನಾದ ಬ್ರಹ್ಮನಿಗೂ ಭೇದವನ್ನೇ ಹೇಳುತ್ತವೆಯಾದ್ದರಿಂದ,

ಐಕ್ಯವನ್ನು ಪ್ರತಿಪಾದಿಸುವ ಶ್ರುತಿಗಳಿಗೆ ಉಪಜೀವ್ಯವಿರೋಧ ಬರುವುದರಿಂದ ಅವುಗಳಿಗೆ ಭೇದಪರ ಅರ್ಥವನ್ನೇ ಮಾಡಬೇಕು. ಅಲ್ಲದೆ ಎಲ್ಲ ಅದ್ವೈತಪರ ಶ್ರುತಿಗಳಿಗೂ 'ದ್ವಾ ಸುಪರ್ಣಾ' ಮೊದಲಾದ ದ್ವೈತ ಪ್ರತಿಪಾದಕ ಶ್ರುತಿಗಳಿಂದ ವಿರೋಧ ಬರುವುದರಿಂದ ಅವುಗಳಿಗೆ ಪ್ರತೀತಾರ್ಥವನ್ನು ಬಿಟ್ಟು ಭೇದಪರ ಅರ್ಥವನ್ನೇ ಮಾಡಬೇಕು.

ಸ್ವಾತಂತ್ರ್ಯೇ ಚ ವಿಶಿಷ್ಟತ್ವೇ ಸ್ಥಾನಮತ್ಯೈಕ್ಯಯೋರಪಿ ॥೩೮॥
ಸಾದೃಶ್ಯೇ ಚೈಕ್ಯವಾಕ್ ಸಮ್ಯಕ್ ಸಾವಕಾಶಾ ಯಥೇಷ್ಟತಃ ।
ಅವಕಾಶೋಜ್ಝಿತಾ ಭೇದಶ್ರುತಿರ್ನಾತಿಬಲಾ ಕಥಮ್ ॥೩೯॥
ಅಜ್ಞಾನಾಸಂಭವಾದೇವ ಮಿಥ್ಯಾಭೇದೋ ನಿರಾಕೃತಃ ।

ಐಕ್ಯವನ್ನು ಹೇಳುವ ವಾಕ್ಯವು ಸ್ವಾತಂತ್ರ್ಯ, ವೈಶಿಷ್ಟ್ಯ, ಸ್ಥಾನೈಕ್ಯ, ಮತ್ಯೈಕ್ಯ, ಸಾದೃಶ್ಯ ಇತ್ಯಾದಿಗಳನ್ನು ನಿಮಿತ್ತಮಾಡಿಕೊಂಡು ಸಂಭವಾನುಸಾರವಾಗಿ ಚೆನ್ನಾಗಿಯೇ ಐಕ್ಯವನ್ನು ಹೇಳುವುದರಿಂದ, ಅದು ಸಾವಕಾಶ ಶ್ರುತಿ. ಅಂದರೆ ಅನೇಕ ಅರ್ಥಗಳಲ್ಲಿ ತೆರೆದುಕೊಳ್ಳುವ ಅವಕಾಶವನ್ನು ಹೊಂದಿದೆ. ಆದರೆ ಭೇದ ಹೇಳುವ ಶ್ರುತಿಯು ನಿರವಕಾಶವಾಗಿದೆ. ಅಂದರೆ ವಿವಿಧ ಅರ್ಥಗಳಲ್ಲಿ ತೆರೆದುಕೊಳ್ಳುವ ಅವಕಾಶವನ್ನು ಹೊಂದಿರುವುದಿಲ್ಲ. ಆದ್ದರಿಂದ ಸಾವಕಾಶವಾದ ಅಭೇದಶ್ರುತಿಗಿಂತ ನಿರವಕಾಶವಾದ ಭೇದಶ್ರುತಿಯು ಅತ್ಯಂತ ಪ್ರಬಲವಾದುದು. ಅಜ್ಞಾನವು ಸರ್ವಥಾ ಅಸಂಭವವಾದ್ದರಿಂದ ಭೇದವು ಮಿಥ್ಯಾ ಎಂಬ ವಾದವು ನಿರಾಕೃತವಾಗುವುದು.

ವಿವರಣೆ: ಸಾವಕಾಶ ಮತ್ತು ನಿರವಕಾಶಗಳಲ್ಲಿ ನಿರವಕಾಶವು ಅತ್ಯಂತ ಪ್ರಬಲ. ಸಾವಕಾಶವಾದ ಐಕ್ಯ ಪ್ರತಿಪಾದಕ ಶ್ರುತಿಗೆ ಭೇದಪರವಾದ ಅರ್ಥವನ್ನು ಮಾಡಲು ಬರುತ್ತದೆ. ಆದರೆ ನಿರವಕಾಶವಾದ ಭೇದಪರವಾದ ಶ್ರುತಿಗೆ ಭೇದವನ್ನು ಬಿಟ್ಟು ಬೇರೆ ಅರ್ಥಮಾಡಲು ಬರುವುದಿಲ್ಲ. ಅದ್ವೈತಶ್ರುತಿಯು ದುರ್ಬಲ. ದ್ವೈತಶ್ರುತಿಯು ಪ್ರಬಲ. ಪ್ರಬಲವಾದ ದ್ವೈತಶ್ರುತಿಯಿಂದ ದುರ್ಬಲವಾದ ಅದ್ವೈತಶ್ರುತಿಗೆ ಬಾಧಬರುವುದರಿಂದ, ಶ್ರುತಿಗಳು ಈಶ್ವರ ಮತ್ತು ಜೀವರಿಗೆ ಭೇದವನ್ನೇ ಹೇಳುತ್ತವೆ ಎಂಬುದು ಸಿದ್ಧವಾಗುವುದು. ಭೇದಕ್ಕೆ ಅಜ್ಞಾನವೇ ಕಾರಣವಾದ್ದರಿಂದ ಭೇದವು ಮಿಥ್ಯಾ

ಎನ್ನಕೂಡದು. ಪರರ ಮತದಲ್ಲಿ ಅಜ್ಞಾನವು ಸರ್ವಥಾ ಕೂಡುವುದಿಲ್ಲ ಎಂದು ಈಗಾಗಲೇ ನಿರಾಕರಿಸಿದ್ದೇವೆ. ಅಜ್ಞಾನವೇ ಅಸಂಭವವಾದ್ದರಿಂದ ಭೇದಶ್ರುತಿಯು ಮಿಥ್ಯಾಭೇದವನ್ನು ಪ್ರತಿಪಾದಿಸುತ್ತದೆ ಎಂದು ಹೇಳಕೂಡದು.

ವಿಷ್ಣುಪ್ರಸಾದದಿಂದಲೇ ಬಂಧನಿವೃತ್ತಿ

ಅತೋ ಯಥಾರ್ಥಬಂಧಸ್ಯ ವಿನಾ ವಿಷ್ಣುಪ್ರಸಾದತಃ ॥೪೦॥
ಅನಿವೃತ್ತೇಸ್ತದರ್ಥಂ ಹಿ ಜಿಜ್ಞಾಸಾತ್ರ ವಿಧೀಯತೇ ।
ಯಥಾ ದೃಷ್ಟ್ಯಾ ಪ್ರಸನ್ನಸ್ಸನ್ ರಾಜಾ ಬಂಧಾಪನೋದಕೃತ್ ॥೪೧॥
ಏವಂ ದೃಷ್ಟಃ ಸ ಭಗವಾನ್ ಕುರ್ಯಾದ್ಬಂಧವಿಭೇದನಮ್ ।

ಆದಕಾರಣ ಯಥಾರ್ಥವಾದ ಬಂಧಕ್ಕೆ ವಿಷ್ಣುವಿನ ಪ್ರಸಾದವಿಲ್ಲದೆ ನಿವೃತ್ತಿಯಾಗದು. ವಿಷ್ಣುವಿನ ಪರಮಾನುಗ್ರಹಕ್ಕಾಗಿ ಈ ಸೂತ್ರದಲ್ಲಿ ಬ್ರಹ್ಮನ ವಿಚಾರವನ್ನು ಮಾಡಬೇಕೆಂದು ವಿಧಿಸಲ್ಪಟ್ಟಿದೆ. ಕರುಣಾಳುವಾದ ಉತ್ತಮಗುಣವುಳ್ಳ ರಾಜನು ಪ್ರೇಮಾತಿಶಯ ದೃಷ್ಟಿಯಿಂದ ಸಂತುಷ್ಟನಾಗಿ ಬಂಧನಕ್ಕೊಳಗಾಗಿದ್ದ ವ್ಯಕ್ತಿಯನ್ನು ಬಿಡುಗಡೆ ಮಾಡುವುದು ಲೋಕದಲ್ಲಿ ಪ್ರಸಿದ್ಧವೇ ಆಗಿದೆ. ಹೀಗೆಯೇ ಅನಂತಾನಂತ ಸದ್ಗುಣಗಳಿಂದ ಕೂಡಿದ ಭಗವಂತನನ್ನು ಅತಿಶಯವಾದ ಭಕ್ತಿಯಿಂದ ಆರಾಧಿಸಿದಾಗ ಭಗವಂತನು ಸಂಸಾರಬಂಧನವನ್ನು ಸಂಪೂರ್ಣವಾಗಿ ನಾಶಮಾಡುವನು.

ಈ ರೀತಿಯಾಗಿ ಶ್ರೀಮದಾಚಾರ್ಯರು ಬಂಧಮಿಥ್ಯಾತ್ವವನ್ನು ಹೇಳುವ ಪರರ ಅಪವ್ಯಾಖ್ಯಾನವನ್ನು ನಿರಾಕರಿಸಿ, ಬಂಧವು ಸತ್ಯವಾದುದರಿಂದ ಹಾಗೂ ಜಿಜ್ಞಾಸೆಯಿಂದ ಹುಟ್ಟುವ ಯಥಾರ್ಥಜ್ಞಾನಪೂರ್ವಕ ಉಪಾಸನೆಯಿಂದ ವಿಷ್ಣುಪ್ರಸಾದ ಮತ್ತು ಮೋಕ್ಷಾಖ್ಯ ಫಲವಿರುವುದರಿಂದ, ಹೀಗೆ ಸೂತ್ರದ ಅತಃ ಶಬ್ದಕ್ಕೆ ಎರಡು ರೀತಿಯ ಸಾರ್ಥಕ್ಯವನ್ನು ಪ್ರತಿಪಾದಿಸಿರುವರು. ಈಗ ವಿಷಯಸಮರ್ಥನೆಗೆ ಕಾರಣವಾದ ಸಿದ್ಧಾರ್ಥಬೋಧಕತ್ವ ಪ್ರತಿಪಾದಕವಾದ ಯುಕ್ತಿಯನ್ನು 'ಕಾರ್ಯತಾ ಚ' ಇತ್ಯಾದಿಗಳಿಂದ ವ್ಯಾಖ್ಯಾನ ಮಾಡುತ್ತಾರೆ.

ಕಾರ್ಯತಾ ವಾದ

ಕಾರ್ಯತಾ ಚ ನ ಕಾಚಿತ್ ಸ್ಯಾದಿಷ್ಟಸಾಧನತಾಂ ವಿನಾ ॥೪೨॥
ಕಾರ್ಯಂ ನ ಹಿ ಕ್ರಿಯಾ ವ್ಯಾಪ್ಯಂ ನಿಷಿದ್ಧಸ್ಯ ಸಮತ್ವತಃ ।

ನ ಭವಿಷ್ಯತ್ತ್ರಿಯಾ ಕಾರ್ಯಂ ಸ್ರಕ್ಷ್ಯತೀಶ ಇತಿ ಹ್ಯಪಿ ॥೪೩॥

ಕಾರ್ಯಂ ಸ್ಯಾನ್ನೈವ ಚಾಕರ್ತುಮಶಕ್ಯಂ ಕಾರ್ಯಮಿಷ್ಯತೇ ।

ಸಾಮ್ಯಾದೇವ ನಿಷಿದ್ಧಸ್ಯ ತದಿಷ್ಟಂ ಸಾಧನಂ ತಥಾ ॥೪೪॥

ಕಾರ್ಯಂ ಸಾಧನಮಿಷ್ಟಸ್ಯ ಭಗವಾನಿಷ್ಟದೇವತಾ ।

ಮುಖ್ಯೇಷ್ಟಂ ವಾ ಸುಮನಸಾಂ 'ಪ್ರೇಯಸ್ತದಿ'ತಿ ಚ ಶ್ರುತಿಃ ॥೪೫॥

ಇಷ್ಟಸಾಧನತ್ವವನ್ನು ಹೊರತುಪಡಿಸಿ ಯಾವುದೊಂದು ಕಾರ್ಯತೆಯೂ ಆಗಲಾರದು. ಕ್ರಿಯೆಯಿಂದ ಹೊಂದಲು ಸಾಧ್ಯವಾಗುವದೆಲ್ಲವೂ ಕಾರ್ಯ ಎನಿಸುವುದಿಲ್ಲ. ಇಲ್ಲವಾದರೆ ಶಾಸ್ತ್ರನಿಷಿದ್ಧವಾದ ಬ್ರಾಹ್ಮಣಹನನಾದಿಗಳಿಗೂ ಕಾರ್ಯವಾಗಬೇಕಾದೀತು. ಮುಂದೆ ಆಗಲಿರುವ ಕ್ರಿಯೆಯೂ ಕಾರ್ಯ ಎನಿಸದು. ಹಾಗಿಲ್ಲದಿದ್ದರೆ ಪರಮೇಶ್ವರನು ಮುಂದೆ ಒಂದು ಕಾಲದಲ್ಲಿ ಸರ್ವಜಗತ್ತನ್ನು ಸೃಷ್ಟಿಸುವನು ಎಂಬಿತ್ಯಾದಿ ವಾಕ್ಯಗಳಿಂದ ತಿಳಿಯಲ್ಪಡುವ ಭವಿಷ್ಯತ್ ಕ್ರಿಯೆಗಳೂ ಕಾರ್ಯ ಎನಿಸಬೇಕಾಗುತ್ತವೆ. ಆದ್ದರಿಂದ ಅವು ಕಾರ್ಯಗಳಾಗುವುದಿಲ್ಲ.

ಮಾಡದೇ ಇರುವುದಕ್ಕೆ ಅಶಕ್ಯವಾದುದು ಕಾರ್ಯ ಎಂಬುದಾಗಿ ಪ್ರಾಮಾಣಿಕರಿಂದ ಅಂಗೀಕರಿಸಲ್ಪಡುವುದಿಲ್ಲ. ಶಾಸ್ತ್ರನಿಷಿದ್ಧವಾದ ಕೆಲಸಗಳೂ ಮಾಡಲು ಅಶಕ್ಯವೇನಲ್ಲವಾದುದರಿಂದ ಅವುಗಳನ್ನೂ ಕಾರ್ಯ ಎಂದು ಅಂಗೀಕರಿಸಬೇಕಾಗುವುದು.

ಇಷ್ಟ ಹಾಗೂ ಇಷ್ಟಸಾಧನವಾದುದು ಮಾತ್ರ ಕಾರ್ಯವೆನಿಸುತ್ತದೆ. ಇಷ್ಟದೇವತೆಯಾದ ಭಗವಂತನೇ ಇಷ್ಟವಾದುದಕ್ಕೆ ಸಾಧನನು. ಉತ್ತಮಾಧಿಕಾರಿಗಳಾದ ದೇವತೆಗಳಿಗೆ ಪರಬ್ರಹ್ಮನೇ ಮುಖ್ಯವಾಗಿ ಪ್ರಿಯನು. 'ತದೇತತ್ಪ್ರೇಯಃ ಪುತ್ರಾತ್ಪ್ರೇಯೋ ವಿತ್ತಾತ್ಪ್ರೇಯೋನ್ಯಸ್ಮಾಚ್ಚ ಸರ್ವಸ್ಮಾದಂತರತರಂ ಯದಯಮಾತ್ಮಾ' ಎನ್ನುವ ಶ್ರುತಿಯು ಭಗವಂತನು ಮಕ್ಕಳಿಗಿಂತಲೂ, ದ್ರವ್ಯಕ್ಕಿಂತಲೂ, ಇತರ ಎಲ್ಲ ವಸ್ತುಗಳಿಗಿಂತಲೂ ಅತ್ಯಂತ ಪ್ರಿಯನು ಎಂದು ಹೇಳುತ್ತದೆ.

'ಪ್ರಾಣಬುದ್ಧಿಮನಃ ಖಾತ್ಮದೇಹಾಪತ್ಯಧನಾದಯಃ ।

ಯತ್ಸಂಪರ್ಕಾತ್ ಪ್ರಿಯಾ ಆಸಂಸ್ತತಃ ಕೋನ್ವಪರಃ ಪ್ರಿಯಃ' ॥೪೬॥

ಇತ್ಯಾದಿವಾಕ್ಯೈರಾಕಾಂಕ್ಷಾ ಸನ್ನಿಧಿರ್ಯೋಗ್ಯತಾ ಯತಃ ।
ತಸ್ಮಿನ್ನೇವ ಸಮಸ್ತಸ್ಯೇತಿ ಇಷ್ಟೇ ವ್ಯುತ್ಪತ್ತಿರಿಷ್ಯತೇ ॥೪೭॥

ಪ್ರಾಣವಾಯು, ಜ್ಞಾನ, ಅಂತಃಕರಣ, ಇತರ ಇಂದ್ರಿಯಗಳು, ಶರೀರ, ಮಕ್ಕಳು, ಸಂಪತ್ತು ಇವೇ ಮೊದಲಾದವುಗಳು ಯಾವ ಶ್ರೀಹರಿಯ ಸಂಪರ್ಕದಿಂದ ಪ್ರೀತಿಯ ವಿಷಯಗಳಾಗುವುವೋ ಅಂಥಹ ಶ್ರೀಹರಿಗಿಂತ ಪ್ರಿಯನಾದವನು ಬೇರೆ ಯಾರು ಇರಲು ಸಾಧ್ಯ? ಇತ್ಯಾದಿ ವಾಕ್ಯಗಳಿಂದ ಶ್ರೀಹರಿಗೆ ಪರಮೇಷ್ಟತ್ವವು ಸಿದ್ಧವಾಗುವುದು. ಆ ಶ್ರೀಹರಿಯಲ್ಲಿಯೇ ವೇದಾಧಿಕಾರಿಗಳೆಲ್ಲರಿಗೂ ಜಿಜ್ಞಾಸಾ (ಆಕಾಂಕ್ಷಾ), ಸಾಮೀಪ್ಯ (ಸನ್ನಿಧಿ), ಯೋಗ್ಯತೆಗಳು ಇರುವ ಪ್ರಯುಕ್ತ ಅವನಲ್ಲಿಯೇ ಇಷ್ಟತ್ವವು ಉಂಟಾಗುವುದು.

ಅತ್ಯಪೂಪಾಂಸ್ತವ ಭ್ರಾತೇತ್ಯಾದಾವಾವಾಪತೋಽಪಿ ಚ ।
ಉದ್ಭಾವದ್ವರ್ತಮಾನತ್ವಾದಾಕಾಂಕ್ಷಾದಿಬಲಾದಪಿ ॥೪೮॥
ಬಾಲೋ ವ್ಯುತ್ಪತ್ತಿಮಪ್ಯೇತಿ ನಾನಯೇತ್ಯಾದಿವಾಕ್ಯತಃ ।
ಆನೀಯಮಾನದೃಷ್ಟ್ಯೈವ ವ್ಯುತ್ಪತ್ತೇಃ ಸಂಭವೇ ಸತಿ ॥೪೯॥
ಏಷ್ಯದಾನಯನಾಯಾಯಂ ಕುತ ಏವ ಪ್ರತೀಕ್ಷತೇ ।

'ನಿನ್ನ ಅಣ್ಣ ಅಪೂಪವನ್ನು ತಿನ್ನುತ್ತಿದ್ದಾನೆ' ಇತ್ಯಾದಿ ವಾಕ್ಯಗಳನ್ನು ಒಬ್ಬ ಬಾಲಕನಿಗೆ ಅವನ ಅಣ್ಣನನ್ನು ತೋರಿಸಿ ಹೇಳಿದಾಗ ಅಪೂಪ ಮತ್ತು ಅದನ್ನು ತಿನ್ನುತ್ತಿರುವ ಅಣ್ಣನನ್ನು ಪ್ರತ್ಯಕ್ಷ ಕಾಣುವುದರಿಂದ ಆ ಬಾಲಕನಿಗೆ ಅಪೂಪದಲ್ಲಿ ಇಷ್ಟತ್ವವೂ ಅದರ ಬಗ್ಗೆ ಜಿಜ್ಞಾಸೆಯೂ ಉಂಟಾಗುವುದು. 'ದೇವದತ್ತ ಗಾಮಾನಯ' ಮೊದಲಾದ ವಾಕ್ಯಗಳಿಂದ ಬಾಲಕನು ವ್ಯುತ್ಪತ್ತಿಯನ್ನು ಅಂದರೆ ವಾಚ್ಯವಾಚಕ ಸಂಬಂಧವನ್ನು ಹೊಂದುತ್ತಾನೆಂದು ಹೇಳಿದ್ದು ಯುಕ್ತವೇ ಆಗುವುದಿಲ್ಲ. ತರುವುದನ್ನು ನೋಡಿಯೇ ವ್ಯುತ್ಪತ್ತಿಯು ಕೂಡುತ್ತಿರಲು ಮುಂದೆ ಅವನು ತರುವುದನ್ನು ನಿರೀಕ್ಷಿಸುತ್ತಾನೆ ಏಕೆ?

ವ್ಯುತ್ಪನ್ನೋ ವರ್ತಮಾನೇ ತು ಕ್ರಿಯಾಶಬ್ದೇ ಭವಿಷ್ಯತಿ ॥೫೦॥
ಪುನರ್ದೃಷ್ಟ್ಯೈವ ಶಬ್ದಶ್ರುತ್ ಪಶ್ಚಾದ್ವ್ಯುತ್ಪತ್ತಿಮೇಷ್ಯತಿ ।

ವರ್ತಮಾನಾರ್ಥಕವಾದ ತರುತ್ತಾನೆ ಮೊದಲಾದ ಕ್ರಿಯಾಶಬ್ದಗಳಲ್ಲಿ ವ್ಯುತ್ಪನ್ನವುಳ್ಳವನು ಭವಿಷ್ಯದರ್ಥಕವಾದ ಕ್ರಿಯಾಶಬ್ದದಲ್ಲಿ 'ದೇವದತ್ತನೇ

ಗೊವನ್ನು ತಾ' ಎಂಬಿತ್ಯಾದಿ ಶಬ್ದಗಳನ್ನು ಕೇಳಿದವನು ಅನಂತರ ಆನಯನ ಕ್ರಿಯೆಯನ್ನು ನೋಡುವುದರಿಂದಲೇ ವ್ಯುತ್ಪತ್ತಿಯನ್ನು ಹೊಂದುತ್ತಾನೆ.

ವರ್ತಮಾನಮತೀತಂ ಚ ಭವಿಷ್ಯದಿತಿ ಚ ಕ್ರಮಾತ್ ॥೫೧॥

ಆಕಾಂಕ್ಷಾದಿಯುತಂ ಯಸ್ಮಾದ್ವಿಧೇರ್ವ್ಯುತ್ಪಾದನಂ ಕುತಃ ।

ಯಾವ ಕಾರಣದಿಂದ ವರ್ತಮಾನಾದಿಗಳ ಕ್ರಮದಿಂದ ಕಾಲತ್ರಯ ಸಂಬಂಧಿಯಾದ ವಸ್ತುವು ಆಕಾಂಕ್ಷಾ, ಸನ್ನಿಧಿ, ಯೋಗ್ಯತೆಗಳಿಂದೊಡಗೂಡಿ ಆಗುತ್ತದೋ, ಆದಕಾರಣ ಆಕಾಂಕ್ಷಾದಿಗಳು ಇಲ್ಲದಿರುವ ಕಾರ್ಯಕ್ಕೆ ವ್ಯುತ್ಪತ್ತಿಯು ಯಾವುದರಿಂದ ಆಗುತ್ತದೆ?

ದೃಷ್ಟ್ವಾ ಜ್ಞಾತಪದಾರ್ಥಸ್ಯ ಸ್ಯಾದಾಕಾಂಕ್ಷಾ ಭವಿಷ್ಯತಿ ॥೫೨॥

ವ್ಯುತ್ಪತ್ತಿಃ ಪ್ರಥಮಾ ತಸ್ಮಾದ್ವರ್ತಮಾನೇಗತೇ ತತಃ ।

ವರ್ತಮಾನಕಾರ್ಯದಲ್ಲಿ ಪ್ರತ್ಯಕ್ಷವು ಕೂಡುವುದರಿಂದ ಆಕಾಂಕ್ಷಾವು ಕೂಡುವುದು. ವರ್ತಮಾನಾರ್ಥವಾದ ಕ್ರಿಯಾಶಬ್ದಗಳಲ್ಲಿ ಪ್ರಥಮದಲ್ಲಿ ವ್ಯುತ್ಪತ್ತಿಯು. ಶಬ್ದಾರ್ಥವನ್ನು ತಿಳಿದವನಿಗೆ, ಆಮೇಲೆ ಭವಿಷ್ಯದರ್ಥದಲ್ಲಿಯೂ ಅತೀತಾರ್ಥದಲ್ಲಿಯೂ ಆಕಾಂಕ್ಷೆಯು ಸಂಭವಿಸುವುದು.

ಇಷ್ಟಮಾಕಾಂಕ್ಷತೇ ಸರ್ವೋ ನ ಪ್ರವೃತ್ತಿಮಪೇಕ್ಷತೇ ॥೫೩॥

ಅಪರೋಕ್ಷಂ ಪರೋಕ್ಷಂ ವಾ ಜ್ಞಾನಮಿಷ್ಟಸ್ಯ ಸಾಧನಮ್ ।

ಕ್ವಾಪಿ ಚೇಷ್ಟಾ ತದರ್ಥಾ ಸ್ಯಾದತ್ತಿರ್ಹಿ ರಸವಿತ್ತಯೇ ॥೫೪॥

ವಾಕ್ಯಾರ್ಥಜ್ಞಾನಮಾತ್ರೇಣ ಕ್ವಚಿದಿಷ್ಟಂ ಭವೇದಪಿ ।

ಎಲ್ಲರೂ ಇಷ್ಟವಾದುದನ್ನೇ ಅಪೇಕ್ಷಿಸುತ್ತಾರೆ. ಪ್ರವೃತ್ತಿಯನ್ನು ಅಪೇಕ್ಷಿಸುವುದಿಲ್ಲ. ಅಪರೋಕ್ಷವಾಗಲೀ ಪರೋಕ್ಷವಾಗಲೀ ಜ್ಞಾನವೇ ಇಷ್ಟಕ್ಕೆ ಸಾಧನ. ಕೆಲವುಕಡೆ ಕ್ರಿಯೆಯು ಇಷ್ಟಾರ್ಥಜ್ಞಾನಕ್ಕಾಗಿಯೇ ಆಗುವುದು. ಭಕ್ಷಣಾದಿ ಕ್ರಿಯೆಯು ರಸಾನುಭವಕ್ಕಾಗಿ ಆಗುವುದು. ಕೆಲವು ಸಂದರ್ಭಗಳಲ್ಲಿ ವಾಕ್ಯಾರ್ಥ ಜ್ಞಾನದಿಂದಲೇ ಇಷ್ಟವೂ ಆಗುವುದು.

ನ ಚ ಸ್ರುಕ್ ಸ್ರುವವಹ್ಯಾದಾವತಾತ್ಪರ್ಯಂ ಶ್ರುತೇರ್ಭವೇತ್ ॥೫೫॥

ಯತ್ಕಿಂಚಿತ್ಕರಣಸ್ಯಾಪಿ ಯಜ್ಞತೈವಾನ್ಯಥಾ ಭವೇತ್ ।

ತಸ್ಮಾದುಪಾಸನಾರ್ಥಂ ಚ ಸ್ವಾರ್ಥೇ ತಾತ್ಪರ್ಯವದ್ಭವೇತ್ ॥೫೬॥

ಸ್ರುಕ್ ಸ್ರುವ ಅಗ್ನ್ಯಾದಿಗಳಲ್ಲಿ ಶ್ರುತಿಗೆ ಅತಾತ್ಪರ್ಯವು ಆಗಲಾರದು. ಯೂಪ ಆಹವನೀಯಾದಿಗಳಿಗೆ ಯೂಪಾದಿಗಳ ಸ್ವರೂಪದಲ್ಲಿ ತಾತ್ಪರ್ಯವಿಲ್ಲದಿದ್ದರೆ ಅವುಗಳಿಲ್ಲದ ಯತ್ಕಿಂಚಿತ್ಕರ್ಮಕ್ಕೂ ಯಾಗ ಸ್ವರೂಪತ್ವವು ಬರಬೇಕಾಗುವುದು. ಅದೇ ನ್ಯಾಯದಿಂದ 'ಸತ್ಯಂ ಜ್ಞಾನಂ' ಇತ್ಯಾದಿ ವೇದವಾಕ್ಯವು ಉಪಾಸನಾರ್ಥವಾಗಿ ಬ್ರಹ್ಮನಲ್ಲಿ ತಾತ್ಪರ್ಯವನ್ನು ಹೊಂದುವುದು.

ಇತಿಶಬ್ದೋನ್ನಯೇಽಗ್ನಾವಿತ್ಯಪ್ಯುನ್ನೀತೇ ಸ್ಮೃತಿರ್ಭವೇತ್ ।
ಇತಿಶಬ್ದವ್ಯಪೇತಾನಿ ಹ್ಯಪಿ ಸಂತಿ ವಚಾಂಸ್ಯಲಮ್ ॥೫೭॥
ಆತ್ಮಾನಮೇವೇತ್ಯಾದೀನಿ ಯೋಗೇಽಗ್ನಾವಪಿ ತತ್ಸಮಮ್ ।

'ಆತ್ಮೇತ್ಯೇವೋಪಾಸೀತ' ಇತ್ಯಾದಿಗಳಲ್ಲಿ ವೈಪರೀತ್ಯವಾಚಕವಾದ ಇತಿ ಶಬ್ದಕ್ಕೆ ಆತ್ಮಾದಿ ಶಬ್ದಗಳೊಂದಿಗೆ ಸಂಬಂಧವನ್ನು ಹೊಂದಿಸಿ ವ್ಯಾಖ್ಯಾನ ಮಾಡಲು ಬರುವಾಗ, 'ಅಗ್ನೌ ಜುಹೋತಿ' ಇತ್ಯಾದಿಗಳಲ್ಲಿಯೂ ಇತಿ ಶಬ್ದವನ್ನು ತಂದು ಕೂಡಿಸಲು ಸ್ಮೃತಿಮಾತ್ರದಿಂದ ಸಂಬಂಧವು ಆಗುವುದು. 'ಆತ್ಮಾನಮೇವೋಪಾಸೀತ' ಆತ್ಮನನ್ನೇ ಉಪಾಸನೆ ಮಾಡತಕ್ಕದ್ದು ಇತ್ಯಾದಿ ಇತಿಶಬ್ದರಹಿತವಾದ ಅನೇಕ ವಾಕ್ಯಗಳು ಇವೆಯಷ್ಟೆ. ಅಂಥಹ ಕಡೆಗಳಲ್ಲಿ ಇತಿ ಶಬ್ದವನ್ನು ಅಧ್ಯಾಹಾರ ಮಾಡಿ ಅರ್ಥಮಾಡುವುದಾದರೆ, 'ಅಗ್ನೌ ಜುಹೋತಿ' ಎನ್ನುವುಲ್ಲಿಯೂ ಇತಿ ಶಬ್ದಯೋಗವು ಸಮಾನವೇ ಆಗುವುದು.

ಏಕವಾಕ್ಯತ್ವಯೋಗೇ ತು ವೇದಸ್ಯಾಪಿ ಹ್ಯಶೇಷತಃ ॥೫೮॥
ವಾಕ್ಯಭೇದೋ ನ ಯುಕ್ತಸ್ಸ್ಯಾದ್ಯೋಗಶ್ಚ ಸ್ಯಾನ್ಮಹಾಫಲೇ ।

ಎಲ್ಲ ವೇದಗಳಿಗೂ ಏಕವಾಕ್ಯತ್ವವು ಕೂಡಿದರೆ ವಾಕ್ಯಭೇದವು ಯುಕ್ತವಾಗಲಾರದು. ಶ್ರೇಷ್ಠ ಫಲವಾದ ಮುಕ್ತಿಗೆ ಸಾಧನನಾದ ವಿಷ್ಣುವಿನಲ್ಲಿಯೇ ಎಲ್ಲ ವೇದಗಳಿಗೂ ಏಕವಾಕ್ಯತ್ವದ ಸಂಬಂಧವು ಕೂಡಿದರೆ, ಅಲ್ಪ ಫಲವಾದ ಕರ್ಮದಲ್ಲಿ ಸಂಬಂಧವು ಕೂಡುವುದಿಲ್ಲ.

ಇತಿ ಬ್ರೂಯಾದಿತಿ ವಚೋ ಗತಮಗ್ನೌ ಸಮೀಪಗಮ್ ॥೫೯॥
ಕಲ್ಪನಾಗೌರವಂ ಚೇತ್ ಸ್ಯಾತ್ ಪೃಥಕ್ತಾತ್ಪರ್ಯಕಲ್ಪನೇ ।
ಕಲ್ಪನಾಗೌರವಾದೇವ ಪದಾರ್ಥಾ ನ ಸ್ಯುರೇವ ಹಿ ॥೬೦॥

'ನ ಗಿರಾ ಗಿರೇತಿ ಬ್ರೂಯಾತ್' ಎನ್ನುವ ವಾಕ್ಯವು ಅಗ್ನೌ ಎನ್ನುವುದರ ಸಮೀಪದಲ್ಲಿರುವುದಾಗಿ ತಿಳಿಯುವುದು. ಯೂಪಾಹವನೀಯಾದಿ ವಾಕ್ಯಗಳಿಗೆ ಪಶುಬಂಧಾದಿ ಕಾರ್ಯದಲ್ಲಿ ತಾತ್ಪರ್ಯವನ್ನು ಒಪ್ಪಬೇಕು. ಯೂಪಾದಿ ಸ್ವರೂಪದಲ್ಲಿಯೂ ಪ್ರತ್ಯೇಕವಾಗಿ ತಾತ್ಪರ್ಯವನ್ನು ಕಲ್ಪಿಸಿದರೆ ಕಲ್ಪನಾಗೌರವ ಬರುವುದು. ಕಲ್ಪನಾಗೌರವದಿಂದಾಗಿಯೇ ಪದಾರ್ಥಗಳ ಸಿದ್ಧಿಯೇ ಆಗದು.

ಪ್ರಮಾಣಾವಗತತ್ವಂ ಚೇತ್ತಾತ್ಪರ್ಯಾಣಾಂ ತಥೈವ ಹಿ ।
ತಸ್ಮಾತ್ ಪದಾರ್ಥೇ ವಾಕ್ಯಾರ್ಥೇ ತಾತ್ಪರ್ಯಮುಭಯತ್ರ ಚ ॥೬೧॥

ತಾತ್ಪರ್ಯಗಳಿಗೆ ಪ್ರಮಾಣಗಳಿಂದ ತಿಳಿಯಲ್ಪಡುವಿಕೆಯು ಇದ್ದರೆ, ಅದರಂತೆಯೇ ಶ್ರುತಿವಾಕ್ಯಗಳಿಗೆ ಬ್ರಹ್ಮನಲ್ಲಿ ತಾತ್ಪರ್ಯ ಮತ್ತು ಪ್ರಮಾಣಗಳಿಂದ ತಿಳಿಯಲ್ಪಡುವಿಕೆ ಇರುವುದರಿಂದ ಕಲ್ಪನಾಗೌರವ ಬರುವುದು. ಆದಕಾರಣ ಸತ್ಯಜ್ಞಾನಾದಿ ವಾಕ್ಯಗಳಿಗೆ ಪದಾರ್ಥನಾದ ಬ್ರಹ್ಮನಲ್ಲಿಯೂ, ವಾಕ್ಯಾರ್ಥವಾದ ಉಪಾಸನಾದಿ ಕಾರ್ಯದಲ್ಲಿಯೂ, ಹೀಗೆ ಎರಡು ಕಡೆಗಳಲ್ಲಿಯೂ ತಾತ್ಪರ್ಯವನ್ನು ಒಪ್ಪಬೇಕು.

ಪೃಥಗೇವ ಚ ವಾಕ್ಯತ್ವಂ ಪೃಥಗನ್ವಯತೋ ಭವೇತ್ ।
ಅವಾಂತರತ್ವಾದ್ವಾಕ್ಯಾನಾಂ ವಾಕ್ಯಭೇದೋ ನ ದೂಷಣಮ್ ॥೬೨॥
ಅಂಗೀಕೃತತ್ವಾದಪಿ ತೈಃ ಪದಾನಾಂ ತು ಪೃಥಕ್ ಪೃಥಕ್ ।
ಕ್ರಿಯಾಪದೇನಾನ್ವಯಸ್ಯ ವಾಕ್ಯಭೇದೋ ಹಿ ದೂಷಣಮ್ ॥೬೩॥

ಸತ್ಯಸ್ವರೂಪನು ಬ್ರಹ್ಮನು, ಜ್ಞಾನಸ್ವರೂಪನು ಬ್ರಹ್ಮನು, ಹೀಗೆ ಪ್ರತ್ಯೇಕ ಅನ್ವಯವಿದ್ದುದರಿಂದ ಪ್ರತ್ಯೇಕ ವಾಕ್ಯತ್ವವೇ ಆಗುವುದು. ವಾಕ್ಯಗಳಿಗೆ ಅವಾಂತರತ್ವವು ಇರುವುದರಿಂದ ವಾಕ್ಯಭೇದವು ದೂಷಣವಲ್ಲ. 'ಅರುಣಯಾ ಪಿಂಗಾಕ್ಷ್ಯಾ ಏಕಹಾಯನ್ಯಾ ಗವಾ ಸೋಮಂ ಕ್ರೀಣಾತಿ ಚ' ಇತ್ಯಾದಿ ಕಡೆಗಳಲ್ಲಿ, ಅರುಣಯಾ ಇತ್ಯಾದಿ ಪದಗಳಿಗಾದರೂ ಬೇರೆಬೇರೆಯಾಗಿ ಕ್ರೀಣಾತಿ ಇತ್ಯಾದಿ ಕ್ರಿಯಾಪದಗಳೊಂದಿಗೆ ಅನ್ವಯವು ಮೀಮಾಂಸಕರಿಂದಲೂ ಅಂಗೀಕೃತವಾದ್ದರಿಂದ ವಾಕ್ಯಭೇದವು ಅವರಿಗೂ ದೂಷಣವಾಗಬೇಕಾಗುವುದು.

ಪ್ರತ್ಯಕ್ಷಾದಿವಿರೋಧೇ ತು ಗೌಣಾರ್ಥಸ್ಯಾಪಿ ಸಂಭವಾತ್ ।
ಅತಾತ್ಪರ್ಯಂ ಪದಾರ್ಥೇಽಪಿ ನ ಕಲ್ಪ್ಯಮವಿರೋಧತಃ ॥೬೪॥

ಪ್ರತ್ಯಕ್ಷಾದಿಗಳಿಂದ ವಿರೋಧವಿರುವುದಾದರೆ ಗೌಣಾರ್ಥವೂ ಕೂಡುವುದು. ವಿರೋಧವಿಲ್ಲದಿರುವುದರಿಂದ ಪದಾರ್ಥವಾದ ವಿಷ್ಣುವಿನಲ್ಲಿಯೂ ತಾತ್ಪರ್ಯದ ಅಭಾವವನ್ನು ಕಲ್ಪಿಸಕೂಡದು.

ಅತೋ ಜ್ಞಾನಫಲಾನ್ಯೇವ ಕರ್ಮಾಣಿ ಜ್ಞಾನಮೇವ ಹಿ ।
ಮುಖ್ಯಪ್ರಸಾದದಂ ವಿಷ್ಣೋರ್ಜಿಜ್ಞಾಸಾಯಾಶ್ಚ ತದ್ಭವೇತ್ ॥೬೫॥
ಕರ್ತವ್ಯಾ ತೇನ ಜಿಜ್ಞಾಸಾ ಶ್ರುತಿಪ್ರಾಮಾಣ್ಯಯೋಗತಃ ।

ಆದಕಾರಣ ಯಾಗಾದಿ ಕರ್ಮಗಳು ಭಗವಂತನ ಜ್ಞಾನಕ್ಕಾಗಿಯೇ ಇರುವುವು. ಜ್ಞಾನವೇ ವಿಷ್ಣುವಿನ ಮುಖ್ಯಪ್ರಸಾದಕ್ಕೆ ಕಾರಣವಾಗುವುದು. ಆ ಜ್ಞಾನವಾದರೋ ವಿಷ್ಣುವಿನ ಜಿಜ್ಞಾಸೆಯಿಂದಲೇ ಆಗುವುದು. ಶ್ರುತಿಪ್ರಾಮಾಣ್ಯವು ಕೂಡುವುದರಿಂದ ಜಿಜ್ಞಾಸೆಯು ಮಾಡತಕ್ಕದ್ದು.

ವಿವರಣೆ:

ಮೀಮಾಂಸಕರ ಕಾರ್ಯತಾ ವಾದ:

ಮೀಮಾಂಸಕರಲ್ಲಿ ಕೆಲವರು ಹೀಗೆ ಹೇಳುತ್ತಾರೆ. ವಿಧಿ ಹಾಗೂ ಮಂತ್ರರೂಪವಾದ ಎಲ್ಲ ವೇದವಾಕ್ಯಗಳೂ ಕಾರ್ಯವನ್ನು ಬೋಧಿಸುತ್ತವೆಯೇ ಹೊರತು ಸಿದ್ಧಾರ್ಥವನ್ನಲ್ಲ. ಕಾರ್ಯವಲ್ಲದ ಸಿದ್ಧವಸ್ತುವನ್ನು ಬೋಧಿಸುವುದರಿಂದ ಯಾವ ಪ್ರವೃತ್ತಿಯೂ ಉಂಟಾಗುವುದಿಲ್ಲ. ಲೋಕದ ವ್ಯವಹಾರದಲ್ಲಿ ಕಾರ್ಯದ ಉದ್ದೇಶವಿಟ್ಟುಕೊಂಡೇ ವಾಕ್ಯವನ್ನು ಪ್ರಯೋಗಿಸುವುದನ್ನು ಕಂಡಿದ್ದೇವೆ. ವಾಚ್ಯ-ವಾಚಕ ಭಾವರೂಪವಾದ ಸಂಬಂಧ ಜ್ಞಾನಪೂರ್ವಕವಾದ ವ್ಯುತ್ಪತ್ತಿಯನ್ನು ಅಪೇಕ್ಷಿಸಿಕೊಂಡೇ ಶಬ್ದವು ಅರ್ಥಜ್ಞಾನವನ್ನು ಹುಟ್ಟಿಸುತ್ತದೆ. ಬೇರೆ ರೀತಿಯಾಗಿ ಅಲ್ಲ. ವ್ಯುತ್ಪತ್ತಿಯಾದರೋ ಹಿರಿಯರ ವ್ಯವಹಾರವನ್ನು ನೋಡಿಯೇ ಹುಟ್ಟುತ್ತದೆ. ಹಿರಿಯರ ಆದೇಶದಂತೆ ಒಬ್ಬ ಕಿರಿಯನು ಕಾರ್ಯವನ್ನು ಮಾಡುವಾಗ ಕಿರಿಯನ ಕಾರ್ಯವನ್ನು ನೋಡಿದ ಬಾಲಕನು ಹಿರಿಯರು ಪ್ರಯೋಗಿಸಿದ ವಾಕ್ಯದ ಅರ್ಥವನ್ನು ತಿಳಿಯುತ್ತಾನೆ. ಉದಾಹರಣೆಗೆ, 'ಚೈತ್ರನೇ ನೀರು ತೆಗೆದುಕೊಂಡು ಬಾ', 'ಹಸುವನ್ನು ಈ ಕಂಭಕ್ಕೆ ಕಟ್ಟು' ಮೊದಲಾಗಿ ಹಿರಿಯನು ಕಿರಿಯನಿಗೆ ಹೇಳಿದಾಗ ಅದರಂತೆ ಅವನು ಕಾರ್ಯವನ್ನು

ಮಾಡಿದಾಗ, ಅದನ್ನು ನೋಡಿದ ಮತ್ತೊಬ್ಬ ಬಾಲಕನು, ನೀರು ಮತ್ತು ಹಸು ಶಬ್ದಗಳ ಅರ್ಥ, ತರುವುದು ಮತ್ತು ಕಟ್ಟುವುದು ಮೊದಲಾದ ಕಾರ್ಯಗಳ ಅರ್ಥವನ್ನು ತಿಳಿಯುತ್ತಾನೆ. ಕಾರ್ಯದಲ್ಲಿ ಪ್ರವೃತ್ತಿ ಹುಟ್ಟಿಸದ ವಾಕ್ಯದ ಪ್ರಯೋಗದಿಂದ ವಾಕ್ಯಾರ್ಥವು ಆಗುವುದಿಲ್ಲ.

ಪ್ರಯತ್ನದಿಂದ ಸಾಧಿಸಲಿಕ್ಕೆ ಯೋಗ್ಯವಾದುದೇ ಕಾರ್ಯ. ಕಾರ್ಯವೇ ಪ್ರವೃತ್ತಿ ನಿವೃತ್ತಿಗಳಿಗೆ ಉಪಯುಕ್ತವಾದ ಅರ್ಥ. ಪ್ರವೃತ್ತಿ-ನಿವೃತ್ತಿಗಳಿಗೆ ಉಪಯುಕ್ತವಾದ ಅರ್ಥಜ್ಞಾನವನ್ನು ಹುಟ್ಟಿಸುವುದರಿಂದಲೇ ಪ್ರಮಾಣವಾಕ್ಯಗಳಿಗೆ ಪ್ರಾಮಾಣ್ಯವು. ಕೇವಲ ಸಿದ್ಧಾರ್ಥವನ್ನು ಬೋಧಿಸುವ ಶಬ್ದ ಪ್ರಯೋಗದಿಂದ ಪ್ರವೃತ್ತಿ ನಿವೃತ್ತಿಗಳು ಸಾಧ್ಯವಿಲ್ಲ. ಅಂಥಹ ಪ್ರಯೋಗವು ಉಪಯುಕ್ತವಾಗದ ಪ್ರಯುಕ್ತ ಪ್ರಮಾಣವೂ ಆಗುವುದಿಲ್ಲ. ಕಾರ್ಯವನ್ನು ಬೋಧಿಸುವಲ್ಲಿಯೇ ಸರ್ವ ವೇದಗಳಿಗೂ ತಾತ್ಪರ್ಯವಿರುವ ಪ್ರಯುಕ್ತ ಸಿದ್ಧರೂಪನಾದ ಬ್ರಹ್ಮನಲ್ಲಿ ವೇದಗಳಿಗೆ ಪ್ರಾಮಾಣ್ಯವೇ ಕೂಡುವುದಿಲ್ಲ. ಆದ್ದರಿಂದ ಬ್ರಹ್ಮನ ಜಿಜ್ಞಾಸೆಯೂ ಕೂಡುವುದಿಲ್ಲ.

ಮೀಮಾಂಸಕರ ವಾದದ ನಿರಾಕರಣೆ:

ವೇದಗಳು ಕಾರ್ಯವನ್ನಷ್ಟೇ ಬೋಧಿಸುತ್ತವೆ, ಸಿದ್ಧ ವಸ್ತುವನ್ನು ಬೋಧಿಸುವುದಿಲ್ಲ ಎಂಬ ಮೀಮಾಂಸಕರ ವಾದವನ್ನು ಖಂಡಿಸುತ್ತ ಶ್ರೀಮದಾಚಾರ್ಯರು 'ಕಾರ್ಯತಾ ಚ' ಎಂಬುದಾಗಿ ಪ್ರಾರಂಭಿಸಿ 'ಶ್ರುತಿಪ್ರಾಮಾಣ್ಯಯೋಗತಃ' ಎಂಬುವವರೆಗೆ ಕಾರ್ಯದ ಬಗ್ಗೆ ಸರಿಯಾದ ತಿಳುವಳಿಕೆ ಮಾಡಿಕೊಟ್ಟು, ಬ್ರಹ್ಮನಲ್ಲಿ ವೇದಗಳಿಗೆ ಪ್ರಾಮಾಣ್ಯವಿರುವುದರಿಂದ ಬ್ರಹ್ಮಜಿಜ್ಞಾಸೆ ಮಾಡತಕ್ಕದ್ದು ಎಂಬುದನ್ನು ಸಮರ್ಥಿಸುತ್ತಾರೆ. ಮಾಡಲಿಕ್ಕೆ ಶಕ್ಯವಾದುದೆಲ್ಲವೂ ಕಾರ್ಯ ಎಂಬ ವ್ಯಾಖ್ಯೆಯೇ ಸರಿಯಲ್ಲ. ನಮ್ಮ ಕ್ರಿಯೆಗೆ ಸಾಧ್ಯವಾದುದೆಲ್ಲ ಕಾರ್ಯ ಎನಿಸುವುದಿಲ್ಲ. ಉದಾಹರಣೆಗೆ ಮದ್ಯಪಾನವನ್ನು ಅನೇಕರು ಮಾಡುತ್ತಾರೆ. ಆದರೆ ಅದನ್ನು ಕಾರ್ಯ ಎಂದು ಯಾರೂ ಹೇಳಲಾರರು. ಮದ್ಯಪಾನವು ಅಕಾರ್ಯವೆಂದೇ ಹೇಳಲಾಗುತ್ತದೆ. ಇಷ್ಟಸಾಧನವಾದುದೇ ಕಾರ್ಯ. ಮದ್ಯಪಾನವು ಅನಿಷ್ಟಸಾಧನವಾದ್ದರಿಂದ ಅದು ಅಕಾರ್ಯ. ಈ ದೃಷ್ಟಿಯಲ್ಲಿ ಪರಮೇಷ್ಟನೂ, ಮೋಕ್ಷಾದಿ ಇಷ್ಟಗಳನ್ನು

ನೀಡುವುದರಿಂದ ಇಷ್ಟಸಾಧಕನೂ ಆಗಿರುವ ಭಗವಂತನು ಕ್ರಿಯೆಗೆ ಅಗೋಚರನಾಗಿದ್ದರೂ ಕಾರ್ಯವೇ ಆಗಿರುವನು. ಎಲ್ಲ ವಿಧಿವಾಕ್ಯಗಳೂ ಇಷ್ಟಸಾಧನವಾದ ಕಾರ್ಯಗಳನ್ನೇ ಬೋಧಿಸುತ್ತವೆ. ಅದರಂತೆ ವೇದವು ಇಷ್ಟಸಾಧನವಾದ ಭಗವಂತನನ್ನು ಪ್ರತಿಪಾದಿಸತ್ತದೆ ಎಂದು ಒಪ್ಪಲು ಯಾವ ಅಡ್ಡಿಯೂ ಇರುವುದಿಲ್ಲ. ಇಷ್ಟಸಾಧನವಾಗಿದ್ದರೂ ಕೃತಿಸಾಧ್ಯವಾಗದಿದ್ದರೆ ಕಾರ್ಯವೆನಿಸುವುದಿಲ್ಲ. ಆದ್ದರಿಂದ ಕಾರ್ಯವನ್ನು ಬೋಧಿಸುವ ಎಲ್ಲ ವಿಧಿವಾಕ್ಯಗಳೂ ಇಷ್ಟಸಾಧನವನ್ನು ಮಾತ್ರ ಬೋಧಿಸುತ್ತವೆ. ಆದರೆ ಇದನ್ನು ಕೃತಿಗಿಳಿಸಲು ಸಾಧ್ಯವೇ ಎಂದು ವಿಚಾರ ಮಾಡಿಯೇ ಜನರು ಪ್ರವೃತ್ತಿ ಮಾಡುತ್ತಾರೆ. ಇಷ್ಟಸಾಧನತ್ವದ ಜೊತೆಗೆ ಕಾರ್ಯಸಾಧ್ಯತ್ವ ಮತ್ತು ಪ್ರಯೋಜನಗಳನ್ನು ಹೊಂದಿದ್ದರೆ ಮಾತ್ರ ಅಂಥಹ ವಾಕ್ಯವು ಪ್ರವೃತ್ತಿಯನ್ನು ಹುಟ್ಟಿಸುವುದರಿಂದ ಅದು ಕಾರ್ಯವನ್ನು ಬೋಧಿಸುತ್ತದೆ ಎಂದು ತಿಳಿಯಬೇಕು. ಭಗವಂತನು ಪರಮೇಷ್ಟನೂ, ಪರಮೇಷ್ಟಸಾಧನನೂ ಆಗಿದ್ದಾನೆ. ಅವನ ಪ್ರಸಾದದಿಂದ ಪರಮೇಷ್ಟವಾದ ಮೋಕ್ಷವು ಲಭಿಸುತ್ತದೆ. ವೇದವು ಪ್ರಧಾನವಾಗಿ ಪರಮಾತ್ಮನನ್ನೇ ಬೋಧಿಸಿದರೂ ಅವನ ಸಾಕ್ಷಾತ್ಕಾರಕ್ಕಾಗಿ ಅಪ್ರಧಾನವಾಗಿ ಉಪಾಸನೆಯ ವಿಧಿಗಳನ್ನೂ ತಿಳಿಸುತ್ತವೆ.

ಕೇವಲ ಸಿದ್ಧವಸ್ತುವನ್ನು ಬೋಧಿಸುವುದರಿಂದ ಯಾವ ಪ್ರವತ್ತಿಯೂ ನಿವೃತ್ತಿಯೂ ಉಂಟಾಗದಿರುವುದರಿಂದ ಅದನ್ನು ತಿಳಿಸಬೇಕಿಲ್ಲ ಎಂದು ಹೇಳುವುದು ಸರಿಯಲ್ಲ. ವಾಕ್ಯದ ಪ್ರಯೋಜನವು ಪ್ರವೃತ್ತಿ ನಿವೃತ್ತಿಗಳೇ ಅಲ್ಲ. ನಮಗೆ ಇಷ್ಟವಾದ ವಸ್ತುವನ್ನು ಬೋಧಿಸುವುದರಿಂದಲೂ ವಾಕ್ಯವು ಸಫಲವಾಗುವುದು. ವಾಕ್ಯವು ಕಾರ್ಯವನ್ನು ಬೋಧಿಸುವುದರ ಜೊತೆಗೆ ಅದಕ್ಕೆ ಸಂಬಂಧಿಸಿದ ಸಿದ್ಧವಸ್ತುಗಳನ್ನೂ ಬೋಧಿಸುತ್ತದೆ. ಅಂತೆಯೇ ವೇದವು ಯಜ್ಞಾದಿ ಕ್ರಿಯೆಗಳ ಮೂಲಕ ಬ್ರಹ್ಮನ ಉಪಾಸನೆ, ಶಾಸ್ತ್ರಾಧ್ಯಯನ, ವಿಮರ್ಶೆ ಇತ್ಯಾದಿ ಕ್ರಿಯೆಯನ್ನು ವಿಧಿಸುವಾಗ ಅದಕ್ಕೆ ಸಂಬಂಧಿಸಿದ ಬ್ರಹ್ಮನನ್ನೂ ತಿಳಿಸಲೇಬೇಕಾಗುತ್ತದೆ. ಹೀಗೆ ಪ್ರಧಾನವಾಗಿ ಅಥವಾ ಕ್ರಿಯೆಗೆ ಸಂಬಂಧಿಸಿದಂತಾಗಲೀ ವೇದವು ಪರಮಾತ್ಮನನ್ನು ಬೋಧಿಸುವುದು ಎಂದು ಒಪ್ಪಲೇಬೇಕಾದ್ದರಿಂದ, ವೇದಗಳ ಮೂಲಕವೇ ಬ್ರಹ್ಮಜಿಜ್ಞಾಸೆ ಮಾಡಬೇಕು.

ವೇದಪ್ರಾಮಾಣ್ಯ ಸಮರ್ಥನೆ

ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಸ್ವತ ಏವಾಗಮಸ್ಯ ಹಿ ॥೬೬॥
ಅನವಸ್ಥಾನ್ಯತಾ ಹಿ ಸ್ಯಾದಪ್ರಾಮಾಣ್ಯಂ ತಥಾನ್ಯತಃ ।
ಮಿಥ್ಯಾಜ್ಞಪ್ತಿಪ್ರಲಂಭಾದೇಸ್ತೇನ ವೇದವಿರೋಧಿ ಯತ್ ॥೬೭॥
ನ ಮಾನಮಪಿ ವೇದಾನಾಮಂಗೀಕಾರ್ಯಾ ಹಿ ನಿತ್ಯತಾ ।

ಆಗಮಕ್ಕೆ ಪ್ರಾಮಾಣ್ಯವು ಪ್ರತ್ಯಕ್ಷದಂತೆಯೇ ಬೇರೆ ಯಾವ ಬೆಂಬಲವನ್ನು ಅಪೇಕ್ಷಿಸದೇ (ಸ್ವತ ಏವ) ಸಿದ್ಧಿಸುವುದು. ಪ್ರಾಮಾಣ್ಯವು ಸ್ವಾಭಾವಿಕ ಸಂಬಂಧದಿಂದಲೇ ಆಗುವುದು. ಪ್ರಾಮಾಣ್ಯಕ್ಕೆ ಸ್ವತಸ್ಟ್ವವನ್ನು ಅಂಗೀಕರಿಸದಿದ್ದರೆ ಅನವಸ್ಥೆಯು ಸಂಭವಿಸುವುದು. ಆದರೆ ಅಪ್ರಾಮಾಣ್ಯವನ್ನು ಸಾಧಿಸಲು ಬೇರೆ ಸಾಧನಗಳ ಸಹಾಯ ಬೇಕಾಗುವುದು. ಅಂದರೆ ದೋಷಾದಿರೂಪವಾದ ಅಪವಾದದಿಂದ ಅಪ್ರಾಮಾಣ್ಯವು ಸಂಭವಿಸುವುದು. ಮಿಥ್ಯಾಜ್ಞಾನ, ದೋಷಪೂರ್ಣವಾದ ಇಂದ್ರಿಯ ಇವೇ ಮೊದಲಾದ ಕಾರಣದಿಂದ ವೇದಕ್ಕೆ ವಿರೋಧಿಯಾದ ಜ್ಞಾನವು ಪ್ರಮಾಣವೆನಿಸುವುದಿಲ್ಲ. ವೇದಗಳಿಗೆ ನಿತ್ಯತ್ವ (ಅಪೌರುಷೇಯತ್ವ) ಹಾಗೂ ಪ್ರಾಮಾಣ್ಯವನ್ನು ಅಂಗೀಕರಿಸಲೇಬೇಕು. ವೇದಕ್ಕೆ ನಿತ್ಯತ್ವವು 'ವಾಚಾ ವಿರೂಪ ನಿತ್ಯಯಾ' ಇತ್ಯಾದಿ ಶ್ರುತಿ ಪ್ರಸಿದ್ಧವಾಗಿದೆ.

ವಿವರಣೆ:

ಶಬ್ದಗಳಿಗೆ ಅಪ್ರಾಮಾಣ್ಯವನ್ನು ಸಮರ್ಥಿಸಲು ಬೌದ್ಧರು ಕೆಳಕಂಡ ಪ್ರಕಾರದಲ್ಲಿ ತಮ್ಮ ವಾದವನ್ನು ಮಂಡಿಸುತ್ತಾರೆ.

ವ್ಯುತ್ಪತ್ತಿಯಿಲ್ಲದವನಿಗೆ ಶಬ್ದವಿದ್ದರೂ ಯಥಾರ್ಥಜ್ಞಾನವು ಹುಟ್ಟದೇ ಇರುವುದರಿಂದ, ಯುಕ್ತವಾಧ ವಿಷಯವೇ ಇಲ್ಲದಿರುವುದರಿಂದ, ಶಬ್ದವು ವಿಜ್ಞಾನಾತ್ಮಕವಲ್ಲ ಹಾಗೂ ಬಹಿರಿಂದ್ರಿಯಕ್ಕೆ ಅಗೋಚರವಾದ್ದರಿಂದ ಪ್ರಮಾಣವಲ್ಲ. ಶಬ್ದವು ಆಕಾಶವನ್ನು ಆಶ್ರಯಿಸಿಕೊಂಡಿದೆಯೇ ಹೊರತು ಆತ್ಮನನ್ನಲ್ಲ. ಆದಕಾರಣ ಶಬ್ದವೂ ಆತ್ಮನನ್ನು ಆಶ್ರಯಿಸಿಲ್ಲದಿರುವ ಘಟದಂತೆಯೇ ಅಪ್ರಮಾಣವು. ಶಬ್ದ ಮತ್ತು ಅರ್ಥಗಳಿಗೆ ಸಂಬಂಧವೇ ಇರುವುದಿಲ್ಲ. ಶಬ್ದವು ಆಕಾಶದಲ್ಲಿರುವುದಾದರೆ ವಸ್ತುಗಳು ಬೇರೆಡೆ ಇರುತ್ತವೆ. ಅವುಗಳಿಗೆ ಸಂಪರ್ಕವೇ ಇಲ್ಲದಿದ್ದಾಗ ಶಬ್ದದಿಂದ ವಸ್ತುವಿನ ಜ್ಞಾನ

ಬರುವುದು ಸಾಧ್ಯವಿಲ್ಲವಾದುದರಿಂದ ಶಬ್ದವು ಪ್ರಮಾಣವಲ್ಲ. ಹೀಗೆ ಯಾವ ವಿಧದಿಂದ ನೋಡಿದರೂ ಶಬ್ದಕ್ಕೆ ಪ್ರಾಮಾಣ್ಯವೇ ಕೂಡದಿರುವುದರಿಂದ ಶಬ್ದವಿಶೇಷವಾದ ವೇದಕ್ಕೆ ಪ್ರಾಮಾಣ್ಯವು ಹೇಗೆ ಕೂಡುವುದು? ಅಂತೆಯೇ ವೇದಕ್ಕೆ ವಿಷಯನಾದ ಬ್ರಹ್ಮನಲ್ಲಿಯೂ ಅದು ಕೂಡುವುದಿಲ್ಲ. ಆದ್ದರಿಂದ ಬ್ರಹ್ಮವಿಚಾರವನ್ನು ಮಾಡಬೇಕಿಲ್ಲ ಎಂದು ಬೌದ್ಧರ ವಾದ.

ಶಬ್ದಕ್ಕೆ ಅಪ್ರಾಮಾಣ್ಯವನ್ನು ಹೇಳುವ ಬೌದ್ಧರ ಈರೀತಿಯ ವಾದವನ್ನು ಖಂಡಿಸುತ್ತ ಶ್ರೀಮದಾಚಾರ್ಯರು ಸೂತ್ರದ 'ಅತಃ' ಎಂಬ ಪದಕ್ಕೆ 'ಪ್ರತ್ಯಕ್ಷವಚ್ಚ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುವುದರ ಮೂಲಕ ಶಬ್ದಗಳಿಗೆ ಪ್ರಾಮಾಣ್ಯವನ್ನು ಸಮರ್ಥಿಸುತ್ತಾರೆ. ಪ್ರತ್ಯಕ್ಷ ಮತ್ತು ಯುಕ್ತಿಗಳಂತೆ ವಾಕ್ಯವೂ ಪ್ರಮಾಣವೇ. ವಾಕ್ಯದಿಂದ ಜ್ಞಾನವುಂಟಾಗುತ್ತದೆ ಎಂಬುದು ನಮ್ಮ ಅನುಭವಕ್ಕೆ ಸಿದ್ಧವಾದ ವಿಷಯ. ಯಾವುದೇ ಶಬ್ದ ಅಥವಾ ವಾಕ್ಯವನ್ನು ಕೇಳುವುದರಿಂದ ಬರುವ ವಸ್ತುವಿನ ಅಥವಾ ವಿಷಯದ ಜ್ಞಾನವು ಸತ್ಯವಾಗಿರುವುದನ್ನು ಅನೇಕ ಸಂದರ್ಭಗಳಲ್ಲಿ ಕಂಡಿರುತ್ತೇವೆ. ಕೆಲವು ಸಂದರ್ಭಗಳಲ್ಲಿ ದೋಷದ ಪ್ರಯುಕ್ತ ಭ್ರಮೆ ಅಥವಾ ಸಂಶಯ ಬರಬಹುದು. ಪ್ರತ್ಯಕ್ಷ ಮತ್ತು ಯುಕ್ತಿಗಳಲ್ಲೂ ಕೆಲವು ಸಂದರ್ಭಗಳಲ್ಲಿ ಭ್ರಮೆಯುಂಟಾಗುವುದು. ಹಾಗಾದರೂ ಪ್ರತ್ಯಕ್ಷ ಮತ್ತು ಯುಕ್ತಿಗಳಿಗೆ ಪ್ರಾಮಾಣ್ಯವನ್ನು ಒಪ್ಪಬಹುದಾದರೆ ವಾಕ್ಯಕ್ಕೂ ಪ್ರಾಮಾಣ್ಯವನ್ನು ಒಪ್ಪಬಹುದಲ್ಲ? ಪದಗಳಿಗೂ ಅರ್ಥಕ್ಕೂ ಸಂಬಂಧವಿಲ್ಲವೆನ್ನುವುದೂ ಸರಿಯಲ್ಲ. ಮೇಲೆ ಕಾಣುವ ಹೊಗೆಯಿಂದ ಕೆಳಗೆ ಬೆಂಕಿಯನ್ನು ಊಹಿಸುತ್ತೇವೆ. ಮೇಲಿರುವ ಹೊಗೆಗೂ ಕೆಳಗಿರುವ ಬೆಂಕಿಗೂ ಸಂಯೋಗವಿರಲಿಕ್ಕಿಲ್ಲವಾದರೂ ಬೆಂಕಿಯ ಇರುವಿಕೆಯನ್ನು ಯುಕ್ತಿಯಿಂದ ನಿರ್ಧರಿಸುತ್ತೇವೆ. ಅಂತೆಯೇ ತಗ್ಗಿನಲ್ಲಿ ನೆರೆಬಂದಾಗ ಮೇಲೆ ಘಟ್ಟದಲ್ಲಿ ಮಳೆ ಬಂದಿದೆಯೆಂಬುದನ್ನೂ ಯುಕ್ತಿಯಿಂದ ತಿಳಿದುಕೊಳ್ಳುತ್ತೇವೆ. ಬೆಂಕಿಗೂ ಹೊಗೆಗೂ ಅವಿನಾಭಾವ ಸಂಬಂಧವಿರುವಂತೆಯೇ (ಅಂದರೆ ಬೆಂಕಿಯಿಲ್ಲದೇ ಹೊಗೆಯಿಲ್ಲ ಎಂಬ ಯುಕ್ತಿ), ಪದಕ್ಕೂ ಅದರ ಅರ್ಥಕ್ಕೂ ಬಿಟ್ಟಿರಲಾರದ ಸಂಬಂಧವಿದೆ. ಈ ಪ್ರಕಾರವಾಗಿ ಪದಗಳಲ್ಲಿರುವ ವಾಚ್ಯ-ವಾಚಕರೂಪವಾದ

ಸಂಬಂಧವನ್ನೇ 'ಶಕ್ತಿ' ಎಂದು ಕರೆಯುತ್ತಾರೆ.

ಬೆಂಕಿಗೆ ಸುಡುವ ಶಕ್ತಿ ಸಹಜವಾಗಿರುವುದರಿಂದ ಅದನ್ನು ಮುಟ್ಟಿದವರಿಗೆಲ್ಲ (ಬೆಂಕಿಯ ಸುಡುವ ಶಕ್ತಿಯನ್ನು ತಿಳಿದವನಿಗೂ ಮತ್ತು ತಿಳಿಯದವನಿಗೂ) ಸುಡುವಂತೆ, ಪದಗಳಿಗೆ ಅರ್ಥಗಳನ್ನು ತಿಳಿಸಿಕೊಡುವ ಸಹಜಶಕ್ತಿಯಿದ್ದರೆ ಆ ಪದಗಳಮ್ಮ ಕೇಳಿದ ಎಲ್ಲರಿಗೂ ಅದರ ಅರ್ಥದ ಜ್ಞಾನ ಯಾಕೆ ಆಗುವುದಿಲ್ಲ ? ಪದಗಳ ವ್ಯುತ್ಪತ್ತಿ ತಿಳಿದವರಿಗೆ ಮಾತ್ರ ಅರ್ಥಜ್ಞಾನ ಏಕೆ ಉಂಟಾಗಬೇಕು? ಎಂದು ಕೆಲವರ ಆಕ್ಷೇಪ. ಇದಕ್ಕೆ ಉತ್ತರ ಹೀಗಿದೆ. ಕಣ್ಣು, ಕಿವಿ ಮೊದಲಾದ ಇಂದ್ರಿಯಗಳಿದ್ದ ಮಾತ್ರಕ್ಕೆ ರೂಪ, ಶಬ್ದ ಮೊದಲಾದ ಐಂದ್ರಿಕ ವಿಷಯಗಳ ಜ್ಞಾನವುಂಟಾಗುವುದಿಲ್ಲ. ಇಂದ್ರಿಯಗಳಿಗೂ ವಿಷಯಗಳಿಗೂ ಸಂಪರ್ಕವಾದಾಗ ಮಾತ್ರ ಜ್ಞಾನವುಂಟಾಗುತ್ತದೆ. ಹೊಗೆಯಿಂದ ಬೆಂಕಿಯ ಜ್ಞಾನವಾಗಬೇಕಾದರೆ ನಾವು ಹೊಗೆಯನ್ನು ನೋಡಬೇಕು ಮತ್ತು ಹೊಗೆಗೂ ಬೆಂಕಿಗೂ ಇರುವ ಅವಿನಾಭಾವ (ಎಂದಿಗೂ ಬಿಡಲಾರದ)ಸಂಬಂಧವನ್ನು ತಿಳಿದಿರಬೇಕು. ಕೇವಲ ಹೊಗೆಯನ್ನು ನೋಡುವುದರಿಂದ ಬೆಂಕಿಯ ಜ್ಞಾನವಾಗುವುದಿಲ್ಲ. ಅಂತೆಯೇ ಪದಗಳಲ್ಲಿರುವ ಸಹಜವಾದ ಅರ್ಥಶಕ್ತಿಯನ್ನು ತಿಳಿದಾಗ ಮಾತ್ರ ಅವುಗಳಿಂದ ನಾವು ಅರ್ಥಜ್ಞಾನವನ್ನು ಪಡೆಯಬಹುದು. ಕಾರಣಗಳಿಗೆ ಕಾರ್ಯವನ್ನು ಉಂಟುಮಾಡುವ ಸಹಜ ಶಕ್ತಿಗಳಿವೆ. ವೇದಗಳಲ್ಲಿರುವ ಎಲ್ಲ ಪದಗಳಿಗೂ ಇಂಥಹ ಸಹಜ ಶಕ್ತಿಯಿದೆ. ಅದನ್ನು ಅರಿತವನಿಗೆ ಮಾತ್ರ ವೇದವು ತನ್ನ ಅರ್ಥವನ್ನು ತಿಳಿಸುತ್ತದೆ. ಆದಕಾರಣ ವೇದಗಳಿಗೆ ಪ್ರಾಮಾಣ್ಯವು ಪ್ರತ್ಯಕ್ಷದಂತೆ ಸಹಜವೇ ಆಗಿದೆ.

ಹಾಗಾದರೆ ವಾಕ್ಯವು ಪ್ರಮಾಣವೆಂದು ಒಪ್ಪುತ್ತೇವೆ. ಇದರಿಂದ ವೇದವನ್ನು ಪ್ರಮಾಣವೆಂದು ನಿರ್ಧರಿಸುವುದು ಹೇಗೆ ಎಂದು ಕೇಳಿದರೆ, ಯಾವುದೇ ಜ್ಞಾನವನ್ನು ಅದು ಪ್ರಮಾಣ ಎಂದು ನಿರ್ಧರಿಸಲು ಬೇರೆ ಕಾರಣ ಬೇಕಿಲ್ಲ. ಯಾವುದೇ ಬಾಧಕವು ಇಲ್ಲದಿದ್ದಾಗ ಜ್ಞಾನವನ್ನು ಗ್ರಹಿಸುವಾಗಲೇ ಸಾಕ್ಷಿಯು ಅದರ ಪ್ರಾಮಾಣ್ಯವನ್ನೂ ಗ್ರಹಿಸುತ್ತದೆ. ಬಾಧಕವಿದ್ದಾಗ ಮಾತ್ರ ಜ್ಞಾನದ ಪ್ರಾಮಾಣ್ಯ ಗೊತ್ತಾಗುವುದಿಲ್ಲ. ಜ್ಞಾನದಿಂದ ಪ್ರಾಮ್ಯಾಣ್ಯವನ್ನು

ತಿಳಿಯಲು ಇನ್ನೊಂದು ಯುಕ್ತಿ, ಅದಕ್ಕೆ ಪ್ರಾಮಾಣ್ಯ ಸಾಧಿಸಲು ಮತ್ತೊಂದು ಯುಕ್ತಿ ಹೀಗೆ ಕೊನೆಯಿಲ್ಲದ ಯುಕ್ತಿಗಳ ಪರಂಪರೆ ಅಥವಾ ಅನವಸ್ಥೆಯು ಉಂಟಾಗುವುದರಿಂದ ಪ್ರಾಮಾಣ್ಯದ ನಿಶ್ಚಯವೇ ಆಗುವುದಿಲ್ಲ. ಆದಕಾರಣ ಪ್ರಾಮಾಣ್ಯಕ್ಕೆ ಸ್ವತಸ್ಟ್ವವನ್ನು ಒಪ್ಪಬೇಕು. ದೋಷಯುಕ್ತ ಇಂದ್ರಿಯ, ಯುಕ್ತಿಗಳಿಂದುಂಟಾಗುವ ಭ್ರಮಾತ್ಮಕ ಜ್ಞಾನದಲ್ಲಿ ಪ್ರಾಮಾಣ್ಯವು ಉಂಟಾಗುವುದಿಲ್ಲ. ಸಂಶಯಯುಕ್ತ ಜ್ಞಾನವನ್ನು ಸಾಕ್ಷಿಯು ಪ್ರಮಾಣವೆಂದು ಗ್ರಹಿಸುವುದಿಲ್ಲ. ಆದರೆ ವೇದಗಳು ಅಪೌರುಷೇಯ. ಪುರುಷರು ರಚಿಸಿದ ವಾಕ್ಯಗಳಲ್ಲಿ ಬುದ್ಧಿದೋಷದಿಂದ ಪ್ರಮಾದ, ವ್ಯತ್ಯಾಸಗಳು ಸಂಭವಿಸಲು ಸಾಧ್ಯ. ವೇದಗಳು ಯಾವುದೇ ಪುರುಷನಿಂದಲೂ ರಚಿತವಾಗಿಲ್ಲದ ಪ್ರಯುಕ್ತ ಅಂಥಹ ದೋಷಗಳು ಸರ್ವಥಾ ಅಸಂಭವವಾದ್ದರಿಂದ ವೇದವಾಕ್ಯಗಳಿಗೆ ಅಪ್ರಾಮಾಣ್ಯದ ಶಂಕೆಗೆ ಅವಕಾಶವೇ ಇರುವುದಿಲ್ಲ.

ವೇದಾಪೌರುಷೇಯತ್ವ ಸಮರ್ಥನೆ

ನ ಹಿ ಧರ್ಮಾದಿಸಿದ್ಧಿಃ ಸ್ಯಾನ್ನಿತ್ಯವಾಕ್ಯಂ ವಿನಾ ಕ್ವಚಿತ್ ॥೬೮॥

ನಿತ್ಯವಾದ ಅಂದರೆ ಅಪೌರುಷೇಯವಾದ ವಾಕ್ಯದಿಂದಲೇ ಹೊರತು ಬೇರೆ ಯಾವ ಪ್ರಮಾಣದಿಂದಲೂ ಧರ್ಮಾದಿ ಸಿದ್ಧಿಯು ಸಾಧ್ಯವಾಗದು.

ಅವಿಪ್ರಲಂಭಸ್ತಜ್ಜ್ಞಾನಂ ತತ್ಪ್ರತತ್ವಾದಯೋಪಿ ಚ ।
ಕಲ್ಪ್ಯಾ ಗೌರವದೋಷೇಣ ಪುಂವಾಕ್ಯಂ ಜ್ಞಾಪಕಂ ನ ತತ್ ॥೬೯॥

ಬುದ್ಧ ಮೊದಲಾದವರಿಂದ ರಚಿತವಾದ ಪುರುಷರಿಂದ ರಚಿತವಾದ ವಾಕ್ಯವನ್ನು ಪ್ರಮಾಣವೆಂದು ಅಂಗೀಕರಿಸುವ ಮುಂಚೆ, ಅಂಥಹ ಪುರುಷನಿಗೆ ಇಂದ್ರಿಯಪಾಟವ, ಮೋಸರಾಹಿತ್ಯ, ಸರ್ವಜ್ಞತ್ವ, ಕೃಪಾಲುತ್ವ, ಐಶ್ವರ್ಯ, ಧಾರ್ಮಿಕ ನಡತೆ, ವೈರಾಗ್ಯ ಮೊದಲಾದವುಗಳನ್ನು ಕಲ್ಪಿಸಬೇಕಾಗುವುದು. ಹೀಗೆ ಪೌರುಷೇಯವಾಕ್ಯಕ್ಕೆ ಕಲ್ಪನಾಗೌರವ ಎಂಬ ದೋಷ ಬರುವುದರಿಂದ ಅದು ಪ್ರಮಾಣವಾಗಲಾರದು. ಆದಕಾರಣ ಪೌರುಷೇಯ ಆಗಮದಿಂದ ಧರ್ಮಾದಿ ಸಿದ್ಧಿಯು ಸಾಧ್ಯವಾಗದು.

ಪ್ರತ್ಯಕ್ಷಃ ಕಸ್ಯಚಿತದ್ಧರ್ಮೋ ವಸ್ತುತ್ವಾದಿತಿ ಚೋದಿತೇ ।
ನ ಬುದ್ಧೋ ಧರ್ಮದರ್ಶೀ ಸ್ಯಾತ್ ಪುಂಸ್ಟ್ವಾದಿತ್ಯನುಮಾಹತಿಃ ॥೭೦॥

ಧರ್ಮವೂ ಒಂದು ಪದಾರ್ಥವಾಗಿರುವುದರಿಂದ ಯಾವನೋ ಒಬ್ಬ ಪುರುಷನಿಗೆ ಪ್ರತ್ಯಕ್ಷವಾಗಿದೆ ಆದ್ದರಿಂದ ಅವನ ವಾಕ್ಯಕ್ಕೆ ಪ್ರಾಮಾಣ್ಯವಿದೆ ಎಂದು ಹೇಳುವುದು ಒಪ್ಪತಕ್ಕದ್ದಲ್ಲ. ಬುದ್ಧನು ದೇವದತ್ತನಂತೆಯೇ ಒಬ್ಬ ಪುರುಷನಾದ್ದರಿಂದ, ಪುರಷರಿಗೆ ಸಂಬಂಧಿಸಿದ ಅಜ್ಞಾನ ವಂಚಕತ್ವ ಇತ್ಯಾದಿ ದೋಷಗಳು ಅವನಲ್ಲೂ ಸಂಭವಿಸುವ ಸಾಧ್ಯತೆ ಇರುವುದರಿಂದ, ಪೌರುಷೇಯ ವಾಕ್ಯದಿಂದ ಧರ್ಮಾದಿಗಳು ಸಿದ್ಧಿಸುತ್ತವೆ ಎಂದು ಒಪ್ಪಲು ಹೇಗೆ ಸಾಧ್ಯ? ಧರ್ಮಾದಿ ದ್ರಷ್ಟೃತ್ವವು ಬುದ್ಧನಲ್ಲಿರತಕ್ಕದ್ದು. ಬೇರೆ ಕಡೆ ಇರಲು ಬಾಧಕವಿರುವುದು ಬೇರೆಲ್ಲಿಯಾದರೂ ಒಂದುಕಡೆ ಇರಬೇಕಾಗಿರುವುದರಿಂದ ಎಂಬ ಪರಿಶೇಷಾನುಮಾನಕ್ಕೆ ಈ ಪುಂಸ್ತ್ವಾನುಮಾನದಿಂದ ಬಾಧವು.

ಅಧರ್ಮವಾದಿನೋ ವಾಕ್ಯಮಪ್ರಯೋಜನಮೇವ ಹಿ ।
ಧರ್ಮಾಭಾವೋಽಪಿ ನೋ ತೇನ ಪ್ರತ್ಯಕ್ಷಾವಗತೋ ಭವೇತ್ ॥೭೧॥
ಅತಃ ಸಂಶಯಸಂಪತ್ತೌ ವಾಕ್ಯಂ ಪ್ರತ್ಯಕ್ಷವತ್ಪ್ರಮಾ ।

ಧರ್ಮ ಮೊದಲಾದ ಅತೀಂದ್ರಿಯ ಪದಾರ್ಥಗಳನ್ನು ಅಂಗೀಕರಿಸದ ಚಾರ್ವಾಕನ ಶಾಸ್ತ್ರವು ವಿಷಯ ಪ್ರಯೋಜನಗಳನ್ನು ಹೊಂದಿರುವುದಿಲ್ಲ. ಆದಕಾರಣ ಅವನೂ ತನ್ನ ಶಾಸ್ತ್ರಕ್ಕೆ ವಿಷಯ ಪ್ರಯೋಜನಗಳ ಸಿದ್ಧಿಗಾಗಿ ಧರ್ಮಾದಿಗಳನ್ನು ಒಪ್ಪಲೇಬೇಕು. ಧರ್ಮಾದಿಗಳ ಅಭಾವವನ್ನು ಇಂದ್ರಿಯಗಳಿಂದ ತಿಳಿಯಲು ಸಾಧ್ಯವಿಲ್ಲ. ಆದಕಾರಣ ಧರ್ಮಾದಿಗಳು ಇವೆಯೋ ಇಲ್ಲವೋ ಎಂಬ ಸಂಶಯ ಬರುವಾಗ, ಧರ್ಮಾದಿಗಳು ಇಲ್ಲವೆಂದು ತಿಳಿದುಕೊಳ್ಳುವುದಕ್ಕಾದರೂ, ಪ್ರತ್ಯಕ್ಷವೊಂದೇ ಪ್ರಮಾಣ ಎನ್ನುವ ಚಾರ್ವಾಕನೂ ಸಹ ಅಪೌರುಷೇಯ ವಾಕ್ಯವನ್ನು ಪ್ರತ್ಯಕ್ಷದಂತೆಯೇ ಪ್ರಮಾಣವೆಂದು ಅಂಗೀಕರಿಸಬೇಕಾಗುತ್ತದೆ.

ವಿವರಣೆ:

ವೇದವು ಅಪೌರುಷೇಯವಾದ್ದರಿಂದ ಅದು ಪ್ರಮಾಣವೆಂದು ಹೇಳಿದ್ದು ಸರಿಯೇ. ಆದರೆ ನಾವು ವೇದವನ್ನು ಅಪೌರುಷೇಯವೆಂದು ಒಪ್ಪುವುದಿಲ್ಲ, ಆದ್ದರಿಂದ ಅದರ ಪ್ರಾಮಾಣ್ಯವನ್ನೂ ನಾವು ಅಂಗೀಕರಿಸುವುದಿಲ್ಲ ಎಂದು

ಕೆಲವರು ಹೇಳುತ್ತಾರೆ. ಅದಕ್ಕೆ ಉತ್ತರವಾಗಿ ಶ್ರೀಮದಾಚಾರ್ಯರು ಇಲ್ಲಿ ವೇದಾಪೌರುಷೇಯತ್ವವನ್ನು ಸಪ್ರಮಾಣವಾಗಿ ಸಮರ್ಥಿಸುತ್ತಾರೆ. ವೇದವನ್ನು ಒಪ್ಪುವವರೂ ಹಾಗೂ ಒಪ್ಪದವರೂ ಸಾಮಾನ್ಯವಾಗಿ ಧರ್ಮ, ಅಧರ್ಮ, ಸ್ವರ್ಗ, ನರಕ ಮೊದಲಾದ ಅತೀಂದ್ರಿಯ ಪದಾರ್ಥಗಳನ್ನು ಒಪ್ಪುತ್ತಾರೆ. ಈ ಅತೀಂದ್ರಿಯ ವಸ್ತುಗಳನ್ನು ಯಾವ ಪ್ರಮಾಣದ ಆಧಾರದ ಮೇಲೆ ಒಪ್ಪುತ್ತೀರಾ ಎಂದು ಮೊದಲಿಗೆ ಕೇಳಬೇಕಾಗುತ್ತದೆ. ಕೇವಲ ಯುಕ್ತಿಯಿಂದ ಧರ್ಮಾಧರ್ಮಗಳನ್ನು ನಿರ್ಧರಿಸಲು ಸಾಧ್ಯವಿಲ್ಲ. ಕೇವಲ ಯುಕ್ತಿಯಿಂದ ಯಾವುದೇ ವಿಷಯವನ್ನು ಹೇಗೆ ಸಿದ್ಧಪಡಿಸುವುದು ಸಾಧ್ಯವೋ ಹಾಗೆಯೇ ನಿರಾಕರಿಸುವುದೂ ಸಾಧ್ಯ. ಎಲ್ಲ ಯುಕ್ತಿಗೂ ಒಂದು ಪ್ರತಿಯುಕ್ತಿಯನ್ನು ನೀಡಬಹುದು. ಯುಕ್ತಿ ಪ್ರತಿಯುಕ್ತಿಗಳ ಗೊಂದಲದಲ್ಲಿ 'ಇದಮಿತ್ಥಂ' ಎಂಬುದಾಗಿ ಯಾವುದೇ ನಿರ್ಣಯವು ಸಾಧ್ಯವಿಲ್ಲ. ನಮ್ಮ ನಿತ್ಯದ ಅನುಭವದಿಂದ ಧರ್ಮಾಧರ್ಮಗಳಿವೆಯೆಂದು ಯುಕ್ತಿಯಿಂದ ಕೇವಲ ಊಹನೆ ಮಾಡಬಹುದಷ್ಟೆ. ಜ್ಞಾನಿಗಳ ಉಪದೇಶ ಮತ್ತು ಅವರ ಗ್ರಂಥಗಳಿಂದ ಮಾತ್ರ ಸರಿಯಾದ ತಿಳಿವಳಿಕೆ ಸಾಧ್ಯ. ಆದರೆ ಮೊದಲಿಗೆ ಯಾರು ಜ್ಞಾನಿಗಳು ಯಾರು ಜ್ಞಾನಿಗಳಲ್ಲ ಎಂಬುದು ನಿರ್ಧಾರವಾಗಬೇಕು. ಅನೇಕ ಮತ ಹಾಗೂ ಸಂಪ್ರದಾಯಗಳಿವೆ. ಎಲ್ಲ ಮತಾನುಯಾಯಿಗಳೂ ತಮ್ಮ ಮತಾಚಾರ್ಯರೇ ಸರ್ವಜ್ಞರು ಎಂದು ವಾದಿಸುತ್ತಾರೆ. ಆದರೆ ಎಲ್ಲ ಮತಾಚಾರ್ಯರ ಅಭಿಪ್ರಾಯಗಳೂ ಒಂದೇ ರೀತಿಯಾಗಿರುವುದಿಲ್ಲ. ಎಲ್ಲರೂ ಸರ್ವಜ್ಞರಾಗಿರಲು ಅಸಾಧ್ಯ. ವಿಚಾರಗಳಲ್ಲಿ ಏಕರೂಪತೆಯ ಅಭಾವದಿಂದ ಅವರಲ್ಲಿ ಯಾರು ಸರ್ವಜ್ಞರು ಎಂದು ನಿರ್ಧರಿಸುವುದು ಅಸಾಧ್ಯ. ನಿಜವಾದ ತತ್ವವನ್ನು ತಿಳಿಸುವ ಕಳಕಳಿ ಯಾರಿಗಿದೆ ಎಂಬುದನ್ನು ತಿಳಿಯುವ ಬಗೆ ಹೇಗೆ? ಮತಾಚಾರ್ಯನೂ ಒಬ್ಬ ಪುರುಷನಾದ್ದರಿಂದ ಪುರುಷರಲ್ಲಿ ಸಹಜವಾಗಿ ಇರಬಹುದಾದ ದೋಷಗಳು ಅವನಲ್ಲಿ ಇಲ್ಲವೆಂದು ನಿರ್ಧರಿಸುವುದು ಹೇಗೆ? ತತ್ತ್ವೋಪದೇಶಕನಿಗೆ ಇರಲೇಬೇಕಾದ ಎಲ್ಲ ಅರ್ಹತೆಗಳನ್ನೂ ನಾವು ಏನೂ ಆಧಾರವಿಲ್ಲದೆ ಒಬ್ಬನಲ್ಲಿ ಕಲ್ಪಿಸಬೇಕಾಗುತ್ತದೆ. ವೇದವು ಪುರುಷ ನಿರ್ಮಿತವೆಂದು ಒಪ್ಪಬೇಕಾದರೆ ಇಷ್ಟೆಲ್ಲಾ

ಗೊಂದಲಗಳಿರಲು ಇದರ ಬದಲು ವೇದವು ಅಪೌರುಷೇಯವೆಂದು ಒಪ್ಪುವುದೇ ಸುಲಭವಾದ ಮಾರ್ಗವಲ್ಲವೇ?

ವೇದವನ್ನು ಯಾರು ಮಾಡಿದರು, ಯಾವ ಕಾಲದಲ್ಲಿ ಮಾಡಿದರು, ಎಂಬುದು ಇಷ್ಟರವರೆಗೂ ಯಾರಿಗೂ ತಿಳಿದಿಲ್ಲ. ವೇದವು ಅನಾದಿಯೆಂದು ವೇದದಲ್ಲಿಯೇ ಹೇಳಲಾಗಿದೆ. ಸಂಪ್ರದಾಯ ಪರಂಪರೆಯಿಂದಲೂ ಎಲ್ಲರಿಗೂ ತಾನು ಹಿಂದಿನ ವೇದವನ್ನೇ· ಉಚ್ಚರಿಸುತ್ತಿದ್ದೇನೆ ಎಂಬ ತಿಳಿವಳಿಕೆಯಿದೆ. ಇಂಥಹ ಮಹತ್ವವಾದ ಸ್ವರ, ವರ್ಣ, ಕ್ರಮಗಳನ್ನು ಸ್ವಲ್ಪವೂ ತಪ್ಪದೇ ಕಾಪಾಡಿಕೊಂಡು ಬಂದಿರುವ ವೇದದ ಅನುಯಾಯಿಗಳು ಮತ್ತು ಅಭ್ಯಾಸಿಗಳು ಅದರ ರಚನೆಕಾರನ ಹೆಸರನ್ನೇ ಮರೆಯಲು ಹೇಗೆ ಸಾಧ್ಯ?

ಯಾರೂ ನಿರ್ಮಿಸದ ವಾಕ್ಯವೆಂಬುದು ಇರಲು ಸಾಧ್ಯವಿಲ್ಲವಾದ್ದರಿಂದ ಸರ್ವಜ್ಞನಾದ ಭಗವಂತನು ವೇದವನ್ನು ರಚಿಸಿದ್ದಾನೆಂದು ಒಪ್ಪಬಹುದಲ್ಲವೇ ಎಂದು ಕೆಲವರು ಕೇಳುತ್ತಾರೆ. ನಿರಾಕಾರನೂ ನಿರ್ವಿಶೇಷನೂ ಆದ ದೇವರು ಸರ್ವಜ್ಞನಾಗಿದ್ದು ವೇದವನ್ನು ರಚಿಸಿದ್ದಾನೆ ಎಂಬುದು ಅಸಂಭವವೇ ಸರಿ. ಹೀಗೆ ಅಸಂಬದ್ಧ ಕಲ್ಪನೆ ಮಾಡುವ ಬದಲು ಅಪೌರುಷೇಯ ವಾಕ್ಯವನ್ನು ಒಪ್ಪುವುದೇ .ಜಾಣತನವಲ್ಲವೇ? ವೇದವು ಭಗವಂತನಿಂದ ರಚಿತ ಎಂದು ಒಪ್ಪುವ ಮುಂಚೆ ಭಗವಂತನ ಅಸ್ತಿತ್ವ ಸಿದ್ಧವಾಗಬೇಕು. ಅತೀಂದ್ರಿಯ ಪದಾರ್ಥನಾದ ಭಗವಂತನು ನಮ್ಮ ಇಂದ್ರಿಯಗಳಿಗೆ ಗೋಚರನಲ್ಲ. ಅವನನ್ನು ಯುಕ್ತಿಯಿಂದ ತಿಳಿಯಲು ಸಾಧ್ಯವಿಲ್ಲ. ಅವನನ್ನು ತಿಳಿಯಲು ವೇದವನ್ನೇ ಆಶ್ರಯಿಸಬೇಕು. ಅದಕ್ಕೆ ಮೊದಲು ವೇದವು ಪ್ರಮಾಣವೆಂದು ಸಿದ್ಧವಾಗಬೇಕು. ವೇದವು ಅಪೌರುಷೇಯ ಎಂದು ಒಪ್ಪಿಕೊಂಡಾಗ ಮಾತ್ರ ಇವೆಲ್ಲ ಗೊಂದಲಗಳು ನಿವಾರಣೆಯಾಗುತ್ತವೆ ಮತ್ತು ಧರ್ಮಾಧರ್ಮಗಳ ನಿರ್ಣಯ ಸಾಧ್ಯವಾಗುತ್ತದೆ.

ವೇದವು ಅಪೌರುಷೇಯವೆಂದು ಒಪ್ಪಿಕೊಂಡರೂ ಅದನ್ನು ಪ್ರಮಾಣವೆಂದು ಅಂಗೀಕರಿಸಲು ಸಾಧ್ಯವಿಲ್ಲ. ಏಕೆಂದರೆ ವಾಕ್ಯಾರ್ಥ ವಿಷಯವಾದ ಯಥಾರ್ಥಜ್ಞಾನವನ್ನು ಹುಟ್ಟಿಸುವ ಶಕ್ತಿಯು ವೇದಕ್ಕೆ ಕೂಡುವುದಿಲ್ಲ ಎಂದು ಕೆಲವರು ಆಶಂಕಿಸಿದರೆ –

ವಾಕ್ಯಾರ್ಥಬೋಧಕತ್ವ

ಶಕ್ತಿಶ್ಚೈವಾನ್ವಿತೇ ಸ್ವಾರ್ಥೇ ಶಬ್ದಾನಾಮನುಭೂಯತೇ ॥೭೨॥
ಅತೋಽನ್ವಿತಾಭಿಧಾಯಿತ್ವಂ ಗೌರವಂ ಕಲ್ಪನೇಽನ್ಯಥಾ ।
ನಚಾಶಕ್ತ್ಯಾಭಿಧಾಯಿತ್ವಂ ಪ್ರವೃತ್ತಿಶ್ಚ ದ್ವಿಧಾನ್ಯಥಾ ॥೭೩॥

ಒಂದು ವಾಕ್ಯದಲ್ಲಿರುವ ಪದಗಳಿಗೆ ಬೇರೆ ಬೇರೆ ಅರ್ಥವಿದ್ದರೂ ಪರಸ್ಪರ ಅನ್ವಯದಿಂದ ವಾಕ್ಯಾರ್ಥವನ್ನು ತಿಳಿಸುವ ವಿಶೇಷವಾದ ಶಕ್ತಿಯು ಪದಗಳಿಗೆ ಇರುತ್ತದೆ. 'ಯೋಗ್ಯೇತರಾನ್ವಿತಾಭಿಧಾಯಿತ್ವ' ಎಂದು ಕರೆಯಲ್ಪಡುವ ಈ ಶಕ್ತಿಯನ್ನು ಅಂಗೀಕರಿಸಬೇಕು. ಅದನ್ನು ಬಿಟ್ಟು, ನಿರವಯವಾದ ವಾಕ್ಯವು ವಾಕ್ಯಾರ್ಥವನ್ನು ತಿಳಿಸಿಕೊಡುತ್ತದೆ ಎಂದು ಕಲ್ಪಿಸಿದರೆ ಕಲ್ಪನಾಗೌರವ ಎಂಬ ದೋಷವು ಬರುವುದು. ಶಕ್ತಿಗೆ ಅವಿಷಯವಾದ ವಸ್ತುವನ್ನು ಹೇಳುತ್ತದೆಯೆನ್ನುವುದು ಕೂಡಲಾರದು. ಮೊದಲು ಪದಾರ್ಥವನ್ನು ಅನಂತರ ಅನ್ವಯವನ್ನು ಪ್ರತಿಪಾದಿಸುತ್ತದೆ ಎಂದು ಹೇಳಿದರೆ ಅದು ದ್ವಿಧಾ ಪ್ರವೃತ್ತಿ ಅಂದರೆ ವಿರಮ್ಯ ವ್ಯಾಪಾರ ಎನಿಸುವುದು.

ವಿವರಣೆ :

ವಾಕ್ಯದ ಅರ್ಥಬೋಧಕತ್ವದ ಕುರಿತು ವಿವಾದಗಳಿವೆ. ಪದಗಳು ತಮ್ಮ ಅರ್ಥವನ್ನು ಮಾತ್ರ ಬಿಡಿ ಬಿಡಿಯಾಗಿ ತಿಳಿಸಿಕೊಡುತ್ತವೆ. ಆ ಎಲ್ಲ ಅರ್ಥಗಳಿಗೂ ಪರಸ್ಪರ ಸಂಬಂಧ ಕಲ್ಪಿಸಿಕೊಂಡು ಅವುಗಳಿಂದ ಕೂಡಿದ ವಾಕ್ಯದಿಂದ ಜ್ಞಾನವನ್ನು ಪಡೆಯುವುದು ಹೇಗೆ? ಏಕೆಂದರೆ ಪದಗಳಿಗಿರುವ ಅನ್ಯೋನ್ಯ ಸಂಬಂಧವನ್ನು ತಿಳಿಸಿಕೊಡುವ ಶಬ್ದವು ಆ ವಾಕ್ಯದಲ್ಲಿರುವುದಿಲ್ಲ. ಎಂಬುದು ಕೆಲವು ದಾರ್ಶನಿಕರಿಗೆ ದೊಡ್ಡ ಸಮಸ್ಯೆಯಾಗಿದೆ. ಪದವು ಅರ್ಥವನ್ನು ತಿಳಿಸುವಾಗ ಅದರಲ್ಲಿರುವ ವಿಶೇಷ ಸಂಬಂಧವನ್ನೂ ತಿಳಿಸಿಕೊಡುತ್ತದೆ ಎಂಬುದು ಕೆಲವರ ವಾದ. ಆದರೆ ವಾಕ್ಯದಲ್ಲಿರುವ ಒಂದು ಪದದಿಂದಲೇ ಇದು ಗೊತ್ತಾದಲ್ಲಿ ಉಳಿದ ಪದಗಳ ಅವಶ್ಯಕತೆಯೇನು? ವಾಕ್ಯದಲ್ಲಿನ ವಿವಿಧ ಪದಗಳಿಗೆ ಪರಸ್ಪರ ಸಂಬಂಧವನ್ನು ಇಂತಹುದೇ ಪದವು ತಿಳಿಸಿಕೊಡುತ್ತದೆ ಎಂಬುದನ್ನು ನಿರ್ಧರಿಸುವುದು ಹೇಗೆ? ಎಂಬುದು ಈ ವಾದಕ್ಕೆ ಬರುವ ಆಕ್ಷೇಪ.

ಯಾವುದೇ ಒಂದು ಪದವು ಕೇವಲ ವಸ್ತುವನ್ನಲ್ಲದೆ ಅದರ ವಿಶಿಷ್ಟವಾದ ಧರ್ಮವನ್ನೂ ತಿಳಿಸಿಕೊಡುತ್ತದೆ. ಅದರ ಜೊತೆಗೆ ಅದಕ್ಕೆ ಇತರ ಪದಾರ್ಥಗಳೊಂದಿಗಿರುವ ಸಂಬಂಧವನ್ನೂ ತಿಳಿಸಿಕೊಡುತ್ತದೆ. ಆ ಪದವು ಇತರ ಪದಗಳಿಂದ ಕೂಡಿಕೊಂಡು ಒಂದು ವಾಕ್ಯವಾಗಿ ಪ್ರಯೋಗವಾದಾಗ ಪದಾರ್ಥಗಳಿಗೆ ಪರಸ್ಪರವಾಗಿರುವ ವಿಶೇಷವಾದ ಸಂಬಂಧವು ತಿಳಿಯುವುದರಿಂದ ವಾಕ್ಯಾರ್ಥ ಜ್ಞಾನವಾಗುವುದು. ಪದಗಳು ಅರ್ಥವನ್ನು ಮಾತ್ರ ತಿಳಿಸಿಕೊಡುತ್ತವೆ. ಈ ಪದಗಳಿಂದ ಸ್ಫುರಣೆಗೊಳ್ಳುವ ವಿಶೇಷ ಅರ್ಥದಿಂದ ಪದಗಳ ಪರಸ್ಪರ ಸಂಬಂಧ ತಿಳಿದುಬರುತ್ತದೆ ಎಂದ ಕೆಲವರು ಹೇಳುತ್ತಾರೆ (ಸ್ಫೋಟವಾದ). ಇದೂ ಸರಿಯಲ್ಲ. ಪ್ರತ್ಯಕ್ಷ, ಯುಕ್ತಿ ಮತ್ತು ವಾಕ್ಯಗಳಿಂದ ನಮಗೆ ಸರಿಯಾದ ಜ್ಞಾನವುಂಟಾಗುವುದರಿಂದ ಅವುಗಳು ಪ್ರಮಾಣವೆನಿಸಿವೆ. ಪದಾರ್ಥಗಳ ಸಂಬಂಧವನ್ನು ಶಬ್ದಗಳ ಬದಲು ಅರ್ಥವೇ ತಿಳಿಸಿಕೊಡುವುದಾದರೆ ಅದೂ ಪ್ರಮಾಣವಾಗಬೇಕಾಗುವುದು. ಶಬ್ದಗಳಿಂದ ನಮಗೆ ಹೊಳೆಯುವ ಅರ್ಥಗಳೆಲ್ಲ ಪ್ರಮಾಣವಾದರೆ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಅರ್ಥದ ಸ್ಫುರಣೆಯಾಗುವುದು ಸಾಧ್ಯವಿರುವುದರಿಂದ ಯಾವುದೇ ವಾಕ್ಯದಿಂದ ಇದಮಿತ್ಥಂ ಎಂಬ ನಿರ್ಣಯ ಸಾಧ್ಯವಿಲ್ಲ. ಆದಕಾರಣ ಶಬ್ದಗಳನ್ನು ಕೇಳಿದಾಗ ನಮಗೆ ಹೊಳೆಯುವ ಯಾವುದೋ ಅರ್ಥವು ಪ್ರಮಾಣವೆನಿಸುವುದಿಲ್ಲ. ಒಂದು ವಾಕ್ಯವನ್ನು ಕೇಳಿದಕೂಡಲೇ ಆ ಪದಗಳಿಂದಲೇ ಪದಾರ್ಥಗಳು ಹಾಗೂ ಅವುಗಳ ಸಂಬಂಧವೂ ತೋರುವುದು ಎಂಬುದೇ ಎಲ್ಲರ ಅನುಭವವಾಗಿದೆ. ಇತರ ಪದಗಳೊಂದಿಗಿರುವ ಪರಸ್ಪರ ಸಂಬಂಧದ ಜೊತೆಗೆ ಅರ್ಥವನ್ನೂ ತಿಳಿಸಿಕೊಡುವ ವಿಶಿಷ್ಟವಾದ ಶಕ್ತಿಯು ಶಬ್ದಕ್ಕೆ ಇರುವುದರಿಂದ ವಾಕ್ಯವನ್ನು ಕೇಳಿದೊಡನೆಯೇ ಅದರ ಅರ್ಥವನ್ನು ಗ್ರಹಿಸುವುದು ಸಾಧ್ಯವಾಗುವುದು. ಈ ಪ್ರಕಾರವಾಗಿ ವಾಕ್ಯದಿಂದ ಯಥಾರ್ಥಜ್ಞಾನವನ್ನು ಗಳಿಸಲು ಯಾವುದೇ ಆತಂಕವಿಲ್ಲದಿರುವುದರಿಂದ ವಾಕ್ಯರೂಪವಾದ ವೇದವನ್ನೂ ಪ್ರಮಾಣವೆಂದು ಅಂಗೀಕರಿಸಬಹುದು.

ಮೋಕ್ಷಕ್ಕೆ ಕಾರಣವಾದ ಭಗವತ್ಪ್ರಸಾದಜನಕವಾದ ಜ್ಞಾನೋತ್ಪಾದಕತ್ವ,

ಬಂಧಸತ್ಯತ್ವ, ವೇದಕ್ಕೆ ಸಿದ್ಧಾರ್ಥಪರತ್ವ, ವೇದಕ್ಕೆ ಪ್ರಾಮಾಣ್ಯ ಹಾಗೂ ಶಬ್ದಗಳಿಗೆ ಅನ್ವಿತಾಭಿಧಾಯಿತ್ವ - ಹೀಗೆ ಐದು ರೀತಿಯಲ್ಲಿ ಅತಃ ಶಬ್ದದ ಸಾರ್ಥಕ್ಯವನ್ನು ತಿಳಿಸಿಕೊಟ್ಟು, ಆದಪ್ರಯುಕ್ತ ಬ್ರಹ್ಮಜಿಜ್ಞಾಸೆಯನ್ನು ಅವಶ್ಯ ಮಾಡತಕ್ಕದ್ದು ಎಂದು ಪ್ರತಿಪಾದಿಸಲಾಯಿತು. ವೇದವ್ಯಾಸ ರೂಪದಿಂದ ಬ್ರಹ್ಮಸೂತ್ರವನ್ನು ರಚಿಸಿದ ಸ್ವಯಂ ಭಗವಂತನೇ ನಾರಾಯಣ ರೂಪದಿಂದ ರಚಿಸಿದ ಬ್ರಹ್ಮತರ್ಕ ಎಂಬ ಗ್ರಂಥದಲ್ಲಿ ಇಲ್ಲಿ ಹೇಳಿರುವ ಅತಃ ಶಬ್ದದ ಎಲ್ಲ ಅರ್ಥಗಳೂ ವಿಸ್ತಾರವಾಗಿ ನಿರೂಪಿತವಾಗಿವೆ ಎಂದು ಶ್ರೀಮದಾಚಾರ್ಯರ ಮುಂದಿನ ಮಾತುಗಳಿಂದ ತಿಳಿದುಬರುತ್ತದೆ.

ಬ್ರಹ್ಮತರ್ಕ ವಿಷಯ ಸಂಗ್ರಹ

ಏತತ್ಸರ್ವಂ ತರ್ಕಶಾಸ್ತ್ರೇ ಬ್ರಹ್ಮತರ್ಕೇ ಹಿ ವಿಸ್ತರಾತ್ ।
ಉಕ್ತಂ ವಿದ್ಯಾಪೃಥಕ್ಕ್ವಾತ್ತು ಸಂಕ್ಷೇಪೇಣಾತ್ರ ಸೂಚಿತಮ್ ॥೭೪॥

ಅತಃ ಶಬ್ದದ ವ್ಯಾಖ್ಯಾನಪರವಾಗಿ ಮೇಲೆ ಹೇಳಿದ ಎಲ್ಲ ವಿಷಯಗಳೂ ಬ್ರಹ್ಮತರ್ಕ ಎಂಬ ಹೆಸರಿನ ತರ್ಕಶಾಸ್ತ್ರದಲ್ಲಿ ವಿಸ್ತಾರವಾಗಿ ಉಕ್ತವಾಗಿವೆ. ಈ ಬ್ರಹ್ಮಮೀಮಾಂಸಾ ಶಾಸ್ತ್ರಕ್ಕೆ ತರ್ಕಶಾಸ್ತ್ರದೊಂದಿಗೆ ಭೇದವಿರುವುದರಿಂದ ಅತಃ ಶಬ್ದದಿಂದ ಅಲ್ಲಿ ಹೇಳಿರುವ ವಿಷಯಗಳು ಇಲ್ಲಿ ಸಂಗ್ರಹವಾಗಿ ಉಕ್ತವಾಗಿವೆ.

ಪ್ರಮಾಣನ್ಯಾಯಸಚ್ಛಿಕ್ಷಾ ಕ್ರಿಯತೇ ತರ್ಕಶಾಸ್ತ್ರತಃ ।
ಮಾನನ್ಯಾಯೈಸ್ತು ತತ್ಸಿದ್ಧೈರ್ಮೀಮಾಂಸಾ ಮೇಯಶೋಧನಮ್ ॥೭೫॥

ಉದ್ದೇಶ, ವಿಭಾಗ, ಲಕ್ಷಣ, ಪರೀಕ್ಷೆಗಳಿಂದ ಪ್ರತ್ಯಕ್ಷಾದಿ ಪ್ರಮಾಣಗಳು ಮತ್ತು ಅನ್ವಯವ್ಯತಿರೇಕರೂಪವಾದ ನ್ಯಾಯವೂ ಬ್ರಹ್ಮತರ್ಕದಿಂದ ಚೆನ್ನಾಗಿ ನಿರೂಪಿಸಲ್ಪಟ್ಟಿದೆ. ಬ್ರಹ್ಮತರ್ಕದಲ್ಲಿ ಪ್ರತಿಪಾದಿತವಾದ ಆಗಮ ಮೊದಲಾದ ಪ್ರಮಾಣನ್ಯಾಯಗಳಿಂದ ಬ್ರಹ್ಮ, ಧರ್ಮ ಮೊದಲಾದ ಪ್ರಮೇಯ ವಿಚಾರವೇ ಮೀಮಾಂಸಾಶಾಸ್ತ್ರದಲ್ಲಿ ನಿರೂಪಿಸಲ್ಪಟ್ಟಿದೆ.

ಬ್ರಹ್ಮತರ್ಕಂ ಚ ಭಗವಾನ್ ಸ ಏವ ಕೃತವಾನ್ ಪ್ರಭುಃ ।
ಪಂಚಾಶತ್ಕೋಟಿವಿಸ್ತಾರಾನ್ನಾರಾಯಣತನೌ ಕೃತಾತ್ ॥೭೬॥
ಉದ್ಧೃತ್ಯ ಪಂಚಸಾಹಸ್ರಂ ಕೃತವಾನ್ ಬಾದರಾಯಣಃ ।
ಅತಸ್ತದರ್ಥಂ ಸಂಕ್ಷೇಪಾದತ ಇತ್ಯಭ್ಯಸೂಚಯತ್ ॥೭೭॥

ಯತೋಽನುಭವತಃ ಸರ್ವಂ ಸಿದ್ಧಮೇತದತೋಽಪಿ ಚ ।
ದೇವೈಶ್ಚ ದುರ್ಗಮಾರ್ಥೇಷು ವ್ಯಾಪೃತೋ ನಾತಿವಿಸ್ತೃತಿಮ್ ॥೭೮॥
ಚಕಾರೈತಾ ಹ್ಯವಜ್ಞೇಯಾ ಯುಕ್ತಯಃ ಪ್ರತಿಪಕ್ಷಗಾಃ ।

ಬ್ರಹ್ಮಮೀಮಾಂಸಾ ಶಾಸ್ತ್ರವನ್ನು ರಚಿಸಿರುವ ಸರ್ವಸಮರ್ಥರಾದ ಷಡ್ಗುಣೈಶ್ವರ್ಯ ಸಂಪನ್ನರಾದ ಆ ವೇದವ್ಯಾಸದೇವರೇ ಬ್ರಹ್ಮತರ್ಕವನ್ನೂ ಮಾಡಿರುವರು. ನಾರಾಯಣಾವತಾರದಲ್ಲಿ ಅವರಿಂದಲೇ ರಚಿಸಲ್ಪಟ್ಟ ಐವತ್ತು ಕೋಟಿ ಶ್ಲೋಕಗಳಷ್ಟು ವಿಸ್ತಾರವುಳ್ಳ ಬ್ರಹ್ಮತರ್ಕ ಗ್ರಂಥದಿಂದ ಕೆಲವು ಅರ್ಥಗಳನ್ನು ಪ್ರತ್ಯೇಕಿಸಿ, ಐದು ಸಾವಿರ ಶ್ಲೋಕ ಪರಿಮಾಣವುಳ್ಳ ಬ್ರಹ್ಮತರ್ಕಾಖ್ಯ ಗ್ರಂಥವನ್ನು ಭಗವಾನ್ ವೇದವ್ಯಾಸರು ಮಾಡಿರುವರು. ಬ್ರಹ್ಮತರ್ಕವನ್ನು ತಾವೇ ರಚಿಸಿರುವ ಕಾರಣದಿಂದ, ಆ ಬ್ರಹ್ಮತರ್ಕದ ಅರ್ಥವನ್ನು ಅತಃ ಎನ್ನುವ ಶಬ್ದದಿಂದ ಇಲ್ಲಿ ಸಂಕ್ಷೇಪವಾಗಿ ಸೂಚಿಸಿರುವರು. ಜಗತ್ ಸತ್ಯತ್ವ, ಬಂಧಸತ್ಯತ್ವ ಮೊದಲಾದ ಎಲ್ಲ ಪ್ರಮೇಯಗಳೂ ಎಲ್ಲರಿಗೂ ಅನುಭವದಿಂದಲೇ ಸಿದ್ಧವಾಗಿರುವುದರಿಂದಲೂ ಮತ್ತು ಪ್ರತ್ಯಕ್ಷಾದಿಗಳಿಂದ ಅತಿ ಸ್ಫುಟವಾಗಿ ತಿಳಿಯುವುದರಿಂದಲೂ ಅತಃ ಎನ್ನುವುದರಿಂದ ಸಂಕ್ಷೇಪವಾಗಿಯೇ ಸೂಚಿಸಿದರು. ಸುಲಭವಾಗಿ ತಿಳಿಯಲಶಕ್ಯವಾದ ಅರ್ಥವುಳ್ಳ ವೇದ ಉಪನಿಷತ್ತುಗಳಲ್ಲಿ ಪ್ರವೃತ್ತರಾದ ವೇದವ್ಯಾಸರು ದೇವತೆಗಳ ಪ್ರಾರ್ಥನೆಯ ನಿಮಿತ್ತವಾಗಿ ಇಲ್ಲಿ ಅತಿ ವಿಸ್ತಾರವನ್ನು ಮಾಡಲಿಲ್ಲ. ಸಂಕ್ಷೇಪ ಮಾಡಲು ಇನ್ನೊಂದು ಕಾರಣವನ್ನೂ ಹೇಳುತ್ತಾರೆ. ಪ್ರತಿಪಕ್ಷಗಳ ಯುಕ್ತಿಗಳು ದುಷ್ಟವಾದುದರಿಂದ ತಿರಸ್ಕಾರಕ್ಕೆ ಯೋಗ್ಯಗಳಾಗಿರುವದರಿಂದ ಅವುಗಳನ್ನು ನಿರಾಕರಿಸುವ 'ವಿಷಯದಲ್ಲಿ ಸೂತ್ರಕಾರರು ಅತಿ ವಿಸ್ತಾರವನ್ನು ಮಾಡದೆ ಸಂಕ್ಷೇಪವಾಗಿಯೇ ಹೇಳಿದ್ದಾರೆ.

ಪ್ರತ್ಯಕ್ಷೈಕಾಕ್ಷಮಃ ಪಕ್ಷಂ ಕಮೇವಾತ್ರಾಭಿವೀಕ್ಷತೇ ॥೭೯॥
ತಸ್ಮಾದಕ್ಷಮಪಕ್ಷತ್ವಾನ್ನೋಕ್ಷಶಾಸ್ತ್ರೇಭ್ಯುಪೇಕ್ಷಿತಃ ।

ಪ್ರತ್ಯಕ್ಷಕಗೋಚರವಾದುದನ್ನು ತಿಳಿಯುವುದಕ್ಕೇ ಅಸಮರ್ಥನಾದವನು ದುರ್ಗಮವಾದ ವೇದ ವಿಚಾರದಲ್ಲಿ ಯಾವ ಪಕ್ಷವನ್ನು ತಾನೇ ಚೆನ್ನಾಗಿ ತಿಳಿಯಲು ಸಾಧ್ಯ? ಹೀಗೆ ಅಸಮರ್ಥವಾದ ಪಕ್ಷ ಉಳ್ಳವನಾದ್ದರಿಂದ,

ಮೋಕ್ಷಶಾಸ್ತ್ರವಾದ ವೇದದಲ್ಲಿ ಪ್ರವೃತ್ತನಾದರೂ, ಅವನು ಸೂತ್ರಕಾರರಿಂದ ಉಪೇಕ್ಷಿತನೇ ಆಗಿರುವುದರಿಂದ ಅವನ ಪಕ್ಷವು ವಿಸ್ತಾರವಾಗಿ ನಿರಾಕೃತವಾಗಿರುವುದಿಲ್ಲ.

ಹೀಗೆ ಅತಃ ಶಬ್ದಕ್ಕೆ ತಾವು ಹೇಳಿದ ಅರ್ಥಗಳು ತರ್ಕಶಾಸ್ತ್ರದಲ್ಲಿ ಸ್ವಯಂ ನಾರಾಯಣನಿಂದಲೇ ಪ್ರತಿಪಾದಿತವಾಗಿವೆ ಎಂದು ಸಮರ್ಥಿಸಿದ ಶ್ರೀಮದಾಚಾರ್ಯರು ಸೂತ್ರದಲ್ಲಿ ಬಂದಿರುವ ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತದೆ ಎಂಬುದನ್ನು ಇಲ್ಲಿ 'ಸ್ವಯಂ ಭಗವತಾ' ಇತ್ಯಾದಿಯಾಗಿ ಶ್ರುತಿ ಸ್ಮೃತಿಗಳನ್ನು ಉದಾಹರಿಸುವುದರ ಮೂಲಕ ಸ್ಪಷ್ಟಪಡಿಸುತ್ತಾರೆ.

ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತದೆ

ಸ್ವಯಂ ಭಗವತಾ ವಿಷ್ಣುರ್ಬ್ರಹ್ಮೇತ್ಯೇತತ್ಪುರೋದಿತಮ್ ॥೮೦॥
'ಸ ವಿಷ್ಣುರಾಹ ಹೀ'ತ್ಯಂತೇ ದೇವಶಾಸ್ತ್ರಸ್ಯ ತೇನ ಹಿ ।
ಆದ್ಯಂತಂ ದೇವಶಾಸ್ತ್ರಸ್ಯ ಸ್ವಯಂ ಭಗವತಾ ಕೃತಮ್ ॥೮೧॥
ಮಧ್ಯಂ ತದಾಜ್ಞಯಾ ಶೇಷಪೈಲಾಭ್ಯಾಂ ಕೃತಮಂಜಸಾ ।
ಅತಸ್ತತ್ರೈವ ವಿಷ್ಣುತ್ವಸಿದ್ಧೇರ್ಬ್ರಹ್ಮೇತ್ಯಸೂಚಯತ್ ॥೮೨॥

ದೇವಮೀಮಾಂಸಾ ಶಾಸ್ತ್ರದ ಕೊನೆಯಲ್ಲಿ 'ಸ ವಿಷ್ಣುರಾಹ ಹಿ', 'ತಂ ಬ್ರಹ್ಮೇತ್ಯಾಚಕ್ಷತೇ' ಎಂದು ವಿಷ್ಣುವು ಬ್ರಹ್ಮಶಬ್ದ ವಾಚ್ಯನು ಎನ್ನುವುದು ಸ್ವಯಂ ಭಗವಂತನಿಂದ (ಯಾರಿಂದ ಈ ಸೂತ್ರವು ರಚಿಸಲ್ಪಟ್ಟಿತೋ ಅವರಿಂದಲೇ), ಈ ಸೂತ್ರಕ್ಕಿಂತ ಮೊದಲು ಹೇಳಲ್ಪಟ್ಟಿದೆ. ದೇವಮೀಮಾಂಸಾ ಶಾಸ್ತ್ರದ ಮೊದಲನೆಯ 'ಅಥಾತೋ ದೈವೀ ಮೀಮಾಂಸಾ' ಎಂಬ ಸೂತ್ರವೂ ಮತ್ತು 'ಸ ವಿಷ್ಣುರಾಹ ಹಿ', 'ತಂ ಬ್ರಹ್ಮೇತ್ಯಾಚಕ್ಷತೇ' ಎಂಬ ಕೊನೆಯ ಎರಡು ಸೂತ್ರಗಳೂ ಸಾಕ್ಷಾತ್ ಭಗವಂತನಾದ ವೇದವ್ಯಾಸರಿಂದ ಮಾಡಲ್ಪಟ್ಟಿವೆ. ಮಧ್ಯಭಾಗವು ಶ್ರೀ ವೇದವ್ಯಾಸರ ಅಪ್ಪಣೆಯಂತೆ ಶೇಷಪೈಲರಿಂದ ಚೆನ್ನಾಗಿ ಮಾಡಲ್ಪಟ್ಟಿವೆ. ಹೀಗೆ ದೇವಮೀಮಾಂಸಾ ಶಾಸ್ತ್ರದಲ್ಲಿಯೇ ಬ್ರಹ್ಮಶಬ್ದದಿಂದ ಹೇಳಲ್ಪಟ್ಟವನು ವಿಷ್ಣುವೇ ಎಂಬುದು ಸಿದ್ಧವಾಗುವುದರಿಂದ, 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬಲ್ಲಿಯೂ ಸೂತ್ರಕಾರರು ನಾರಾಯಣನನ್ನೇ ಬ್ರಹ್ಮಶಬ್ದದಿಂದ ಸೂಚಿಸಿದ್ದಾರೆ.

ದೋಷಾರಚ್ಛಿದ್ರಶಬ್ದಾನಾಂ ಪರ್ಯಾಯತ್ವಂ ಯತಸ್ತತಃ ।
ಗುಣಾ ನಾರಾ ಇತಿ ಜ್ಞೇಯಾಸ್ತದ್ವಾನ್ನಾರಾಯಣಃ ಸ್ಮೃತಃ ॥೮೩॥
ಬ್ರಹ್ಮಶಬ್ದೋಽಪಿ ಹಿ ಗುಣಪೂರ್ತಿಮೇವ ವದತ್ಯಯಮ್ ।
ಅತೋ ನಾರಾಯಣಸ್ಯೈವ ಜಿಜ್ಞಾಸಾತ್ರ ವಿಧೀಯತೇ ॥೮೪॥

ಯಾವ ಕಾರಣದಿಂದ ದೋಷ, ಆರ, ಚ್ಛಿದ್ರ ಶಬ್ದಗಳಿಗೆ ಏಕಾರ್ಥತ್ವವಿರುವುದೋ ಆದಕಾರಣ ನಾರಾ ಎಂಬ ಶಬ್ದದಿಂದ ದೋಷವಿರುದ್ಧಗಳಾದ ಗುಣಗಳು ಹೇಳಲ್ಪಡುತ್ತವೆ. ದೋಷವಿರುದ್ಧವಾದ ಅನಂತ ಕಲ್ಯಾಣಗುಣಗಳಿಂದ ಕೂಡಿರುವನು ನಾರಾಯಣ ಎಂಬುದಾಗಿ ತಿಳಿಯತಕ್ಕದ್ದು ಎಂದು ಸ್ಮೃತಿಗಳಿಂದ ಪ್ರಸಿದ್ಧವಾಗಿದೆ. ಈ ಸೂತ್ರದಲ್ಲಿ ಬ್ರಹ್ಮಶಬ್ದವೂ ಗುಣಪೂರ್ಣತ್ವವನ್ನೇ ಹೇಳುತ್ತದೆ. 'ಹಿ' ಎಂಬುದರಿಂದ 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋ ಹ್ಯಸ್ಮಿನ್ ಗುಣಾಃ' ಇತ್ಯಾದಿ ಶ್ರುತಿ ಪ್ರಸಿದ್ಧಿಯನ್ನು ಸೂಚಿಸುತ್ತಾರೆ. ಆದಕಾರಣ ಈ ಸೂತ್ರದಲ್ಲಿ ಸಕಲದೋಷದೂರನೂ, ಅನಂತಕಲ್ಯಾಣ ಗುಣಪರಿಪೂರ್ಣನೂ ಆದ ನಾರಾಯಣನ ಜಿಜ್ಞಾಸೆಯೇ ವಿಧಿಸಲ್ಪಡುತ್ತದೆ.

ಸಿದ್ಧಶ್ಚಾದ್ ಬ್ರಹ್ಮಶಬ್ದಸ್ಯ ವಿಷ್ಣೌ ಸ್ಪಷ್ಟತಯಾ ಶ್ರುತೌ ।
'ಅಂಭಸ್ಯಪಾರ' ಇತ್ಯುಕ್ತೋ ನಾರಾಯಣಪದೋದಿತಃ ॥೮೫॥
'ಆಪೋ ನಾರಾ' ಇತಿ ಹ್ಯಾಹ ಸ ಏವಾಪ್ಸ್ವಂತರೀರಿತಃ ।

/ 'ತದೇವ ಬ್ರಹ್ಮ ಪರಮಂ ಕವೀನಾಂ' ಎನ್ನುವ ಶ್ರುತಿಯಲ್ಲಿ ಬ್ರಹ್ಮಶಬ್ದಕ್ಕೆ ವಿಷ್ಣುವಿನಲ್ಲಿ ಅನ್ವಯವು ಸ್ಪಷ್ಟವಾಗಿ ಸಿದ್ಧವಾಗುವುದರಿಂದ ಸೂತ್ರದಲ್ಲಿರುವ ಬ್ರಹ್ಮಶಬ್ದವು ವಿಷ್ಣುಪರ ಎಂದು ತಿಳಿಯಬೇಕು. 'ತದೇವ ಬ್ರಹ್ಮ' ಎನ್ನುವುದಕ್ಕೆ ಉಪಕ್ರಮಭೂತವಾದ 'ಅಂಭಸ್ಯ ಪಾರೇ ಭುವನಸ್ಯ ಮಧ್ಯೇ ನಾಕಸ್ಯ ಪೃಷ್ಠೇ ಮಹತೋ ಮಹೀಯಾನ್' ಎನ್ನುವ ವಾಕ್ಯದಲ್ಲಿ ನಾರಾಯಣ ಪದದಿಂದ ಹೇಳಲ್ಪಟ್ಟವನೇ ಉಕ್ತನಾಗಿದ್ದಾನೆ. ಏಕೆಂದರೆ, 'ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ। ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ॥' ಎನ್ನುವ ಸ್ಮೃತಿಯು ನೀರಿನಲ್ಲಿರುವವನು ನಾರಾಯಣ ಶಬ್ದದಿಂದ ಉಕ್ತನಾಗಿದ್ದಾನೆ ಎಂದು ಸ್ಪಷ್ಟಪಡಿಸುವುದು.

ಕಾಮತೋ ವಿಧಿರುದ್ಯಾದಿಪದದಾತ್ಯಾ ಸ್ವಯಂ ಶ್ರಿಯಾ ॥೮೬॥
ಯೋನಿತ್ವೇನಾತ್ಮನೋ ವಿಷ್ಣೋಸ್ತಿಷ್ಠಂತೀತ್ಯುದಿತಸ್ಯ ಚ ।
ಯಸ್ಮಿನ್ ದೇವಾ ಅಧೀತ್ಯುಕ್ತ್ಯಾ ಸಮುದ್ರಂ ಸ್ಥಾನಮೇವ ಚ ॥೮೭॥
ನಾಮ ಚಾಕ್ಷರಮಿತ್ಯೇವ ಋಚ ಇತ್ಯುದಿತಂ ತು ಯತ್ ।
ಯತಃ ಪ್ರಸೂತೇತ್ಯುಕ್ತ್ಯಾ ಚ ತದೇವ ಬ್ರಹ್ಮ ಚಾಬ್ರವೀತ್ ॥೮೮॥

'ಯಂ ಕಾಮಯೇ ತಂ ತಮುಗ್ರ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ' ಎಂಬುದಾಗಿ ಸ್ವೇಚ್ಛಾಮಾತ್ರದಿಂದಲೇ ಬ್ರಹ್ಮರುದ್ರಾದಿಗಳಿಗೆ ಆಯಾಯ ಪದವಿಯನ್ನು ಕೊಡತಕ್ಕ ಮಹಾಲಕ್ಷ್ಮಿಯು 'ಮಮ ಯೋನಿರಪ್ಸ್ವಂತಸ್ಸಮುದ್ರೇ' ಎಂದು ತನಗೂ ಕಾರಣನಾದವನು ಸಮುದ್ರದ ನೀರಿನಲ್ಲಿರುವನೆಂದು ಸ್ವಯಂ ಹೇಳಿರುವುದರಿಂದ ಅಂತಃಸಮುದ್ರತ್ವ ಎಂಬ ಧರ್ಮವುಳ್ಳವನು ವಿಷ್ಣುವೇ ಎಂದು ತಿಳಿಯುತ್ತದೆ. 'ಸಪ್ತಾರ್ಧಗರ್ಭಾ ಭುವನಸ್ಯ ರೇತೋ ವಿಷ್ಣೋಸ್ತಿಷ್ಠಂತಿ ಪ್ರದಿಶಾ ವಿಧರ್ಮಣಿ' ಎನ್ನುವ ಐತರೇಯಶ್ರುತಿಯಲ್ಲಿ, ಮಹದಾದಿ ತತ್ವಾಭಿಮಾನಿದೇವತೆಗಳ ಸಮುದಾಯವು ತನ್ನ ಆಜ್ಞಾಮಾತ್ರದಿಂದಲೇ ಆಯಾಯ ಕಾರ್ಯಗಳನ್ನು ಮಾಡುತ್ತಾರೆ ಎಂದು ಹೇಳಲ್ಪಟ್ಟ ವಿಷ್ಣುವಿಗೇ 'ಯಸ್ಮಿನ್ ದೇವಾ ಅಧಿವಿಶ್ವೇ ನಿಷೇದುಃ' ಎನ್ನುವ ತೈತ್ತಿರೀಯಶ್ರುತಿಯಲ್ಲೂ ಸರ್ವದೇವಾಶ್ರಯತ್ವವನ್ನು ಹೇಳಿ, ತದೇವ ಬ್ರಹ್ಮ ಎಂದು ಹೇಳಿರುವರು. ಆದ್ದರಿಂದ ಸರ್ವದೇವಾಶ್ರಯನು ವಿಷ್ಣುವೇ. 'ಸಮುದ್ರೇ ಅಂತಃ ಕವಯೋ ವಿಚಕ್ಷತೇ' ಎಂಬ ಶ್ರುತಿಯು ಮುಂದೆ ತದೇವ ಬ್ರಹ್ಮ ಎಂದು ಹೇಳಿ ಸಮುದ್ರಸ್ಥಾನವನ್ನು ವಿಷ್ಣುವಿಗೇ ಎಂದು ಸಮರ್ಥಿಸುತ್ತದೆ. 'ಯದಕ್ಷರೇ ಪರಮೇ ಪ್ರಜಾಃ' ಎನ್ನುವಲ್ಲಿ ಅಕ್ಷರ ನಾಮಕನು 'ತದೇವ ಬ್ರಹ್ಮ' ಎಂದು ಹೇಳಿರುವರು. 'ಋಚೋಕ್ಷರೇ ಪರಮೇ ವ್ಯೋಮನ್' ಎಂಬುದಾಗಿ ವಾಮನ ಸೂಕ್ತದಲ್ಲಿ ಅಕ್ಷರ ಎಂಬ ನಾಮವು ವಿಷ್ಣುವಿನಲ್ಲಿಯೇ ಪ್ರಯುಕ್ತವಾಗಿದೆ. ಆದ್ದರಿಂದ ಅಕ್ಷರ ನಾಮವು ವಿಷ್ಣುವಿಗಲ್ಲದೇ ಬೇರೆ ಯಾರಿಗೂ ಇಲ್ಲ. 'ಯತಃ ಪ್ರಸೂತಾ ಜಗತಃ ಪ್ರಸೂತಿಃ' ಎಂದು ಜಗದುತ್ಪಾದಕಳಾದ ಲಕ್ಷ್ಮೀದೇವಿಗೂ ಕಾರಣತ್ವವನ್ನು ಹೇಳಿ ತದೇವ ಬ್ರಹ್ಮ ಎಂದು ಹೇಳಿರುವರು. ಹೀಗೆ ನಾನಾರೀತಿಯಿಂದ

ಬ್ರಹ್ಮಶಬ್ದವಾಚ್ಯನು ವಿಷ್ಣುವೇ ಎಂದು ಇಲ್ಲಿ ಸಮರ್ಥಿಸಲಾಗಿದೆ.

ಜನ್ಮಾಧಿಕರಣ

ಸೂತ್ರ: ಓಂ ಜನ್ಮಾದ್ಯಸ್ಯ ಯತಃ ಓಂ (೧-೧-೨)

ವಿಷ್ಣುವೇ ಜಗಜ್ಜನ್ಮಾದಿಕಾರಣ

ಮೊದಲನೆಯ ಸೂತ್ರದಲ್ಲಿ ಪರಬ್ರಹ್ಮನಾದ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕಾದ್ದು ಕರ್ತವ್ಯ ಎಂಬುದಾಗಿ ಸಮರ್ಥಿಸಲಾಯಿತು. ಎರಡನೆಯ ಸೂತ್ರದಿಂದ ಪ್ರಾರಂಭಿಸಿ ಆ ಜಿಜ್ಞಾಸೆಯೇ ಮಾಡಲ್ಪಡುತ್ತದೆ. ಸ್ವರೂಪ, ಸಾಧನ, ಫಲ ಇವುಗಳ ವಿಚಾರವೇ **ಬ್ರಹ್ಮಜಿಜ್ಞಾಸಾ** ಎನಿಸುತ್ತದೆ. ಬ್ರಹ್ಮನ ಸ್ವರೂಪ ಅಥವಾ ಲಕ್ಷಣವನ್ನು ತಿಳಿದ ಮೇಲೆಯೇ ಸಾಧನ ಮತ್ತು ಫಲಗಳ ಭಗ್ಗೆ ಆಕಾಂಕ್ಷೆ ಬರುವುದರಿಂದ ಮೊದಲಿಗೆ ಅವನ ಲಕ್ಷಣವನ್ನೇ ನಿರೂಪಿಸಬೇಕು. ಅದಕ್ಕಾಗಿಯೇ ಹೊರಟಿದೆ ಎರಡನೆಯ ಸೂತ್ರ.

ಪ್ರತ್ಯಕ್ಷಕ್ಕೆ ಗೋಚರವಾದ ಚೇತನಾಚೇತನಾತ್ಮಕವಾದ ಈ ಜಗತ್ತಿಗೆ ಯಾರಿಂದ ಯಥಾಯೋಗ್ಯವಾಗಿ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳು ಆಗುತ್ತವೋ ಅವನೇ ಬ್ರಹ್ಮನು.

ಅಂತಃ ಸಮುದ್ರಗಂ ವಿಶ್ವಪ್ರಸೂತೇಃ ಕಾರಣಂ ತು ಯತ್ ।
ಸೂಕ್ತೋಪನಿಷದಾದ್ಯುಕ್ತಂ ಜನ್ಮಾದ್ಯಸ್ಯೇತಿ ಲಕ್ಷ್ಯತೇ ॥೮೯॥

ಸಮುದ್ರದ ಮಧ್ಯದಲ್ಲಿರುವವನು, ಮೂಲಪ್ರಕೃತಿಗೆ ಕಾರಣನೂ ಆದ ಯಾವ ಬ್ರಹ್ಮನು 'ಅಂಭೃಣ ಸೂಕ್ತ' ಮೊದಲಾದ ಸೂಕ್ತಗಳು, 'ಅಂಭಸ್ಯ ಪಾರೇ' ಮೊದಲಾದ ಉಪನಿಷತ್ತುಗಳು, 'ಆಪೋ ನಾರಾಃ' ಇತ್ಯಾದಿ ಸ್ಮೃತಿಗಳಿಂದ ಹೇಳಲ್ಪಟ್ಟಿದ್ದಾನೋ ಆ ಬ್ರಹ್ಮನೇ ತನ್ನಿಂದ ಇತರವಾದ ಎಲ್ಲ ವಸ್ತುಗಳಿಂದಲೂ ಭಿನ್ನವಾದ ಧರ್ಮವುಳ್ಳವನೆಂದು ಜನ್ಮಾದ್ಯಸ್ಯ ಎಂಬ ಸೂತ್ರದಿಂದ ಪ್ರತಿಪಾದಿಸಲ್ಪಟ್ಟಿದ್ದಾನೆ.

ಬ್ರಹ್ಮನಿಗೆ ಲಕ್ಷಣವು ಯಾವುದು, ಜನ್ಮಾದಿಗಳೋ ಅಥವಾ ಜನ್ಮಾದಿಕಾರಣತ್ವವೋ? ಜನ್ಮಾದಿಗಳು ಜಗತ್ತಿನ ಲಕ್ಷಣವಾದ್ದರಿಂದ ಬ್ರಹ್ಮನಲ್ಲಿ ಕೂಡುವುದಿಲ್ಲ. ಬ್ರಹ್ಮನು ಅಪ್ರಸಿದ್ಧನಾದ್ದರಿಂದ ಜನ್ಮಾದಿಕಾರಣತ್ವ ರೂಪವಾದ

ಧರ್ಮವೂ ಅಪ್ರಸಿದ್ಧವೇ ಆಗುವುದರಿಂದ ಅದೂ ಕೂಡುವುದಿಲ್ಲ, ಎಂದರೆ –

ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನಮಾವೃತಿಃ ।
ಬಂಧಮೋಕ್ಷಾವಪಿ ಹ್ಯಾಸು ಶ್ರುತಿಷೂಕ್ತಾ ಹರೇಸ್ಸದಾ ॥೯೦॥

ಈ ಜಗತ್ತಿಗೆ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳೂ ಕೂಡ ಸದಾಕಾಲವೂ ಪರಬ್ರಹ್ಮನಿಂದಲೇ ಆಗುತ್ತವೆ ಎಂಬುದು ಪ್ರಸಿದ್ಧವಾದ ಶ್ರುತಿಗಳಲ್ಲಿ ಪ್ರತಿಪಾದಿತವಾಗಿದೆ. ಆದಪ್ರಯುಕ್ತ ಜನ್ಮಾದಿಕಾರಣತ್ವವು ಪ್ರಸಿದ್ಧವೇ ಆಗಿರುವುದು.

'ಹಿರಣ್ಯಗರ್ಭಃ ಸಮವರ್ತತಾಗ್ರೇ' 'ಏಕೋ ರುದ್ರೋ ನ ದ್ವಿತೀಯಾಯ ತಸ್ಥೇ' 'ಇಮಾನ್ ಲೋಕಾನನೀಶತ ಈಶನೀಭಿಃ' 'ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ' ಇವೇ ಮೊದಲಾದ ಶ್ರುತಿಗಳಲ್ಲಿ ಚತುರ್ಮುಖ ಬ್ರಹ್ಮ, ರುದ್ರಾದಿಗಳಿಗೂ ಸೃಷ್ಟ್ಯಾದಿ ಕಾರಣತ್ವವು ಹೇಳಲ್ಪಟ್ಟಿರುವಾಗ, ಅದು ಶ್ರೀಹರಿಗೇ ಸೇರಿದ್ದು ಎಂಬ ಹೇಳಿಕೆ ಕೂಡುವುದಿಲ್ಲ ಎಂದು ಆಕ್ಷೇಪಿಸಿದರೆ –

ಯನ್ನಾಮಾನಿ ವಿಶಂತ್ಯದ್ಧಾ ಯೋ ದೇವಾನಾಮಿತಿ ಹ್ಯಪಿ ।
ಶ್ರುತೇರ್ನಾಮಾನಿ ಸರ್ವಾಣಿ ವಿಷ್ಣೋರೇವ ಯತಸ್ತತಃ ॥೯೧॥
ಅತೋ ನ ಮುಖ್ಯತೋ ನಾಮ ತದನ್ಯಸ್ಯ ಹಿ ತಸ್ಯಚಿತ್ ।

ಎಲ್ಲ ನಾಮಗಳೂ ಯಾರನ್ನು ಚೆನ್ನಾಗಿ ಪ್ರವೇಶಿಸುತ್ತವೋ, ಯಾರು ಎಲ್ಲ ದೇವತೆಗಳ ನಾಮಗಳನ್ನೂ ಹೊಂದಿರುವನೋ, ಇತ್ಯಾದಿ ಪ್ರಸಿದ್ಧವಾದ ಶ್ರುತಿಗಳಿಂದ ತಿಳಿದುಬರುವ ಪ್ರಕಾರ ಹಿರಣ್ಯಗರ್ಭ, ರುದ್ರ ಮೊದಲಾದ ನಾಮಗಳೆಲ್ಲವೂ ಪರಮಮುಖ್ಯವೃತ್ತಿಯಿಂದ ಶ್ರೀವಿಷ್ಣುವಿನಲ್ಲಿಯೇ ಕೂಡುತ್ತವೆ. ವಿಷ್ಣುವಿನಿಂದ ಇತರರಾದ ಹಿರಣ್ಯಗರ್ಭಾದಿ ದೇವತೆಗಳಿಗೆ ಅವರ ನಾಮಗಳು ಮುಖ್ಯವೃತ್ತಿಯಿಂದ ಇರುವುದಿಲ್ಲ. ಆದಕಾರಣ ಹಿರಣ್ಯಗರ್ಭಃ ಇತ್ಯಾದಿ ಶ್ರುತಿಗಳೂ ವಿಷ್ಣುವಿಗೇ ಸೃಷ್ಟ್ಯಾದಿ ಕಾರಣತ್ವವನ್ನು ಹೇಳುತ್ತವೆ ಎಂದು ತಿಳಿಯಬೇಕು.

ವಿಷ್ಣುವಿಗೆ ಜನ್ಮಾದಿದೋಷವಿಲ್ಲ

'ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ ಜನಿತಾ ಜನಿತಾ ಪೃಥಿವ್ಯಾಃ। ಜನಿತಾऽಗ್ನೇರ್ಜನಿತಾ ಸೂರ್ಯಸ್ಯ ಜನಿತೇಂದ್ರಸ್ಯ

ಜನಿತೋತ ವಿಷ್ಣೋಃ' ಇತ್ಯಾದಿ ಶ್ರುತಿಗಳಲ್ಲಿ ವಿಷ್ಣುವಿಗೆ ಜನ್ಮಾದಿದೋಷಗಳು ಉಕ್ತವಾಗಿರುವುದರಿಂದ ಜಗಜ್ಜನ್ಮಾದಿಕಾರಣತ್ವವು ಹೇಗೆ ಕೂಡುತ್ತದೆ ಎಂದರೆ-

ಗುಣಾಃ ಶ್ರುತಾ ಇತಿ ಹ್ಯಸ್ಮಾತ್ ನ ದೋಷೋಽರ್ಥಃ ಶ್ರುತೇರ್ಭವೇತ್ ॥೯೨॥

'ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತ್ಯಶ್ರುತಾ ಅಪಿ ನೈವಾತ್ರ ಶಂಕಾ। ಚಿಂತ್ಯಾ ಅಚಿಂತ್ಯಾಶ್ಚ ತಥೈವ ದೋಷಾಃ ಶ್ರುತಾಶ್ಚ ನಾಜ್ಞೈರ್ಹಿ ತಥಾ ಪ್ರತೀತಾಃ॥' ಎಂಬ ಶ್ರುತಿವಾಕ್ಯದ ಬಲದಿಂದ ವಿಷ್ಣುವಿಗೆ ಜನ್ಮಾದಿ ದೋಷವು ಸರ್ವಥಾ ಅಸಂಭವ. ಶ್ರೀಹರಿಯಲ್ಲಿ ದೋಷಗಳನ್ನು ಪ್ರತಿಪಾದಿಸುವುದರಲ್ಲಿ ಯಾವ ಶ್ರುತಿಗೂ ತಾತ್ಪರ್ಯವಿರುವುದಿಲ್ಲ.

ವಿವರಣೆ:

'ಜನಿತೋತ ವಿಷ್ಣೋಃ' ಎಂಬ ಶ್ರುತಿಯೂ ವಿಷ್ಣುವಿಗೆ ದೋಷವನ್ನು ಹೇಳುವುದಿಲ್ಲ. ಈ ಶ್ರುತಿಯಲ್ಲಿ ವಿಷ್ಣು ಎನ್ನುವುದು ಯಜಮಾನನಿಗೆ ಅಥವಾ ಯಜ್ಞಕ್ಕೆ ಹೆಸರು. ಸೋಮವು ಯಜಮಾನನನ್ನು ಅಥವಾ ಯಜ್ಞವನ್ನು ಹುಟ್ಟಿಸುತ್ತದೆ ಎಂದೂ ಅಥವಾ ಸೋಮಾದಿ ಶಬ್ದವಾಚ್ಯನಾದ ಕ್ಷೀರಾಬ್ಧಿಶಾಯಿಯಾದ ಮೂಲರೂಪ ನಾರಾಯಣನಿಂದ ವಿಷ್ಣುಶಬ್ದವಾಚ್ಯವಾದ ಪ್ರಾದುರ್ಭಾವರೂಪಕ್ಕೆ ಅಭಿವ್ಯಕ್ತಿಯು ಎಂದೂ ಈ ಶ್ರುತಿಗೆ ಅರ್ಥ ಮಾಡಬೇಕು.

ಪ್ರೀತ್ಯಾ ಮೋಕ್ಷಪರತ್ವಾಚ್ಚ ತಾತ್ಪರ್ಯಂ ನೈವ ದೂಷಣೇ ।
ಸರ್ವೇಷಾಮಪಿ ವಾಕ್ಯಾನಾಂ ಮಹಾತಾತ್ಪರ್ಯಮತ್ರ ಹಿ ॥೯೩॥
ತದ್ವಿರೋಧೇ ನ ಮಾನತ್ವಂ ಫಲಂ ಮುಕ್ತೇರ್ಹಿ ವಾಕ್ಯತಃ ।

ಶ್ರೀಹರಿಯಲ್ಲಿ ಪ್ರೀತಿಯನ್ನು ಹುಟ್ಟಿಸಿ ಅಧಿಕಾರಿಗಳಿಗೆ ಮೋಕ್ಷವನ್ನು ಪ್ರತಿಪಾದಿಸುವುದರಲ್ಲಿಯೇ ಎಲ್ಲ ಶ್ರುತಿವಾಕ್ಯಗಳಿಗೂ ತಾತ್ಪರ್ಯವಿರುವುದು. ಪರಮೇಶ್ವರನಲ್ಲಿ ದೋಷಗಳನ್ನು ಪ್ರತಿಪಾದಿಸುವುದರಲ್ಲಿ ತಾತ್ಪರ್ಯವು ಎಂದಿಗೂ ಇರುವುದಿಲ್ಲ. ಎಲ್ಲ ಶ್ರುತಿಗಳ ಮಹಾತಾತ್ಪರ್ಯವು ಭಗವಂತನ ಗುಣೋತ್ಕರ್ಷವನ್ನು ಪ್ರತಿಪಾದಿಸುವುದೇ ಆಗಿರುವುದು. ಪರಮಾತ್ಮನ ಗುಣೋತ್ಕರ್ಷಜ್ಞಾನವೇ ಮುಕ್ತಿಗೆ ಕಾರಣವಾದ್ದರಿಂದ, ಅದಕ್ಕೆ ವಿರುದ್ಧವಾದ ದೋಷಗಳನ್ನು ಪ್ರತಿಪಾದಿಸುವ ವಾಕ್ಯಗಳಿಗೆ ಪ್ರಾಮಾಣ್ಯವು ಕೂಡುವುದಿಲ್ಲ.

ಶೈವಾದಿ ಪುರಾಣಗಳೂ, ಪಾಶುಪತಾದಿ ಶಾಸ್ತ್ರಗಳೂ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನೂ, ವಿಷ್ಣುವಿಗೆ ಪಾರತಂತ್ರ್ಯಾದಿ ದೋಷಗಳನ್ನೂ ಹೇಳುತ್ತವೆ. ಆದಕಾರಣ ವಿಷ್ಣುವಿಗೆ ಜಗಜ್ಜನ್ಮಾದಿಕಾರಣತ್ವ ಕೂಡುವುದಿಲ್ಲ ಎಂದರೆ –

ನ ಪುರಾಣಾದಿ ಮಾನತ್ವಂ ವಿರುದ್ಧಾರ್ಥೇ ಶ್ರುತೇರ್ಭವೇತ್ ॥೯೪॥

ದರ್ಶನಾಂತರಮೂಲತ್ವಾನ್ಮೋಹಾರ್ಥಂ ಚಾಜ್ಞಯಾ ಹರೇಃ ।

ಶ್ರುತಿಗೆ ವಿರುದ್ಧವಾದ ಅರ್ಥದಲ್ಲಿ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಹೇಳುವ ಶೇವಾದಿ ಪುರಾಣಗಳಿಗೆ ಪ್ರಾಮಾಣ್ಯವೇ ಕೂಡುವುದಿಲ್ಲ. ಶೈವಾದಿ ಪುರಾಣಗಳಿಗೆ ಶ್ರುತಿಮೂಲತ್ವವಿರುವುದಿಲ್ಲ. ಅವು ಶಾಸ್ತ್ರಾಂತರ ಮೂಲತ್ವವನ್ನು ಹೊಂದಿರುವುದಲ್ಲದೆ, ಶ್ರೀಹರಿಯ ಆಜ್ಞಾನುಸಾರವಾಗಿ ದುರ್ಜನರ ಮೋಹನಾರ್ಥವಾಗಿ ರಚಿತವಾಗಿವೆ. ಆದಕಾರಣ ಅವುಗಳು ಪ್ರಮಾಣವಲ್ಲ.

ಯಕ್ತ್ಯಂತರದಿಂದಲೂ ರುದ್ರಾದಿಗಳಿಗೆ ಜಗತ್ಕಾರಣವನ್ನು ನಿರಾಕರಿಸುತ್ತಾರೆ–

ನ ಸರ್ವನಾಮತಾऽನ್ಯೇಷಾಂ ಶ್ರುತಾವುಕ್ತಾ ಹಿ ಕುತ್ರಚಿತ್ ॥೯೫॥

ಅದೋಷ ವಚನಾಚ್ಚೈವ ನಿಯಮೇನ ಹರೇಃ ಶ್ರುತೌ ।

ರುದ್ರಾದಿಗಳಿಗೆ ಸರ್ವಶಬ್ದವಾಚ್ಯತ್ವವನ್ನು ಯಾವ ಶ್ರುತಿಯೂ ಹೇಳಿಲ್ಲ. ಇದು ಪ್ರಮಾಣಪ್ರಸಿದ್ಧ. ಶ್ರೀಹರಿಗೆ ಯಾವುದೇ ದೋಷಗಳಿಲ್ಲವೆಂದು ಹೇಳುವ ವಾಕ್ಯಗಳು ನಿಯಮವಾಗಿ ಎಲ್ಲ ಶ್ರುತಿಗಳಲ್ಲಿ ಉಕ್ತವಾಗಿವೆ.

ಅನ್ಯ ದೇವತೆಗಳು ದೋಷಯುಕ್ತರು

ಪಾರತಂತ್ರ್ಯಾದಿ ದೋಷಗಳಿಂದ ಕೂಡಿದವರು ಜಗತ್ಕಾರಣರಾಗುವುದು ಅಸಂಭವ. ಶ್ರೀಹರಿಯು ಸಕಲದೋಷದೂರನಾದ್ದರಿಂದ ಅವನೇ ಜಗತ್ಕಾರಣನು ಎಂದು ತಿಳಿಸುತ್ತಾರೆ –

ಅಜ್ಞಾನಂ ಪಾರತಂತ್ರ್ಯಂ ಚ ಪ್ರಲಯೇऽಭಾವ ಏವ ಚ ॥೯೬॥

ಅಶಕ್ತಿಶ್ಚೋದಿತಾऽನ್ಯೇಷಾಂ ಸರ್ವೇಷಾಮಪಿ ಚ ಶ್ರುತೌ ।

ಶ್ರೀಹರಿಯನ್ನು ಬಿಟ್ಟು ಇತರೆಲ್ಲರಿಗೂ ಕೂಡ ಅಜ್ಞಾನ, ಪರಾಧೀನತೆ, ಪ್ರಲಯಕಾಲದಲ್ಲಿ ಇಲ್ಲದಿರುವಿಕೆ ಹಾಗೂ ಅಸಾಮರ್ಥ್ಯ ಮೊದಲಾದ ದೋಷಗಳು ಶ್ರುತಿಗಳಲ್ಲಿ ಹೇಳಲ್ಪಟ್ಟಿವೆ. ಆದ್ದರಿಂದ ದೋಷದೂರನಾದ ಶ್ರೀಹರಿಯೇ ಜಗತ್ಕಾರಣನು, ದೋಷಗಳಿಂದ ಕೂಡಿರುವ ಅನ್ಯರಲ್ಲ.

ಜನ್ಮಾದಿಕಾರಣತ್ವ ಬ್ರಹ್ಮನ ಸ್ವಲಕ್ಷಣ

ಈ ರೀತಿಯಾಗಿ ಶ್ರೀಹರಿಯೇ ಜಗಜ್ಜನ್ಮಾದಿಕಾರಣನು ಎಂದು ಸಮರ್ಥಿಸಿ, ಜಗಜ್ಜನ್ಮಾದಿರೂಪವಾದ ಲಕ್ಷಣವು ಶ್ರೀಹರಿಯ ಸ್ವರೂಪಭೂತ ಲಕ್ಷಣವೇ ಹೊರತು ತಟಸ್ಥ ಲಕ್ಷಣವಲ್ಲ ಎಂದು ಈಗ ನಿರೂಪಿಸುತ್ತಾರೆ.

ಜನ್ಮಾದ್ಯಸ್ಯೇತಿ ತೇನೈತದ್ವಿಷ್ಣೋರೇವ ಸ್ವಲಕ್ಷಣಂ ॥೯೭॥
ಅಸ್ಯೋದ್ಭವಾದಿ ಹೇತುತ್ವಂ ಸಾಕ್ಷಾದೇವ ಸ್ವಲಕ್ಷಣಂ ।
ಕೃಷ್ಣಧ್ಯಾನಚ್ಛಲೇನೈವ ಸ್ವಯಂ ಭಾಗವತೇಽಬ್ರವೀತ್ ॥೯೮॥

'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಜಗಜ್ಜನ್ಮಾದಿ-ಕಾರಣತ್ವವು ವಿಷ್ಣುವಿಗೇ ಕೂಡುತ್ತದೆ, ಇತರರಿಗೆ ಕೂಡುವುದಿಲ್ಲ. ಅಸಂಭವಾದಿಗಳು ಇಲ್ಲವಾದ್ದರಿಂದ ಈ ಲಕ್ಷಣವು ಸ್ವರೂಪಭೂತವಾದ ಲಕ್ಷಣವೇ ಆಗಿದೆ. ಏಕೆಂದರೆ, ಈ ಸಮಸ್ತ ಜಗತ್ತಿನ ಉತ್ಪತ್ತಿಯೇ ಮೊದಲಾದವುಗಳ ಕಾರಣತ್ವವನ್ನು ಬ್ರಹ್ಮನಿಗೆ ಸ್ವಲಕ್ಷಣವೆಂದೇ ಭಾಗವತದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಕೃಷ್ಣನು ಧ್ಯಾನಿಸಿದ್ದನ್ನು ದೃಢಪಡಿಸಲು ಹಾಗೂ ಇತರರಿಗೆ ಧ್ಯಾನದ ವಿಧಿಯನ್ನು ತಿಳಿಸಲು ಸ್ವಯಂ ವೇದವ್ಯಾಸರೇ ಅನುವಾದಮಾಡುವ ನೆಪದಿಂದ ಭಾಗವತದಲ್ಲಿ ಹೇಳಿದರು.

ವಿವರಣೆ: ಮಾಯಾವಾದಿಗಳು ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನಿಗೆ ಸ್ವರೂಪಭೂತ ಲಕ್ಷಣವಲ್ಲ. ಅದು ಬ್ರಹ್ಮನಲ್ಲಿ ಇಲ್ಲ. ಬ್ರಹ್ಮನಲ್ಲಿರುವ ಮಾಯೆಯಲ್ಲಿ ಇರುವುದು. ಆದ್ದರಿಂದ ಅದು ಬಾಹ್ಯಲಕ್ಷಣ ಅಥವಾ ತಟಸ್ಥಲಕ್ಷಣ ಎಂಬುದಾಗಿ ಹೇಳುತ್ತಾರೆ. ಇದನ್ನು ನಿರಾಕರಿಸಲು ಶ್ರೀಮದಾಚಾರ್ಯರು ಭಾಗವತದ ವಾಕ್ಯವನ್ನು ಇದಕ್ಕೆ ಸಂವಾದಿಯಾಗಿ ನೀಡುವುದರ ಮೂಲಕ ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನಿಗೆ ಸ್ವಲಕ್ಷಣ ಎಂದು ಪ್ರತಿಪಾದಿಸಿದ್ದಾರೆ. 'ಏಕಂ ಪರಂಜ್ಯೋತಿರನನ್ಯಮದ್ವಯಂ ಸ್ವಸಂಸ್ಥಯಾ ನಿತ್ಯ ನಿರಸ್ತಕಲ್ಮಷಂ। ಬ್ರಹ್ಮಾಖ್ಯಮಸ್ಯೋದ್ಭವನಾದಿ ಹೇತುಭಿಃ ಸ್ವಲಕ್ಷಣೈರ್ಲಕ್ಷಿತ-ಭಾವನಿರ್ವೃತಿಮ್॥' (ಸ್ಕಂಧ. ೧೦, ಅ. ೭೮ ಶ್ಲೋ. ೫). ಇಂಥಹ ಬ್ರಹ್ಮಾಖ್ಯವಾದ ತನ್ನ ಸ್ವರೂಪವನ್ನೇ ಶ್ರೀಕೃಷ್ಣನು ಧ್ಯಾನಿಸಿದನೆಂದು ಸೂತ್ರಕಾರರಾದ ವೇದವ್ಯಾಸರೇ ಭಾಗವತದಲ್ಲಿ ಹೇಳಿರುವರು.

ಜೀವಬ್ರಹ್ಮೈಕ್ಯ ನಿರಾಕರಣೆ

ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನ ಸ್ವಲಕ್ಷಣವಾದ್ದರಿಂದ ಅದು ಇತರರಿಗೆ ಕೂಡುವುದಿಲ್ಲ. ಆದ್ದರಿಂದ ಈ ಸೂತ್ರವು ಜೀವೈಕ್ಯವನ್ನು ನಿರಾಕರಿಸುತ್ತದೆ ಎಂದು ಮುಂದಿನ ವಾಕ್ಯದಲ್ಲಿ ಹೇಳುತ್ತಾರೆ.

ಅತೋ ಜೀವೈಕ್ಯಮಪಿ ಸ ನಿರಾಚಕ್ರೇ ಜಗದ್ಗುರುಃ ।
ನ ಹಿ ಜನ್ಮಾದಿಹೇತುತ್ವಂ ಜೀವಸ್ಯ ಜಗತೋ ಭವೇತ್ ॥೯೯॥

ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನ ಸ್ವಲಕ್ಷಣವೆಂದು ಹೇಳುವುದರ ಮೂಲಕ ಜಗದ್ಗುರುಗಳಾದ ಶ್ರೀವೇದವ್ಯಾಸರು ಈ ಸೂತ್ರದ ಮೂಲಕ ಜೀವಬ್ರಹ್ಮರ ಐಕ್ಯವನ್ನೂ ನಿರಾಕರಿಸಿದ್ದಾರೆ. ಜೀವನಿಗೆ ಸರ್ವಜ್ಞತ್ವ, ಸರ್ವಕರ್ತೃತ್ವಾದಿಗಳು ಇಲ್ಲದಿರುವ ಪ್ರಯುಕ್ತ ಜಗಜ್ಜನ್ಮಾದಿಕಾರಣತ್ವವು ಸರ್ವಥಾ ಕೂಡಲಾರದು.

ಹಿತಾಕ್ರಿಯಾದಿದೋಷಂ ಚ ವಕ್ಷ್ಯತ್ಯೇವ ಸ್ವಯಂ ಪ್ರಭುಃ ।

ತನಗೆ ಹಿತವನ್ನು ಮಾಡದಿರುವುದು, ಅಹಿತವನ್ನು ಮಾಡಿಕೊಳ್ಳುವುದು ಇತ್ಯಾದಿ ಅಸ್ವಾತಂತ್ರ್ಯ ನಿಮಿತ್ತವಾದ ದೋಷಗಳು ಜೀವನಿಗೆ ಇರುವ ಪ್ರಯುಕ್ತವೂ ಜಗಜ್ಜನ್ಮಾದಿಕಾರಣತ್ವವು ಜೀವನಿಗೆ ಕೂಡಲಾರದು. ಸರ್ವಸಮರ್ಥರಾದ ಶ್ರೀವೇದವ್ಯಾಸರು ಈ ವಿಷಯವನ್ನು 'ಇತರ ವ್ಯಪದೇಶಾತ್' ಎನ್ನುವ ಸೂತ್ರದಲ್ಲಿ ಹೇಳಿರುವರು.

ವಿವರಣೆ: ಲಕ್ಷ್ಯವಸ್ತುವಿಗೆ ಸಜಾತೀಯ, ವಿಜಾತೀಯ ಪದಾರ್ಥಗಳಿಂದ ಭೇದವನ್ನು ತಿಳಿಸುವುದಕ್ಕಾಗಿಯೇ ಲಕ್ಷಣವನ್ನು ಹೇಳುವುದು. ಸೂತ್ರಕಾರರು ಈ ಲಕ್ಷಣದಿಂದ ಬ್ರಹ್ಮನನ್ನು ಸಜಾತೀಯವಾದ ಜೀವರಿಂದಲೂ, ವಿಜಾತೀಯವಾದ ಜಡದಿಂದಲೂ ಭಿನ್ನನೆಂದೇ ತಿಳಿಸಿದರು. ಹೀಗೆ ಜೀವೈಕ್ಯವನ್ನು ನಿರಾಕರಿಸುವ ಈ ಸೂತ್ರದ ಆರಂಭವು ಜೀವೈಕ್ಯವಾದಿಗಳ ಮತದಲ್ಲಿ ಸರ್ವಥಾ ಕೂಡಲಾರದು.

ಮಾಯಾವಾದಿಗಳು ಬ್ರಹ್ಮನು ನಿರ್ವಿಶೇಷನೆಂದು ಅಂಗೀಕರಿಸುವುದರಿಂದ ಬ್ರಹ್ಮನಿಗೆ ಲಕ್ಷಣವನ್ನು ಹೇಳುವ ಈ ಸೂತ್ರವು ಅವರ ಮತದಲ್ಲಿ ಕೂಡಲಾರದು ಎಂದು ಮುಂದಿನ ವಾಕ್ಯದಲ್ಲಿ ಹೇಳುತ್ತಾರೆ.

ನಿರ್ಗುಣತ್ವಂ ಚ ತೇನೈವ ನಿಷಿದ್ಧಂ ಪ್ರಭುಣಾ ಸ್ವಯಂ ॥೧೦೦॥

ಜಗಜ್ಜನ್ಮಾದಿಕಾರಣತ್ವವನ್ನು ಹೇಳುವ ಸೂತ್ರದ ಮೂಲಕ ಸ್ವಯಂ ವೇದವ್ಯಾಸರಿಂದಲೇ ಬ್ರಹ್ಮನಿಗೆ ಗುಣರಾಹಿತ್ಯವೂ ನಿಷೇಧಿಸಲ್ಪಡುತ್ತದೆ.

ವಸ್ತುತಃ ಬ್ರಹ್ಮನಲ್ಲಿ ಜಗಜ್ಜನ್ಮಾದಿಕರ್ತೃತ್ವವು ಇಲ್ಲದಿದ್ದರೂ, ಮಾಯೆಯಲ್ಲಿರುವ ಕರ್ತೃತ್ವವು ಲಕ್ಷಣಯಾ (ಅಮುಖ್ಯವಾಗಿ) ಮಾಯೆಗೆ ಆಶ್ರಯನಾದ ಬ್ರಹ್ಮನಲ್ಲಿ ಹೇಳಲ್ಪಡುತ್ತದೆ. ಕರ್ತೃತ್ವವು ಬ್ರಹ್ಮನ ಸ್ವಲಕ್ಷಣವಲ್ಲ, ಕೇವಲ ಆರೋಪಿತವಾದ್ದರಿಂದ ಜೀವಬ್ರಹ್ಮರ ಐಕ್ಯವು ಕೂಡುತ್ತದೆ ಎಂದು ಆಶಂಕಿಸಿದರೆ –

ಭೇದೇನೈವ ಮುಖ್ಯಾರ್ಥಸಂಭವೇ ಲಕ್ಷಣಾ ಕುತಃ ।

ಜೀವಬ್ರಹ್ಮರಿಗೆ ಸ್ವಾಭಾವಿಕವಾಗಿರುವ ಭೇದವನ್ನು ಸ್ವೀಕರಿಸುವುದರಿಂದಲೇ 'ಜಗದಾದಿಕರ್ತೃತ್ವವು ಬ್ರಹ್ಮನಲ್ಲಿ ಸ್ವರೂಪಲಕ್ಷಣವೇ ಹೌದು, ತಟಸ್ಥವಲ್ಲ' ಎನ್ನುವ ಮುಖ್ಯವಾದ ಅರ್ಥವು ಕೂಡುತ್ತಿರಲು, ಅಮುಖ್ಯವಾದ ಲಕ್ಷಣಾವೃತ್ತಿಯನ್ನು ಆಶ್ರಯಿಸಬೇಕೇಕೆ?

ವಿವರಣೆ:

ಸರ್ವಕರ್ತೃತ್ವ, ಸರ್ವಜ್ಞತ್ವಾದಿ ಧರ್ಮಗಳು ಬ್ರಹ್ಮನಿಗೂ, ಅಲ್ಪಜ್ಞತ್ವ, ಅಲ್ಪಶಕ್ತಿತ್ವಾದಿ ಧರ್ಮಗಳು ಜೀವರಿಗೂ ಸ್ವಾಭಾವಿಕವಾದಂಥವು. ಈ ರೀತಿಯ ವಿರುದ್ಧ ಧರ್ಮಗಳ ಕಾರಣ ಜೀವಬ್ರಹ್ಮರಿಗೆ ಅಭೇದವು ಕೂಡುವುದಿಲ್ಲ. ಅಭೇದವನ್ನು ಕೂಡಿಸಲಿಕ್ಕಾಗಿಯೇ ಜಗತ್ಕರ್ತೃತ್ವವು ಬ್ರಹ್ಮನಿಗೆ ಸಹಜವಾದ ಮುಖ್ಯಲಕ್ಷಣವಲ್ಲ, ಕೇವಲ ಔಪಚಾರಿಕ (ಆರೋಪಿತ) ಎಂದು ಮಾಯಾವಾದಿಗಳು ಹೇಳುತ್ತಾರೆ. ಇದು ಸರ್ವಥಾ ಸರಿಯಲ್ಲ. ಮುಖ್ಯಾರ್ಥವು ಕೂಡದಿದ್ದಾಗ ಲಕ್ಷಣಾವನ್ನು ಆಶ್ರಯಿಸಬೇಕು. ಜೀವಬ್ರಹ್ಮರಿಗೆ ಭೇದವನ್ನು ಅಂಗೀಕರಿಸುವುದರಿಂದ ಮುಖ್ಯಾರ್ಥವು ಕೂಡುತ್ತದೆ. ಅಭೇದವನ್ನು ಅಂಗೀಕರಿಸಿದರೆ ಮಾತ್ರ ಲಕ್ಷಣಾವನ್ನು ಆಶ್ರಯಿಸಬೇಕು. 'ತತ್ತ್ವಮಸಿ' ಇತ್ಯಾದಿ ಶ್ರುತಿಗಳಿಂದ ಜೀವಬ್ರಹ್ಮ ಭೇದವು ಸಿದ್ಧವಾಗುವುದರಿಂದ ಅಭೇದವು ಅಪ್ರಾಮಾಣಿಕವಾಗುವುದು. ತತ್ತ್ವಮಸಿ ಎನ್ನುವಲ್ಲಿ 'ತತ್' ಪದಕ್ಕೆ ಸರ್ವಜಗತ್ಕರ್ತನೂ, ಸರ್ವಜ್ಞನೂ, ಸ್ವತಂತ್ರನೂ, ಸರ್ವಗುಣಪೂರ್ಣನೂ,

ಸರ್ವಾಧಾರನೂ ಆದ ಪರಬ್ರಹ್ಮ ಎಂದು ಮುಖ್ಯಾರ್ಥ. 'ತ್ವಂ' ಪದಕ್ಕೆ ಅಲ್ಪಶಕ್ತಿ ಮತ್ತು ಅಲ್ಪಬುದ್ಧಿಯುಳ್ಳವನೂ, ಅಸ್ವತಂತ್ರನೂ, ಅಪೂರ್ಣನೂ, ಈಶಾಶ್ರಯನೂ ಆದ ಜೀವ ಎಂಬುದೇ ಮುಖ್ಯಾರ್ಥವಾಗವುದು. 'ಅಲ್ಪಶಕ್ತಿರಸಾರ್ವಜ್ಞ್ಯಂ ಪಾರತಂತ್ರ್ಯಮಪೂರ್ಣತಾ। ಉಪಜೀವಕತ್ವಂ ಜೀವತ್ವಮೀಶತ್ವಂ ತದ್ವಿಪರ್ಯಯಃ। ಸ್ವಾಭಾವಿಕಂ ತಯೋರೇತನ್ನಾನ್ಯಥಾ ತು ಕಥಂಚನ॥' (ಮಹಾವಿಷ್ಣುಪುರಾಣ). ಹೀಗೆ ಪ್ರಾಮಾಣಿಕವಾದ ಭೇದವೇ ಮುಖ್ಯಾರ್ಥವಾಗಿರಲು, ಅದನ್ನು ಬಿಟ್ಟು ಅಪ್ರಾಮಾಣಿಕವಾದ ಲಾಕ್ಷಣಿಕ ಅರ್ಥವನ್ನು ಏಕೆ ಆಶ್ರಯಿಸಬೇಕು?

'ತತ್ತ್ವಮಸಿ' ಎನ್ನುವ ವಾಕ್ಯವು ಬ್ರಹ್ಮ ಮತ್ತು ಜೀವರಲ್ಲಿರುವ ಪರಸ್ಪರ ವಿರುದ್ಧವಾದ ಧರ್ಮಗಳನ್ನು ಬಿಟ್ಟು ಚೈತನ್ಯತ್ವವನ್ನು ಮಾತ್ರ ಪರಿಗಣಿಸಿ ಜೀವಬ್ರಹ್ಮರಿಗೆ ಐಕ್ಯವನ್ನು ಪ್ರತಿಪಾದಿಸುತ್ತದೆಯಾದ್ದರಿಂದ ಭೇದಪರ ಅರ್ಥವಾದರೂ ಹೇಗೆ ಕೂಡುತ್ತದೆ ಎಂದು ಕೇಳಿದರೆ –

ಕಥಂ ನಿತ್ಯಗುಣಸ್ಯಾಸ್ಯ ಸ್ಯಾದ್ಐಕ್ಯಂ ಗುಣಹಾನತಃ ॥೧೦೧॥

ನಿತ್ಯವಾದ ಗುಣಗಳುಳ್ಳ ಈಶ್ವರನಿಗೆ, ಗುಣಗಳಿಲ್ಲದಿರುವ ಅಂದರೆ ದೋಷಗಳಿಂದ ಕೂಡಿರುವ ಜೀವನೊಂದಿಗೆ ಐಕ್ಯವಾದರೂ ಹೇಗೆ ಆಗುವುದು? ಅಥವಾ ನಿತ್ಯವಾದ ಗುಣಗಳುಳ್ಳ ಈಶ್ವರನಿಗೆ ಗುಣಗಳನ್ನು ತ್ಯಜಿಸಿ, ನಿತ್ಯವಾದ ಪಾರತಂತ್ರ್ಯಾದಿ ದೋಷವುಳ್ಳ ಜೀವನೊಂದಿಗೆ ಐಕ್ಯವು ಹೇಗೆ ಕೂಡುವುದು?

ಅಭೇದವನ್ನು ಕೂಡಿಸಲಿಕ್ಕಾಗಿ ನಿರ್ಗುಣಬ್ರಹ್ಮನನ್ನು ಕಲ್ಪಿಸಿಕೊಂಡು ಆತನಿಗೆ ಜೀವನೊಂದಿಗೆ ಅಭೇದವನ್ನು ಹೇಳುವುದಾದರೆ –

ಸದೈವ ಗುಣವತ್ತ್ವೇಽಸ್ಯ ಭಿನ್ನಂ ಸ್ಯಾನ್ನಿರ್ಗುಣಂ ಸದಾ ।

ನಿರ್ಗುಣನನ್ನೇ ನಿರೂಪಿಸಲು ಆಗುವುದಿಲ್ಲ. ಏಕೆಂದರೆ, ಆ ನಿರ್ಗುಣನು ಸಗುಣನಾದ ಈಶ್ವರನಿಂದ ಅಭಿನ್ನನೆಂದರೆ ನಿರ್ಗುಣನಿಗೂ ಸಗುಣತ್ವವು ಬರುವುದು. ನಿರ್ಗುಣನು ಸಗುಣನಿಂದ ಅತ್ಯಂತಭಿನ್ನನೆಂದಾದರೆ, ಈ ಸಗುಣಬ್ರಹ್ಮನಿಗೆ ನಿತ್ಯಗುಣಗಳಿರುವುದರಿಂದ ಯಾವಾಗಲೂ ನಿರ್ಗುಣನು ಸಗುಣನಿಂದ ಭಿನ್ನನಾಗಿಯೇ ಇರಬೇಕಾಗುವುದು. ಇದರಿಂದ ಅದ್ವೈತಕ್ಕೆ

ಭಂಗ ಬರುವುದು. ಅಂದರೆ ಯಾವಕಾಲಕ್ಕೂ ಸಗುಣಬ್ರಹ್ಮನಿಗೆ ನಿರ್ಗುಣತ್ವವು ಬರಲಾರದು ಎಂದು ತಾತ್ಪರ್ಯ.

ಹಾಗಾದರೆ ಸ್ವಭಾವತಃ ನಿರ್ಗುಣನೇ ಆದ ಬ್ರಹ್ಮನು ಮಿಥ್ಯಾಗುಣಗಳಿಂದ ಆರೋಪಿತನಾಗಿ ಸಗುಣನೆಂದು ಅಜ್ಞರಿಂದ ಗ್ರಹಿಸಲ್ಪಡುತ್ತಾನೆ ಎಂದರೆ -

ನ ಚ ಮಿಥ್ಯಾಗುಣತ್ವಂ ಸ್ಯಾದನಿರ್ವಾಚ್ಯಸ್ಯ ದೂಷಣಾತ್ ॥೧೦೨॥

ನಿರ್ಗುಣತ್ವಂ ತದಾ ಚ ಸ್ಯಾದಾಸುರತ್ವಂ ನ ಚಾನ್ಯಥಾ ।

ಮಿಥ್ಯಾ ಶಬ್ದಕ್ಕೆ ಅಸತ್ತೆಂದು ಹೇಳುವ ಹಾಗಿಲ್ಲ. ಅನಿರ್ವಾಚ್ಯವೆಂದು ಹೇಳಿದರೆ ಅದನ್ನು ಈಗಾಗಲೇ(ಮೊದಲನೆಯ ಸೂತ್ರದ ವ್ಯಾಖ್ಯಾನದಲ್ಲಿಯೇ) ನಿರಾಕರಿಸಲಾಗಿದೆ. ಆದ್ದರಿಂದ ಮಿಥ್ಯಾಭೂತವಾದ ಗುಣಗಳಿವೆ ಎಂಬುದು ಕೂಡುವುದಿಲ್ಲ. ಗುಣರಾಹಿತ್ಯ ರೂಪವಾದ ನಿರ್ಗುಣತ್ವವನ್ನು ನಿರೂಪಿಸಲು ಸಾಧ್ಯವಿಲ್ಲ. ಹೀಗಿದ್ದರೂ ನಿರ್ಗುಣತ್ವವು ಪರರಿಗೆ ಇಷ್ಟವೇ ಎಂದರೆ, ಅಂಥಹ ನಿರ್ಗುಣತ್ವವು ಸಕಲಸದ್ಗುಣಗಳ ಮೂರ್ತಿಯಾದ ಬ್ರಹ್ಮನಲ್ಲಿ ಇಲ್ಲದಿರುವ ಎಲ್ಲ ದೋಷಗಳ ಮುದ್ದೆಯಾದ ಆಸುರತ್ವವೆಂದೇ ಹೇಳಬೇಕಾಗುವುದು. ಅನ್ಯಥಾ ಮಾರ್ಗವಿರುವುದಿಲ್ಲ. ಇಂಥಹ ಆಸುರತ್ವ ಪ್ರತಿನಿಧಿಯಾದ ನಿರ್ಗುಣಬ್ರಹ್ಮನೊಂದಿಗೆ ಐಕ್ಯವನ್ನು ಹೇಳುವ ಮಾಯಾವಾದಿಗಳಿಗೂ ಆಸುರತ್ವವೇ ಬರಬೇಕಾಗುವುದು.

ಲಕ್ಷಣಕ್ಕೆ ತಟಸ್ಥತ್ವಾದಿಗಳನ್ನು ಸಿದ್ಧಿಸುವುದಕ್ಕಾಗಿ 'ಗುಣ ಮತ್ತು ಗುಣಿಗಳಿಗೆ ಭೇದವನ್ನು ಅಥವಾ ಅಭೇದವನ್ನು ನಿರೂಪಣೆ ಮಾಡಲಿಲ್ಲ' ಎನ್ನುವ ಪರರ ಹೇಳಿಕೆಯನ್ನು ಈಗ ದೂಷಿಸುತ್ತಾರೆ -

ಲಕ್ಷ್ಯಲಕ್ಷಣಯೋರ್ಭೇದೋऽಭೇದೋ ವಾ ಯದಿ ವೋಭಯಂ ॥೧೦೩॥

ಇತಿ ಪೃಷ್ಟೇ ತದೈಕ್ಯಸ್ಯ ಗತಿರೇವ ನ ವಿದ್ಯತೇ ।

ಲಕ್ಷ್ಯನಾದ ಬ್ರಹ್ಮನಿಗೂ, ಜಗಜ್ಜನ್ಮಾದಿಕಾರಣತ್ವರೂಪವಾದ ಲಕ್ಷಣಕ್ಕೂ ಭೇದವೋ, ಅಭೇದವೋ ಅಥವಾ ಭೇದಾಭೇದವೋ ಎಂದು ಕೇಳಿದರೆ, ಆಗ ಐಕ್ಯಕ್ಕೆ ನಿರೂಪಣಾ ಪ್ರಕಾರವೇ ಇರುವುದಿಲ್ಲ.

ವಿವರಣೆ: ಬ್ರಹ್ಮನಿಗೆ ಹೇಳಲ್ಪಟ್ಟಿರುವ ಜಗಜ್ಜನ್ಮಾದಿ ಕರ್ತೃತ್ವರೂಪವಾದ ಲಕ್ಷಣವು ಬ್ರಹ್ಮನಿಂದ ಭಿನ್ನವೆಂದರೆ, ಸಿದ್ಧಾಂತಿಗಳು ಬ್ರಹ್ಮನ ಧರ್ಮಗಳಿಗೆ

ಬ್ರಹ್ಮನಿಂದ ಭೇದವನ್ನು ಹೇಳಿರುವುದರಿಂದ ಅಪಸಿದ್ಧಾಂತವು. ಅಭಿನ್ನವೆಂದರೆ ಲಕ್ಷ್ಯ-ಲಕ್ಷಣಭಾವವೇ ಕೂಡದು. ಲಕ್ಷಣಗಳು ಅನೇಕವಿರುವುದರಿಂದ ಅವುಗಳಿಂದ ಅಭಿನ್ನನಾದ ಬ್ರಹ್ಮನಿಗೂ ಅನೇಕತ್ವವು ಬರಬೇಕಾಗುವುದು. ಒಬ್ಬನೇ ಬ್ರಹ್ಮನೊಂದಿಗೆ ಬಹುಲಕ್ಷಣಗಳೊಂದಿಗೆ ಅಭೇದವನ್ನು ಹೇಳಿದರೆ ಲಕ್ಷಣಗಳಿಗೆ ಏಕತ್ವ ಬರುವುದು. ಭಿನ್ನಾಭಿನ್ನವೆಂದರೆ ಭೇದವೂ ಅಭೇದವೂ ಒಂದೇಕಡೆ ಕೂಡದಿರುವುದರಿಂದ ವಿರೋಧವು ಬರುವುದು. ಹೀಗೆ ಯಾವ ಪ್ರಕಾರದಿಂದಲೂ ಬ್ರಹ್ಮನ ಧರ್ಮಗಳನ್ನು ನಿರ್ವಚನ ಮಾಡಲಿಕ್ಕೆ ಬರುವುದಿಲ್ಲ. ಆದಕಾರಣ ಜೀವಬ್ರಹ್ಮರಿಗೆ ಐಕ್ಯವೇ ಯುಕ್ತವೆಂದು ಮಾಯಾವಾದಿಗಳು ಹೇಳಿದರೆ ಇದೂ ಸರಿಯಲ್ಲ. ಏಕೆಂದರೆ, ಬ್ರಹ್ಮನಿಗೂ ಮತ್ತು ಅವನ ಧರ್ಮಗಳಿಗೂ ನಾವು ಭೇದವನ್ನು ಒಪ್ಪುವುದಿಲ್ಲ. ನಿರ್ವಿಶೇಷಾಭೇದವನ್ನೂ ಒಪ್ಪುವುದಿಲ್ಲ. ಭೇದಾಭೇದವನ್ನೂ ಒಪ್ಪುವುದಿಲ್ಲ. ಪರಂತು ಸವಿಶೇಷಾಭೇದವನ್ನೇ ಹೇಳುತ್ತೇವೆ. ಅಭಿನ್ನವಾದ ವಸ್ತುವಿನಲ್ಲಿಯೂ ಭೇದಕಾರ್ಯನಿರ್ವಾಹಕವಾದ 'ವಿಶೇಷ' ಎಂಬ ಶಕ್ತಿಯನ್ನು ಎಲ್ಲ ವಾದಿಗಳೂ ಅವಶ್ಯವಾಗಿ ಒಪ್ಪಲೇಬೇಕು. ಎಲ್ಲ ಪದಾರ್ಥಗಳಲ್ಲಿಯೂ ಇರುವ ಪದಾರ್ಥಶಕ್ತಿವಿಶೇಷರೂಪವಾದ ವಿಶೇಷಬಲದಿಂದಲೇ ಲಕ್ಷ್ಯಲಕ್ಷಣಭಾವವು ಕೂಡುತ್ತದೆ. ಹೀಗೆ ಒಪ್ಪದೆ ಹಿಂದೆ ಹೇಳಿದ ರೀತಿಯಿಂದ ನಮ್ಮ ಲಕ್ಷಣವನ್ನು ದೂಷಿಸುವುದಾದರೆ, ನಿಮಗೆ ಅತ್ಯಂತ ಆಪ್ತವಾದ ಐಕ್ಯದ ವಿಷಯದಲ್ಲಿಯೂ ದೂಷಣಗಳು ಬರುವುದರಿಂದ, ನೀವು ಹೇಳುವ ಐಕ್ಯವನ್ನೂ ಕೂಡ ನಿರ್ವಚನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ತತ್ತ್ವಮಸಿ ಇತ್ಯಾದಿ ತತ್ತ್ವವೇದಕ ವಾಕ್ಯಗಳಿಗೆ ಅದ್ವೈತಿಗಳ ಪ್ರಕಾರ ಐಕ್ಯವನ್ನು ಪ್ರತಿಪಾದಿಸಲು ಆಗುವುದಿಲ್ಲ. ಏಕೆಂದರೆ, ಆ ಐಕ್ಯವು ತತ್ ತ್ವಂ ಪದಗಳಿಂದ ಲಕ್ಷಿತವಾದ ಚೈತನ್ಯದಿಂದ ಅಭಿನ್ನವೋ, ಭಿನ್ನವೋ ಅಥವಾ ಭಿನ್ನಾಭಿನ್ನವೋ ಎಂದು ಕೇಳಿದರೆ ಅವರ ಮತದ ಪ್ರಕಾರ ಯಾವುದೂ ಕೂಡುವುದಿಲ್ಲವೆಂದು ಈಗ ಹೇಳುತ್ತಾರೆ.

ಐಕ್ಯಾಭೇದೇ ನ ಶಾಸ್ತ್ರೇಣ ಜ್ಞೇಯಂ ತತ್ ಸ್ವಪ್ರಕಾಶತಃ ॥೧೦೪॥
ಭೇದೇ ಮಿಥ್ಯಾತ್ವತೋ ಭೇದಸತ್ಯತ್ವಂ ಸ್ಯಾದ್ಬಲಾದಪಿ ।

ಭೇದಾಭೇದೌ ಯದಿ ತದಾ ಸ್ಯಾದೇವ ಹ್ಯನವಸ್ಥಿತಿಃ ॥೧೦೫॥

ಚೈತನ್ಯಸ್ವರೂಪಕ್ಕೆ ಸ್ವಪ್ರಕಾಶತ್ವವು ನಿತ್ಯಸಿದ್ಧವಾಗಿದೆ. ಐಕ್ಯಕ್ಕೆ ಚೈತನ್ಯಸ್ವರೂಪದಿಂದ ಅಭೇದವನ್ನು ಅಂಗೀಕರಿಸಿದರೆ, ಆ ಐಕ್ಯವೂ ಸ್ವಪ್ರಕಾಶತ್ವವೆನಿಸುವುದು. ಆದಕಾರಣ ಅದು 'ತತ್ತ್ವಮಸಿ' ಇತ್ಯಾದಿ ಶಾಸ್ತ್ರದಿಂದ ಪ್ರತಿಪಾದಿತವಾಗಲಾರದು. ಹಾಗಾದರೆ, ಐಕ್ಯಕ್ಕೆ ಬ್ರಹ್ಮಸ್ವರೂಪದಿಂದ ಭೇದವನ್ನು ಅಂಗೀಕರಿಸುತ್ತೇವೆ ಎಂದು ಹೇಳಿದರೆ, ಬ್ರಹ್ಮನನ್ನು ಬಿಟ್ಟು ಉಳಿದೆಲ್ಲವೂ ಮಿಥ್ಯೆಯೆಂದು ಅಂಗೀಕರಿಸಿರುವದರಿಂದ, ಮಿಥ್ಯೆಯಾದ ಐಕ್ಯವು ಶಾಸ್ತ್ರದಿಂದ ತಿಳಿಯಲ್ಪಡಲು ಸಾಧ್ಯವಿಲ್ಲ. ಏಕೆಂದರೆ ಮಿಥ್ಯಾಭೂತವಾದುದನ್ನು ಪ್ರತಿಪಾದಿಸುವ ಶಾಸ್ತ್ರವು ಅತತ್ವಾವೇದಕವೆನಿಸುವುದು. ಐಕ್ಯವು ಮಿಥ್ಯೆ ಎಂದಾದರೆ, ಅದಕ್ಕೆ ವಿರುದ್ಧವಾದ ಭೇದಕ್ಕೆ ಸತ್ಯತ್ವವು ಬರಬೇಕಾಗುವುದು. ಜೀವಬ್ರಹ್ಮರ ಐಕ್ಯಕ್ಕೆ ಚೈತನ್ಯಸ್ವರೂಪದಿಂದ ಭೇದಾಭೇದಗಳನ್ನು ಅಂಗೀಕರಿಸಿದರೆ, ಆ ಭೇದಾಭೇದಗಳು ಚೈತನ್ಯಸ್ವರೂಪದಿಂದ ಅಭಿನ್ನವೋ, ಭಿನ್ನವೋ ಅಥವಾ ಭಿನ್ನಾಭಿನ್ನವೋ ಎಂದು ಕೇಳುತ್ತೇವೆ. ಅಭಿನ್ನವೆಂದರೆ ಭೇದಾಭೇದಗಳಿಗೆ ಏಕತ್ವ ಪ್ರಾಪ್ತವಾಗುವುದು. ಭಿನ್ನ ಅಥವಾ ಭಿನ್ನಾಭಿನ್ನವೆಂದು ಹೇಳಿದರೆ ಉಭಯ ಪಕ್ಷಗಳಲ್ಲಿಯೂ ಅನವಸ್ಥೆಯು ಬಂದೇ ಬರುವುದು. ಇದು ಸ್ಪಷ್ಟವೇ ಆಗಿದೆ.

ಹಾಗಾದರೆ, ಐಕ್ಯವು ತಾನೇ ನಿರ್ವಾಹ್ಯ-ನಿರ್ವಾಹಕರೂಪವಾದುದರಿಂದ ಭೇದಾದಿಗಳನ್ನು ಕಲ್ಪಿಸುವಂತಿಲ್ಲ ಎಂದರೆ -

ಸ್ವನಿರ್ವಾಹತಾ ಚೇತ್ಸ್ಯಾದ್ವಾಹ್ಯಂ ವಾಹಕಮಿತ್ಯಪಿ ।
ಪರ್ಯಾಯೋ ಭೇದವಾನ್ವಾ ಸ್ಯಾದನವಸ್ಥೋಭಯತ್ರ ಚ ॥೧೦೬॥

ಐಕ್ಯಕ್ಕೂ ಭೇದಾಭೇದಗಳಿಗೂ ಸ್ವನಿರ್ವಾಹಕತ್ವವವು ಅಂಗೀಕರಿಸಲ್ಪಟ್ಟರೆ, ಆಗ ನಿರ್ವಾಹ್ಯ, ನಿರ್ವಾಹಕ ಮೊದಲಾದವು ಪರ್ಯಾಯ ಶಬ್ದಗಳೆನಿಸುತ್ತವೆ. ಅಂದರೆ ಒಂದೇ ಅರ್ಥವನ್ನು ಪ್ರತಿಪಾದಿಸುವ ಶಬ್ದಗಳಾಗುತ್ತವೆ. ಪರ್ಯಾಯಾರ್ಥಕ ಶಬ್ದಗಳಿಗೆ ಸಹಪ್ರಯೋಗವು ಕೂಡಲಾರದು. ಅವು ಬೇರೆ ಬೇರೆ ಅರ್ಥಗಳನ್ನು ಪ್ರತಿಪಾದಿಸುತ್ತವೆ ಎಂದು ಹೇಳುವುದೂ ಸರಿಯಲ್ಲ. ಏಕೆಂದರೆ ನಿರ್ವಾಹ್ಯ ನಿರ್ವಾಹಕತ್ವ ಮೊದಲಾದವು ಪರಸ್ಪರವಾಗಿಯೂ,

ಧರ್ಮಿಯಿಂದಲೂ ಭೇದವನ್ನು ಹೊಂದಿವೆ ಎಂದರೆ, ಎರಡು ಪಕ್ಷಗಳಲ್ಲಿಯೂ ಅನವಸ್ಥಾ ದೋಷವು ಬರುವುದು.

ಹೀಗೆ ಬ್ರಹ್ಮನಿಗೆ ಜನ್ಮಾದಿಕಾರಣತ್ವವು ತಟಸ್ಥಲಕ್ಷಣ ಎಂಬುದನ್ನು ನಿರಾಕರಿಸಿ, ಈಗ ಸತ್ಯಜ್ಞಾನಾದಿ ಪದಗಳಿಗೆ ಅಖಂಡಾರ್ಥತ್ವ (ಚಿನ್ಮಾತ್ರಪರತ್ವ) ವನ್ನು ನಿರಾಕರಿಸುತ್ತಾರೆ. ಹಾಗೂ ವಿಶೇಷವನ್ನು ಒಪ್ಪದಿದ್ದರೆ 'ತತ್ತ್ವಮಸಿ' ಇತ್ಯಾದಿ ಮಹಾವಾಕ್ಯಗಳ ವಾಕ್ಯಾರ್ಥ ಕೂಡುವುದಿಲ್ಲ ಎಂದು ಅನುಪಪತ್ತಿಯನ್ನು ಹೇಳಿ, ಈಗ ಬ್ರಹ್ಮನಲ್ಲಿ ಸತ್ಯಜ್ಞಾನಾದಿಧರ್ಮಗಳನ್ನು ಪ್ರತಿಪಾದಿಸುವ ಅವಾಂತರವಾಕ್ಯಗಳಲ್ಲಿಯೂ ಅನುಪಪತ್ತಿಯನ್ನು ತೋರಿಸುತ್ತಾರೆ.

ಬ್ರಹ್ಮ ನಿರ್ವಿಶೇಷನಲ್ಲ

ಸತ್ಯಜ್ಞಾನಾದಿಕೇಽಪ್ಯೇವಂ ನ ವ್ಯಾವೃತ್ಯಾ ಪ್ರಯೋಜನಂ ।
ವ್ಯಾವೃತ್ತಸ್ಯಾವಿಶೇಷತ್ವೇ ತದಖಂಡಂ ಚ ಖಂಡಿತಂ ॥೧೦೭॥
ನಿರ್ವಿಶೇಷತ್ವಮೇತೇನ ಮೂಕೋಽಹಮಿತಿವದ್ಭವೇತ್ ।
ಅಭಿನ್ನೇಽಪಿ ವಿಶೇಷೋಽಯಂ ಬಲಾದಾಪತತಿ ಹ್ಯತಃ ॥೧೦೮॥

'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಅವಾಂತರ ವಾಕ್ಯಗಳಲ್ಲಿಯೂ ಹೀಗೆಯೇ ದೂಷಣವನ್ನು ಹೇಳಬೇಕು. ಅಂದರೆ, ಸತ್ಯಜ್ಞಾನಾದಿಗಳು ಪರಸ್ಪರವಾಗಿಯೂ ಬ್ರಹ್ಮನಿಂದಲೂ ಅತ್ಯಂತಾಭಿನ್ನವೋ, ಭಿನ್ನವೋ, ಭಿನ್ನಾಭಿನ್ನವೋ ಎಂದು ವಿಕಲ್ಪಮಾಡಿ ಮೇಲೆ ಹೇಳಿರುವ ಪ್ರಕಾರ ನಿರಾಕರಣೆ ಮಾಡಬೇಕು. ನಿರ್ವಿಶೇಷನಾದ ಬ್ರಹ್ಮನಲ್ಲಿ ಅಸತ್ಯತ್ವ, ಅಜ್ಞಾನಾದಿಗಳು ಇಲ್ಲ ಎಂದು ಹೇಳುವುದರಲ್ಲಿ ಸತ್ಯಜ್ಞಾನಾದಿ ಪದಗಳಿಗೆ ಪ್ರಯೋಜನವಿದೆ ಎಂದು ಹೇಳುವುದು ಸರಿಯಲ್ಲ. ಮಾಯಾವಾದಿಗಳು ಬ್ರಹ್ಮನಲ್ಲಿ ಯಾವುದೇ ವಿಶೇಷವನ್ನು ಅಂಗೀಕರಿಸಿಲ್ಲ. ಅಂದಮೇಲೆ ವಿಶೇಷ ಧರ್ಮಗಳನ್ನು ನಿರಾಕರಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ವಿಶೇಷದ ನಿರಾಕರಣೆಯೂ ಸಾಧ್ಯವಿಲ್ಲ. ಏಕೆಂದರೆ 'ಬ್ರಹ್ಮನು ನಿರ್ವಿಶೇಷನು' ಎನ್ನುವುದು ವಿಶೇಷಾಭಾವ ರೂಪವಾದ ಮತ್ತೊಂದು ವಿಶೇಷವೇ ಆಗುವುದರಿಂದ 'ನಾನು ಮೂಕನು' ಎಂಬ ಹೇಳಿಕೆಯಂತೆ ಸ್ವವಚನವಿರೋಧಕ್ಕೆ ಕಾರಣವಾಗುವುದು.

ವಿಶೇಷದ ನಿರೂಪಣೆ

ಹಿಂದೆ ಹೇಳಿದ ಪ್ರಕಾರ ಮಹಾವಾಕ್ಯ ಮತ್ತು ಅವಾಂತರವಾಕ್ಯಗಳಲ್ಲಿ ಅನುಪಪತ್ತಿ ಬರುವುದರಿಂದ, ಅದನ್ನು ನಿವಾರಿಸಲು ಅಭಿನ್ನನಾದ ಬ್ರಹ್ಮನಲ್ಲಿಯೂ ವಿಶೇಷವನ್ನು ಒಪ್ಪಲೇಬೇಕಾಗಿ ಬರುವುದು.

ವಿಶೇಷವನ್ನು ಒಪ್ಪಿದರೂ ಅನುಪಪತ್ತಿಯು ಬಂದೇ ಬರುವುದು. ಆ ವಿಶೇಷವು ವಸ್ತುವಿನಿಂದ ಅಭಿನ್ನವಾದರೆ ವಿಶೇಷ-ವಿಶೇಷಿ ಎಂಬ ವ್ಯವಹಾರವೇ ಕೂಡುವುದಿಲ್ಲ. ವಿಶೇಷವು ವಸ್ತುವಿನಿಂದ ಭಿನ್ನವಾದರೆ, ಅದನ್ನು ಕೂಡಿಸಲು ಮತ್ತೊಂದು ವಿಶೇಷ, ಅದಕ್ಕೆ ಇನ್ನೊಂದು ವಿಶೇಷ ಹೀಗೆ ಮುಗಿಯದ ಭೇದಪರಂಪರೆ ಉಂಟಾಗುವುದು. ಹೀಗೆ ಆಶಂಕಿಸಿದರೆ -

ವಿಶೇಷತದ್ವತೋಶ್ಚೈವ ಸ್ವನಿರ್ವಾಹಕತಾ ಭವೇತ್ ।
ಭೇದಹೀನೇ ತ್ವಪರ್ಯಾಯ ಶಬ್ದಾಂತರನಿಯಾಮಕಃ ॥೧೦೯॥
ವಿಶೇಷೋ ನಾಮ ಕಥಿತಃ ಸೋಽಸ್ತಿ ವಸ್ತುಷ್ವಶೇಷತಃ ।

ವಿಶೇಷ-ವಿಶೇಷಿಗಳಿಗೆ ಅಭೇದವನ್ನೇ ಅಂಗೀಕರಿಸಬೇಕು. ವಿಶೇಷ-ವಿಶೇಷಿ ಎಂಬ ವ್ಯವಹಾರವೂ ವಿಶೇಷದ ಬಲದಿಂದಲೇ ಕೂಡುವುದು. ವಿಶೇಷವು ಸ್ವನಿರ್ವಾಹಕವಾದುದರಿಂದ ಮತ್ತೊಂದು ವಿಶೇಷದ ಅಪೇಕ್ಷೆ ಇರುವುದಿಲ್ಲ. ಆದ್ದರಿಂದ ಅನವಸ್ಥಾ ದೋಷ ಬರುವುದಿಲ್ಲ. ಧರ್ಮ-ಧರ್ಮಿಗಳಲ್ಲಿ ಅಭೇದವಿದ್ದಾಗ್ಯೂ ಅವುಗಳಲ್ಲಿ ಭೇದನಿರ್ವಾಹಕವಾದ ವಿಶೇಷವು ಇರುವುದೆಂದು ಹೇಳಲ್ಪಟ್ಟಿದೆ. ಆ ವಿಶೇಷವು ಸಮಸ್ತ ವಸ್ತುಗಳಲ್ಲಿಯೂ ಇರುವುದು ಎಂದು ಎಲ್ಲರೂ ಒಪ್ಪಲೇಬೇಕು.

ಎಲ್ಲ ವಸ್ತುಗಳಲ್ಲಿಯೂ ಅಭಿನ್ನವಾದ ಒಂದೇ ವಿಶೇಷವಿರುವುದಾದರೆ ಎಲ್ಲ ವಸ್ತುಗಳಿಗೂ ಐಕ್ಯವೇ ಬರಬೇಕಾಗುವುದು ಎಂದು ಹೇಳಿದರೆ -

ವಿಶೇಷಾಸ್ತೇಽಪ್ಯನಂತಾಶ್ಚ ಪರಸ್ಪರವಿಶೇಷಿಣಃ ॥೧೧೦॥
ಸ್ವನಿರ್ವಾಹಕತಾ ಯುಕ್ತಾಃ ಸಂತಿ ವಸ್ತುಷ್ವಶೇಷತಃ ।

ಪ್ರತಿಯೊಂದು ವಸ್ತುವಿನಲ್ಲಿರುವ ವಿಶೇಷವೂ ಆ ವಸ್ತುವಿನೊಂದಿಗೆ ಅಭಿನ್ನವೂ ಇತರ ವಸ್ತುಗಳಲ್ಲಿರುವ ವಿಶೇಷಗಳಿಂದ ಭಿನ್ನವಾಗಿಯೂ ಇರುತ್ತವೆ. ಹೇಗೆ ವಸ್ತುಗಳು ಅನಂತವೋ ಹಾಗೆಯೇ ವಿಶೇಷಗಳೂ ಅನಂತವೇ.

ಪ್ರತಿವಸ್ತುವಿನಲ್ಲಿಯೂ ಅನಂತ ವಿಶೇಷಗಳು ಇರುತ್ತವೆ. ಇವು ಸ್ವನಿರ್ವಾಹಕ-ವಾದ್ದರಿಂದ ಪರಸ್ಪರವಾಗಿ ವಿಶೇಷಣ-ವಿಶೇಷ್ಯ ಭಾವದಿಂದ ತೋರುತ್ತವೆ.

ಅತೋಽನಂತಗುಣಂ ಬ್ರಹ್ಮ ನಿರ್ಭೇದಮಪಿ ಭಣ್ಯತೇ ॥೧೧॥

ಏವಂ ಧರ್ಮಾನಿತಿ ಶ್ರುತ್ಯಾ ತದಭೇದೋಽಪ್ಯುದೀರ್ಯತೇ ।

ಆದುದರಿಂದ, ಬ್ರಹ್ಮನು ಸ್ವಗತಭೇದರಹಿತನಾಗಿದ್ದರೂ, ವಿಶೇಷದ ಬಲದಿಂದಲೇ ಅನಂತಗುಣಗಳುಳ್ಳವನೆಂದು ಹೇಳಲ್ಪಡುತ್ತಾನೆ. 'ಏವಂ ಧರ್ಮಾನ್ ಪೃಥಕ್ ಪಶ್ಯನ್ ತಾನೇವಾನು ವಿಧಾವತಿ' ಇತ್ಯಾದಿ ಶ್ರುತಿಗಳಿಂದ ಬ್ರಹ್ಮನಿಗೆ ಅವನ ಗುಣಗಳಿಂದ ಅಭೇದವೂ ಹೇಳಲ್ಪಡುತ್ತದೆ.

ಹೀಗೆ ಸ್ವನಿರ್ವಾಹಕವಾದ ವಿಶೇಷದ ಬಲದಿಂದ ಸ್ವಗತಭೇದರಹಿತನಾದ ಬ್ರಹ್ಮನಿಗೆ ಲಕ್ಷ್ಯ-ಲಕ್ಷಣಭಾವವು ಸಿದ್ಧವಾಗುವುದು.

ಶಾಸ್ತ್ರಯೋನಿತ್ವಾಧಿಕರಣ

ಸೂತ್ರ: ಓಂ ಶಾಸ್ತ್ರಯೋನಿತ್ವಾತ್ ಓಂ (೧-೧-೩)

ಪಾಶುಪತಾದಿ ಆಗಮಗಳಿಂದ ಹಾಗೂ ಅನುಮಾನದಿಂದ ಹಿರಣ್ಯಗರ್ಭ, ರುದ್ರಾದಿಗಳಿಗೂ ಜಗಜ್ಜನ್ಮಾದಿಕಾರಣತ್ವವು ಏಕಾಗಬಾರದು ಎಂದು ಆಶಂಕಿಸಿದರೆ, ಅದಕ್ಕೆ ಸೂತ್ರಕಾರರು ಶಾಸ್ತ್ರಯೋನಿತ್ವಾತ್ ಎಂಬ ಸೂತ್ರದಿಂದ ವಿಷ್ಣುವೇ ಜಗಜ್ಜನ್ಮಾದಿಕಾರಣನೆಂಬುದಕ್ಕೆ ಋಗಾದಿಶಾಸ್ತ್ರಗಳೇ ಪ್ರಮಾಣ ಎಂದು ಶಾಸ್ತ್ರರೂಪಪ್ರಮಾಣವನ್ನು ಹೇಳಿ ಜಗಜ್ಜನ್ಮಾದಿಕಾರಣನಾದ ಪರಬ್ರಹ್ಮನೇ ಜಿಜ್ಞಾಸ್ಯನು ಎಂದು ಪ್ರತಿಪಾದಿಸುತ್ತಾರೆ.

ಜನ್ಮಾದಿಕಾರಣತ್ವಕ್ಕೆ ಶಾಸ್ತ್ರವೇ ಪ್ರಮಾಣ

ಶೈವಾದ್ಯಾಗಮಸಂಪ್ರಾಪ್ತ ದೃಷ್ಟಗೇನ ಫಲೇನ ತು ॥೧೧೨॥

ತದ್ವಾಕ್ಯೋಪಮಯಾನ್ಯಚ್ಚ ಪ್ರಮಾಣತ್ವೇನುಮೀಯತೇ ।

ಈಶವಾಕ್ಯತ್ವತಃ ಇತಿ ಚೇತ್ತದ್ಗವ್ಯಭಚಾರಿಣಾ ॥೧೧೩॥

ರುದ್ರ, ಹಿರಣ್ಯಗರ್ಭ ಮೊದಲಾದವರಿಂದ ಮಾಡಲ್ಪಟ್ಟ ಪೌರುಷೇಯ ಆಗಮಗಳಲ್ಲಿ ಹೇಳಿರುವಂತೆ ಅನುಷ್ಠಾನ ಮಾಡಿದಾಗ ಪ್ರತ್ಯಕ್ಷಸಿದ್ಧವಾದ ಫಲಗಳು ಕಂಡುಬರುತ್ತವೆ. ಆದ್ದರಿಂದ ಅವು ಪ್ರಮಾಣ. ಹೀಗೆ

ಅನುಮೇಯಿಸಿ, ಈಶವಾಕ್ಯವಾಗಿರುವ ಕಾರಣದಿಂದಲೇ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಹೇಳುವ ಬೇರೆ ವಾಕ್ಯಗಳನ್ನೂ ಪ್ರಮಾಣವೆಂದು ತಿಳಿಯತಕ್ಕದ್ದು. ಹೀಗೆ ಹೇಳುವುದು ಸರಿಯಲ್ಲ. ಏಕೆಂದರೆ ಪ್ರತ್ಯಕ್ಷದಿಂದ ಫಲವು ಕಂಡಿರದ ವಾಕ್ಯಗಳ ದೃಷ್ಟಾಂತದಿಂದ ಅವು ಅಪ್ರಮಾಣ ಎಂಬ ಅನುಮಿತಿಯೂ ಬರಬೇಕಾದೀತು.

ಅಪ್ರಾಮಾಣ್ಯಾನುಮಾ ಚ ಸ್ಯಾನ್ನ ಪೃಥಕ್ಚಾನುಮೇಶ್ವರೇ ।

ಆದಪ್ರಯುಕ್ತ ರುದ್ರಾದಿಗಳು ಜಗತ್ಕಾರಣ ಎಂದು ಹೇಳುವ ರುದ್ರಾದಿ ಆಗಮಗಳ ಇತರ ವಾಕ್ಯಗಳೂ ಪ್ರಮಾಣವಾಗಲಾರವು. ಏಕೆಂದರೆ ಸ್ವತಂತ್ರವಾದ ಅನುಮಾನವು ಪ್ರಮಾಣವಲ್ಲ.

ಶೈವಾದಿ ಆಗಮಗಳು ರುದ್ರಾದಿಗಳಿಗೆ ಜಗತ್ಕಾರಣವನ್ನು ಪ್ರತಿಪಾದಿಸುವಲ್ಲಿ ಏಕೆ ಪ್ರಮಾಣವಾಗಲಾರವು ಎಂದರೆ –

ಪುಂಸ್ತ್ವ ಹೇತು ಬಲಾದೇವ ಪೂರ್ವೋಕ್ತೇನೈವ ವರ್ತ್ಮನಾ ॥೧೧೪॥
ಶಾಸ್ತ್ರಯೋನಿತ್ವಮೇತೇನ ಕಾರಣಸ್ಯ ಬಲಾದ್ಭವೇತ್ ।

ಹಿಂದೆ ಹೇಳಿದ ರೀತಿಯಿಂದಲೇ ಪುರುಷತ್ವರೂಪ ಹೇತುವಿನಿಂದಲೇ (ಶಿವನು ಜಗತ್ಕಾರಣನಲ್ಲ, ಪುರುಷನಾದ್ದರಿಂದ ದೇವದತ್ತನಂತೆ ಎನ್ನುವ ಅನುಮಾನದ ಬಲದಿಂದಲೇ) ರುದ್ರಾದಿಗಳಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ. ಹೀಗೆ ಜಗತ್ಕಾರಣವನ್ನು ಸಾಧಿಸುವ ಸ್ವತಂತ್ರಾನುಮಾನದ ನಿರಾಕರಣೆಯಿಂದ ಜಗತ್ಕಾರಣನಿಗೆ ಶಾಸ್ತ್ರಯೋನಿತ್ವ ಹೇತುವು ಸಿದ್ಧವಾಯಿತು.

ಕೇವಲಾನುಮಾನವು ಪ್ರಮಾಣವಲ್ಲ

ಕೇವಲ ಅನುಮಾನದಿಂದ ಜಗತ್ಕಾರಣನನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದಕ್ಕೆ ಈಗ ಶ್ರುತಿಸಂವಾದವನ್ನೂ ನೀಡುತ್ತಾರೆ.

ನಾವೇದವಿನ್ನ ತರ್ಕೇಣ ಮತಿರಿತ್ಯಾದಿ ವಾಕ್ಯತಃ ॥೧೧೫॥
ತರ್ಕೋ ಜ್ಞಾಪಯಿತುಂ ಶಕ್ತೋ ನೇಶಿತಾರಂ ಕಥಂಚನ ।
ವನಕೃತ್ತಾದಿರೂಪೇಣ ಪಕ್ಷಭೂತಸ್ಯ ಚೇಶಿತುಃ ॥೧೧೬॥
ಕಿಂಚಿಜ್ಜ್ಞತ್ವಂ ಹಿ ಪುಂಸ್ತ್ವೇನ ಶಕ್ಯಂ ಸಾಧಯಿತುಂ ಸುಖಂ ।
ವೃಕ್ಷಕೃನ್ನಾಖಿಲಂ ವೃಕ್ಷಂ ವೇತ್ತಿ ಪುಂಸ್ತ್ವಾದ್ಧಿ ಚೈತ್ರವತ್ ॥೧೧೭॥

ವೇದಜ್ಞಾನಿಯಲ್ಲದವನು ಪೂರ್ಣನಾದ ಈ ಪರಮಾತ್ಮನನ್ನು ತಿಳಿಯಲಾರನು (ನಾವೇದವಿನ್ಮನುತೇದಂ ಬೃಹಂತಂ), ಕೇವಲ ತರ್ಕದ ಬಲದಿಂದ ಪರಮಾತ್ಮನ ವಿಷಯಕವಾದ ಬುದ್ಧಿಯನ್ನು ಪಡೆಯುವುದಕ್ಕಾಗಲೀ ನಿರಾಕರಿಸಲಿಕ್ಕಾಗಲೀ ಆಗದು (ನೈಷಾ ತರ್ಕೇಣ ಮತಿರಾಪನೇಯಾ). 'ನೇಂದ್ರೀಯಾಣಿ ನಾನುಮಾನಂ ವೇದಾ ಹ್ಯೇವೇನಂ ವೇದಯಂತಿ' (ಇಂದ್ರಿಯಗಳಾಗಲೀ, ಅನುಮಾನವಾಗಲೀ ಪರಬ್ರಹ್ಮನನ್ನು ತಿಳಿಸಿ ಕೊಡಲಾರವು, ವೇದಗಳೇ ತಿಳಿಸಿಕೊಡುತ್ತವೆ.) ಇತ್ಯಾದಿ ಶ್ರುತಿವಾಕ್ಯಗಳಿಂದ ತಿಳಿದುಬರುವುದೇನೆಂದರೆ, ಜಗತ್ಕರ್ತನನ್ನು ತಿಳಿಸಿಕೊಡಲು ಅನುಮಾನವು ಯಾವುದೇ ರೀತಿಯಿಂದಲೂ ಸಮರ್ಥವಲ್ಲ. 'ವನಕೃತ್ವಾದಿರೂಪೇಣ' ಇತ್ಯಾದಿ ಮಾತುಗಳಿಂದ ಅನುಮಾನದ ಅಸಾಮರ್ಥ್ಯವನ್ನು ಇನ್ನೂ ಸ್ಪಷ್ಟಪಡಿಸುತ್ತಾರೆ.

ಅರಣ್ಯವನ್ನು ನಿರ್ಮಿಸಿದವನು ಯಾರೆಂಬುದು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲದಿದ್ದರೂ ಅದು ಯಾರಿಂದಲೂ ಮಾಡಲ್ಪಟ್ಟಿಲ್ಲ ಎಂದು ನಾವು ಹೇಳುವುದಿಲ್ಲ. ಅರಣ್ಯವು ಕಾರ್ಯವಾಗಿರುವುದರಿಂದ ಅದಕ್ಕೆ ಒಬ್ಬ ಕರ್ತಾರ ಪುರುಷನು ಇರಲೇಬೇಕು ಎಂದು ಅನುಮಾನದಿಂದ ನಿರ್ಧರಿಸುತ್ತೇವೆ. ಹಾಗೆಯೇ ಜಗತ್ಕಾರಣನಾದ ಈಶ್ವರನು ದೇವದತ್ತನಂತೆ ಒಬ್ಬ ಪುರುಷನಾದ್ದರಿಂದ ಎಂಬ ಅನುಮಾನದಿಂದ ಅವನಿಗೂ ಅಲ್ಪಜ್ಞತ್ವವನ್ನು ಸುಲಭವಾಗಿ ಸಾಧಿಸಲು ಶಕ್ಯವಾಗುವುದು. ಇದೇ ರೀತಿ ಪುರುಷತ್ವ ಹೇತುವಿನಿಂದಲೇ, ಮರವನ್ನು ಬೆಳೆಸುವವನಿಗೆ ಮರದ ಸಮಸ್ತ ಜ್ಞಾನವೂ ಇರುವುದಿಲ್ಲ, ಚೈತ್ರನಂತೆ ಪುರುಷನಾಗಿರುವುದರಿಂದ, ಎಂದು ಹೇಳಬಹುದು. ಹೀಗೆ ಪುರುಷತ್ವ ಹೇತುವಿನಿಂದ 'ಜಗತ್ಕಾರಣನು ಸರ್ವಜ್ಞನಾಗಿರಬೇಕಿಲ್ಲ' ಎಂದು ಅನುಮಾನದಿಂದ ಸಾಧಿಸಲು ಬರುತ್ತದೆ.

ಹೀಗೆ ಕೇವಲ ಅನುಮಾನದಿಂದ ಏನನ್ನಾದರೂ ಸಾಧಿಸಲಿಕ್ಕೆ ಬರುವುದು ಸಾಧ್ಯವಾದ್ದರಿಂದ, ಈಶ್ವರನ ವಿಷಯದಲ್ಲಿ ಅದು ಪ್ರಮಾಣವಾಗಲಾರದು ಎಂದು ಹೇಳುತ್ತಾರೆ –

ಇತ್ಯಾದ್ಯನುಮಯಾ ಸ್ಪರ್ಧಿ ನಾನುಮಾನಂ ಪರೇಶಿತುಃ ।
ಶಕ್ತಂ ವಿಜ್ಞಾಪನೇ ಚಾತಿಪ್ರಸಂಗೋಽನುಮೇಯದೃಶಾ ॥೧೧೮॥

ಮಸ್ತುತ್ಥಾತ್ತುರಗಃ ಶೃಂಗೀ ಪುಷ್ಪವತ್ ಖಂ ಸುತೈರ್ಯುತಾ ।
ಚಕ್ರಿಣೇ ಚ ರಸಃ ಷಷ್ಠೋ ರಸತ್ವಾತ್ ಸೋತ್ತರೋ ಭವೇತ್ ॥೧೧೯॥

ಇತ್ಯಾದಿ ಅನುಮಾನದಿಂದ ಸತ್ಪಕ್ಷಕ್ಕೆ ವಿರುದ್ಧವಾದ ಅನುಮಾನವು ಸರ್ವೋತ್ತಮನಾದ ಶ್ರೀಹರಿಯನ್ನು ತಿಳಿಸಿಕೊಡುವುದರಲ್ಲಿ ಸಮರ್ಥವಾಗದು. ಅತೀಂದ್ರಿಯ ಪದಾರ್ಥಗಳ ವಿಷಯದಲ್ಲಿ ಪ್ರಯೋಗಿಸಲ್ಪಡುವ ಇಂಥಹ ಅನುಮಾನದಿಂದ ಅತಿಪ್ರಸಂಗವೇ ಉಂಟಾಗುವುದು. ಮುಂದಿನ ಮಾತುಗಳಿಂದ ಅತಿಪ್ರಸಂಗ ಹೇಗೆ ಎಂಬುದನ್ನು ತೋರಿಸುತ್ತಾರೆ. ಕುದುರೆಗೆ ಕೋಡುಗಳಿವೆ ಅದು ನಾಲ್ಕು ಕಾಲಿನ ಪಶುವಾಗಿರುವುದರಿಂದ ಹಸುವಿನಂತೆ, ಆಕಾಶವು ಪುಷ್ಪವುಳ್ಳದ್ದು ಪದಾರ್ಥವಾದುದರಿಂದ, ಬಂಜೆಯು ಸಂತಾನವುಳ್ಳವಳು ಸ್ತ್ರೀಯಾಗಿರುವದರಿಂದ, ಆರನೇ ರಸವು ತನ್ನಿಂದಾಚೆ ಏಳನೇ ರಸವನ್ನೂ ಹೊಂದಿದೆ ಅದು ರಸವಾಗಿರುವುದರಿಂದ ಮೊದಲನೆಯ ರಸದಂತೆ. ಆಗಮದ ಸಹಕಾರವಿಲ್ಲದ ಸ್ವತಂತ್ರವಾದ ಅನುಮಾನಕ್ಕೆ ಪ್ರಾಮಾಣ್ಯವನ್ನು ಒಪ್ಪಿದರೆ, ಮೇಲಿನ ಅಪದ್ಧ ಮಾತುಗಳಿಗೆಲ್ಲ ಪ್ರಾಮಾಣ್ಯವು ಬರುಬೇಕಾದಿತು.

ಉಪಕ್ರಮಾದಿಲಿಂಗೇಭ್ಯೋ ನಾನ್ಯಾ ಸ್ಯಾದನುಮಾ ತತಃ ।

ಆದಕಾರಣ, ಉಪಕ್ರಮ ಉಪಸಂಹಾರ ಇವೇ ಮೊದಲಾದ ತಾತ್ಪರ್ಯನಿರ್ಣಾಯಕ ಲಿಂಗಗಳ ಹಾಗೂ ಆಗಮಾನುಸಾರಿಯಾದ ಅನುಮಾನಗಳ ದೆಸೆಯಿಂದ ಬೇರೆಯಾದ ಅನುಮಾನವು ಪ್ರಾಮಾಣ್ಯ ಸಾಧಕವಾಗಲಾರದು.

ಜಗತ್ಕಾರಣನಾದ ಈಶ್ವರ ಹಾಗೂ ಅವನ ಅನಂತಕಲ್ಯಾಣಗುಣಗಳನ್ನು ಸದಾಗಮಗಳಿಂದಲೇ ನಿರ್ಣಯಿಸಲು ಸಾಧ್ಯ, ಕೇವಲಾನುಮಾನದಿಂದ ಸಾಧಿಸಲು ಶಕ್ಯವಿಲ್ಲ ಎಂಬುದೇ ಈ ಅಧಿಕರಣದ ಸಾರಾಂಶ.

ಸಮನ್ವಯಾಧಿಕರಣ

ಸೂತ್ರ: ಓಂ ತತ್ತು ಸಮನ್ವಯಾತ್ ಓಂ (೧-೧-೪)

ಉಪಕ್ರಮಾದಿ ತಾತ್ಪರ್ಯನಿರ್ಣಾಯಕ ಲಿಂಗಗಳಿಂದ ಚೆನ್ನಾಗಿ ವಿಚಾರ ಮಾಡಲು ವಿಷ್ಣುವೇ ಜಗಜ್ಜನ್ಮಾದಿಕಾರಣನು ಹಾಗೂ ಶಾಸ್ತ್ರಗಳಿಂದ ಮಾತ್ರ

ತಿಳಿಯಲ್ಪಡತಕ್ಕವನು ಎಂದು ತಿಳಿದುಬರುತ್ತದೆ.

ಸಮನ್ವಯ ಶಬ್ದಾರ್ಥ

ಶ್ರೀಮದಾಚಾರ್ಯರು ಈ ಸೂತ್ರದಲ್ಲಿ ಬಂದಿರುವ ಅನ್ವಯ ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾರೆ –

ತ ಏವಾನ್ವಯನಾಮಾನಸ್ತೈಸ್ತಮ್ಯಕ್ಪ್ರವಿಚಾರಿತೇ ॥೧೨೦॥

ಮುಖ್ಯಾರ್ಥೋ ಭಗವಾನ್ ವಿಷ್ಣುಃ ಸರ್ವಶಾಸ್ತ್ರಸ್ಯ ನಾಪರಃ ।

ಉಪಕ್ರಮಾದಿ ಲಿಂಗಗಳು ವಾಕ್ಯಗಳಿಗೆ ಮುಖ್ಯತಾತ್ಪರ್ಯಪರವಾದ ಅರ್ಥಗಳನ್ನು ನಿರ್ಣಯಿಸುವುದರಲ್ಲಿ ಸಹಾಯಕವಾಗಿರುವುದರಿಂದ ಅವುಗಳಿಗೆ ಅನ್ವಯ ಎಂದು ಹೆಸರು. ಅವುಗಳಿಂದ ಚೆನ್ನಾಗಿ ಶಾಸ್ತ್ರಜಿಜ್ಞಾಸೆ ಮಾಡಿದಾಗ, ಸಮಸ್ತ ಶಾಸ್ತ್ರಗಳಿಗೂ ಷಡ್ಗುಣೈಶ್ವರ್ಯ ಸಂಪನ್ನನಾದ ವಿಷ್ಣುವಿನಲ್ಲಿಯೇ ಸಂಬಂಧವು ತೋರುವುದರಿಂದ, ಅವನೇ ಸಮಸ್ತ ವೇದಗಳಿಂದಲೂ ಮುಖ್ಯವಾಗಿ ಪ್ರತಿಪಾದಿತನಾಗಿದ್ದಾನೆ ಎಂದು ತಿಳಿದುಬರುತ್ತದೆ. ಆದ್ದರಿಂದ ಗುಣಪರಿಪೂರ್ಣನಾಗಿರುವ ವಿಷ್ಣುವೇ ಜಗಜ್ಜನ್ಮಾದಿಕಾರಣ, ರುದ್ರಾದಿಗಳಲ್ಲ, ಎಂಬುದು ಈ ಸೂತ್ರದಿಂದ ನಿರ್ಣಯಿಸಲ್ಪಡುತ್ತದೆ.

ವಿವರಣೆ:

ಮೇಲ್ನೋಟಕ್ಕೆ ತೋರುವ ಅರ್ಥವೇ ವೇದಗಳ ನಿಜವಾದ ಅಭಿಪ್ರಾಯವಲ್ಲ. ವೇದಗಳು ಅಪೌರುಷೇಯವಾದ್ದರಿಂದ ಪೌರುಷೇಯ ಗ್ರಂಥಗಳಿಂದ ಅವುಗಳ ಅರ್ಥ ನಿರ್ಣಯ ಮಾಡುವುದು ಸಾಧ್ಯವಿಲ್ಲ. ವೇದದ ಮೂಲಕವೇ ವೇದದ ಅರ್ಥವನ್ನು ನಿರ್ಣಯಿಸಬೇಕು. ಪೂರ್ವಾಪರ ವಾಕ್ಯಗಳನ್ನು ಚೆನ್ನಾಗಿ ವಿಮರ್ಶಿಸಿ ವೇದದ ಸರಿಯಾದ ಅರ್ಥವನ್ನು ಗ್ರಹಿಸಬೇಕು. ವೇದದ ಒಂದು ವಾಕ್ಯದ ಅರ್ಥವನ್ನು ತಿಳಿದುಕೊಳ್ಳಲು ಅದರ ಪ್ರಾರಂಭ ಹಾಗೂ ಮುಕ್ತಾಯದ ವಾಕ್ಯಗಳನ್ನು ಪರಿಶೀಲಿಸಬೇಕು. ಯಾವ ವಿಷಯಕ್ಕೆ ಹೆಚ್ಚು ಒತ್ತುಕೊಟ್ಟು ಮತ್ತೆ ಮತ್ತೆ ಹೇಳಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಅದೇರೀತಿ ಯಾವ ಅರ್ಥದಲ್ಲಿ ಅಪೂರ್ವತೆಯಿದೆ, ಯಾವ ಅರ್ಥವನ್ನು ಇಟ್ಟುಕೊಂಡರೆ ವೇದದಲ್ಲಿ ಹೇಳಿರುವ ಫಲಕ್ಕೆ ಅನುಕೂಲವಾಗುವುದು ಹಾಗೂ ಯುಕ್ತಿಯ ಒರೆಗಲ್ಲಿಗೆ ಹಚ್ಚಿದಾಗ ಯಾವ

ಅರ್ಥವು ಸರಿಯೆನಿಸುವುದು ಎಂಬುದನ್ನು ವಿಮರ್ಶಿಸಿ ವೇದಾರ್ಥನಿರ್ಣಯ ಮಾಡಬೇಕು. ಜೊತೆಗೆ ಆಯಾ ಪ್ರಕರಣಗಳಲ್ಲಿ ಬಂದಿರುವ ವಿವರಣೆಗಳ ಪರಿಶೀಲನೆಯಿಂದಲೂ ವೇದಾರ್ಥನಿರ್ಣಯಕ್ಕೆ ಅನುಕೂಲವಾಗುತ್ತದೆ. ಈ ರೀತಿಯ ಏಳು ವಿಧಾನಗಳಿಂದ ವೇದಗಳ ನಿಜವಾದ ಅರ್ಥವನ್ನು ನಿರ್ಣಯಿಸಬೇಕೇ ಹೊರತು ನಮಗೆ ತೋಚಿದ ರೀತಿಯಲ್ಲಲ್ಲ. ಹೀಗೆ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಉಪಪತ್ತಿ ಮತ್ತು ಅರ್ಥವಾದ ಎಂಬ ಈ ಏಳು ಪದಾರ್ಥಗಳೇ ತಾತ್ಪರ್ಯನಿರ್ಣಾಯಕ ಲಿಂಗಗಳೆಂದು ಪ್ರಸಿದ್ಧವಾಗಿವೆ.

ಈಕ್ಷತ್ಯಧಿಕರಣ

ಸೂತ್ರ: ಓಂ ಈಕ್ಷತೇರ್ನಾಶಬ್ದಂ ಓಂ (೧-೧-೫)

ಯಾವುದೇ ಒಂದು ಶಬ್ದವು ಒಂದು ವಸ್ತುವನ್ನು ಪ್ರತಿಪಾದಿಸಬೇಕಾದರೆ, ಆ ಶಬ್ದವು ಹೇಳುವ ಗುಣಧರ್ಮಗಳು ಆ ವಸ್ತುವಿನಲ್ಲಿ ಇರಬೇಕು. ಬ್ರಹ್ಮನಲ್ಲಿ ಯಾವ ಗುಣಧರ್ಮಗಳೂ ಇಲ್ಲ. ಅಂದಮೇಲೆ ಅವನನ್ನು ವೇದವು ಹೇಗೆ ಪ್ರತಿಪಾದಸಬಲ್ಲುದು? 'ಯತೋ ವಾಚೋ ನಿವರ್ತಂತೇ' ಮುಂತಾದ ವಾಕ್ಯಗಳ ಮೂಲಕ ಬ್ರಹ್ಮನು ಅವಾಚ್ಯನೆಂದು ವೇದವೇ ಹೇಳುತ್ತದೆ. ಯಾವ ಶಬ್ದವೂ ಬ್ರಹ್ಮನನ್ನು ತಿಳಿಸಲು ಸಾಧ್ಯವಿಲ್ಲವಾದ್ದರಿಂದ, ಅವನು ಸಮಸ್ತ ವೇದಗಳಿಂದ ಪ್ರತಿಪಾದ್ಯ ಎಂಬುವುದೇ ಕೂಡುವುದಿಲ್ಲ. ಆದಕಾರಣ ವಿಷ್ಣುವು ಜಗಜ್ಜನ್ಮಾದಿಕಾರಣ ಎಂಬುದೂ ಸಿದ್ಧಿಸುವುದಿಲ್ಲ. ಅಂದಮೇಲೆ ಬ್ರಹ್ಮಜಿಜ್ಞಾಸೆಯ ಅವಶ್ಯಕತೆಯೇ ಇರುವುದಿಲ್ಲ. ಶಾಸ್ತ್ರಕ್ಕೆ ಆರಂಭಣೀಯತ್ವವೂ ಕೂಡುವುದಿಲ್ಲ ಇತ್ಯಾದಿ ಆಶಂಕಿಸಿದರೆ, ಅದಕ್ಕೆ ಸಮಾಧಾನರೂಪವಾಗಿರುವುದೇ ಈಕ್ಷತ್ಯಧಿಕರಣ.

ಬ್ರಹ್ಮನು ಅವಾಚ್ಯನಲ್ಲ

ಈಕ್ಷಣೀಯತ್ವತೋ ವಿಷ್ಣುರ್ವಾಚ್ಯ ಏವ ನ ಚಾನ್ಯಥಾ ॥೧೨೧॥
ಲಕ್ಷತ್ವಂ ಕ್ವಾಪಿ ದೃಷ್ಟಂ ಹಿ ಕಿಂ ತದಿತ್ಯನವಸ್ಥಿತಿಃ ।
ಮಾಧುರ್ಯಾದಿ ವಿಶೇಷಾಶ್ಚ ತಚ್ಛಬ್ದೈರುದಿತಾಃ ಸದಾ ॥೧೨೨॥

ವಾಕ್ಯಾರ್ಥೋಽಪಿ ಹಿ ವಾಕ್ಯಾರ್ಥಶಬ್ದೇನೈವೋದಿತೋ ಭವೇತ್ ।

ನಾವಾಚ್ಯಂ ತೇನ ಕಿಂಚಿತ್ ಸ್ಯಾತ್.....॥

ಈಕ್ಷಣೀಯನಾಗಿರುವುದರಿಂದ (ಜ್ಞಾನಕ್ಕೆ ವಿಷಯನಾಗಿರುವುದರಿಂದ) ವಿಷ್ಣುವು ಶಬ್ದಗಳಿಂದ ವಾಚ್ಯನೇ ಆಗಿರುವನು. 'ಸ ಏತಸ್ಮಾಜ್ಜೀವಘನಾತ್ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ', 'ಆತ್ಮನ್ಯೇವಾತ್ಮಾನಂ ಪಶ್ಯೇತ್', ಇತ್ಯಾದಿ ಶ್ರುತಿಗಳಿಂದ ಬ್ರಹ್ಮನಿಗೆ ಈಕ್ಷಣೀಯತ್ವವು ಸಿದ್ಧವಾಗಿದೆ. ವಾಚ್ಯತ್ವವಿಲ್ಲದೇ ಈಕ್ಷಣೀಯತ್ವವು ಸಿದ್ಧಿಸುವುದಿಲ್ಲ. ಆದ್ದರಿಂದ ಬ್ರಹ್ಮನಿಗೆ ವಾಚ್ಯತ್ವವನ್ನು ಒಪ್ಪಿಕೊಳ್ಳಬೇಕು. ಬ್ರಹ್ಮನಿಗೆ ವಾಚ್ಯತ್ವವನ್ನು ಒಪ್ಪದಿದ್ದರೆ ಲಕ್ಷ್ಯತ್ವವೂ ಕೂಡುವುದಿಲ್ಲ. ಅಂದರೆ ಲಕ್ಷ್ಯಾರ್ಥವೂ ಕೂಡುವುದಿಲ್ಲ. ಲಕ್ಷ್ಯಾರ್ಥವನ್ನು ತಿಳಿಸುವುದಕ್ಕೂ ಶಬ್ದವನ್ನೇ ಉಪಯೋಗಿಸಬೇಕು. ಆ ಶಬ್ದದಿಂದಲೂ ಬ್ರಹ್ಮನು ವಾಚ್ಯನಲ್ಲ ಎಂದರೆ, ಅದನ್ನು ತಿಳಿಸಲು ಪುನಃ ಮತ್ತೊಂದು ಶಬ್ದ. ಹೀಗೆ ಅನವಸ್ಥಿತಿಯು ಬರುವುದರಿಂದ ಬ್ರಹ್ಮನಿಗೆ ಶಬ್ದವಾಚ್ಯತ್ವವನ್ನು ಒಪ್ಪಿಕೊಳ್ಳದೇ ಅನ್ಯಥಾ ಮಾರ್ಗವಿಲ್ಲ.

ಕಬ್ಬು, ಹಾಲು, ಬೆಲ್ಲ ಮೊದಲಾದವುಗಳ ಮಾಧುರ್ಯಾದಿಗಳಲ್ಲಿ ವೈವಿಧ್ಯವಿದ್ದರೂ ಅವುಗಳನ್ನು ತಿಳಿಸುವ ಶಬ್ದಗಳು ನಮಗೆ ಗೊತ್ತಿಲ್ಲ ಎಂದಮಾತ್ರಕ್ಕೆ ಅವುಗಳಿಗೆ ಶಬ್ದವಾಚ್ಯತ್ವವೇ ಇಲ್ಲ ಎಂದು ಹೇಳಲಾಗದು. ಸೂದಶಾಸ್ತ್ರ ಬಲ್ಲವರಿಗೆ ವಿವಿಧ ರೀತಿಯ ಮಾಧುರ್ಯಗಳನ್ನು ಪ್ರತಿಪಾದಿಸುವ ಶಬ್ದಗಳು ಗೊತ್ತೇ ಇರುತ್ತವೆ. ಉದಾಹರಣೆಗೆ, 'ವಿಶದಂ ಕ್ಷೀರಮಾಧುರ್ಯಂ ಸ್ಥಿರಮಾಜ್ಯಸ್ಯ ತೀಕ್ಷ್ಣಕಂ। ಗುಡಸ್ಯ ಪನಸಾದೀನಾಂ ನಿರ್ಹಾರೀತ್ಯಭಿಧೀಯತೇ॥' ಹಾಲಿನ ಮಾಧುರ್ಯವು ವಿಶದವೆಂದೂ, ತುಪ್ಪದ ಮಾಧುರ್ಯವು ಸ್ಥಿರವೆಂದೂ, ಬೆಲ್ಲದ ಮಾಧುರ್ಯವು ತೀಕ್ಷ್ಣಕವೆಂದೂ, ಹಲಸಿನ ಮಾಧುರ್ಯವು ನಿರ್ಹಾರಿ ಎಂದೂ ಹೇಳಲ್ಪಡುತ್ತದೆ.

ವಾಕ್ಯಾರ್ಥವೆಂಬುದೂ ಕೂಡ ವಾಕ್ಯಾರ್ಥ ಎಂಬ ಶಬ್ದದಿಂದ ವಾಚ್ಯವಾದುದೇ ಆಗಿದೆ. ಆದ್ದರಿಂದ ಅವಾಚ್ಯವೆಂಬುದು ಯಾವುದೇ ಪ್ರಮಾಣದಿಂದಲೂ ಸಿದ್ಧವಾಗದು. ಯಾವ ವಸ್ತುವೂ ಅವಾಚ್ಯವಾಗಲಾರದು ಎಂದಮೇಲೆ ಬ್ರಹ್ಮನು ಅವಾಚ್ಯ ಎಂದು ಹೇಳಿದರೆ ಬ್ರಹ್ಮನಿಗೆ ವಸ್ತುತ್ವವೇ

ಇಲ್ಲವೆಂದಾಗುವುದು.

ಬ್ರಹ್ಮನು ಅವಾಚ್ಯನು ಎನ್ನುವುದು 'ಯತೋ ವಾಚೋ' ಶ್ರುತಿಯ ಅರ್ಥವಾಗಿದ್ದರೆ, ವಾಚ್ಯತ್ವವನ್ನು ಸಾಧಿಸಿಕೊಡುವ ಈಕ್ಷಣೇಯತ್ವಾದಿ ಅನುಮಾನವು ಅಯುಕ್ತವಾಗುತ್ತಿತ್ತು. ಆ ಶ್ರುತಿಗೆ ಬ್ರಹ್ಮನು ಅವಾಚ್ಯ ಎಂದು ಹೇಳುವುದರಲ್ಲಿ ತಾತ್ಪರ್ಯವೇ ಇಲ್ಲ. ಹಾಗೆ ವ್ಯಾಖ್ಯಾನ ಮಾಡಿದರೆ ಸ್ವಕ್ರಿಯಾವಿರೋಧ ಬರುತ್ತದೆ ಎಂದು ಹೇಳುತ್ತಾರೆ –

.....:ಯತ ಇತ್ಯಾದಿಕೈರ್ವದನ್ ॥೧೨೩॥

ಅವಾಚ್ಯತ್ವಂ ಕಥಂ ಬ್ರೂಯಾನ್ಮೂಕೋಽಹಮಿತಿವತ್ಸುಧೀಃ ।
ಯೇನ ಲಕ್ಷ್ಯಮಿತಿ ಪ್ರೋಕ್ತಂ ಲಕ್ಷ್ಯಶಬ್ದೇನ ಸೋಽವದತ್ ॥೧೨೪॥
ಏತಸ್ಯಾಪಿ ಹಿ ಶಬ್ದಸ್ಯ ಗೌಣಾರ್ಥಸ್ವೀಕೃತೌ ಸತಾಂ ।
ಮಹತೀ ಜಾಯತೇ ಲಜ್ಜಾ ಯತ್ರ ತತ್ರಾಖಿಲಾ ರವಾಃ ॥೧೨೫॥
ಅಮುಖ್ಯಾರ್ಥಾ ಇತಿ ವದನ್ಸ್ವನ್ಮಾರ್ಗಾನುವರ್ತಿನಾಂ ।
ಕಥಂ ನ ಜಾಯತೇ ಲಜ್ಜಾ ವಕ್ತುಂ ಶಾಬ್ದತ್ವಮಾತ್ಮನಃ ॥೧೨೬॥

ಯತಃ ಇತ್ಯಾದಿ ಶಬ್ದಗಳಿಂದ ಬ್ರಹ್ಮನನ್ನೇ ಹೇಳುತ್ತ, ಬ್ರಹ್ಮನಿಗೆ ಯಾವ ಶಬ್ದದಿದಂಲೂ ವಾಚ್ಯತ್ವವಿಲ್ಲ ಎಂದು ಯಾವನು ತಾನೇ ಹೇಳಿಯಾನು? ಹಾಗೆ ಹೇಳುವವನಿಗೆ 'ನಾನು ಮೂಕನು' ಎನ್ನುವಂತೆ ಸ್ವಕ್ರಿಯಾವಿರೋಧವು ಬರುವುದು. ಅಂಳವನು ಪಂಡಿತನೇ ಸರಿ, ಅಂದರೆ ಮೂರ್ಖ ಎಂದರ್ಥ. ಲಕ್ಷ್ಯ ಎಂಬ ಶಬ್ದವನ್ನು ಬಳಸಿಕೊಂಡೇ ಬ್ರಹ್ಮನು ಲಕ್ಷ್ಯ ಎಂದು ಹೇಳಬೇಕು. ಅಂದರೆ ಬ್ರಹ್ಮನಿಗೆ ಲಕ್ಷ್ಯ ಎಂಬ ಶಬ್ದದಿಂದ ವಾಚ್ಯತ್ವ ಇದೆ ಎಂದು ಒಪ್ಪಿಕೊಂಡಂತಾಯಿತು. ಲಕ್ಷ್ಯ ಎಂಬ ಶಬ್ದದಿಂದಲೂ ಲಕ್ಷಿತನೇ ಆಗುತ್ತಾನೆ ವಾಚ್ಯನಾಗುವುದಿಲ್ಲ ಎಂದು ಹೇಳಿದರೆ ಆಗ ಹಿಂದೆ ಹೇಳಿದಂತೆ ಅನವಸ್ಥಿತಿ ಬರುತ್ತದೆ. ವೇದದಲ್ಲಿನ ಒಂದೇ ಒಂದು ಶಬ್ದಕ್ಕೂ ಮುಖ್ಯಾರ್ಥವನ್ನು ಬಿಟ್ಟು ಅಮುಖ್ಯಾರ್ಥವನ್ನು ಸ್ವೀಕರಿಸಿದರೆ ಸಜ್ಜನರಿಗೆ ಮಹಾಲಜ್ಜೆಯು ಹುಟ್ಟುವುದು. ಹಾಗಿರುವಾಗ, ವೇದದಲ್ಲಿರುವ ಎಲ್ಲ ಶಬ್ದಗಳೂ ಅಮುಖ್ಯಾರ್ಥವನ್ನೇ ಪ್ರತಿಪಾದಿಸುತ್ತವೆ ಎಂದು ಹೇಳುವವನಿಗೂ ಮತ್ತು ಅವನನ್ನೇ ಅನುಸರಿಸುವವರಿಗೂ ಹೇಗೆ ತಾನೇ ನಾಚಿಕೆಯು

ಹುಟ್ಟುವುದಿಲ್ಲ? ಅವರಿಗೆ ಇನ್ನೂ ಹೆಚ್ಚಿನ ನಾಚಿಕೆಯಾಗಬೇಕು ಎಂದು ಭಾವ.

ಮುಖ್ಯಾರ್ಥವನ್ನು ಬಿಟ್ಟು ಅಮುಖ್ಯಾರ್ಥವನ್ನು ಸ್ವೀಕರಿಸಿದ ಮಾತ್ರಕ್ಕೆ ಲಜ್ಜೆ ಪಡಬೇಕಿಲ್ಲ. ಮುಖ್ಯಾರ್ಥವು ಸುಲಭವಾಗಿ ಕೂಡುವಾಗ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಲಜ್ಜೆಗೆ ಕಾರಣವಾಗುವುದು. ಮುಖ್ಯಾರ್ಥವು ಕೂಡದಿದ್ದಾಗ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಗುಣವೇ ಆಗುವುದು. ಉದಾಹರಣೆಗೆ, 'ಗಂಗಾಯಾಂ ಘೋಷಃ', 'ಸಿಂಹೋ ಮಾಣವಕಃ' ಇತ್ಯಾದಿಗಳಲ್ಲಿ ಮುಖ್ಯಾರ್ಥವಾದ 'ಗಂಗಾಪ್ರವಾಹದಲ್ಲಿ ಹಳ್ಳಿ', 'ವಟುವು ಸಿಂಹ' ಇತ್ಯಾದಿ ವಾಚನಿಕಾರ್ಥ ಕೂಡುವುದಿಲ್ಲ. ಆಗ ಅದರ ಲಾಕ್ಷಣಿಕಾರ್ಥವಾದ 'ಗಂಗೆಯ ತೀರದಲ್ಲಿ ಹಳ್ಳಿ', 'ವಟುವು ಸಿಂಹದಂತೆ ಶೂರ' ಇತ್ಯಾದಿ ಅರ್ಥ ಮಾಡುವುದು ಕಂಡಿದೆ.

'ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ' ಇತ್ಯಾದಿಗಳಲ್ಲಿ ಸಗುಣಬ್ರಹ್ಮನೇ ಈಕ್ಷಣೀಯನೆಂದು ಹೇಳಲ್ಪಡುತ್ತಾನೆ. ಆದಕಾರಣ ಸಗುಣಬ್ರಹ್ಮನೇ ವಾಚ್ಯನಾಗಲಿ. ನಿತ್ಯನೂ ಶುದ್ಧಚೈತನ್ಯನೂ ಆದ ನಿರ್ಗುಣ ಬ್ರಹ್ಮನು ವಾಚ್ಯನಾಗುವುದು ಬೇಡ ಎಂದು ಹೇಳಿದರೆ –

ಸೂತ್ರ: ಓಂ ಗೌಣಶ್ಚೇನ್ನಾತ್ಮಶಬ್ದಾತ್ ಓಂ (೧-೧-೬)

ಸೂತ್ರ: ಓಂ ತನ್ನಿಷ್ಠಸ್ಯ ಮೋಕ್ಷೋಪದೇಶಾತ್ ಓಂ (೧-೧-೭)

ಈಕ್ಷಣೀಯವಾದ ವಸ್ತುವಿನಲ್ಲಿ ಆತ್ಮ ಶಬ್ದ ಪ್ರಯೋಗವಿದೆ. ಆತ್ಮ, ಬ್ರಹ್ಮ, ಪುರುಷ ಮೊದಲಾದ ಶಬ್ದಗಳು ಪೂರ್ಣಾರ್ಥಕವಾಗಿದ್ದು ಶುದ್ಧಬ್ರಹ್ಮನನ್ನೇ ಹೇಳುತ್ತವೆ. ಜೊತೆಗೆ ಅಂಥಹ ಆತ್ಮನನ್ನು ತಿಳಿದವನಿಗೆ ಮೋಕ್ಷವಾಗುವುದೆಂಬ ಉಪದೇಶವೂ ಅಲ್ಲಿ ಕಂಡಿದೆ. ಗೌಣಾತ್ಮನನ್ನು ತಿಳಿದವನಿಗೆ ಮೋಕ್ಷವಾಗುವುದಿಲ್ಲ, ಶುದ್ಧನಾದ ನಿರ್ಗುಣಬ್ರಹ್ಮನನ್ನು ತಿಳಿದವನಿಗೇ ಮೋಕ್ಷ ಎನ್ನುವುದು ಸಿದ್ಧವಾಗಿರುವುದರಿಂದ, ಪರರು ಹೇಳುವಂತಹ ನಿರ್ಗುಣಬ್ರಹ್ಮನಿಗೇ ಈಕ್ಷಣೀಯತ್ವ ಹೇತುವಿನಿಂದ ವಾಚ್ಯತ್ವವು ಸಿದ್ಧವಾಗುವುದು, ಎನ್ನುವುದು ಈ ಎರಡು ಸೂತ್ರಗಳ ಭಾವ.

ಈಕ್ಷ್ಯತ್ಯಧಿಕರಣದ ಮೇಲಿನ ಎರಡು ಸೂತ್ರಗಳಲ್ಲಿ ಬಂದಿರುವ ವಿಚಾರವನ್ನು ಶ್ರೀಮದಾಚಾರ್ಯರು ಇಲ್ಲಿ ಸ್ಪಷ್ಟಪಡಿಸುತ್ತಾರೆ –

ಆತ್ಮಬ್ರಹ್ಮಾದಯಃ ಶಬ್ದಾಃ ಸಾಕ್ಷಾತ್ ಪೂರ್ಣಾಭಧಾಯಿನಃ ।
ಜನ್ಮಾದಿಕಾರಣಂ ಬ್ರಹ್ಮ ಲಕ್ಷಿತಂ ಚ ಯದಾ ತದಾ ॥೧೨॥
ವಂಧ್ಯಾಪುತ್ರೋಪಮಂ ಮಾಯಾಶಬಲಂ ವಾಚ್ಯಮಿತ್ಯಪಿ ।
ಕಲ್ಪಯಿತ್ವಾ ಏನಾ ಮಾನಂ ಲಕ್ಷ್ಯಂ ಶುದ್ಧಂ ವದನ್ಪದ್ಯೈಃ ॥೧೨॥
ಆತ್ಮಶಬ್ದೋದಿತಸ್ಯೈವ ಜ್ಞಾನಂ ಮುಕ್ತಾವಸಾಧನಂ ।
ಅಹ ಶ್ರುತಪರಿತ್ಯಾಗಃ ಸ್ಯಾಚ್ಚಾಸ್ಯಾಶ್ರುತಕಲ್ಪನಾ ॥೧೨॥
ಸ್ಯಾತ್ಸರ್ವತ್ರ ಚ ಯತ್ಕೈಕಮಪಿ ಲೋಕೋ ಜುಗುಪ್ಸತೇ ।

ಮಾಯಾಖ್ಯವಾದ ಅಜ್ಞಾನವಿಶಿಷ್ಟ ಸಗುಣಬ್ರಹ್ಮನನ್ನು ಕಲ್ಪಿಸಿಕೊಂಡು, ಅವನಿಗೆ ಎಲ್ಲ ವೈದಿಕಪದಗಳಿಂದಲೂ ವಾಚ್ಯತ್ವವನ್ನು ಹೇಳಿ, ಮಾಯಾತೀತನಾದ ಶುದ್ಧಬ್ರಹ್ಮನು ಎಲ್ಲ ವೈದಿಕಪದಗಳಿಂದಲೂ ಲಕ್ಷ್ಯನೆಂದು ಹೇಳುವ ಈ ಮಾಯಾವಾದಿಗೆ ಶ್ರುತಾರ್ಥ ಪರಿತ್ಯಾಗ ಎನ್ನುವ ದೋಷವು ಬರುವುದು. ವೇದಗಳಲ್ಲಿ ಬಂದಿರುವ ಆತ್ಮ, ಬ್ರಹ್ಮ ಮೊದಲಾದ ಶಬ್ದಗಳು ನೇರವಾಗಿ ಶಬ್ದವೃತ್ತಿಯಿಂದಲೇ ಪರಿಪೂರ್ಣವಾದ ಅರ್ಥವನ್ನು ಹೇಳುತ್ತಿರುವಾಗ ಅದನ್ನು ಬಿಟ್ಟು ಲಾಕ್ಷಣಿಕಾರ್ಥವನ್ನು ಹೇಳಿದರೆ ಅದು ಶ್ರುತಾರ್ಥ ಪರಿತ್ಯಾಗವೆನಿಸುವುದು. ಇಷ್ಟೇ ಅಲ್ಲದೆ ಅಶ್ರುತಕಲ್ಪನಾ ಎಂಬ ಮತ್ತೊಂದು ದೋಷವೂ ಬರುವುದು. ಏಕೆಂದರೆ, ಶ್ರುತಿಗಳಲ್ಲಿ ಉಕ್ತವಾಗಿರುವ ಆತ್ಮ ಬ್ರಹ್ಮ ಇತ್ಯಾದಿ ಶಬ್ದಗಳು ಅದ್ವೈತಿಗಳು ಹೇಳುವ ಮಾಯಾವಿಶಿಷ್ಟನಾದ ಸಗುಣಬ್ರಹ್ಮನನ್ನು ಪ್ರತಿಪಾದಿಸುವದೇ ಅಲ್ಲವು. ಆದಕಾರಣ ಸಗುಣಬ್ರಹ್ಮನು ಬಂಜೆಯ ಮಗನಿಗೆ ಸಮನೆಂದು ಹೇಳಬೇಕು.

ಪ್ರಥಮಸೂತ್ರದಲ್ಲಿ ಪೂರ್ಣಬ್ರಹ್ಮನೇ ಜಿಜ್ಞಾಸ್ಯನೆಂದು ಪ್ರತಿಜ್ಞಾ ಮಾಡಲ್ಪಟ್ಟಿದ್ದಾನೆ ಹಾಗೂ ಆತನೇ ಜಗಜ್ಜನ್ಮಾದಿಕಾರಣನೆಂದೂ ಲಕ್ಷಿತನಾಗಿದ್ದಾನೆ. ಆತನ ವಿಷಯದಲ್ಲಿ ವೇದಾದಿ ಶಾಸ್ತ್ರವು ಪ್ರಮಾಣವಾಗಿದೆ. ಅವನಲ್ಲಿಯೇ ಎಲ್ಲ ಶ್ರುತಿಗಳಿಗೂ ಸಮನ್ವಯವು ಹೇಳಲ್ಪಟ್ಟಿದೆ. 'ಆತ್ಮಾನಂ ಪಶ್ಯೇತ್' ಇತ್ಯಾದಿ ಶ್ರುತಿಗಳಲ್ಲಿ ದ್ರಷ್ಟವ್ಯನೆಂದು ಹೇಳಲ್ಪಟ್ಟವನು ಅದ್ವೈತಿಗಳು ವಾದಿಸುವಂತೆ ಮಾಯಾಖ್ಯ ಸಗುಣಬ್ರಹ್ಮನಲ್ಲ. 'ತರಂತಿ ಶೋಕಮಾತ್ಮವಿತ್' ಎಂದು ಆತ್ಮ ಶಬ್ದದಿಂದ ವಾಚ್ಯನಾದವನ ಜ್ಞಾನದಿಂದ

ಮುಕ್ತಿಯು ಶ್ರುತವಾಗಿದೆ. ಇದನ್ನು ಬಿಟ್ಟು ಲಕ್ಷ್ಯಜ್ಞಾನದಿಂದ ಮುಕ್ತಿಯನ್ನು ಹೇಳುವ ಈ ಮಾಯಾವಾದಿಗೆ ಶ್ರುತಾರ್ಥಪರಿತ್ಯಾಗ ಮತ್ತು ಅಶ್ರುತಕಲ್ಪನಾ ಎಂಬ ಎರಡು ರೀತಿಯ ದೋಷಗಳು ಒಟ್ಟಿಗೇ ಬರುತ್ತವೆ. ಇವೆರಡರಲ್ಲಿ ಯಾವುದೇ ಒಂದು ದೋಷ ಬಂದರೂ ಲೋಕದ ಜನರು ಅದನ್ನು ನಿಂದಿಸುತ್ತಾರೆ. ಅಂದಮೇಲೆ ಈರೀತಿ ವಾದ ಮಾಡುವ ಮಾಯಾವಾದಿಯು ಪರಮನಿಂದ್ಯನಾಗುತ್ತಾನೆ ಎಂದು ತಾತ್ಪರ್ಯ.

ಶ್ರುತಹಾನಿ, ಅಶ್ರುತಕಲ್ಪನಾ ಎನ್ನುವುದು ಲೋಕದಲ್ಲಿ ನಿಂದಿತವಾಗಿದ್ದರೂ, ನಮಗೆ ದೂಷಣವಲ್ಲ ಎಂದು ಮಾಯಾವಾದಿಯು ಹೇಳಿದರೆ -

ಶ್ರುತ್ಯರ್ಥ ಪರಿತ್ಯಾಗದಿಂದ ಮಹಾ ಅನರ್ಥ

ನಿಯಮೇನೋಭಯಂ ಸ್ಯಾದ್ಧಿ ಯಸ್ಯ ಸ್ವಪರಯೋರ್ಮತೇ ॥೧೩೦॥
ಅಲಂಕೃತಃ ಸದೈವಾಯಂ ದುರ್ಘಟೈರೇವ ಭೂಷಣೈಃ ।
ಅಂಧಂತಮೋ ನಿತ್ಯದುಃಖಂ ತಸ್ಯ ಸ್ಯಾದ್ವಸನದ್ವಯಂ ॥೧೩೧॥
ಅನಂದಾ ನಾಮ ತೇ ಲೋಕಾಃ ಅಂಧೇನ ತಮಸಾ ವೃತಾಃ ।
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇಽವಿದ್ವಾಂಸೋ ಬುಧೋ ಜನಾಃ ॥೧೩೨॥
ಅಸುರ್ಯಾ ನಾಮ ತೇ ಲೋಕಾಃ ಅಂಧೇನ ತಮಸಾ ವೃತಾಃ ।
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ॥೧೩೩॥
ಇತ್ಯಾದಿ ಶ್ರುತಯೋ ಮಾನಂ ಶತಶೋಽತ್ರ ಸಮಂತತಃ ।

ಹಿಂದೆ ಹೇಳಿದ ದೂಷಣಗಳೆರಡೂ ಯಾರಿಗೆ ತಮ್ಮ ಮತದಿಂದಲೂ ಪರರ ಮತದಿಂದಲೂ ನಿಯಮದಿಂದ ಭೂಷಣವೇ ಆಗುವುದೋ, ಅವನು ಅಂಗೀಕಾರಕ್ಕೆ ಅಯೋಗ್ಯವಾದ ಆಭರಣಗಳಿಂದ ಯಾವಾಗಲೂ ಅಲಂಕೃತನೇ ಆಗಿರಲಿ. ಅವನಿಗೆ ಅಂಧಂತಮಸ್ಸು ಮತ್ತು ನಿತ್ಯದುಃಖಗಳೇ ಉಡುವ ಮತ್ತು ಹೊದೆಯುವ ವಸ್ತ್ರಗಳು ಎನಿಸಲಿ ಎಂದು ಶ್ರೀಮದಾಚಾರ್ಯರು ಇಲ್ಲಿ ಪರಿಹಾಸ ಮಾಡಿದ್ದಾರೆ. ಶ್ರುತಿಸಿದ್ಧನಾದ ಪರಮಾತ್ಮನನ್ನು ಪರಿತ್ಯಾಗ ಮಾಡಿದರೆ ಕೇವಲ ಮೇಲೆ ಹೇಳಿದ ದೋಷಗಳೇ ಅಲ್ಲ, ಮಹಾ ಅನರ್ಥವೂ ಸಂಭವಿಸುವುದು ಎಂಬುದಾಗಿ ಶ್ರುತಿಗಳಲ್ಲೇ ಉಕ್ತವಾಗಿದೆ. ಯಥಾರ್ಥವಾದ ಜ್ಞಾನವನ್ನು ಹುಟ್ಟಿಸುವ ವೇದ ವಾಕ್ಯಗಳಿದ್ದಾಗಲೂ ಅದಕ್ಕೆ ಅಪಾರ್ಥ

ಕಲ್ಪಿಸುವ ಮೂರ್ಖರು, ಮರಣಾನಂತರದಲ್ಲಿ ಅಂಧಂತಮಸ್ಸಿನಿಂದ ಆವೃತವಾಗಿರುವ ಸುಖದ ಹೆಸರೇ ಇಲ್ಲದ 'ಅನಂದಾ' ಎಂಬ ಲೋಕಗಳನ್ನು ಸೇರುತ್ತಾರೆ. ಅನಂತಾನಂತಕಲ್ಯಾಣಗುಣಗಣ ಪರಿಪೂರ್ಣನೆಂದು ವೇದಗಳಿಂದ ವಾಚ್ಯನಾದ ಪರಮಾತ್ಮನನ್ನು ನಿರ್ಗುಣ ಎಂದು ಹೇಳುವವರು ಅಥವಾ ಅಂಥಹ ಬ್ರಹ್ಮನು ಇಲ್ಲವೆಂದೇ ಹೇಳುವ ಜನರು 'ಆತ್ಮಹನರು' ಎನಿಸಿಕೊಳ್ಳುತ್ತಾರೆ. ಪೂರ್ಣವಾಗಿ ದುಃಖವೇ ತುಂಬಿರುವ ಅಸುರರಿಂದಲೇ ಹೊಂದಲು ಯೋಗ್ಯವಾದ 'ಅಸುರ್ಯಾ' ಎಂಬ ಲೋಕಗಳನ್ನು ಅಂಥವರು ಹೊಂದುತ್ತಾರೆ. ಈ ವಿಷಯದಲ್ಲಿ ಎಲ್ಲ ವೇದಶಾಖೆಗಳಲ್ಲಿಯೂ ನೂರಾರು ಶ್ರುತಿಗಳು ಪ್ರಮಾಣವಾಗಿವೆ.

ಗೌಣಾತ್ಮನು ಆತ್ಮಶಬ್ದವಾಚ್ಯನಲ್ಲ

ದೃಶ್ಯವಸ್ತುವಿನಲ್ಲಿ ಶ್ರುತವಾದ ಆತ್ಮ ಶಬ್ದವು ಗೌಣಾತ್ಮನನ್ನೇ ಹೇಳುತ್ತದೆ ಎಂಬ ಪರರ ವಾದವನ್ನು ತಿರಸ್ಕರಿಸುವ ಹಾಗೂ ನಿರ್ಗುಣಬ್ರಹ್ಮನೇ ಆತ್ಮಶಬ್ದವಾಚ್ಯನು ಎಂದು ಹೇಳುವ ಸೂತ್ರಗಳನ್ನು ಪಠಿಸಿ ಸೂತ್ರಾರ್ಥವನ್ನು ವಿವರಿಸುತ್ತಾರೆ –

ಸೂತ್ರ: ಓಂ ಹೇಯತ್ವಾವಚನಾಚ್ಚ ಓಂ (೧-೧-೮)

'ತಮೇವೈಕ ಜಾನಥ ಆತ್ಮಾನಂ' ಎಂದು ಅಹೇಯತ್ವವು (ಬಿಡತಕ್ಕದ್ದಲ್ಲ ಎಂದು) ಶ್ರುತವಾಗಿರುವುದರಿಂದ ಆತ್ಮಶಬ್ದವಾಚ್ಯನು ಸಗುಣಬ್ರಹ್ಮನಲ್ಲ. 'ಅನ್ಯಾ ವಾಚೋ ವಿಮುಂಚಥ' ಎಂದು ಸಗುಣನಾದ ಅಮುಖ್ಯ ಆತ್ಮನಿಗೆ ಹೇಯತ್ವವು ಶ್ರುತವಾಗಿದೆ ಎಂದು ಸೂತ್ರಾರ್ಥ.

ಹೇಯತ್ವವಚನಾಚ್ಚೈವ ನಾತ್ಮಾ ಗೌಣಃ ಶ್ರುತೌ ಶ್ರುತಃ ॥೧೩೪॥

ಹೇಯತ್ವವನ್ನು ಹೇಳದಿರುವುದರಿಂದ ಗೌಣನಾದ ಆತ್ಮನು ವೇದದಲ್ಲಿ ದೃಶ್ಯನಾಗಿ ಶ್ರುತನಾಗಿಯೇ ಇಲ್ಲ.

ತಮೇವೈಕಂ ಜಾನಥಾನ್ಯಾ ವಾಚೋ ಮುಂಚತ ಚೇತಿ ಹ ।
ಉಕ್ತ ಆತ್ಮಾ ಕಥಂ ಗೌಣೋ ಹೇಯಪಕ್ಷೇ ಹ್ಯಸೌ ಶ್ರುತಃ ॥೧೩೫॥

ಆತ್ಮಶಬ್ದವಾಚ್ಯನಾದ ಆ ಪರಬ್ರಹ್ಮನೊಬ್ಬನನ್ನೇ ತಿಳಿಯಿರಿ, ಅನ್ಯರನ್ನು ಹೇಳುವ ಮಾತುಗಳನ್ನು ಬಿಟ್ಟುಬಿಡಿ. ದೃಶ್ಯನಾದ ಪರಬ್ರಹ್ಮನು ಮುಕ್ತವರ್ಗಕ್ಕೆ

ಆಶ್ರಯನು. ಹೀಗೆ ಶ್ರುತಿಗಳಲ್ಲಿ ಉಕ್ತನಾದ ಆತ್ಮನು ಗೌಣನೆಂದು ಅಂಗೀಕರಿಸಲಿಕ್ಕೆ ಹೇಗೆ ಸಾಧ್ಯ? ಏಕೆಂದರೆ, ಈ ಗೌಣ ಆತ್ಮನು ಮುಮುಕ್ಷುಗಳಿಂದ ಬಿಡಲರ್ಹನೆನ್ನುವ ಪಕ್ಷದಲ್ಲಿ ಹೇಳಲ್ಪಟ್ಟಿದ್ದಾನೆ.

ಬ್ರಹ್ಮಾದಿ ದೇವತೆಗಳಿಗೆ ಉಪಾದೇಯತ್ವವನ್ನು 'ಅಂಗಾವಬದ್ಧಾಸ್ತು' ಇತ್ಯಾದಿ ಸೂತ್ರಗಳಲ್ಲಿ ಹೇಳಿರುವುದರಿದ ಗೌಣಾತ್ಮರಿಗೆ ಉಪಾದೇಯತ್ವವು ಕೂಡುವುದಿಲ್ಲ ಎಂದು ಹೇಗೆ ಹೇಳುತ್ತೀರಿ ಎಂದು ಆಶಂಕಿಸಿದರೆ-

ಪರಿವಾರತಯಾ ಗ್ರಾಹ್ಯಾ ಅಪಿ ಹೇಯಾ ಪ್ರಧಾನತಃ ।

ಆ ಹರಿಯೊಬ್ಬನನ್ನೇ ತಿಳಿಯಿರಿ ಎಂಬ ಮಾತಿನಿಂದ ಬ್ರಹ್ಮಾದಿ ದೇವತೆಗಳನ್ನು ಬಿಡಬೇಕೆಂದು ಅರ್ಥವಲ್ಲ. ಶ್ರೀಹರಿಯನ್ನು ಬಿಟ್ಟು ಇತರರು ಪರಿವಾರತಯಾ ಗ್ರಾಹ್ಯರು, ಸರ್ವೋತ್ತಮತ್ವೇನ ಅಲ್ಲ. ಬ್ರಹ್ಮಾದಿದೇವತೆಗಳಿಗೆ ಪ್ರಾಧಾನ್ಯದಿಂದ ಉಪಾದೇಯತ್ವವು ಇರುವುದಿಲ್ಲ ಎಂದು ತಿಳಿಯಬೇಕು.

ಈ ಪ್ರಕಾರವಾಗಿ ಆತ್ಮಶಬ್ದಕ್ಕೆ ನಿರ್ಗುಣತ್ವವನ್ನು ಉಪಪಾದಿಸಿ, ನಿರ್ಗುಣನಿಗೇ ವಾಚ್ಯತ್ವವು ಎಂದು ಸಮರ್ಥಿಸಲಾಯಿತು. ಹೇತ್ವಂತರದಿಂದ ಇದೇ ಅರ್ಥವನ್ನು ಪ್ರತಿಪಾದಿಸುವ ಸ್ವಾಪ್ಯಯಾತ್ ಎನ್ನುವ ಸೂತ್ರವನ್ನು ವ್ಯಾಖ್ಯಾನಿಸುವರು.

ಸೂತ್ರ: ಓಂ ಸ್ವಾಪ್ಯಯಾತ್ ಓಂ (೧-೧-೯)

'ಆತ್ಮನ್ಯೇವಾತ್ಮಾನಂ ವಿಲಾಪಯತಿ' ಎಂದು ಶ್ರುತಿಯಲ್ಲಿ ಆತ್ಮನಿಗೆ ಆತ್ಮನಲ್ಲೇ ಲಯವು ಹೇಳಿರುವುದರಿಂದ, ನಿರ್ಗುಣಬ್ರಹ್ಮನೇ ಆತ್ಮಶಬ್ದವಾಚ್ಯ.

ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥೧೩೬॥

ಇತಿ ಸ್ವಸ್ಯೈವ ಪೂರ್ಣಸ್ಯ ಪೂರ್ಣೇऽಪ್ಯಯ ಉದಾಹೃತಃ ।

ಕಥಂ ಮಾಯಾವ್ಯವಚ್ಛನ್ನಃ ಪೂರ್ಣೋ ಮುಖ್ಯತಯಾ ಭವೇತ್ ॥೧೩೭॥

ಪೂರ್ಣವಾದ ಮೂಲರೂಪದ ಸಕಾಶದಿಂದ ಪೂರ್ಣವಾದ ಅವತಾರರೂಪವನ್ನು ಸ್ವೀಕರಿಸಿದ ಮೇಲೂ ಪೂರ್ಣವಾದ ಮೂಲರೂಪವೇ ಉಳಿದಿರುತ್ತದೆ. ಹೀಗೆ ವಿಷ್ಣುವಿನಲ್ಲಿ ಪೂರ್ಣವಾದ ತನ್ನ ಅವತಾರರೂಪಕ್ಕೇ ಪೂರ್ಣವಾದ ತನ್ನ ಮೂಲರೂಪದಲ್ಲಿ ಲಯವು ಹೇಳಲ್ಪಟ್ಟಿದೆ. ವಿಷ್ಣುವೊಬ್ಬನಿಗೆ ಮಾತ್ರ ಈ ರೀತಿಯ ಲಯವು ಹೇಳಲ್ಪಟ್ಟಿದೆ, ಬೇರೆ

ಯಾರಿಗೂ ಇಲ್ಲ. ಆದಕಾರಣ ನಿರ್ಗುಣಬ್ರಹ್ಮನಿಗೇ ಮುಖ್ಯವಾಗಿ ವಾಚ್ಯತ್ವವು ಕೂಡುತ್ತದೆ. ಮಾಯಾವಿಶಿಷ್ಟನಾದ ಸಗುಣಬ್ರಹ್ಮನು ಮುಖ್ಯವಾಗಿ ಪೂರ್ಣನು ಹೇಗೆ ಆಗುವನು?

ಪ್ರಾಕೃತಗುಣರಹಿತ ಶುದ್ಧಬ್ರಹ್ಮನೇ ವಾಚ್ಯನು

ಯುಕ್ತ್ಯಂತರದಿಂದ ನಿರ್ಗುಣ ಅಂದರೆ ಪ್ರಾಕೃತಗುಣರಹಿತ ಬ್ರಹ್ಮನಿಗೆ ವಾಚ್ಯತ್ವವನ್ನು ಶ್ರುತತ್ವಾಚ್ಚ ಎಂಬ ಸೂತ್ರದಿಂದ ಉಪಪಾದಿಸುತ್ತಾರೆ.

ಸೂತ್ರ: ಓಂ ಶ್ರುತತ್ವಾಚ್ಚ ಓಂ (೧-೧-೧೧)

'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ। ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ॥' ಎನ್ನುವ ಶ್ರುತಿಯಲ್ಲಿ ನಿರ್ಗುಣಬ್ರಹ್ಮನೇ ಆತ್ಮ ಶಬ್ದದಿಂದ ಶ್ರುತನಾಗಿದ್ದಾನೆ. ಆದಕಾರಣ ಆತನಿಗೆ ವಾಚ್ಯತ್ವವು ಕೂಡುತ್ತದೆ.

ಇಲ್ಲಿ ನಿರ್ಗುಣನು ಶ್ರುತನಾಗಿದ್ದರೂ ಸಗುಣನೇ ಏಕೆ ವಾಚ್ಯನಾಗಬಾರದು ಎಂದು ಕೇಳಿದರೆ -

ಪದಂ ಚ ನಿರ್ಗುಣ ಇತಿ ಕಥಂ ಗೌಣಂ ವದಿಷ್ಯತಿ ।
ಗುಣಾಭಾವೋಪಲಕ್ಷ್ಯಂ ಚೇತ್ಪದಂ ತದಪಿ ವಾಚಕಂ ॥೧೩೮॥
ಅತೋಽನವಸ್ಥಿತಿಮುಖ ಸರ್ವದೋಷಸಮಾಸ್ಪದಂ ।
ಕಥಮೇತನ್ಮತಂ ಸದ್ಭಿರಾದ್ರಿಯೇತ ವಿಚಕ್ಷಣೈಃ ॥೧೩೯॥

ನಿರ್ಗುಣನಲ್ಲಿ ಆತ್ಮಶಬ್ದವನ್ನು ಹೇಳುವ 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' ಎನ್ನುವ ಶ್ರುತಿಯು ನಿರ್ಗುಣ ಎಂಬ ಪದದಿಂದ ಸಗುಣನನ್ನು ಹೇಗೆ ಹೇಳುವುದು? ಹಾಗೆ ಹೇಳುವುದು ವ್ಯಾಹತವಾಗುವುದು. ಆದ್ದರಿಂದ ಇಲ್ಲಿ ಸಗುಣನು ಹೇಳಲ್ಪಟ್ಟಿಲ್ಲ. ನಿರ್ಗುಣ ಶಬ್ದದಿಂದ ಗುಣಾಭಾವದ ಮೂಲಕವಾಗಿ ಬ್ರಹ್ಮನು ಉಪಲಕ್ಷಿತನೆಂದು ಹೇಳುವುದಾದರೆ, ಗುಣಾಭಾವೋಪಲಕ್ಷಿತ ಪದದಿಂದ ವಾಚ್ಯನಾಗಬೇಕಾಗುವುದು. ಆ ಪದದಿಂದಲೂ ಗುಣಾಭಾವವು ಉಪಲಕ್ಷಿತವಾಗಿ ಬ್ರಹ್ಮನು ಉಪಲಕ್ಷಿತನೆಂದರೆ, ಅನವಸ್ಥಾದಿ ಎಲ್ಲ ದೋಷಗಳೂ ಬರುತ್ತವೆ. ಹೀಗಿರುವಾಗ ಬ್ರಹ್ಮನಿಗೆ ವಾಚ್ಯತ್ವವು ಇಲ್ಲವೆನ್ನುವ ಈ ಮತವು

ವಿವೇಕಿಗಳಾದ ಸಜ್ಜನರಿಂದ ಹೇಗೆ ತಾನೇ ಆದರಿಸಲ್ಪಡುವುದು?

'ಈಕ್ಷತೇರ್ನಾಶಬ್ದಂ' ಎನ್ನುವುದರಿಂದಾರಂಭಿಸಿ 'ಶ್ರುತತ್ವಾಚ್ಚ' ಎನ್ನುವ ವರೆಗಿನ ಸೂತ್ರಗಳಿಂದ ಜಗತ್ತಿಗೆ ಪ್ರಧಾನವು ಕಾರಣ ಎಂದು ಹೇಳುವ ಸಾಂಖ್ಯಮತವು ನಿರಾಕರಿಸಲ್ಪಡುತ್ತದೆ ಎಂದು ಆದ್ವೈತಿಗಳು ಹೇಳುವರು. ಅದು ಅಯುಕ್ತವೆನ್ನುತ್ತಾರೆ -

ನ ಚ ಸಾಂಖ್ಯನಿರಾಕೃತ್ಯೈ ಸೂತ್ರಾಣ್ಯೇತಾನ್ಯಚೀಕ್ಲೃಪತ್ ।
ಭಗವಾನ್ನ ಹ್ಯಶಬ್ದತ್ವಂ ಪ್ರಧಾನೇಂಽಗೀಕರೋತ್ಯಸೌ ॥೧೪೦॥
ಸಮನ್ವಯೇ ಪ್ರತಿಜ್ಞಾತೇ ಶಬ್ದಗೋಚರತೈವ ಹಿ ।
ಪ್ರಥಮ ಪ್ರತಿಪಾದ್ಯಾ ಸ್ಯಾತ್ತದಭಾವೇ ಕುತೋಂಽನ್ವಯಃ ॥೧೪೧॥
ಕಥಂ ಚ ಲಕ್ಷಣಾವಾದೀ ಬ್ರೂಯಾದ್ಬ್ರಹ್ಮ ಸಮನ್ವಯಂ ।
ಯೋಂಽಸೌ ಶಬ್ದಸ್ಯ ಮುಖ್ಯಾರ್ಥಸ್ತತ್ರೈವ ಸ್ಯಾತ್ಸಮನ್ವಯಃ ॥೧೪೨॥

ಈ ಸೂತ್ರಕಾರರು ಶಬ್ದ ಅವಾಚ್ಯತ್ವ ಅಥವಾ ಅಗೋಚರತ್ವವನ್ನು ಪ್ರಧಾನದಲ್ಲಿ ಅಂಗೀಕರಿಸಿರುವುದಿಲ್ಲ. ಆದಕಾರಣ ಸೂತ್ರಕಾರರು ಸಾಂಖ್ಯಮತದ ನಿರಾಕರಣೆಗಾಗಿ ಈ ಸೂತ್ರಗಳನ್ನು ರಚಿಸಿಲ್ಲ. 'ತತ್ತು ಸಮನ್ವಯಾತ್' ಎಂದು ಸರ್ವ ಶಾಸ್ತ್ರಕ್ಕೂ ಬ್ರಹ್ಮನಲ್ಲಿ ಸಮನ್ವಯವು ತಿಳಿದುಬರುತ್ತಿರಲು, ಶಬ್ದವಾಚ್ಯತ್ವವೇ ಮೊದಲಿಗೆ ಪ್ರತಿಪಾದಿತವಾಗಬೇಕು. ಶಬ್ದವಾಚ್ಯತ್ವವೇ ಇಲ್ಲದಿದ್ದರೆ ಸಮನ್ವಯವು ತಾನೇ ಸಾಧ್ಯವಾಗುವುದು? ಶಬ್ದಗಳಿಗೆ ಲಕ್ಷಣಾವೃತ್ತಿಯಿಂದ ಅರ್ಥಹೇಳುವವನು ಬ್ರಹ್ಮನಲ್ಲಿ ಶಬ್ದಗಳಿಗೆ ಸಮನ್ವಯವನ್ನು ಹೇಗೆ ಹೇಳಿಯಾನು? ಯೋಂಽಸೌ ಎಂಬ ಶಬ್ದಕ್ಕೆ ಮುಖ್ಯಾರ್ಥದಲ್ಲಿಯೇ ಸಮನ್ವಯವು ಸಾಧ್ಯ.

ನಿರ್ಗುಣನು ಪೂರ್ವದಲ್ಲಿ ಪ್ರಸಕ್ತನಾಗಿರುವುದರಿಂದ ತತ್ತು ಸಮನ್ವಯಾತ್ ಎಂಬ ಸೂತ್ರದಲ್ಲಿ ತತ್ ಶಬ್ದದಿಂದ ನಿರ್ಗುಣನನ್ನು ತೆಗೆದುಕೊಳ್ಳಬೇಕೋ ಅಥವಾ ಸಗುಣನು ಪ್ರಸಕ್ತನಾಗಿದ್ದರೂ ಪರಾಮರ್ಶೆ ಕೂಡದಿರುವುದರಿಂದ ನಿರ್ಗುಣನಿಗೆ ಸಮನ್ವಯವನ್ನು ಹೇಳಬೇಕೋ ಎಂದು ಆಶಂಕಿಸಿದರೆ -

ಜನ್ಮಾದಿಕಾರಣೇ ಸಾಕ್ಷಾದಾಹ ದೇವಃ ಸಮನ್ವಯಂ ।
ಉಕ್ತಂ ತದೇವ ಜಿಜ್ಞಾಸ್ಯಂ ಕ್ವಾವಕಾಶೋ ಅತ್ರ ನಿರ್ಗುಣೇ ॥೧೪೩॥

ಕಥಂ ಚಾಸಂಭವಸ್ತಸ್ಯ ಮುಖ್ಯಾರ್ಥಸ್ಯ ನಿರಾಕೃತೌ ।

ಭಗವಾನ್ ಸೂತ್ರಕಾರರು ಮುಖ್ಯವಾಗಿ ಜಗಜ್ಜನ್ಮಾದಿಕಾರಣನಾದ ವಿಷ್ಣುವಿನಲ್ಲಿಯೇ ಮುಖ್ಯವೃತ್ತಿಯಿಂದ ಸಮನ್ವಯವನ್ನು ಹೇಳಿರುವರು. ಆವನೇ ಜಿಜ್ಞಾಸ್ಯನು ಎಂದು ಉಕ್ತನಾಗಿದ್ದಾನೆ. ಈ ಸೂತ್ರದಲ್ಲಿ ನಿರ್ಗುಣಬ್ರಹ್ಮನಲ್ಲಿ ಸಮನ್ವಯಕ್ಕೆ ಅವಕಾಶವೆಲ್ಲಿದೆ? ನಿರ್ಗುಣನಿಗೆ ತತ್ ಶಬ್ದದಿಂದ ಪರಾಮರ್ಶೆ ಕೂಡದಿರುವುದರಿಂದ, ಹಿಂದಿನ ಮೂರು ಸೂತ್ರಗಳಲ್ಲಿ ಪ್ರಕೃತವಾದ ಮುಖ್ಯಾರ್ಥವನ್ನು ಬಿಡಬೇಕೆನ್ನುವುದರಲ್ಲಿ ಅನುಪಪತ್ತಿಯು ಇರುವುದಿಲ್ಲ.

ತತ್ ಶಬ್ದದಿಂದ ನಿರ್ಗುಣನನ್ನು ತೆಗೆದುಕೊಂಡರೆ, ಆವನಲ್ಲಿ ಲಕ್ಷಣಾ ವೃತ್ತಿಯೂ ಕೂಡದಿರುವುದರಿಂದ, ಸಮನ್ವಯಸೂತ್ರವು ವ್ಯರ್ಥವಾಗುತ್ತದೆ ಎಂದು ಹೇಳುತ್ತಾರೆ –

ಮಾನೇನ ಕೇನ ಏಜ್ಞೇಯಮವಾಚ್ಯಾಜ್ಞೇಯನಿರ್ಗುಣಂ ॥೧೪೪॥

ಅಮೇಯಂ ಚೇನ್ನ ಶಾಸ್ತ್ರಸ್ಯ ತತ್ರ ವೃತ್ತಿಃ ಕಥಂಚನ ।

ಅವಾಚ್ಯವೂ, ಅಜ್ಞೇಯವೂ, ನಿರ್ಗುಣವೂ ಆದ ವಸ್ತುವು ಯಾವ ಪ್ರಮಾಣದಿಂದ ತಾನೇ ತಿಳಿಯಲು ಸಾಧ್ಯವಾಗುವುದು. ನಿರ್ಗುಣನಾದ ಬ್ರಹ್ಮನನ್ನು ಯಾವುದೇ ಪ್ರಮಾಣದಿಂದಲೂ ತಿಳಿಯಲು ಸಾಧ್ಯವಿಲ್ಲ ಎಂದಮೇಲೆ, ಶಾಸ್ತ್ರವು ಆ ಬ್ರಹ್ಮನನ್ನು ಯಾವ ವೃತ್ತಿಯಿಂದಲೂ ತಿಳಿಸಿಕೊಡಲು ಸಾಧ್ಯವಾಗುವುದಿಲ್ಲ.

ವಿವರಣೆ:

ತಿಳಿಯಲರ್ಹವಾದುದೇ ಪ್ರಮೇಯ. ಶಬ್ದಗಳಿಂದ ಅವಾಚ್ಯನಾದರೆ ಜ್ಞೇಯತ್ವವು ಕೂಡುವುದಿಲ್ಲ. ಆದಕಾರಣ ಪ್ರಮೇಯತ್ವವೂ ಕೂಡುವುದಿಲ್ಲ. ಮುಖ್ಯಾರ್ಥ ಕೂಡದಿದ್ದರೂ ಲಕ್ಷಣಾವೃತ್ತಿಯಿಂದ ಶಾಸ್ತ್ರಗಳು ಬ್ರಹ್ಮನನ್ನು ತಿಳಿಸಿಕೊಡುತ್ತವೆ ಎಂದೂ ಹೇಳುವ ಹಾಗಿಲ್ಲ. ಏಕೆಂದರೆ ಲಕ್ಷ್ಯಾರ್ಥಜ್ಞಾನವಿದ್ದಾಗ ಮಾತ್ರ ಲಕ್ಷಣಾವೃತ್ತಿಯು ಕೂಡುವುದು. ಆದಕಾರಣ ನಿರ್ಗುಣನಾದ ಬ್ರಹ್ಮನನ್ನು ಶಾಸ್ತ್ರಗಳಿಂದ ತಿಳಿಯುವುದು ಸಾಧ್ಯವಿಲ್ಲ. ಯಾವ ವೃತ್ತಿಯಿಂದಲೂ ವಾಚ್ಯನಾಗದ ಬ್ರಹ್ಮನ ವಿಷಯದಲ್ಲಿ ಸಮನ್ವಯಸೂತ್ರವು ನಿಷ್ಪ್ರಯೋಜಕವಾಗುವುದು.

ಗುಣಪೂರ್ಣನೇ ಜಿಜ್ಞಾಸ್ಯನು

ಹೀಗೆ ನಿರ್ಗುಣನಲ್ಲಿ ಸಮನ್ವಯವನ್ನು ನಿರಾಕರಿಸಿ, ಸಗುಣನೇ ಶಾಸ್ತ್ರಗಳಿಂದ ಪ್ರತಿಪಾದ್ಯನು ಎಂದು ಉಪಸಂಹಾರ ಮಾಡುತ್ತಾರೆ -

ತಸ್ಮಾಚ್ಛಾಸ್ತ್ರೇಣ ಜಿಜ್ಞಾಸ್ಯಮಸ್ಮದೀಯಂ ಗುಣಾರ್ಣವಂ ॥೧೪೫॥
ವಾಸುದೇವಾಖ್ಯಮದ್ವಂದ್ವಂ ಪರಂ ಬ್ರಹ್ಮಾಖಿಲೋತ್ತಮಂ ।

ನಿರ್ಗುಣನಲ್ಲಿ ಸಮನ್ವಯವು ಕೂಡದಿರುವುದರಿಂದ, ನಾವು ಪ್ರತಿಪಾದಿಸುವ ಗುಣಪರಿಪೂರ್ಣನೂ, ಸಮಾಧಿಕರಹಿತನೂ, ಸರ್ವೋತ್ತಮನೂ ಆದ ವಾಸುದೇವನೆಂದು ಪ್ರಸಿದ್ಧನಾದ ಪರಬ್ರಹ್ಮನು ಶಾಸ್ತ್ರಗಳಿಂದ ವಿಚಾರ್ಯನು ಎಂದು ಒಪ್ಪಲೇಬೇಕು.

ಯಾವುದೇ ಪ್ರಮಾಣಕ್ಕೆ ಗೋಚರವಾಗದ ನಿರ್ಗುಣ ವಸ್ತುವಿಗೆ ಅಸ್ತಿತ್ವವೇ ಕೂಡುವುದಿಲ್ಲ ಎನ್ನುತ್ತಾರೆ -

ವಿಜ್ಞೇಯವಾಚ್ಯಲಕ್ಷ್ಯತ್ವಪೂರ್ವಾಶೇಷವಿಶೇಷತಃ ॥೧೪೬॥
ನಿರ್ಗತಂ ಮನಸೋ ವಾಚೋ ಯದಿ ತತ್ಸ್ಯಾದಗೋಚರಂ ।
ಅಸ್ತು ತನ್ನಾವದೇದ್ವಾದೀ ನ ಚಾಸ್ಮಾಚ್ಛಾಸ್ತ್ರಗಂ ತು ತತ್ ॥೧೪೭॥

ವಿಜ್ಞೇಯತ್ವ, ವಾಚ್ಯತ್ವ, ಲಕ್ಷ್ಯತ್ವ ಮೊದಲಾದ ಎಲ್ಲ ವಿಶೇಷಗಳಿಂದ ಹೊರತಾದುದು, ಮನಸ್ಸಿಗೂ ಹಾಗೂ ವಚನಕ್ಕೂ ಅಗೋಚರವಾದಂಥಹ ವಸ್ತುವು ಇಲ್ಲವೇ ಇಲ್ಲ. ಹೀಗಿದ್ದರೂ ನಿರ್ಗುಣಬ್ರಹ್ಮನು ಸ್ವಪ್ರಕಾಶನಾದ್ದರಿಂದ ಸಿದ್ಧಿಸುತ್ತಾನೆ ಎಂದರೆ ಹಾಗೇ ಆಗಲಿ. ಆದರೆ ಆ ನಿರ್ಗುಣಬ್ರಹ್ಮನು ನಮ್ಮ ವೇದಾದಿ ಶಾಸ್ತ್ರಗಳಿಗೆ ವಿಷಯನೇ ಆಗುವುದಿಲ್ಲವಾದ್ದರಿಂದ ವೇದವನ್ನು ಒಪ್ಪುವ ವಾದಿಯು ನಿರ್ಗುಣಬ್ರಹ್ಮನ ಬಗ್ಗೆ ಹೇಳಬಾರದು.

ನಿರ್ಗುಣನು ಶಾಸ್ತ್ರಕ್ಕೆ ವಿಷಯನಲ್ಲ

ನಮ್ಮ ಪ್ರಕಾರ ನಿರ್ಗುಣನು ವಾಚ್ಯನಾಗಿರುವುದರಿಂದ ಜ್ಞಾನಕ್ಕೆ ವಿಷಯನು. ಆದ್ದರಿಂದ ನಿರ್ಗುಣಬ್ರಹ್ಮನಲ್ಲಿ ಶಾಸ್ತ್ರವಿಷಯತ್ವವೂ ಕೂಡುವುದು ಎಂಬ ಪರಕೀಯರ ವಾದವನ್ನು ಉನ್ಮತ್ತರ ವಾದ ಎಂದು ದೂಷಿಸುತ್ತಾರೆ -

ಅವಾಚ್ಯಂ ವಾಚ್ಯಮಿತ್ಯುಕ್ತ್ವಾ ಕಿಮಿತ್ಯುನ್ಮತ್ತವನ್ನೃಪಾ ।
ಅಸ್ಮಚ್ಛಾಸ್ತ್ರಸ್ಯ ಚೌರ್ಯಾಯ ಯತತೇ ಸ್ವೋಕ್ತಿದೂಷಕಃ ॥೧೪೮॥

ಮೊದಲಿಗೆ ವಚನದಿಂದ ಉಂಟಾಗತಕ್ಕ ಜ್ಞಾನಕ್ಕೆ ಅವಿಷಯನೆಂದು ಹೇಳಿ, ಪುನಃ ವಚನಜನ್ಯಜ್ಞಾನಕ್ಕೆ ವಿಷಯನಾಗುತ್ತಾನೆ ಎಂದು ಹುಚ್ಚನಂತೆ ತನ್ನ ಮಾತನ್ನೇ ತಾನು ದೂಷಿಸುವವನು, ನಿರ್ಗುಣನನ್ನು ಸಾಧಿಸಲು ನಮ್ಮ ವೇದಾದಿ ಶಾಸ್ತ್ರಗಳಿಗೆ ಸಮ್ಮತವಾದ ಅರ್ಥವನ್ನು ಅಪಹರಿಸಿ ಇಲ್ಲದ ಅರ್ಥವನ್ನು ಯೋಜಿಸಲಿಕ್ಕೆ ಪ್ರಯತ್ನಿಸುತ್ತಾನೆ. ಹೀಗೆ ಕಳ್ಳನೂ ವ್ಯಾಹತಭಾಷಿಯೂ ಆದವನಿಗೆ ಯಾವುದೂ ಸಿದ್ಧಿಸುವುದಿಲ್ಲ.

ಶ್ರುತಿ ಸೂತ್ರಗಳಿಗೆ ನಿರ್ಗುಣನೇ ವಿಷಯನೆಂದು ಅಂಗೀಕರಿಸದಿದ್ದರೆ ಶಾಸ್ತ್ರಗಳಿಗೆ ವಿಷಯತ್ವವೇ ಇಲ್ಲದಂತಾಗುವುದರಿಂದ ಅಪ್ರಾಮಾಣ್ಯವು ಬರಬೇಕಾಗುವುದು ಎಂದು ಆಶಂಕಿಸಿದರೆ –

ಜನ್ಮಾದಿಕಾರಣಂ ಯತ್ತತ್ಸಕ್ಷಾನ್ನಾರಾಯಣಾಭಧಂ ।
ವದಂತಿ ಶ್ರುತಯೋ ಬ್ರಹ್ಮ ಶಾಸ್ತ್ರಂ ಚೈತತ್ತದರ್ಥತಃ ॥೧೪೯॥
ಪ್ರವೃತ್ತಮಸ್ಯವಾಚ್ಯಂ ತೇ ನೈವಂ ಬ್ರೂಯಾಃ ಕಥಂಚನ ।

ಶ್ರುತಿಗಳು ಮುಖ್ಯವಾಗಿ ಜಗಜ್ಜನ್ಮಾದಿಗಳಿಗೆ ಕಾರಣನಾದ ನಾರಾಯಣನೆಂಬ ಹೆಸರುಳ್ಳ ಬ್ರಹ್ಮನನ್ನು ಹೇಳುತ್ತವೆ. ಈ ಶಾಸ್ತ್ರವಾದರೋ ಅವನನ್ನು ತಿಳಿಸಲಿಕ್ಕಾಗಿಯೇ ಪ್ರವೃತ್ತವಾಗಿದೆ. ಆದ್ದರಿಂದ ನಿನ್ನ ಅವಾಚ್ಯನಾದ ಬ್ರಹ್ಮನು ಶಾಸ್ತ್ರವಿಷಯನಾಗುತ್ತಾನೆಂದು ಎಂದಿಗೂ ಹೇಳಲೇಬೇಡ. 'ನರಾಣಾಂ ಇದಂ ನಾರಂ' 'ನಾರಸ್ಯ ಅಯನಂ ನಾರಾಯಣಂ' ಎಂಬ ವ್ಯುತ್ಪತ್ತಿಯಿಂದ ನಾರಾಯಣ ಎಂಬ ಶಬ್ದದಿಂದಲೇ ಜಗಜ್ಜನ್ಮಾದಿಕಾರಣತ್ವವು ಹೇಳಲ್ಪಡುತ್ತದೆ.

ಎಲ್ಲ ಪ್ರಮಾಣಗಳಿಗೆ ವಿರುದ್ಧವಾಗಿದ್ದರೂ ನಿರ್ಗುಣಬ್ರಹ್ಮನು ಶಾಸ್ತ್ರಗಳಿಗೆ ವಿಷಯನಾಗುವನು ಎಂಬುದು ಶಾಸ್ತ್ರಚೌರ್ಯ ಎಂದು ಹೇಳುತ್ತಾರೆ –

ಸರ್ವಶಬ್ದೈರವಾಚ್ಯಂ ತದುಕ್ತ್ವಾ ತದ್ವಿಷಯಂ ಪುನಃ ॥೧೫೦॥
ಶಾಸ್ತ್ರಂ ವದಂತಮುನ್ಮತ್ತಂ ಕಥಂ ಲೋಕೋ ನ ವಾರಯೇತ್ ।
ಮಾ ವದೋ ಮಾ ವಿಜಾನೀಹಿ ತ್ಯಜಾಸ್ಮಾಚ್ಛಾಸ್ತ್ರಚೋರತಾಂ ॥೧೫೧॥

ಬ್ರಹ್ಮನಿಗೆ ಎಲ್ಲ ಶಬ್ದಗಳಿಂದಲೂ ಅವಾಚ್ಯತ್ವವನ್ನು ಹೇಳಿ ಪುನಃ ಅವನು ಶಾಸ್ತ್ರಗಳಿಗೆ ವಿಷಯನು ಎಂದು ಹೇಳುವ ಹುಚ್ಚನನ್ನು ಪ್ರಜ್ಞಾವಂತರು ಹೇಗೆ ತಾನೇ ತಡೆಯದೇ ಇರುವರು. ಆದಕಾರಣ ಬ್ರಹ್ಮನನ್ನು ಕುರಿತು ಹಾಗೆ

ಹೇಳಲೂ ಬೇಡ, ತಿಳಿಯಲೂ ಬೇಡ. ಇಂಥಹ ಶಾಸ್ತ್ರಚೌರ್ಯವನ್ನು ಕೈಬಿಡು.

ನೀವು ಹೇಳಿದ ಯಾವುದೂ ಸೂತ್ರಾರ್ಥವಾಗಿರುವುದಿಲ್ಲ. ಆದಕಾರಣ ನಮ್ಮನ್ನು (ಅದ್ವೈತಿಗಳನ್ನು) ಖಂಡಿಸುವ ನಿಮಗೂ (ದ್ವೈತಿಗಳಿಗೂ) ದೋಷವು ಬರುವುದಿಲ್ಲವೇ ಎಂದು ಆಶಂಕಿಸಿದರೆ -

ವಯಂ ತ್ವಾಂ ಶ್ರುತಿಯುಕ್ತಿಭ್ಯಾಂ ಬದ್ಧ್ವಾಸ್ಮಚ್ಛಾಸ್ತ್ರಮಂಜಸಾ ।
ವಿಚಾರಯಾಮಃ ಶ್ರುತಿಭಿರ್ಯುಕ್ತಿಭಿಶ್ಚೈವ ಸಾದರಂ ॥೧೫೨॥

ಅಪವ್ಯಾಖ್ಯಾನ ಮಾಡತಕ್ಕ ನಿನ್ನನ್ನು ನಾವು ಶ್ರುತಿಗಳಿಂದಲೂ ಯುಕ್ತಿಗಳಿಂದಲೂ ಚೆನ್ನಾಗಿ ಕಟ್ಟಿಹಾಕಿ, ನಮ್ಮ ಋಗಾದಿ ಶಾಸ್ತ್ರವನ್ನು ಸೂತ್ರದಲ್ಲಿ ಸೂಚಿತವಾಗಿರುವಂಥಹ ಶ್ರುತಿಗಳಿಂದಲೂ ಮತ್ತು ಯುಕ್ತಿಗಳಿಂದಲೂ ಶಿಷ್ಯರಲ್ಲಿ ಆದರಹುಟ್ಟಿಸುವಂತೆ ಚೆನ್ನಾಗಿಯೇ ವಿಚಾರಮಾಡುವೆವು. ಆದರಿಂದ ಪರಮತ ನಿರಾಕರಣೆರೂಪದ ನಮ್ಮ ವ್ಯಾಖ್ಯಾನಕ್ಕೆ ಯಾವುದೇ ದೋಷವು ಇರುವುದಿಲ್ಲ.

ಹಾಗಾದರೆ ಬ್ರಹ್ಮನು ಅವಾಚ್ಯ ಎಂದು ಹೇಳುವ ಶ್ರುತಿಗಳಿಗೆ ಅರ್ಥವೇನು ಎಂದು ಕೇಳಿದರೆ, ಶ್ರುತ್ಯಂತರದಿಂದಲೇ ಆ ಶ್ರುತಿಗಳಿಗೆ ಅರ್ಥವನ್ನು ಹೇಳಿ ಈ ಅಧಿಕರಣವನ್ನು ಉಪಸಂಹಾರ ಮಾಡುವರು -

ಅದ್ಭುತತ್ವಾದವಾಚ್ಯಂ ತದತರ್ಕ್ಯಾಜ್ಞೇಯಮೇವ ಚ ।
ಅನಂತಗುಣಪೂರ್ಣತ್ವಾದಿತ್ಯೂದೇ ಪೈಂಗಿನಾಂ ಶ್ರುತಿಃ ॥೧೫೩॥
ಅವಾಚ್ಯಮಿತಿ ಲೋಕೋಽಪಿ ವಕ್ತ್ಯಾಶ್ಚರ್ಯತಮಂ ಭುವಿ ।

ಆ ಬ್ರಹ್ಮನು ಅತ್ಯಾಶ್ಚರ್ಯತಮನಾದುದರಿಂದ ಪೂರ್ಣವಾಗಿ ವರ್ಣಿಸಲು ಸಾಧ್ಯವಾಗದು. ಅನಂತಗುಣಪೂರ್ಣನಾದ್ದರಿಂದ ತರ್ಕಕ್ಕೆ ಅವಿಷಯನು ಹಾಗೂ ಅವನನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ಹೀಗೆಂದು ಪೈಂಗಿಗಳ ಶ್ರುತಿಯೂ ಪ್ರತಿಪಾದಿಸುತ್ತದೆ. ಲೋಕದಲ್ಲಿಯೂ ಕೂಡ, ಜನರು ಅತ್ಯದ್ಭುತವಾದುದನ್ನು ಮಾತಿನಿಂದ ಹೇಳಲು ಶಕ್ಯವಿಲ್ಲ ಅಥವಾ ಅವಾಚ್ಯ ಎಂಬುದಾಗಿ ಹೇಳುತ್ತಾರೆ.

ವಿವರಣೆ: ಸೂತ್ರಕಾರರು ಜಗಜ್ಜನ್ಮಾದಿಕಾರಣನಾದ ಬ್ರಹ್ಮನಲ್ಲಿ ಸಮನ್ವಯವನ್ನು ಪ್ರತಿಜ್ಞೆ ಮಾಡಿರುವರು. ಅವನೇ ಜಿಜ್ಞಾಸ್ಯನೆಂದೂ ಪ್ರತಿಜ್ಞೆ

ಮಾಡಿರುವರು. ನಿರ್ಗುಣಬ್ರಹ್ಮನಿಗೆ ಜಿಜ್ಞಾಸ್ಯತ್ವವು ಕೂಡಲಾರದು. ಮುಖ್ಯಾರ್ಥವನ್ನು ಬಿಡಲು ಯಾವುದೇ ಕಾರಣವೂ ಇಲ್ಲದಿರುವಾಗ ಅಮುಖ್ಯಾರ್ಥವನ್ನು ಹಿಡಿದು ನಿರ್ಗುಣನು ವಾಚ್ಯನೆಂದು ಹೇಳಬಾರದು. ಯಾವುದೇ ಧರ್ಮಗಳನ್ನು ಹೊಂದಿರದ ನಿರ್ಗುಣನು ಅವಾಚ್ಯನೂ ಅಜ್ಞೇಯನೂ ಅಪ್ರಮೇಯನೂ ಆಗುವನು. ಅಪ್ರಮೇಯನು ಶಾಸ್ತ್ರಕ್ಕೆ ವಿಷಯನಾಗುವುದಿಲ್ಲ. ಆದಕಾರಣ ಆತನಲ್ಲಿ ಅಮುಖ್ಯ ಅಥವಾ ಲಕ್ಷಣಾವೃತ್ತಿಯಿಂದಲೂ ವಾಚ್ಯತ್ವವು ಕೂಡುವುದಿಲ್ಲ. ಅವಾಚ್ಯನೆಂಬುದಕ್ಕೆ ಅದ್ಭುತ, ಅಚಿಂತ್ಯ ಇತ್ಯಾದಿಯಾಗಿ ಶ್ರುತಿಗಳೇ ವ್ಯಾಖ್ಯಾನ ಮಾಡಿರುವುದರಿಂದ ಅದ್ವೈತಿಗಳು ಹೇಳುವ ಅರ್ಥ ಕೂಡುವುದಿಲ್ಲ. ಆದ್ದರಿಂದ ಬ್ರಹ್ಮನು ಸಮಸ್ತ ಶಾಸ್ತ್ರಗಳಿಂದಲೂ ಪ್ರತಿಪಾದ್ಯ ಎಂದು ನಿರ್ವಿವಾದವಾಗಿ ಸಿದ್ಧಿಸುವುದು. ಸಮನ್ವಯಸೂತ್ರವು ನಿಷ್ಪ್ರಯೋಜಕವಾಗುವುದಿಲ್ಲ. ಆದಕಾರಣ ಗುಣಪೂರ್ಣನಾದ ಬ್ರಹ್ಮನೇ ಸಕಲ ಶಾಸ್ತ್ರಗಳಿಂದ ಜಿಜ್ಞಾಸ್ಯನು ಎಂಬುದು ಸಿದ್ಧವಾಗುವುದು.

ಆನಂದಮಾಧಿಕರಣ

ಸೂತ್ರ: ಓಂ ಆನಂದಮಯೋಽಭ್ಯಾಸಾತ್ ಓಂ (೧-೧-೧೨)

ತೈತ್ತರೀಯದಲ್ಲಿ ಆನಂದಮಯಾದಿ ಶಬ್ದಗಳು ಶ್ರುತವಾಗಿರುವ ಪ್ರತಿ ಪ್ರಕರಣದಲ್ಲಿಯೂ ಪರಬ್ರಹ್ಮವಾಚಕವಾದ ಬ್ರಹ್ಮ ಮತ್ತು ಆತ್ಮ ಶಬ್ದಗಳೇ ಅನೇಕಾವರ್ತಿ ಬಂದಿರುವುದರಿಂದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎನ್ನುವ ಐದು ಶಬ್ದಗಳಿಂದ ವಾಚ್ಯನಾದವನು ಬ್ರಹ್ಮನೇ ಎಂದು ಸೂತ್ರದ ಅಭಿಪ್ರಾಯ.

'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದಿಂದ ಜಿಜ್ಞಾಸ್ಯತ್ವವೂ, 'ಜನ್ಮಾದ್ಯಸ್ಯ ಯತಃ' ಎನ್ನುವುದರಿಂದ ಲಕ್ಷಣವೂ, 'ಶಾಸ್ತ್ರಯೋನಿತ್ವಾತ್' ಎನ್ನುವುದರಿಂದ ಪ್ರಮಾಣವೂ ಯಾವ ಬ್ರಹ್ಮನಲ್ಲಿ ಹೇಳಲ್ಪಟ್ಟಿದೆಯೋ, ಆ ಬ್ರಹ್ಮಶಬ್ದವು ಚತುರ್ಮುಖಬ್ರಹ್ಮ ರುದ್ರಾದಿಗಳಲ್ಲಿ ಕೂಡುವುದಿಲ್ಲವೆಂದೂ, ಎಲ್ಲ ಶಬ್ದಗಳೂ ಬ್ರಹ್ಮನನ್ನೇ ಹೇಳುತ್ತವೆಯೆಂದು ಸಮನ್ವಯಸೂತ್ರದಿಂದ ಸಿದ್ಧಪಡಿಸಲಾಯಿತು. ಬ್ರಹ್ಮನು ಯಾವ ಶಬ್ದದಿಂದಲೂ ವಾಚ್ಯನಲ್ಲವಾದ್ದರಿಂದ

ಬ್ರಹ್ಮನಲ್ಲಿ ಶಾಸ್ತ್ರಸಮನ್ವಯವು ಅಸಂಭವವೆಂದು ಆಕ್ಷೇಪಿಸಿದಾಗ, ಈಕ್ಷತ್ಯಧಿಕರಣದಿಂದ ವಾಚ್ಯತ್ವವನ್ನು ಸಿದ್ಧಪಡಿಸಿ, ಬ್ರಹ್ಮನಲ್ಲಿಯೇ ಎಲ್ಲ ಶಾಸ್ತ್ರಗಳ ಮುಖ್ಯತಾತ್ಪರ್ಯವಿರುವುದರಿಂದ ಅವನೇ ಜಿಜ್ಞಾಸ್ಯನು ಎಂದು ಸಾಧಿಸಲಾಯಿತು. ಲಕ್ಷಣ ಮತ್ತು ಪ್ರಮಾಣಗಳನ್ನು ಹೇಳುವುದರಿಂದಲೇ ಬ್ರಹ್ಮನ ಸ್ವರೂಪವು ನಿರ್ಧಾರವಾಗುವುದು. ಅಂದಮೇಲೆ ಈ ಅಧ್ಯಾಯದ 'ಆನಂದಮಯೋಭ್ಯಾಸಾತ್' ಮೊದಲಾದ ಸೂತ್ರಗಳಿಂದ ಏನೂ ಪ್ರಯೋಜನವಿಲ್ಲ ಎಂದು ಆಶಂಕಿಸಿದರೆ –

ಏವಂ ಶಾಸ್ತ್ರಾವಗಮ್ಯತ್ವೇ ವಿಭಾಗೇನ ಸಮನ್ವಯಂ ॥೧೫॥
ಆನಂದಮಯ ಇತ್ಯಾದಿನಾಽಧ್ಯಾಯೇನ ವದತ್ಯಜಃ ।

ಈ ರೀತಿಯಾಗಿ ಬ್ರಹ್ಮನಿಗೆ ಮುಖ್ಯವೃತ್ತಿಯಿಂದಲೇ ಎಲ್ಲ ಶಾಸ್ತ್ರಗಳಿಂದ ಪ್ರತಿಪಾದ್ಯತ್ವವು ಕೂಡುತ್ತಿರಲು, ಸೂತ್ರಕಾರರು ಪುನಃ 'ಆನಂದಮಯೋಽಭ್ಯಾಸಾತ್' ಇವೇ ಮೊದಲಾದ ಅಧ್ಯಾಯದ ಉಳಿದ ಭಾಗದಿಂದ ವಿಸ್ತಾರವಾಗಿ ಸಮನ್ವಯವನ್ನು ಹೇಳುತ್ತಾರೆ.

ವಿವರಣೆ:

ಮೊದಲು 'ತತ್ತು ಸಮನ್ವಯಾತ್' ಎನ್ನುವುದರಿಂದ ಎಲ್ಲ ಶಬ್ದಗಳಿಗೆ ಶ್ರೀಹರಿಯಲ್ಲಿ ಸಮನ್ವಯವನ್ನು ಪ್ರತಿಜ್ಞಾ ಮಾತ್ರ ಮಾಡಿರುವರು. ಅದನ್ನು ವಾಕ್ಯವಿಶೇಷಗಳನ್ನು ಹೇಳಿ ದೃಷ್ಟಾಂತಗಳಿಂದ ವಿಚಾರವನ್ನು ಮಾಡುವ ಮೂಲಕ ಪೂರ್ವಪಕ್ಷಗಳನ್ನು ತಿರಸ್ಕರಿಸಿ, ಸಿದ್ಧಾಂತವನ್ನು ಸ್ಥಾಪಿಸದೇ ಹೋದಪಕ್ಷದಲ್ಲಿ ಪ್ರತಿಜ್ಞಾವು ನಿರರ್ಥಕವಾಗುವುದು. ಆದ್ದರಿಂದ ಮುಂದಿನ ನಿರೂಪಣೆಯು ಉಪಯುಕ್ತವೇ ಆಗಿದೆ. ಸಮನ್ವಯ ಸಾಧಿಸಬೇಕಾದ ಶಬ್ದಗಳಲ್ಲಿ ಮೂರು ರೀತಿಯುಂಟು. ಪ್ರಸ್ತುತ ಈ ಸೂತ್ರದಿಂದ ಆರಂಭಿಸಿ ಮೊದಲನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ, ಬೇರೆ ಕಡೆಗಳಲ್ಲಿ ಪ್ರಸಿದ್ಧವಾದ ನಾಮಾತ್ಮಕ ಶಬ್ದಗಳಿಗೆ ಬ್ರಹ್ಮನಲ್ಲಿ ಸಮನ್ವಯವನ್ನು ಸಾಧಿಸುತ್ತಾರೆ. ಈ ಅಧಿಕರಣದಲ್ಲಿ ಗುಣಸಾಮಾನ್ಯವಾಚಕಗಳಾದ ಆನಂದಮಯಾದಿ ಶಬ್ದಗಳಿಗೂ ಗುಣವಾಚಕಗಳಾದ ಆನಂದ ಮೊದಲಾದ ಶಬ್ದಗಳಿಗೂ ಬ್ರಹ್ಮನಲ್ಲಿ ಸಮನ್ವಯವನ್ನು ಸಾಧಿಸುತ್ತಾರೆ.

ಅನ್ಯತ್ರಪ್ರಸಿದ್ಧ ನಾಮಾತ್ಮಕ ಶಬ್ದಗಳ ಸಮನ್ವಯ

ತತ್ರಾನ್ಯತ್ರಪ್ರಸಿದ್ಧಾನಾಂ ವಿಷ್ಣಾವೇವ ಸಮನ್ವಯಂ ॥೧೫೫॥

ಶಬ್ದಾನಾಂ ಪ್ರಥಮೇ ಪಾದೇ ಗುಣಸಾಮಾನ್ಯವಾಚಿನಾಂ ।

ಗುಣವಾಚಿನಾಂ ಚ ಪ್ರಥಮಮಾಹ ದೇವಃ ಸಮನ್ವಯಂ ॥೧೫೬॥

ಸಮನ್ವಯ ಸಾಧಿಸಬೇಕಾದ ಶಬ್ದಗಳಲ್ಲಿ ಬೇರೆಕಡೆಗಳಲ್ಲಿ ಪ್ರಸಿದ್ಧಗಳಾದ ನಾಮಾತ್ಮಕ ಶಬ್ದಗಳಿಗೆ ವಿಷ್ಣುವಿನಲ್ಲಿಯೇ ಸಮನ್ವಯವನ್ನು ಮೊದಲನೇ ಅಧ್ಯಾಯದ ಮೊದಲನೇ ಪಾದದಲ್ಲಿ ಸೂತ್ರಕಾರರು ಹೇಳುತ್ತಾರೆ. ಅದರಲ್ಲಿಯೂ ಮೊದಲಿಗೆ ಈ ಅಧಿಕರಣದಲ್ಲಿ ಗುಣವಾಚಕಗಳಾದ ಆನಂದಮಯ ಮೊದಲಾದ ಶಬ್ದಗಳಿಗೂ, ಗುಣವಾಚಕಗಳಾದ ಆನಂದ ಮೊದಲಾದ ಶಬ್ದಗಳಿಗೂ ಮುಖ್ಯವೃತ್ತಿಯಿಂದ ಸಮನ್ವಯವನ್ನು ಹೇಳಿದರು.

ವಿವರಣೆ: ವೇದದಲ್ಲಿರುವ ಶಬ್ದಗಳಲ್ಲಿ ನಾಲ್ಕು ವಿಧ. ಕೆಲವು ಶಬ್ದಗಳು, ತತ್ರೈವ ಅಂದರೆ ಬ್ರಹ್ಮನಲ್ಲಿಯೇ ಪ್ರಸಿದ್ಧಗಳು, ಮತ್ತೆ ಕೆಲವು ಅನ್ಯತ್ರ ಅಂದರೆ ಬೇರೆಕಡೆಗಳಲ್ಲಿಯೂ ಪ್ರಸಿದ್ಧಗಳು, ಇನ್ನೂ ಕೆಲವು ಉಭಯತ್ರ ಅಂದರೆ ಬ್ರಹ್ಮನಲ್ಲಿಯೂ ಮತ್ತು ಬೇರೆಕಡೆಗಳಲ್ಲಿಯೂ ಪ್ರಸಿದ್ಧಗಳು, ಉಳಿದ ಕೆಲವು ಅನ್ಯತ್ರೈವ ಪ್ರಸಿದ್ಧಗಳು. ಇವುಗಳಲ್ಲಿ ಬ್ರಹ್ಮನಲ್ಲಿಯೇ ಪ್ರಸಿದ್ಧವಾದ ಶಬ್ದಗಳಿಗೆ ಪುನಃ ಬ್ರಹ್ಮನಲ್ಲಿ ಸಮನ್ವಯ ಸಾಧಿಸಬೇಕಾದ ಅವಶ್ಯಕತೆಯಿಲ್ಲ. ಉಳಿದ ಮೂರುವಿಧಗಳಾದ ಶಬ್ದಗಳಿಗೆ ಸಮನ್ವಯವನ್ನು ಸಾಧಿಸಬೇಕಾಗುವುದು. ಈ ಮೂರುವಿಧಗಳಲ್ಲಿಯೂ ನಾಮಾತ್ಮಕ ಮತ್ತು ಲಿಂಗಾತ್ಮಕ ಎಂಬುದಾಗಿ ಎರಡೆರಡು ವಿಧಗಳಿವೆ. ಇವುಗಳಲ್ಲಿ ಸಾಕ್ಷಾತ್ತಾಗಿ ಧರ್ಮಿಯನ್ನು ಹೇಳುವ ಶಬ್ದಗಳಿಗೆ ನಾಮಾತ್ಮಕಶಬ್ದಗಳೆಂದೂ, ಧರ್ಮದ್ವಾರಾ ಧರ್ಮಿಯನ್ನು ಹೇಳುವ ಶಬ್ದಗಳಿಗೆ ಲಿಂಗಾತ್ಮಕಶಬ್ದಗಳೆಂದೂ ಹೆಸರು. ಸಮನ್ವಯವನ್ನು ಹೇಳಬೇಕಾದ ಮೂರುವಿಧವಾದ ಶಬ್ದಗಳಲ್ಲಿ ಅನ್ಯತ್ರಪ್ರಸಿದ್ಧಗಳಾದ ಶಬ್ದಗಳಿಗೆ ವಿಷ್ಣುವಿನಲ್ಲಿ ಸಮನ್ವಯವನ್ನು ಸೂತ್ರಕಾರರು ಮೊದಲನೇ ಅಧ್ಯಾಯದ ಮೊದಲನೇ ಪಾದದಲ್ಲಿ ನಿರೂಪಿಸುವರು.

ತೈತ್ತರೀಯೋಪನಿಷತ್ತಿನಲ್ಲಿ 'ಸವಾ ಏಷ ಪುರುಷೋऽನ್ನರಸಮಯಃ' ಎಂಬುದಾಗಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ

ಹಾಗೂ ಆನಂದಮಯರು ಉಕ್ತರಾಗಿದ್ದಾರೆ. ಅನ್ನಮಯಾದಿ ಐದರಲ್ಲಿಯೂ ಬ್ರಹ್ಮ ಶಬ್ದವು ಶ್ರುತವಾಗಿದೆ. ಬ್ರಹ್ಮ ಶಬ್ದಕ್ಕೆ ವಿಷ್ಣುವಿನಲ್ಲಿಯೂ ಬೇರೆಕಡೆಗಳಲ್ಲಿಯೂ ಪ್ರಯೋಗವಿದೆ. ಮಯಟ್ ಪ್ರತ್ಯಯವು ವಿಕಾರಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. 'ನಿರ್ವಿಕಾರೋಽಕ್ಷರಃ ಶುದ್ಧಃ' ಇತ್ಯಾದಿ ಪ್ರಮಾಣಗಳಿರುವ ಪ್ರಯುಕ್ತ ವಿಕಾರವು ಪರಬ್ರಹ್ಮನಲ್ಲಿ ಕೂಡುವುದಿಲ್ಲ. ಶರೀರಾದಿ ಕೋಶಗಳಲ್ಲಿ ಕೂಡುತ್ತದೆ. 'ಬ್ರಹ್ಮವಿದಾಪ್ನೋತಿ ಪರಂ' ಎಂದು ಪ್ರಕೃತನಾದ ಪರಬ್ರಹ್ಮನು 'ಬ್ರಹ್ಮಪುಚ್ಛಂ ಪ್ರತಿಷ್ಠಾ' ಎನ್ನುವುದರಿಂದ ಆನಂದಮಯನಿಗೆ ಅವಯವನೆಂದು ತೋರುತ್ತದೆ. ವಿರುದ್ಧವಾಗಿರುವುದರಿಂದ ಅವಯವ ಮತ್ತು ಅವಯವಿಭಾವಗಳು ಒಂದೇ ವಸ್ತುವಿನಲ್ಲಿ ಕೂಡಲಾರದು. ಆದಕಾರಣ ಇಲ್ಲಿ ಪ್ರಸ್ತುತವಾಗಿರುವ ಅನ್ನಮಯಾದಿ ಶಬ್ದಗಳಿಂದ ಪರಬ್ರಹ್ಮನು ವಾಚ್ಯನಾಗಲಾರನು, ಅನ್ನಮಯಾದಿ ಕೋಶಗಳೇ ವಾಚ್ಯವು ಎಂದು ಆಶಂಕಿಸಿದರೆ –

ಆನಂದಮಯಾದಿಗಳು ವಿಷ್ಣುವನ್ನೇ ಹೇಳುತ್ತವೆ

ಸಮುದ್ರಶಾಯಿನಂ ಸರ್ವಪ್ರಸೂತಿಪ್ರಭವಂ ಶ್ರುತಿಃ ।
ತದೇವ ಬ್ರಹ್ಮಪರಮಮಿತಿ ಸಾವಧೃತಿರ್ಜಗೌ ॥೧೫೭॥
ಯತೋಽತೋ ಬ್ರಹ್ಮಶಬ್ದಸ್ಯ ತತ್ರೈವ ನಿಯತತ್ವತಃ ।
ಯೇಽನ್ನಂ ಬ್ರಹ್ಮೇತ್ಯಾದಿರೂಪಾದಭ್ಯಾಸಾತ್ತೈತ್ತಿರೀಯಕೇ ॥೧೫೮॥
ಅನ್ಯಾಸು ಚೈತದ್ರೂಪಾಸು ಶಾಖಾಸ್ವಪಿ ಸಹಸ್ರಶಃ ।
ಆನಂದಮಯ ಇತ್ಯಾದ್ಯೈಃ ಶಬ್ದೈರ್ವಾಚ್ಯೋ ಹರಿಃ ಸ್ವಯಂ ॥೧೫೯॥

ಎಲ್ಲರ ಉತ್ಪತ್ತಿಗೂ ಕಾರಣಳಾದ ಲಕ್ಷ್ಮೀದೇವಿಯ ಉತ್ಪತ್ತಿಗೂ ಕಾರಣನಾಗಿರುವ ಸಮುದ್ರಶಾಯಿಯಾದ ವಿಷ್ಣುವೇ ಬ್ರಹ್ಮ ಶಬ್ದದಿಂದ ವಾಚ್ಯನೆಂಬುದೇ ಬ್ರಹ್ಮಾದಿ ಎಲ್ಲ ಜ್ಞಾನಿಗಳ ಮತ ಎಂದು ಶ್ರುತಿಯು ಸಮರ್ಥನಪೂರ್ವಕವಾಗಿ ಹೇಳಿರುವುದರಿಂದ ಬ್ರಹ್ಮಶಬ್ದಕ್ಕೆ ವಿಷ್ಣುವಿನಲ್ಲಿಯೇ ವ್ಯಾಪ್ತತ್ವವಿದೆ. 'ಯೇನ್ನಂ ಬ್ರಹ್ಮ' ಇತ್ಯಾದಿ ರೂಪದಿಂದ ಉದಾಹೃತಗಳಾದ ಶ್ಲೋಕಗಳಲ್ಲಿ ಬ್ರಹ್ಮಶಬ್ದಕ್ಕೆ ಅಭ್ಯಾಸವಿದ್ದ ಪ್ರಯುಕ್ತ, ತೈತ್ತರೀಯ ಶ್ರುತಿ ಹಾಗೂ ಇದೇ ರೀತಿಯ ಇತರ ಸಾವಿರಾರು ಶಾಖೆಗಳಲ್ಲಿಯೂ ಆನಂದಮಯ

ಮೊದಲಾದ ಶಬ್ದಗಳಿಂದ ಸಾಕ್ಷಾತ್ ಶ್ರೀಹರಿಯೇ ವಾಚ್ಯನಾಗಿದ್ದಾನೆ.

ಸೂತ್ರದಲ್ಲಿ ಆನಂದಮಯ ಎಂದಿಷ್ಟೇ ಪ್ರತಿಜ್ಞೆ ಮಾಡಿರುವುದರಿಂದ 'ಆನಂದಮಯ ಇತ್ಯಾದ್ಯೈಃ' ಎಂಬ ವ್ಯಾಖ್ಯಾನ ಹೇಗೆ ಕೂಡುವುದು ಎಂದು ಕೇಳಿದರೆ -

ಉಪಲಕ್ಷಣತ್ವಂ ಶಬ್ದಾನಾಮಾನಂದಮಯಪೂರ್ವಿಣಾಂ ।
ಸೂತ್ರಸ್ಯಾಲ್ಪಾಕ್ಷರತ್ವೇನ ಸರ್ವಶಾಖಾವಿನಿರ್ಣಯೇ ॥೧೬೦॥
ಪುನಶ್ಚ ಪ್ರಾಪಕಾದ್ಧೇತೋಸ್ತತ್ರಾಧಿಕರಣಾಂತರಂ ।
ಸರ್ವೇ ವೇದಾ ಆಮನಂತಿ ಯತ್ಪದಂತ್ವಿತಿ ಹಿ ಶ್ರುತಿಃ ॥೧೬೧॥

ಆನಂದಮಯ ಶಬ್ದವು ಸಮಾನನ್ಯಾಯದ ಬಲದಿಂದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಶಬ್ದಗಳಿಗೆ ಉಪಲಕ್ಷಣವು (ತನ್ನ ಅರ್ಥವನ್ನು ಬಿಡದೆ ಅನ್ಯಾರ್ಥ ಗ್ರಹಣಕ್ಕೆ ಕಾರಣವಾದುದೇ ಉಪಲಕ್ಷಣ). ಇದೇರೀತಿಯಾಗಿ ಮೇಲಿನ ಅಧಿಕರಣಗಳಲ್ಲಿ ಬರುವ ಆಕಾಶಾದಿ ಶಬ್ದಗಳೂ ಶಬ್ದಾಂತರಗಳಿಗೆ ಉಪಲಕ್ಷಕವು ಎಂದು ತಿಳಿಯಬೇಕು. ಇಲ್ಲಿ ಆನಂದಮಯ ಎಂಬ ಶಬ್ದದಿಂದ ಮುಖ್ಯಾರ್ಥಕ್ಕೆ ಬಾಧವು ತೋರದಿರುವಾಗ ಲಾಕ್ಷಣಿಕಾರ್ಥ ಮಾಡುವುದು ಅಸಂಗತ ಎಂದೂ ಹೇಳಿದರೆ, ಸೂತ್ರಸ್ಯಾಲ್ಪಾಕ್ಷರತ್ವೇನ ಎಂಬುದೇ ಅದಕ್ಕೆ ಉತ್ತರವಾಗಿದೆ. ಅಲ್ಪಾಕ್ಷರತ್ವ ಎಂಬುದು ಸೂತ್ರಗಳಿಗೆ ಲಕ್ಷಣವಾಗಿರುವುದರಿಂದ ಹಾಗೂ ಎಲ್ಲ ಶಾಖೆಗಳನ್ನು ಚೆನ್ನಾಗಿ ನಿರ್ಣಯ ಮಾಡುವುದೇ ಸೂತ್ರಗಳ ಪ್ರಯೋಜನವಾದ್ದರಿಂದ, ಒಂದು ಶಬ್ದದ ಪ್ರಯೋಗದಿಂದ ಸಮಾನ ನ್ಯಾಯವುಳ್ಳ ಅರ್ಥಾಂತರಗಳನ್ನು ಉಪಲಕ್ಷಣಯಾ ಯೋಜಿಸಿಕೊಳ್ಳಬೇಕು. ಹಾಗಾದರೆ ಮತ್ತೆ ಹೊಸ ಅಧಿಕರಣಗಳ ಅವಶ್ಯಕತೆಯೇಕೆ ಎಂದು ಪ್ರಶ್ನಿಸಿದರೆ, ಹೊಸದಾಗಿ ಮತ್ತೊಂದು ಹೇತುವು ತಲೆದೋರಿದಾಗ ಪುನಃ ಸಿದ್ಧಾಂತ ನಿರ್ಣಯಕ್ಕಾಗಿ ಹೊಸ ಅಧಿಕರಣಾರಂಭವು ಅಸಂಗತವಾಗುವುದಿಲ್ಲ ಎಂಬುದೇ ಸಮಾಧಾನ. ಸರ್ವ ವೇದಶಾಖೆಗಳೂ ಕಾರ್ಯಪರವಾಗಿಯೇ ಇರುವುದು, ಬ್ರಹ್ಮಪರವಾಗಿರುವುದು ಅತ್ಯಲ್ಪವು. ಆದಪ್ರಯುಕ್ತ ಸೂತ್ರಗಳಿಗೆ ಲಕ್ಷಣಾವನ್ನು ಆಶ್ರಯಿಸದೇ ನಿರ್ಣಯವು ಶಕ್ಯ ಎಂದು ಹೇಳಿದರೆ ಅದು

ರಾಯದುರ್ಗದ ಮಂಡಿಮಠ ಕೃಷ್ಣಾಚಾರ್ಯ
ಬಳ್ಳಾರಿ

ಸರಿಯಲ್ಲ. ಏಕೆಂದರೆ ಎಲ್ಲ ವೇದಗಳೂ ಆ ಬ್ರಹ್ಮನನ್ನೇ ತಿಳಿಸಿಕೊಡುತ್ತವೆ ಎಂಬುದಾಗಿ ಶ್ರುತಿಯಿದೆ. ಉಪಲಕ್ಷಣತ್ವವನ್ನು ಆಶ್ರಯಿಸದಿದ್ದರೆ ಅನಂತಾನಂತ ವೇದಗಳಿಂದ ವಾಚ್ಯನಾದ ಪರಬ್ರಹ್ಮನನ್ನು ನಿರ್ಣಯಿಸುವುದು ಅಶಕ್ಯವಾಗುವುದರಿಂದ ಸೂತ್ರಗಳಿಗೆ ವಿಶ್ವತೋಮುಖತ್ವವೆಂಬ ಪ್ರಮುಖವಾದ ಲಕ್ಷಣಕ್ಕೆ ಭಂಗಬರುತ್ತದೆ. ಆದ್ದರಿಂದ ಉಪಲಕ್ಷಣಯಾ ಪ್ರತಿಪಾದನೆಯು ಯುಕ್ತವೇ ಆಗುವುದು.

ಹಾಗಾದರೆ ಶ್ರುತಿಯಲ್ಲಿ ಅನ್ನಮಯ ಎಂಬ ಶಬ್ದವು ಮೊದಲಿಗೆ ಉಕ್ತವಾಗಿರುವಾಗ ಸೂತ್ರಕಾರರು ಅದನ್ನು ಹಿಡಿಯದೇ ಆನಂದಮಯ ಶಬ್ದವನ್ನು ಪ್ರಯೋಗಿಸಿರುವದರಿಂದ ಸೂತ್ರಕಾರರಿಗೆ ಆನಂದಮಯನನ್ನು ಹೇಳುವುದರಲ್ಲಿ ಮಾತ್ರ ತಾತ್ಪರ್ಯವಿರಬೇಕು ಎಂದು ಆಶಂಕಿಸಿದರೆ –

ಆನಂದಮಯ ರೂಪೇ ತು ಬ್ರಹ್ಮಣಃ ಪುಚ್ಛತೋಕ್ತಿತಃ ।
ಸಮಸ್ತಾಬ್ರಹ್ಮತಾ ಪ್ರಾಪ್ತೇರಾನಂದಮಯನಾಮ ಹಿ ॥೧೬೨॥

ಆನಂದಮಯ ಎಂಬ ಈ ರೂಪದಲ್ಲಿ ಬ್ರಹ್ಮನಿಗೆ ಆನಂದಮಯನ ಪುಚ್ಛತ್ವವನ್ನು (ಆನಂದ ಆತ್ಮಾ ಬ್ರಹ್ಮಪುಚ್ಛಂ ಪ್ರತಿಷ್ಠಾ) ಹೇಳಿರುವ ಪ್ರಯುಕ್ತ, ಸರ್ವಾವಯವಿಯಾದ ಬ್ರಹ್ಮನಿಗೆ ಬ್ರಹ್ಮತ್ವವು (ಅಂದರೆ ಪೂರ್ಣತ್ವವು) ಪ್ರಾಪ್ತವಾಗದಿರುವುದರಿಂದ, ಅದನ್ನು ನಿರಾಕರಿಸುವುದಕ್ಕಾಗಿ, ಸೂತ್ರಕಾರರು ಇಲ್ಲಿ ಶ್ರುತ್ಯಾದಿ ಪ್ರಸಿದ್ಧವಾದ ಆನಂದಮಯ ನಾಮವನ್ನೇ ಗ್ರಹಣ ಮಾಡಿದ್ದಾರೆ. ಆದಕಾರಣ ಬ್ರಹ್ಮನು ಆನಂದಮಯನೇ ಹೊರತು ಪುಚ್ಛವಲ್ಲ. ಇಲ್ಲದಿದ್ದರೆ ಬ್ರಹ್ಮನಿಗೆ ಅವಯವತ್ವವೇ ಸಿದ್ಧಿಸುವುದಿಲ್ಲವಾದ್ದರಿಂದ ಬ್ರಹ್ಮಜಿಜ್ಞಾಸೆಯೇ ಕೂಡುವುದಿಲ್ಲ.

ಹಾಗಾದರೆ ಆನಂದಮಯ ಶಬ್ದಕ್ಕೆ ಅನ್ನಮಯಾದಿ ಉಪಲಕ್ಷಣತ್ವವನ್ನೇ ಏಕೆ ಒಪ್ಪಬೇಕು ಎಂದು ಕೇಳಿದರೆ –

ಬ್ರಹ್ಮಶಬ್ದಸ್ಯ ಚಾಭ್ಯಾಸಾತ್ಪಂಚರೂಪಾದಿಷು ಸ್ಫುಟಂ ।
ಬ್ರಹ್ಮತಾऽವಯವೇऽಪಿ ಸ್ಯಾತ್ತಥಾऽವಯವಿನಿ ಸ್ವತಃ ॥೧೬೩॥
ಯಥೈವ ಕೃಷ್ಣಕೇಶಸ್ಯ ಕೃಷ್ಣಸ್ಯ ಬ್ರಹ್ಮತಾऽಖಿಲಾ ।
ದರ್ಶಿತಾ ಚೈವ ಪಾರ್ಥಾಯ ನಿಸ್ಸೀಮಾಃ ಶಕ್ತಯೋऽಸ್ಯ ಹಿ ॥೧೬೪॥

ಅನ್ನಮಯಾದಿ ರೂಪಗಳನ್ನು ಪ್ರತಿಪಾದಿಸುವ ಎಲ್ಲ ಐದು ಪ್ರಕರಣಗಳಲ್ಲಿಯೂ ಸ್ಪಷ್ಟವಾಗಿ ಬ್ರಹ್ಮಶಬ್ದಕ್ಕೆ ಅಭ್ಯಾಸವಿರುವುದು. 'ಬ್ರಹ್ಮಪುಚ್ಛಂ ಪ್ರತಿಷ್ಠಾ' ಎಂದು ಬ್ರಹ್ಮನ ಅವಯವಗಳಿಗೆ ಪೂರ್ಣತ್ವವನ್ನು ಹೇಳಿರುವುದರಿಂದ, ಅವಯವಿಯಾದ ಬ್ರಹ್ಮನಿಗೂ ಪೂರ್ಣತ್ವವು ಸ್ವತಃ ಸಿದ್ಧವೇ ಆಗುವುದು. ಹೇಗೆ ಮೂಲರೂಪದ ಅವಯವ ಸ್ವರೂಪನಾದ ಕೃಷ್ಣಕೇಶರೂಪನಾದ ಕೃಷ್ಣನಿಗೆ ಮೂಲರೂಪದಂತೆಯೇ ಪೂರ್ಣತ್ವವುಂಟೋ, ಹಾಗೆಯೇ ಬ್ರಹ್ಮನ ಪುಚ್ಛವೆಂದು ಹೇಳಿರುವ ಆನಂದಮಯನಿಗೂ ಪೂರ್ಣತ್ವ ರೂಪವಾದ ಬ್ರಹ್ಮತ್ವವು ಬಂದೇ ಬರುವುದು. ಶ್ರೀಕೃಷ್ಣನಿಂದ ಪಾರ್ಥನಿಗಾಗಿ ಪೂರ್ಣತ್ವ ಪ್ರತಿಪಾದಕವಾದ ವಿಶ್ವರೂಪವು ಪ್ರದರ್ಶಿಸಲ್ಪಟ್ಟಿದೆ. ಶ್ರೀಹರಿಗೆ ನಿರವಧಿಕವಾದ ಶಕ್ತಿಗಳು ಪ್ರಮಾಣಸಿದ್ಧವೇ ಆಗಿವೆ.

'ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ। ಊರ್ಧ್ವರೇತಂ ವಿರೂಪಾಕ್ಷಂ ಶಂಕರಂ ನೀಲಲೋಹಿತಂ॥' ಎನ್ನುವ ತಾಪನೀಯ ಶ್ರುತಿಯಲ್ಲಿ ರುದ್ರನಲ್ಲಿಯೂ ಪರಬ್ರಹ್ಮ ಶಬ್ದವು ಶ್ರುತವಾಗಿದೆ. ಆದಪ್ರಯುಕ್ತ ಬ್ರಹ್ಮಶಬ್ದದ ಆಧಾರದಿಂದ ಅನ್ನಮಯಾದಿಗಳಿಗೆ ಪರಬ್ರಹ್ಮತ್ವವನ್ನು ಹೇಳಲು ಆಗುವುದಿಲ್ಲ ಎಂದು ಹೇಳಿದರೆ -

ಪರಬ್ರಹ್ಮವಾಚ್ಯತ್ವ ರುದ್ರನಲ್ಲಿ ಕೂಡುವುದಿಲ್ಲ

ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ ।
ವಿಷ್ಣ್ವಾಖ್ಯಮುಕ್ತಮನ್ಯತ್ರ ಹ್ಯೂರ್ಧ್ವರೇತಂ ಚ ತತ್ಪ್ರತಿ ॥೧೬೫॥
ವಿರೂಪಾಕ್ಷಾಖ್ಯಮಪರಂ ಬ್ರಹ್ಮೋಕ್ತಂ ತದ್ವ್ರತೇ ಸ್ಥಿತಂ ।
ಸಮಾನಾಧಿಕೃತತ್ವಂ ಚೇದುತ್ತರಂ ನೀಲಲೋಹಿತಂ ॥೧೬೬॥
ಕೃಷ್ಣಪಿಂಗಲರೂಪೇಣ ಪುನರುಕ್ತಂ ಭವಿಷ್ಯತಿ ।

ಯಥಾರ್ಥಜ್ಞಾನಸ್ವರೂಪನು, ಜಗದಾದಿಗಳನ್ನು ಸೃಷ್ಟಿಸಿದವನು, ಪೂರ್ಣಗಳಾದ ಷಡ್ಗುಣಗಳನ್ನು ಹೊಂದಿರುವನು, ಕಪ್ಪು-ಕೆಂಪು ಬಣ್ಣಗಳಿಂದ ಶೋಭಿಸುವವನು, ವಿಷ್ಣುವೆಂಬ ಹೆಸರುಳ್ಳವನೂ ಆದ ಪರಬ್ರಹ್ಮನು ಪೂರ್ವಾರ್ಧದಲ್ಲಿ ಉಕ್ತನಾಗಿದ್ದಾನೆ. ಉತ್ತರಾರ್ಧದಲ್ಲಿ ವಿರೂಪಾಕ್ಷನೆಂಬ ಹೆಸರುಳ್ಳ ಅಪರಬ್ರಹ್ಮನು ವಿಷ್ಣುವನ್ನು ಕುರಿತು ಊರ್ಧ್ವರೇತಸ್ಸುಳ್ಳವನು

ಹಾಗೂ ವಿಷ್ಣುಪ್ರೀತಿಕರವಾದ ವ್ರತದಲ್ಲಿ ತೊಡಗಿರುವನೆಂದು ಹೇಳಲ್ಪಟ್ಟಿದ್ದಾನೆ. ಪೂರ್ವಾರ್ಧ ಮತ್ತು ಉತ್ತರಾರ್ಧಗಳಿಗೆ ಏಕವಿಷಯತ್ವವನ್ನು ಇಟ್ಟುಕೊಂಡರೆ, ಕೃಷ್ಣಪಿಂಗಲ ಮತ್ತು ನೀಲಲೋಹಿತ ಪದಗಳು ಏಕಾರ್ಥವಾದುದರಿಂದ ಉತ್ತರಾರ್ಧಕ್ಕೆ ಪುನರುಕ್ತಿ ದೋಷ ಬರುವುದು. ಆದ್ದರಿಂದ ಭಿನ್ನವಿಷಯತ್ವವನ್ನು ಅಂಗೀಕರಿಸುವುದೇ ಸೂಕ್ತ.

ರುದ್ರನಿಗೂ ಮತ್ತೊಬ್ಬ ಅಧಿಪತಿಯು ಹೇಳಲ್ಪಟ್ಟಿರುವುದರಿಂದ ಆತನಿಗೆ ಪರಬ್ರಹ್ಮತ್ವವು ಬರುವುದು ಸಾಧ್ಯವಿಲ್ಲ. ಈ ಕಾರಣದಿಂದಲೂ ಪೂರ್ವಾರ್ಧವು ರುದ್ರವಿಷಯಕವಲ್ಲವೆಂದು ನಿರೂಪಿಸುತ್ತಾರೆ –

ಬ್ರಹ್ಮಾಧಿಪತಿರಿತ್ಯತ್ರ ತಾಪನೀಯ ಶ್ರುತೌ ಪುರಃ ॥೧೬೭॥
ಸ್ವರಿತಬ್ರಹ್ಮಶಬ್ದಾಂತಂ ಬಹುವ್ರೀಹಿತ್ವಮೇಷ್ಯತಿ ।
ಸ್ವಾಹೇಂದ್ರಶತ್ರುರ್ವರ್ಧಸ್ವ ಯದ್ಬಹುವ್ರೀಹಿತಾಮಗಾತ್ ॥೧೬೮॥
ತಸ್ಮಾದಸ್ಯೇಂದ್ರ ಏವಾಭೂಚ್ಛತ್ರುರಿತ್ಯುತ್ತರಶ್ರುತೇಃ ।
ಪೂರ್ವಾಂತಸ್ವರಿತೇ ಪುಂಸೋರ್ಬಹುವ್ರೀಹಿತ್ವಮೇಷ್ಯತಿ ॥೧೬೯॥
ಮಹಾವ್ಯಾಕರಣೇ ಸೂತ್ರಮಿತಿ ಸ್ವರವಿನಿರ್ಣಯೇ ।

ಈ ತಾಪನೀಯ ಶ್ರುತಿಯಲ್ಲಿಯೇ ಋತಂ ಎನ್ನುವ ವಾಕ್ಯದಿಂದ ಮುಂದಿನ ವಾಕ್ಯದಲ್ಲಿ ಬ್ರಹ್ಮನೇ ಅಧಿಪತಿಯಾಗುಳ್ಳವನೆಂದು ರುದ್ರನಿಗೆ ಪರಾಧೀನತ್ವವನ್ನು ಹೇಳುವ ಬ್ರಹ್ಮಾಧಿಪತಿ ಎನ್ನುವ ಪದವಿದೆ. ಅಂತ್ಯದಲ್ಲಿ ಸ್ವರಿತ ಸ್ವರವುಳ್ಳ ಬ್ರಹ್ಮಶಬ್ದಘಟಿತವಾದ ಬ್ರಹ್ಮಾಧಿಪತಿ ಎನ್ನುವ ಪದವು ಬಹುವ್ರೀಹಿ ಸಮಾಸತ್ವವನ್ನು ('ಬ್ರಹ್ಮ ಅಧಿಪತಿರ್ಯಸ್ಯ' ಎಂದು) ಹೊಂದುವುದು. 'ಇಂದ್ರ ಶತ್ರುರ್ವರ್ಧ್ವಸ್ವ ಸ್ವಾಹಾ' ಎನ್ನುವ ಮಂತ್ರದಲ್ಲಿ ಇಂದ್ರಶತ್ರು ಎನ್ನುವ ಪದವು ಅಂತ್ಯದಲ್ಲಿ ಸ್ವರಿತ ಸ್ವರವುಳ್ಳ ಇಂದ್ರಶಬ್ದದ ನಿಮಿತ್ತವಾಗಿ ಬಹುವ್ರೀಹಿಸಮಾಸತ್ವವನ್ನು ಹೊಂದಿರುವಂತೆ ಬ್ರಹ್ಮಾಧಿಪತಿ ಎನ್ನುವುದೂ ಕೂಡ ಬಹುವ್ರೀಹಿಯೇ ಆಗುವುದು. ಇಂದ್ರನಿಗೆ ವೃತ್ರಾಸುರನು ಶತ್ರುವಾಗಬೇಕೆಂಬ ತ್ವಷ್ಟೃವಿನ ಅಭಿಮತಕ್ಕೆ ವಿರುದ್ಧವಾಗಿ, ಮಂತ್ರದ ಉಚ್ಚಾರಣೆಯಲ್ಲಿ ಸ್ವರರಾಹಿತ್ಯ ದೋಷದಿಂದ, ವೃತ್ರಾಸುರನಿಗೆ ದೇವೇಂದ್ರನೇ ಶತ್ರು (ಸಂಹಾರಕನು) ಆದನು. ಮೇಲಿನ ದೃಷ್ಟಾಂತದಿಂದ ತಿಳಿದುಬರುವ

ಪ್ರಕಾರ 'ಇಂದ್ರ ಶತ್ರುಃ' ಎನ್ನುವಲ್ಲಿ ಬಹುವ್ರೀಹಿಸಮಾಸವೇ ಗ್ರಹಣವಾಯಿತು, ತತ್ಪುರುಷಸಮಾಸವಲ್ಲ ಎಂದು ನಿರ್ಣಯವಾಗುವುದು. ಇದು ಕೇವಲ ಉದಾಹರಣೆಯಿಂದ ನಿರ್ಧಾರವಾಗಬೇಕಿಲ್ಲ. ಪುಲ್ಲಿಂಗಗಳಾದ ಪದಗಳಲ್ಲಿ ಪೂರ್ವಾಂತಪದವು ಸ್ವರಿತವಾದರೆ ಬಹುವ್ರೀಹಿ ಸಮಾಸವನ್ನು ಹೊಂದುವುದು. ಹೀಗೆ ಮಹಾವ್ಯಾಕರಣದಲ್ಲಿ ಸ್ವರವಿನಿರ್ಣಯಕ್ಕೆ ಸಂಬಂಧಿಸಿದಂತೆ 'ಪೂರ್ವಾಂತಸ್ವರಿತೇ ಪುಂಸೋರ್ಬಹುವ್ರೀಹಿಃ' ಎಂಬ ಸೂತ್ರವು ಪಠಿತವಾಗಿದೆ.

ಋತಂ ಸತ್ಯಂ ಪರಂ ಬ್ರಹ್ಮೇತ್ಯಾದ್ಯುದ್ದೇಶ್ಯ ದ್ವಿತೀಯಕಾ ॥೧೭೦॥
ವಿಭಕ್ತಿರೂರ್ಧ್ವರೇತಾದಿಃ ಪ್ರಥಮಾ ರುದ್ರಗೋಚರಾ ।
ತಸ್ಮಾದ್ವಿಷ್ಣುಂ ಪರಂ ಬ್ರಹ್ಮ ಪ್ರತಿ ರುದ್ರೋ ವ್ರತೇ ಸ್ಥಿತಃ ॥೧೭೧॥
ಊರ್ಧ್ವರೇತಾ ಇತಿ ಹ್ಯೇವ ಶ್ರುತ್ಯರ್ಥೋಽವಸಿತೋ ಭವೇತ್ ।

ಋತಂ ಸತ್ಯಂ ಪರಂ ಬ್ರಹ್ಮ ಮೊದಲಾದ ಪದಸಮೂಹದಲ್ಲಿರತಕ್ಕ ಉದ್ದೇಶಸಹಿತವಾದ ದ್ವಿತೀಯಾ ವಿಭಕ್ತಿಯು ವಿಷ್ಣುವಿಷಯಕವಾದುದು. ಊರ್ಧ್ವರೇತಂ ಮೊದಲಾದ ಪದಸಮೂಹದಲ್ಲಿರತಕ್ಕ ಪ್ರಥಮಾ ವಿಭಕ್ತಿಯು ರುದ್ರವಿಷಯಕವು. ಆದಪ್ರಯುಕ್ತ ಹಿಂದೆ ಹೇಳಿದ ಯುಕ್ತಿಗಳಿಂದ ಪರಬ್ರಹ್ಮ ಶಬ್ದವಾಚ್ಯನಾದ ವಿಷ್ಣುವನ್ನು ಕುರಿತು ರುದ್ರನು ಊರ್ಧ್ವರೇತಸ್ಕನಾಗಿ ವಿಷ್ಣುವಿಗೆ ಪ್ರೀತಿ ಉಂಟುಮಾಡುವ ವ್ರತ ನಿಯಮದಲ್ಲಿದ್ದಾನೆ ಎಂಬುದೇ ಶ್ರುತಿಯ ನಿಶ್ಚಿತವಾದ ಅಭಿಪ್ರಾಯವಾಗುವುದು.

ಈ ಅರ್ಥವೇ ಯುಕ್ತವೆಂದು ಶ್ರುತ್ಯಂತರದಿಂದಲೂ ನಿರೂಪಿಸುತ್ತಾರೆ –

ಋತಂ ಸತ್ಯಂ ಪರಂ ಬ್ರಹ್ಮ ಪ್ರತಿವಿಷ್ಣುಂ ಸದಾಶಿವಃ ॥೧೭೨॥
ಊರ್ಧ್ವರೇತಾ ಧ್ಯಾಯತಿ ಹ ಶಂಕರೋ ನೀಲಲೋಹಿತಃ ।
ಇತ್ಯರ್ಥಮೇತಮೇವಾಹ ನೀಲಗ್ರೀವಶ್ರುತಿಃ ಪರಾ ॥೧೭೩॥
ಅಥರ್ವಣೇ ಪರಂ ಬ್ರಹ್ಮ ತಸ್ಮಾದೇಕೋ ಹರಿಃ ಶ್ರುತೌ ।

ಯಥಾರ್ಥಜ್ಞಾನಸ್ವರೂಪನೂ, ಜಗದಾದಿ ಸೃಷ್ಟಿಕರ್ತನೂ, ಪರಬ್ರಹ್ಮ ಶಬ್ದವಾಚ್ಯನೂ ಆದ ವಿಷ್ಣುವನ್ನು ಕುರಿತು ಸುಖಕರನೂ, ನೀಲಲೋಹಿತನೂ, ಊರ್ಧ್ವರೇತಸ್ಕನೂ ಆದ ಸದಾಶಿವನು ಭಕ್ತಿಪೂರ್ವಕ ಧ್ಯಾನಮಾಡುತ್ತಾನೆ ಎಂದು ಶ್ರುತಿಪ್ರಸಿದ್ಧವೇ ಆಗಿದೆ. ಮೇಲೆ ಉದಾಹರಿಸಿದ ತಾಪನೀಯ

ಶ್ರುತಿಯಿಂದ ಬೇರೆಯಾದ ಅಥರ್ವಣ ವೇದಕ್ಕೆ ಸೇರಿದ ನೀಲಗ್ರೀವ ಶ್ರುತಿಯು ಇದೇ ಅರ್ಥವನ್ನೇ ಪ್ರತಿಪಾದಿಸುತ್ತದೆ. ಆದಪ್ರಯುಕ್ತ 'ಋತಂ ಸತ್ಯಂ' ಎನ್ನುವ ಶ್ರುತಿಯಲ್ಲಿ ಉಕ್ತವಾಗಿರುವ ಪರಬ್ರಹ್ಮನು ಸರ್ವೋತ್ತಮನಾದ ಶ್ರೀಹರಿಯೇ ಆಗಿರುವನು.

'ಋತಂ ಸತ್ಯಂ' ಎನ್ನುವ ಶ್ರುತಿಯು ರುದ್ರನಿಗೆ ಋತತ್ವಾದಿಗಳನ್ನು ಹೇಳುತ್ತದೆ. 'ತದೇವರ್ತಂ' ಎನ್ನುವ ಶ್ರುತಿಯು ಅದನ್ನೇ ವಿಷ್ಣುವಿಗೆ ಹೇಳುತ್ತದೆ. ಹೀಗೆ ಎರಡು ಶ್ರುತಿಗಳ ಬಲದಿಂದ ವಿಷ್ಣು ಮತ್ತು ರುದ್ರರಿಗೂ ಪರಬ್ರಹ್ಮತ್ವವು ಕೂಡುವುದರಿಂದ ವಿಷ್ಣುವೇ ಪರಬ್ರಹ್ಮ ಎಂದು ಹೇಗೆ ನಿರ್ಧರಿಸುವಿರಿ ಎಂದು ಆಕ್ಷೇಪ ಬಂದರೆ ಅದಕ್ಕೆ ಬಾಧಕವನ್ನು ಹೇಳುತ್ತಾರೆ-

ತದೇವರ್ತಮಿತಿ ಪ್ರಾಹ ಕಥಮೇವಾನ್ಯಥಾ ಶ್ರುತಿಃ ॥೧೭೪॥

ಅವಧಾರಯಂತೀ ತಸ್ಯೈವ ಹಿ ಋತತ್ವಾದಿಕಮಂಜಸಾ ।

'ಋತಂ ಸತ್ಯಂ' ಎನ್ನುವ ಶ್ರುತಿಯ ಪೂರ್ವಾರ್ಧ ರುದ್ರಪರವಾದರೆ, 'ತದೇವರ್ತಂ ತದು ಸತ್ಯಮಾಹುಃ ತದೇವ ಬ್ರಹ್ಮ ಪರಮಂ ಕವೀನಾಂ' ಎನ್ನುವ ಶ್ರುತಿಯು ಆ ವಿಷ್ಣುವಿನಲ್ಲಿಯೇ ಋತತ್ವಾದಿಗಳನ್ನು ಜ್ಞಾನಿಗಳಿಗೆ ಸಮ್ಮತಿಯಾಗುವಂತೆ ನಿರ್ಧಾರಕವಾಗಿ ಹೇಗೆ ತಾನೇ ಹೇಳಿತು? ಎರಡು ಶ್ರುತಿಗಳಿಗೆ ವಿರೋಧ ಬಂದರೆ, ಪ್ರಬಲ ಶ್ರುತಿಯಿಂದ ದುರ್ಬಲ ಶ್ರುತಿಗೆ ಬಾಧವು. ನಿಶ್ಚಯಪೂರ್ವಕವಾಗಿ ವಿಷ್ಣುವಿನಲ್ಲಿಯೇ ಪರಬ್ರಹ್ಮತ್ವವನ್ನು ಹೇಳುವ 'ತದೇವರ್ತಂ' ಎನ್ನುವ ಶ್ರುತಿಯೇ ಪ್ರಬಲವಾದುದು.

ಪ್ರಲಯ ಕಾಲದಲ್ಲಿ ರುದ್ರಾದಿಗಳು ಇರಲಿಲ್ಲ, ನಾರಾಯಣನೊಬ್ಬನೇ ಇದ್ದನು ಇತ್ಯಾದಿ ವಾಕ್ಯಗಳಿಂದ ರುದ್ರಾದಿಗಳಿಗೆ ಶ್ರೀಮನ್ನಾರಾಯಣನಿಂದ ಉತ್ಪತ್ತಿಯು ತಿಳಿದುಬರುವುದರಿಂದ, ರುದ್ರಾದಿಗಳಿಗೆ ಪರಬ್ರಹ್ಮವಾಚ್ಯತ್ವ ಇರುವುದಿಲ್ಲ ಎಂದು ನಿರೂಪಿಸುತ್ತಾರೆ -

ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ ॥೧೭೫॥

ವಾಸುದೇವೋಽಗ್ರ ಏವಾಸೀನ್ನ ಬ್ರಹ್ಮಾ ನ ಚ ಶಂಕರಃ ।

ನೇಂದ್ರಸೂರ್ಯೌ ನ ಚ ಗುಹೋ ನ ಸೋಮೋ ನ ವಿನಾಯಕಃ॥೧೭೬॥

ಇತ್ಯಾದಿ ವಾಕ್ಯತೋ ವಿಷ್ಣೋರುತ್ಪತ್ತಿರವತಾರಗಾ ।

ಪ್ರಲಯ ಕಾಲದಲ್ಲಿ ಸರ್ವೋತ್ತಮನಾದ ನಾರಾಯಣನೊಬ್ಬನೇ ಇದ್ದನು, ಬ್ರಹ್ಮನೂ ಇರಲಿಲ್ಲ ಮತ್ತು ಶಂಕರನೂ ಇರಲಿಲ್ಲ. ಪ್ರಲಯ ಕಾಲದಲ್ಲಿ ವಾಸುದೇವನೊಬ್ಬನೇ ಇದ್ದನು, ಬ್ರಹ್ಮನಾಗಲೀ ಶಂಕರನಾಗಲೀ ಇರಲಿಲ್ಲ. ಇಂದ್ರ ಸೂರ್ಯರೂ ಇರಲಿಲ್ಲ. ಷಣ್ಮುಖನಾಗಲೀ ಚಂದ್ರನಾಗಲೀ ಗಣೇಶನಾಗಲೀ ಇರಲಿಲ್ಲ. ಇತ್ಯಾದಿ ವಾಕ್ಯಗಳಿಂದ ರುದ್ರಾದಿಗಳು ಪ್ರಲಯ ಕಾಲದಲ್ಲಿ ಇರಲಿಲ್ಲವೆಂದೂ, ಅವರಿಗೆ ವಿಷ್ಣುವಿನಿಂದ ಉತ್ಪತ್ತಿ ಎಂದೂ ತಿಳಿದುಬರುತ್ತದೆ. ವಿಷ್ಣುವಿಗೆ ಉತ್ಪತ್ತಿಯನ್ನು ಹೇಳುವಂತೆ ತೋರುವ ವಾಕ್ಯಗಳಿಗೆ, ಪ್ರಲಯಕಾಲದಲ್ಲಿಯೂ ವಿಷ್ಣುವಿಗೆ ಅಸ್ತಿತ್ವವನ್ನು ಹೇಳುವ ಮೇಲಿನ ವಾಕ್ಯಗಳ ಆಧಾರದಿಂದ, ಪ್ರಾದುರ್ಭಾವ ಎಂಬುದಾಗಿ ತಿಳಿಯಬೇಕು.

ಬ್ರಹ್ಮಶಬ್ದವು ಮುಖ್ಯವಾಗಿ ವಿಷ್ಣುವನ್ನೇ ಹೇಳುತ್ತದೆ. ಅಮುಖ್ಯವೃತ್ತಿಯಿಂದ ಬ್ರಹ್ಮಾದಿಗಳಲ್ಲಿ ಕೂಡುವುದು. ಆದಕಾರಣ ಆನಂದಮಯಾದಿ ಶಬ್ದಗಳಿಂದ ವಿಷ್ಣುವನ್ನೇ ಗ್ರಹಣ ಮಾಡಬೇಕು ಎಂದು ಹೇಳುತ್ತಾರೆ –

ಬ್ರಹ್ಮನೇ ಆನಂದಮಯಾದಿ ಶಬ್ದವಾಚ್ಯನು

ಮುಖ್ಯಂ ಬ್ರಹ್ಮ ಹರಿಸ್ತಸ್ಮಾತ್ಪ್ರಸ್ತಾವಃ ಪರಮಿತ್ಯಪಿ ॥೧೭೭॥
ಮುಖ್ಯಬ್ರಹ್ಮಗ್ರಹೇ ಯುಕ್ತೇ ನಾಮುಖ್ಯಂ ಯುಜ್ಯತೇ ಕ್ವಚಿತ್ ।
ಅಸಂಭವೇ ಹಿ ಮುಖ್ಯಸ್ಯ ಗೌಣಾರ್ಥಾಂಗೀಕೃತಿರ್ಭವೇತ್ ॥೧೭೮॥

'ಬ್ರಹ್ಮವಿದಾಪ್ನೋತಿ ಪರಂ' ಎಂದು ಪರಬ್ರಹ್ಮನಿಗೇ ಪ್ರಸ್ತಾವ ಇರುವುದರಿಂದ, ಮುಖ್ಯವಾಗಿ ಬ್ರಹ್ಮಶಬ್ದವಾಚ್ಯನು ಶ್ರೀಹರಿಯೇ. ಸಾಕ್ಷಾತ್ತಾಗಿ ಮುಖ್ಯಾರ್ಥವು ಕೂಡುವಾಗ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಎಲ್ಲಿಯೂ ಕಂಡಿಲ್ಲ. ಮುಖ್ಯಾರ್ಥವು ಕೂಡದಿದ್ದರೆ ಮಾತ್ರ ಅಮುಖ್ಯಾರ್ಥವನ್ನು ಅಂಗೀಕರಿಸಬೇಕು. ಹೀಗೆ ಆನಂದಮಯಾದಿ ಶಬ್ದವಾಚ್ಯತ್ವವು ಪರಬ್ರಹ್ಮನಾದ ವಿಷ್ಣುವಿನಲ್ಲಿಯೇ ಕೂಡುವುದು.

ಪ್ರಾಚುರ್ಯಾರ್ಥದಲ್ಲಿ ಮಯಟ್ ಶಬ್ದ

ಮಯಟ್ ಪ್ರತ್ಯಯವು ವಿಕಾರವಾಚಕವು. ಬ್ರಹ್ಮನಲ್ಲಾದರೋ ವಿಕಾರವು ಕೂಡುವುದಿಲ್ಲ. ಆದ್ದರಿಂದ ಅನ್ನಮಯಾದಿ ಶಬ್ದವಾಚ್ಯನು ಬ್ರಹ್ಮನಲ್ಲ ಎಂದರೆ-

ಸೂತ್ರ: ಓಂ ವಿಕಾರಶಬ್ದಾನ್ನೇತಿ ಚೇನ್ನ ಪ್ರಾಚುರ್ಯಾತ್ ಓಂ (೧-೧-೧೩)

ವಿಕಾರಾರ್ಥಕವಾದ ಮಯಟ್ ಶಬ್ದವಿರುವ ಪ್ರಯುಕ್ತ ಅನ್ನಮಯಾದಿ ಶಬ್ದವಾಚ್ಯನು ಪರಬ್ರಹ್ಮನಲ್ಲ ಎಂದರೆ, ಹೀಗೆ ಹೇಳಕೂಡದು. ಇಲ್ಲಿ ಮಯಟ್ ಶಬ್ದವು ಪ್ರಾಚುರ್ಯಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ.

ಈ ಸೂತ್ರದಲ್ಲಿ ಹೇಳಿರುವ ಸಿದ್ಧಾಂತವನ್ನು ಶ್ರೀಮದಾಚಾರ್ಯರು ಮುಂದಿನ ವಾಕ್ಯಗಳಲ್ಲಿ ವ್ಯಾಖ್ಯಾನ ಮಾಡುತ್ತಾರೆ –

ಪ್ರಾಚುರ್ಯಾರ್ಥಾಶ್ಚ ಮಯಟಃ ಸರ್ವೇಽತ್ರ ಪ್ರತಿಪಾದಿತಾಃ ।

ಪರಬ್ರಹ್ಮನಿಗೆ ಆನಂದಮಯಾದಿವಾಚ್ಯತ್ವವನ್ನು ಹೇಳುವ ಈ ಶ್ರುತಿಯಲ್ಲಿ ಬಂದಿರತಕ್ಕ ಎಲ್ಲ ಮಯಟ್ ಶಬ್ದಗಳೂ ಪ್ರಾಚುರ್ಯಾರ್ಥದಲ್ಲಿಯೇ ಪ್ರತಿಪಾದಿತವಾಗಿವೆ.

ವಿವರಣೆ: 'ತತ್ಪ್ರಕೃತವಚನೇ ಮಯಟ್' ಎನ್ನುವ ಪಾಣಿನೀಸೂತ್ರದ ಪ್ರಕಾರ ಮಯಟ್ ಶಬ್ದವು ವಿಕಾರಾರ್ಥದಲ್ಲಿರುವಂತೆಯೇ ಪ್ರಾಚುರ್ಯಾರ್ಥದಲ್ಲಿಯೂ ಮುಖ್ಯವಾಗಿದೆ. ಪೂರ್ಣನಾದ ಪರಬ್ರಹ್ಮನಿಗೆ ವಿಕಾರಾರ್ಥವು ಕೂಡುವುದಿಲ್ಲ. ಆದಪ್ರಯುಕ್ತ ಇಲ್ಲಿ ಪ್ರಾಚುರ್ಯಾರ್ಥವನ್ನೇ ಗ್ರಹಿಸಬೇಕು. 'ವಿಕಾರಪ್ರಧಾನ-ಪ್ರಾಚುರ್ಯೇಷು ಮಯಟ್' ಎಂದು ವಿದ್ವಾಂಸರಲ್ಲಿ ಪ್ರಯೋಗವಿದೆ.

ಅನ್ನಮಯ ಎನ್ನುವುದಕ್ಕೆ ಅನ್ನವಿಕಾರವು ಹೇಗೆ ಕೂಡುವುದಿಲ್ಲವೋ ಹಾಗೆಯೇ ಅನ್ನಪ್ರಾಚುರ್ಯವೆನ್ನುವ ಅರ್ಥವೂ ವಿಷ್ಣುವಿನಲ್ಲಿ ಕೂಡಲಾರದು. ಅನ್ನವನ್ನೇ ಉಪಜೀವಿಸಿಕೊಂಡು ಬದುಕಿರುವ ಪಾರ್ಥಿವ ಶರೀರಗಳಿಗೆ ಅನ್ನಮಯ ಎನ್ನುವುದಕ್ಕೆ ಪ್ರಾಚುರ್ಯಾರ್ಥವು ಕೂಡಬಹುದು. ಹೀಗೆ ಹೇಳುವುದು ಸರಿಯಲ್ಲ. ಏಕೆಂದರೆ ಈ ಶ್ರುತಿಯಲ್ಲಿರುವ ಅನ್ನ ಶಬ್ದಕ್ಕೆ ಪ್ರಸಿದ್ಧವಾದ ಅನ್ನವೆಂದು ಅರ್ಥವಲ್ಲ. 'ಅದ್ಯತೇಽತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ' ಎಂದ ಶ್ರುತಿಯು ಅನ್ನ ಶಬ್ದಕ್ಕೆ ನಿರ್ವಚನವನ್ನು ಹೇಳುತ್ತದೆ. ಈ ಶ್ರುತಿಯ ಪ್ರಕಾರ ಅನ್ನ ಶಬ್ದಕ್ಕೆ 'ಪ್ರಾಣಿಗಳನ್ನು ತಿನ್ನುವುದು' ಮತ್ತು 'ಪ್ರಾಣಿಗಳಿಂದ ತಿನ್ನಲ್ಪಡುವಿಕೆ' ಎಂಬ ಅರ್ಥಗಳು ಪ್ರಧಾನವಾಗಿವೆ. ಪರಮೇಶ್ವರನಲ್ಲಿ ಮೊದಲನೆಯ ಅರ್ಥವು ಕೂಡಬಹುದಾದರೂ, ಎರಡನೆಯ ಅದ್ಯತ್ವರೂಪವಾದ ಅರ್ಥವು ಕೂಡುವುದಿಲ್ಲ. ಆದಕಾರಣ ಅನ್ನಮಯ

ಎನ್ನುವುದು ಪರಮೇಶ್ವರನಲ್ಲಿ ಕೂಡುವುದಿಲ್ಲ ಎಂದರೆ –

ಭೋಗ್ಯತ್ವಮತ್ರ ಚಾದ್ಯತ್ವಮುಪಜೀವ್ಯತಯಾ ಹರೇಃ ॥೧೭೯॥

ಮಹಾಭೋಕ್ತಾ ಮಹಾಭೋಗ್ಯ ಇತ್ಯಥೋಽನ್ನಮಯೇ ಭವೇತ್ ।

ಮಹಾಪ್ರಾಣೋ ಮಹಾಬೋಧೋ ಮಹಾವಿಜ್ಞಾನವಾನಪಿ ॥೧೮೦॥

ಈ ಶ್ರುತಿಯಲ್ಲಿ ಆದ್ಯತ್ವವೆಂದರೆ ಭೋಗ್ಯತ್ವವೆಂದೇ ಅರ್ಥ. ಎಲ್ಲ ಪ್ರಾಣಿಗಳಿಗೆ ಪರಮಾತ್ಮನು ಉಪಜೀವ್ಯನಾದ್ದರಿಂದ ಅವನಿಗೆ ಭೋಗ್ಯತ್ವವು ಕೂಡುತ್ತದೆ. ಮುಖ್ಯವಾಗಿ ಸರ್ವಭಕ್ಷಕ, ಸರ್ವಸಂಹಾರಕ (ಮಹಾಭೋಕ್ತಾ), ಎಲ್ಲ ಪ್ರಾಣಿಗಳಿಗೂ ಉಪಜೀವ್ಯ (ಮಹಾಭೋಗ್ಯ) ಈ ರೀತಿಯಾಗಿ ಅನ್ನಮಯ ಎನ್ನುವ ಶಬ್ದದಲ್ಲಿ ಅರ್ಥವು ಕೂಡುವುದು. ಇದೇ ರೀತಿ ಮಹಾಚೇಷ್ಟೆಯುಳ್ಳವನೆಂದೂ (ಪ್ರಾಣಮಯ), ಮಹಾಬುದ್ಧಿವುಳ್ಳವನೆಂದೂ (ಮನೋಮಯ), ಮಹಾವಿಶೇಷ ಜ್ಞಾನವುಳ್ಳವನೆಂದೂ (ವಿಜ್ಞಾನಮಯ) ಅರ್ಥವಾಗುವುದು. ಅಪಿ ಶಬ್ದದಿಂದ ಆನಂದಮಯ ಎಂಬ ಶಬ್ದಕ್ಕೆ ಮಹಾನಂದವುಳ್ಳವನೆಂಬ ಅರ್ಥವನ್ನೂ ತೆಗೆದುಕೊಳ್ಳಬೇಕು.

ಪರಮಾತ್ಮನಿಗೆ ಅನ್ನಮಯಾದಿ ಸ್ವರೂಪತ್ವವಿದ್ದರೆ ಬಹುತ್ವ ಬರುವುದರಿಂದ 'ಏಕಮೇವಾದ್ವಿತೀಯಂ' ಎನ್ನುವ ಶ್ರುತಿಗೆ ವಿರೋಧ ಬರುವುದು. ಪರಮಾತ್ಮನಲ್ಲಿ ಪ್ರಚುರವಾದ ಆನಂದಾದಿಗಳು ಇವೆಯೆಂದರೆ ಪರಮಾತ್ಮನಿಗೂ ಅವನ ಆನಂದಾದಿಗಳಿಗೂ ಭೇದವು ಪ್ರಸಕ್ತವಾಗುವುದು. ಮನಶ್ಶಬ್ದಕ್ಕೆ ಜ್ಞಾನವೆಂದು ಇಟ್ಟುಕೊಂಡರೆ ಮನೋಮಯಕ್ಕೆ ಜ್ಞಾನಮಯ ಎಂದರ್ಥವಾಗುವುದರಿಂದ ಪುನರುಕ್ತಿಯಾಗುವುದು. ಹೀಗೆ ಆಶಂಕಿಸಿದರೆ –

ವಿಶೇಷಸಾಮಾನ್ಯತಯಾ ವಿಜ್ಞಾನಂ ಮನ ಇತ್ಯಪಿ ।

ಏಕಸ್ಯ ಜ್ಞಾನರೂಪಸ್ಯ ಹರೇರುಕ್ತಿರ್ವಿಭಾಗತಃ ॥೧೮೧॥

ಜ್ಞಾನಸ್ವರೂಪನಾದ ಒಬ್ಬನೇ ಆದ ಶ್ರೀಹರಿಗೇ ವಿಶೇಷ ಮತ್ತು ಸಾಮಾನ್ಯ ವಿಷಯತ್ವವಿರುವುದರಿಂದ ವಿಜ್ಞಾನವೆಂದೂ, ಮನವೆಂದೂ ಪ್ರತ್ಯೇಕವಾಗಿ ಹೇಳಿರುವುದು ಯುಕ್ತವೇ ಆಗುವುದು.

ವಿವರಣೆ: 'ಸಾಮಾನ್ಯೈರ್ಯೇ ತ್ವವಿಜ್ಞೇಯಾಃ ವಿಶೇಷಾ ಮಮ ಗೋಚರಾಃ। ದೇವಾದೀನಾಂ ತು ತಜ್ಜ್ಞಾನಂ ವಿಜ್ಞಾನಮಿತಿ ಕೀರ್ತಿತಂ॥' (ಇತಿ

ಗೀತಾಭಾಷ್ಯೇ). ಸಾಮಾನ್ಯರಿಂದ ತಿಳಿಯಲ್ಪಡದಿರುವ ವಿಶೇಷಗಳೂ ನನ್ನ ಜ್ಞಾನಕ್ಕೆ ವಿಷಯಗಳಾಗುತ್ತವೆ. ದೇವಾದಿಗಳಿಗಾದರೋ ಆ ಜ್ಞಾನವು ವಿಜ್ಞಾನವೆಂದು ಹೇಳಲ್ಪಡುತ್ತದೆ. ಈ ವಚನದಿಂದ ವಿಜ್ಞಾನಶಬ್ದಕ್ಕೆ ವಿಶೇಷ ಜ್ಞಾನ ಎಂದರ್ಥವಾಗುವುದು. ಮನಶಬ್ದವು ಕೇವಲ ಸಾಮಾನ್ಯಜ್ಞಾನವನ್ನು ಹೇಳುತ್ತದೆ.

'ತಸ್ಮಾದ್ವಾ ಏತಸ್ಮಾದನ್ನರಸಮಯಾತ್' ಇತ್ಯಾದಿಗಳಲ್ಲಿ ಅನ್ಯ ಶಬ್ದವಿರುವ ಪ್ರಯುಕ್ತ ಸ್ವಗತಭೇದರಹಿತನಾದ ವಿಷ್ಣುವಿನಲ್ಲಿ ಅನ್ನಮಯಾದಿ ಶಬ್ದವಾಚ್ಯತ್ವವು ಹೇಗೆ ಕೂಡುತ್ತದೆ ಎಂದರೆ -

ಅಭೇದೇಽಪಿ (ಅಭಿನ್ನೋಽಪಿ) ವಿಶೇಷೇಣೈವಾನ್ಯ ಇತ್ಯುದಿತೋ ಹರಿಃ ।
ಭೇದಶಬ್ದಾ ವಿಶೇಷಂ ತು ಹರಾವನ್ಯತ್ರ ಭಿನ್ನತಾಂ ॥೧೮೨॥
ಭೂಯುರ್ಹರೇರ್ಜೀವಜಡೈರಪಿ ಭೇದಂ ಹಿ ಮುಖ್ಯತಃ ।
ಬ್ರಹ್ಮತರ್ಕವಚೋಽಪ್ಯೇವಮತ ಏಕಃ ಸ ಪಂಚಧಾ ॥೧೮೩॥
ಉಕ್ತೋಽನ್ನಮಯ ಇತ್ಯಾದಿ ಭೃಗೋಶ್ಚೈತದ್ವದಿಷ್ಯತಿ ।

ಶ್ರೀಹರಿಯ ರೂಪರೂಪಗಳಲ್ಲಿ ಭೇದವಿಲ್ಲದಿದ್ದರೂ ಭೇದಕಾರ್ಯ-ನಿರ್ವಾಹಕ ವಿಶೇಷದ ಬಲದಿಂದಲೇ, ಅಭಿನ್ನನಾಗಿದ್ದರೂ ಭಿನ್ನನೆಂದು ಹೇಳಲ್ಪಡುವನು. ಭೇದವನ್ನು ಹೇಳುವ ಅನ್ಯ ಮೊದಲಾದ ಶಬ್ದಗಳು ಶ್ರೀಹರಿಯಲ್ಲಿ ವಿಶೇಷವನ್ನೂ, ಇತರೆಡೆಗಳಲ್ಲಿ ಶ್ರೀಹರಿಯಿಂದ ಭೇದವನ್ನೂ ಹೇಳುತ್ತವೆ. ಪರಮಾತ್ಮನಿಗೆ ಜೀವಜಡಗಳಿಂದಲೂ ಮುಖ್ಯವಾಗಿ ಭೇದವನ್ನೇ ಹೇಳುತ್ತವೆ. ವಿಷ್ಣುವಿನಿಂದ ಹೇಳಲ್ಪಟ್ಟ ಬ್ರಹ್ಮತರ್ಕದ ವಚನವೂ ಇದೇ ರೀತಿಯೇ ಹೇಳುತ್ತದೆ. ಶ್ರೀಹರಿಯು ನಿರ್ಭಿನ್ನನಾಗಿದ್ದರೂ ವಿಶೇಷದ ಬಲದಿಂದಲೇ ಅನ್ನಮಯಾದಿ ಐದು ಪ್ರಕಾರಗಳಲ್ಲಿ ಹೇಳಲ್ಪಟ್ಟಿದ್ದಾನೆ. ಆನಂದವಲ್ಲಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಅನ್ನಮಯಾದಿ ರೂಪವನ್ನೇ ಭೃಗುವಲ್ಲಿಯಲ್ಲಿ ಭೃಗುವಿಗೋಸ್ಕರ ವರುಣನೂ ಕೂಡ **ಪರಬ್ರಹ್ಮನೆಂದೇ** ಉಪದೇಶಿಸುವನು.

'ಅನ್ನಂ ಪ್ರಾಣಃ' ಇತ್ಯಾದಿಗಳಲ್ಲಿ ಮಯಟ್ ಪ್ರತ್ಯಯವು ಶ್ರುತವಾಗದಿರುವದರಿಂದ, ಆನಂದವಲ್ಲಿಯಲ್ಲಿ ಹೇಳಿದ ಅನ್ನಮಯಾದಿ

ಶಬ್ದವಾಚ್ಯನಾದ ಪರಬ್ರಹ್ಮನನ್ನು ಭೃಗುವಲ್ಲಿಯಲ್ಲಿ ವರುಣನು ಉಪದೇಶ ಮಾಡಿಲ್ಲ ಎಂದರೆ –

ಪ್ರಾಪ್ಯತ್ವೇನ ಮಯಟ್ ಪ್ರೋಕ್ತೇರ್ನ ತತ್ರಾಪಿ ಅನ್ಯದುಚ್ಯತೇ ॥೧೮೪॥

ಪ್ರಚುರಾನ್ನಾದಿರೇವಾತೋ ಹ್ಯನ್ನಮನ್ನಮಯೇತ್ಯಪಿ ।

ಉಚ್ಯತೇ ಹ್ಯಏಶೇಷೇಣ ನಾನ್ಯತ್ಕಿಂಚಿದಿಹೋಚ್ಯತೇ ॥೧೮೫॥

ಉಪಕ್ರಮದಲ್ಲಿ ಉಪದೇಶಿಸಲ್ಪಟ್ಟ ಈ ಅನ್ನಾದಿ ಶಬ್ದವಾಚ್ಯವಾದುದನ್ನೇ 'ಏತಮನ್ನಮಯಮಾತ್ಮಾನಮುಪಸಂಕ್ರಮ್ಯ' ಇತ್ಯಾದಿ ಪ್ರಾಪ್ಯತ್ವವನ್ನು ಹೇಳುವ ವಾಕ್ಯದಲ್ಲಿ ಮಯಟ್ ಪ್ರತ್ಯಯವನ್ನು ಸ್ಪಷ್ಟವಾಗಿ ಹೇಳಿರುವುದರಿಂದ, ಭೃಗುವಲ್ಲಿ ಇತ್ಯಾದಿಗಳಲ್ಲಿ ಬ್ರಹ್ಮನ ಹೊರತು ಅನ್ಯವಾದುದು ಹೇಳಲ್ಪಟ್ಟಿಲ್ಲ. ಅನ್ನ, ಅನ್ನಮಯ ಮೊದಲಾದ ಶಬ್ದಗಳಿಗೆ ಅರ್ಥಾಂತರವಿಲ್ಲವಾದ್ದರಿಂದ, ಪ್ರಚುರಾನ್ನಾದಿವುಳ್ಳ ಪರಬ್ರಹ್ಮನೇ ಈ ಶಬ್ದಗಳಿಂದ ಹೇಳಲ್ಪಡುತ್ತಾನೆ. ಇಲ್ಲವಾದರೆ ಉಪಕ್ರಮ ವಾಕ್ಯಕ್ಕೂ ಉಪಸಂಹಾರ ವಾಕ್ಯಕ್ಕೂ ವಿರೋಧ ಬರುವುದು. ಆದಕಾರಣ ಈ ಭೃಗುವಲ್ಲಿಯಲ್ಲಿ ಬ್ರಹ್ಮನಿಂದ ವ್ಯತಿರಿಕ್ತವಾದುದು ಬೇರೆ ಯಾವುದೂ ಹೇಳಲ್ಪಟ್ಟಿಲ್ಲ.

ಈ ಪ್ರಕಾರವಾಗಿ ಎರಡು ಸೂತ್ರಗಳಿಂದ ಅನ್ನಮಯಾದಿ ಐದು ಶಬ್ದಗಳು ಪರಮೇಶ್ವರನನ್ನು ಹೇಳುತ್ತವೆಯೆಂದೂ, ಮಯಟ್ ಪ್ರತ್ಯಯವು ಪ್ರಾಚುರ್ಯಾರ್ಥದಲ್ಲಿ ಪ್ರಸಕ್ತವಾಗಿರುವುದೆಂದೂ ಪ್ರತಿಪಾದಿಸಲಾಯಿತು. ಈಗ ಆನಂದಮಯಶಬ್ದಕ್ಕೆ ವಿಷ್ಣುವಾಚ್ಯತ್ವವನ್ನೂ ಅದರಲ್ಲಿರುವ ಮಯಟ್ ಶಬ್ದಕ್ಕೆ ಪ್ರಾಚುರ್ಯಾರ್ಥವನ್ನೂ ಬೇರೊಂದು ಹೇತುವಿನಿಂದ ಉಪಪಾದಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಾರೆ –

ಹೇತ್ವಂತರದಿಂದ ಆನಂದಮಯತ್ವ ಪ್ರತಿಪಾದನೆ

ಸೂತ್ರ: ಓಂ ತದ್ಧೇತುವ್ಯಪದೇಶಾಚ್ಚ ಓಂ (೧-೧-೧೪)

ಆ ವಿಷ್ಣುವಿಗೆ ಪರಿಪೂರ್ಣವಾದ ಆನಂದವಿದೆ ಎನ್ನುವ ವಿಷಯದಲ್ಲಿ 'ಕೋ ಹ್ಯೇವಾನ್ಯಾತ್' ಎಂದು ಲೋಕಚೇಷ್ಟಕತ್ವರೂಪವಾದ ಹೇತುವನ್ನು ಹೇಳಿರುವುದರಿಂದ ಆನಂದಮಯನು ಬ್ರಹ್ಮನೇ ಎಂದು ಸೂತ್ರಾರ್ಥ.

ಮಹಾನಂದತ್ವ ಏವಾಸ್ಯ ಹೇತುಃ ಕೋಽನ್ಯಾದಿತಿ ಸ್ಫುಟಂ ।

ಉಕ್ತಃ ಶ್ರುತ್ಯಂತರೇ ಯಸ್ಮಾತ್ಸುಖಂ ಲಬ್ಧ್ವಾ ಕರೋತ್ಯಯಂ ॥೧೪೬॥
ಕರೋತಿ ನಾಸುಖೀ ಭೂಮಾ ಸುಖಂ ನಾಲ್ಪೇ ಸುಖಂ ಭವೇತ್ ।
ಇತ್ಯುಕ್ತಂ ಯತ್ಪ್ರವೃತ್ತಿಶ್ಚ ನೃತ್ತಗಾನಾದಿಕಾ ಸುಖಾತ್ ॥೧೪೭॥
ದುಃಖಾದ್ರೋದಾದಿಕಾ ಚೈವ ಸರ್ವಕರ್ತೃತ್ವತೋಽಸ್ಯ ಚ ।
ಸರ್ವಶಕ್ತೇರ್ನ ದುಃಖಂ ಸ್ಯಾದತಃ ಕೇವಲ ಲೀಲಯಾ ॥೧೪೮॥
ಪ್ರವರ್ತಕೋ ನ ಚೇದೇಷ ಪ್ರಾಣ್ಯಾದನ್ಯಾಚ್ಚ ಕಃ ಪುಮಾನ್ ।

ಆನಂದಮಯ ಪ್ರಕರಣದಲ್ಲಿ 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್', ಈ ಆಕಾಶ ಶಬ್ದವಾಚ್ಯನಾದ ಪರಮಾತ್ಮನು ಪೂರ್ಣಾನಂದನಾಗಿರದಿದ್ದರೆ ಯಾವನು ತಾನೇ ಚೇಷ್ಟೆಯನ್ನು ಮಾಡಿಯಾನು ಎನ್ನುವ ವಾಕ್ಯದಿಂದ ಈ ವಿಷ್ಣುವಿಗೇನೇ ಲೋಕಚೇಷ್ಟಕತ್ವರೂಪ ಹೇತುವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಛಂದೋಗ ಶ್ರುತಿಯಲ್ಲಿ 'ಯದಾ ವೈ ಸುಖಂ ಲಭತೇಥ ಕರೋತಿ' ಇತ್ಯಾದಿ ವಾಕ್ಯದಿಂದ ಈ ಶ್ರೀಹರಿಯು ಸುಖವನ್ನು ಹೊಂದಿರುವುದರಿಂದ ಪ್ರವರ್ತನೆ ಮಾಡುತ್ತಾನೆ, ಸುಖವಿಲ್ಲದಿರುವನು ಪ್ರವರ್ತನೆ ಮಾಡುವುದಿಲ್ಲ, ಎಂಬುದಾಗಿ ಶ್ರೀಹರಿಯ ವ್ಯಾಪಾರಕ್ಕೆ ಆನಂದದಿಂದ ವ್ಯಾಪ್ತಿಯು ಉಕ್ತವಾಗಿದೆ. 'ಶ್ರೀ ಹರಿಯು ಪೂರ್ಣಗುಣವುಳ್ಳವನಾಗಿರುವುದರಿಂದ ಅವನೇ ಪೂರ್ಣಸುಖರೂಪನು, ಯಾವನು ಅಲ್ಪಗುಣವುಳ್ಳವನೋ ಅವನಲ್ಲಿ ಅಲ್ಪಸುಖವೇ ಆಗುವುದು', ಎಂದು ಅದೇ ಶ್ರುತಿಯಲ್ಲಿ ಹೇಳಿದೆ. ಪೂರ್ಣಸುಖವಿದ್ದರೆ ಮಾತ್ರ ಸುಖವುಳ್ಳವನು ಎಂದು ಹೇಳುತ್ತಾರೆ. ಅಲ್ಪಸುಖವಿದ್ದರೆ ಸುಖವಿಲ್ಲ ಎಂದು ಹೇಳುವುದು ರೂಢಿ. ಉದಾಹರಣೆಗೆ ಯಾವನಿಗೆ ಆನಂದವಾಗಿರುತ್ತದೋ ಅವನು ನರ್ತನ, ಗಾಯನಾದಿಗಳನ್ನು ಮಾಡುತ್ತಾ ಸಂತೋಷವನ್ನು ತೋರಿಸುತ್ತಾನೆ. ಆದರೆ ದುಃಖವುಳ್ಳವನು ರೋದನಾದಿಗಳನ್ನು ಮಾಡುತ್ತಾನೆ. ಈ ಶ್ರೀಹರಿಯು ಎಲ್ಲವನ್ನೂ ಮಾಡುವವನೂ, ಎಲ್ಲ ರೀತಿಯ ಶಕ್ತಿಯುಳ್ಳವನೂ ಆದಪ್ರಯುಕ್ತ ಅವನು ಸದಾ ಸುಖಿಯೇ ಆಗಿರುವನು, ಅವನಿಗೆ ಎಂದಿಗೂ ದುಃಖದ ಪ್ರಸಕ್ತಿಯೇ ಇರುವುದಿಲ್ಲ. ಆದಕಾರಣ ಸರ್ವಪ್ರವರ್ತಕನಾದ ಶ್ರೀಹರಿಯು ಪೂರ್ಣಾನಂದದಿಂದ ಯುಕ್ತನಾಗುವನು.

ಪೂರ್ಣಾನಂದನಾಗದಿದ್ದರೆ ಯಾವ ಲೋಕಚೇಷ್ಟೆಯನ್ನೂ ಪ್ರವರ್ತಿಸಲಾರನು. ಶ್ರೀಹರಿಯೇ ಯಾವುದನ್ನೂ ಪ್ರವರ್ತಿಸದಿದ್ದರೆ, ಯಾವಪುರುಷನು ತಾನೇ ವಿಶೇಷ ರೀತಿಯಿಂದಾಗಲೀ ಸಾಧಾರಣ ರೀತಿಯಿಂದಾಗಲೀ ಚೇಷ್ಟೆಯನ್ನು ಮಾಡಿಯಾನು?

ಜಗಚ್ಚೇಷ್ಟಕತ್ವರೂಪ ಹೇತುವಿನ ಮೂಲಕ ಶ್ರೀಹರಿಯು ಪೂರ್ಣಾನಂದ ಎನ್ನುವುದು ಸಿದ್ಧವಾಗುವುದರಿಂದ, ಆನಂದಮಯ ಎನ್ನುವಲ್ಲಿ ಮಯಟ್ ಶಬ್ದವು ಪ್ರಾಚುರ್ಯಾರ್ಥದಲ್ಲಿ ಉಕ್ತವಾಗಿದೆಯೇ ಹೊರತು ವಿಕಾರಾರ್ಥದಲ್ಲಿ ಅಲ್ಲ ಎಂದು ನಿರ್ಣೀತವಾಗುತ್ತದೆ.

ಅನ್ನಮಯಾದಿ ಶಬ್ದವಾಚ್ಯನೇ ಮಂತ್ರವರ್ಣೋಕ್ತನು

ಅನ್ನಮಯಾದಿ ಐದು ಶಬ್ದಗಳಿಗೂ ಯುಕ್ತ್ಯಂತರದಿಂದ ಪರಬ್ರಹ್ಮತ್ವವನ್ನು ಪ್ರತಿಪಾದಿಸುವ ಸೂತ್ರ -

ಸೂತ್ರ: ಓಂ ಮಾಂತ್ರವರ್ಣಿಕಮೇವ ಚ ಗೀಯತೇ ಓಂ (೧-೧-೧೫)

'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎನ್ನುವ ಮಂತ್ರವರ್ಣದಿಂದ ಲಕ್ಷಣಯುಕ್ತನಾಗಿ ಹೇಳಲ್ಪಟ್ಟ ಪರಬ್ರಹ್ಮನೇ ಅನ್ನಮಯಾದಿ ಶಬ್ದಗಳಿಂದ ಗಾನಮಾಡಿಸಿಕೊಳ್ಳುತ್ತಾನೆ, ಆದ್ದರಿಂದ ಅನ್ನಮಯಾದಿ ಶಬ್ದವಾಚ್ಯನು ಪರಬ್ರಹ್ಮನೇ ಆಗಿರುವನು ಎಂದು ಸೂತ್ರಾರ್ಥ.

ಮಂತ್ರವರ್ಣವೆಂಬ ವೇದಭಾಗವೂ ಪರಬ್ರಹ್ಮವಿಷಯಕವಾಗಿದ್ದರೆ, ಅದರ ಸಮಾಖ್ಯೆಯಿಂದ ಅನ್ನಮಯಾದಿ ಶಬ್ದವಾಚ್ಯನು ಪರಬ್ರಹ್ಮನೆಂದು ಹೇಳಬಹುದಿತ್ತು. ಆದರೆ ಮಂತ್ರವರ್ಣದಲ್ಲಿ ಬ್ರಹ್ಮ ಎಂದು ಶ್ರುತವಾಗಿದೆ. ಬ್ರಹ್ಮಶಬ್ದಕ್ಕೆ ಅನ್ಯತ್ರವೂ ಪ್ರವೃತ್ತಿಯಿದೆ. ಆದಕಾರಣ ಪರಬ್ರಹ್ಮನಿಗೆ ಅನ್ನಮಯಾದಿ ಶಬ್ದವಾಚ್ಯತ್ವವು ಕೂಡುವುದಿಲ್ಲ ಎಂದರೆ -

ಬ್ರಹ್ಮವಿತ್ಪರಮಾಪ್ನೋತೀತಿ ಯತ್ಪ್ರಥಮಸೂಚಿತಂ ॥೧೪೯॥
ತದೇವ ಮಂತ್ರವರ್ಣೇನ ಸತ್ಯಂ ಜ್ಞಾನಮನಂತವತ್ ।
ಲಕ್ಷಿತಂ ತತ್ರ ಸತ್ಯತ್ವಂ ಸೃಷ್ಟ್ಯಾನ್ನಪ್ರಾಣಯೋರಪಿ ॥೧೫೦॥
ಉಕ್ತಂ ಜ್ಞಾನಂ ತು ಮನಸಾ ವಿಜ್ಞಾನೇನಾಪ್ಯುದೀರಿತಂ ।
ಅನಂತತ್ವಂ ತಥಾನಂದಮಯವಾಚ್ಯಪ್ಯುದಾಹೃತಂ ॥೧೫೧॥

ಬ್ರಹ್ಮನನ್ನು ತಿಳಿದವನು ಪರಬ್ರಹ್ಮನನ್ನು ಹೊಂದುವನು ಎಂಬುದಾಗಿ ಯಾವುದು ಮೊದಲು ಸೂಚಿತವಾಗಿದೆಯೋ, ಅದುವೇ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ವೇದಭಾಗದಿಂದ ಅಸಾಧಾರಣ ಧರ್ಮದಿಂದ ಕೂಡಿರುವುದಾಗಿ ಹೇಳಲ್ಪಟ್ಟಿದೆ. ಆ ಲಕ್ಷಣಗಳಲ್ಲಿ ಸತ್ಯತ್ವವು ಸೃಷ್ಟಿ ಪ್ರಕರಣ, ಅನ್ನಮಯ ಹಾಗೂ ಪ್ರಾಣಮಯ ಪ್ರಕರಣಗಳಿಂದ ಹೇಳಲ್ಪಟ್ಟಿದೆ. ಜ್ಞಾನರೂಪ ಲಕ್ಷಣವಾದರೋ ಮನೋಮಯ ಹಾಗೂ ವಿಜ್ಞಾನಮಯ ಪ್ರಕರಣಗಳಿಂದ ಉಕ್ತವಾಗಿದೆ. ಅನಂತತ್ವರೂಪ ಲಕ್ಷಣವು ಆನಂದಮಯ ಪ್ರಕರಣದಿಂದಲೂ ಹಾಗೂ ಮೇಲಿನ ವಾಕ್ಯಗಳಿಂದಲೂ ಹೇಳಲ್ಪಟ್ಟಿದೆ.

'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಪರಬ್ರಹ್ಮನ ಲಕ್ಷಣಗಳಿಗೆ ಮೇಲೆ ಹೇಳಿರುವ ವ್ಯಾಖ್ಯಾನವು ಹೇಗೆ ಕೂಡುವುದು ಎಂದು ಆಶಂಕಿಸಿದರೆ –

ಸದ್ಭಾವಂ ಯಾಪಯೇದ್ಯಸ್ಮಾತ್ಸತ್ಯಂ ತತ್ತೇನ ಕಥ್ಯತೇ ।
ಇತಿ ಸೃಷ್ಟಿರಿಹ ಪ್ರೋಕ್ತಾ ಜಗತ್ಸದ್ಭಾವಯಾಪಕಂ ॥೧೯॥
ಬ್ರಹ್ಮೇತಿ ಸ್ಥಾಪನಾಯೈವ ಸತ್ವಂ ಜೀವನಮೇವ ಚ ।
ವಿಶೀರ್ಣತಾ ಚ ಸತ್ವಂ ಸ್ಯಾತ್ಸನ್ನಮಿತ್ಯಾಹುರೇವ ಯತ್ ॥೧೯೩॥
ಅತೋಽದ್ಯತಾಽತ್ತತಾಽನ್ನತ್ವಂ ಸತ್ಯ ಶಬ್ದಾರ್ಥ ಏವ ಹಿ ।

ತನ್ನ ಬಿಟ್ಟು ಉಳಿದೆಲ್ಲವಕ್ಕೂ ಉತ್ಪತ್ತಿಯನ್ನು ಹೊಂದಿಸಿಕೊಡುವುದರಿಂದ ಬ್ರಹ್ಮನು ಸತ್ಯನೆಂದು 'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಸೃಷ್ಟಿವಾಕ್ಯದಿಂದ ಹೇಳಲ್ಪಡುತ್ತಾನೆ. ಈ ಅಭಿಪ್ರಾಯದಿಂದ ಈ ಅನುವಾಕದಲ್ಲಿ ಸೃಷ್ಟಿಕಥನವು ಹೇಳಲ್ಪಟ್ಟಿದೆ. ಬ್ರಹ್ಮನೇ ಚೇತನಾಚೇತನಾತ್ಮಕ ಪ್ರಪಂಚಕ್ಕೆ ಉತ್ಪತ್ತಿಯನ್ನು ಹೊಂದಿಸಿಕೊಡುವನೆಂಬ ಅರ್ಥವನ್ನು ಸ್ಥಾಪಿಸುವುದಕ್ಕಾಗಿಯೇ ಇಲ್ಲಿ ಸೃಷ್ಟಿಯು ಹೇಳಲ್ಪಟ್ಟಿದೆ. ಕೇವಲ ಅವಯವಾರ್ಥವನ್ನು ಹೇಳುವುದಕ್ಕಲ್ಲ. 'ಅನ್ನಾದ್ಭೂತಾನಿ ಜಾಯಂತೇ।ಜಾತಾನ್ಯನ್ನೇನ ವರ್ಧಂತೇ॥' ಎಂಬ ವಾಕ್ಯದಿಂದ ಪ್ರಾಣಾಧಾರತ್ವವೂ ಕೂಡ ಸತ್ ಶಬ್ದಾರ್ಥವಾಗಿದೆ ಎಂದು ತಿಳಿಯುವುದು. ವಿನಷ್ಟವಾದ ವಸ್ತುವನ್ನು 'ಸನ್ನಂ' ಎಂದು ಹೇಳುವುದರಿಂದ, ಸತ್ ಶಬ್ದದಿಂದ ವಿನಾಶವೂ ಸೂಚಿತವಾಗುವುದು. ಹೀಗೆ ಎಲ್ಲ ಪ್ರಾಣಿಗಳಿಗೂ ಜೀವನ ಹಾಗೂ ವಿನಾಶವು ಸತ್ಯ ಶಬ್ದದಿಂದ ಹೇಳಲ್ಪಟ್ಟಿರುವುದರಿಂದ, ಸತ್ಯ ಶಬ್ದಾರ್ಥವೇ

ಅನ್ನಶಬ್ದ ಪ್ರವೃತ್ತಿ ನಿಮಿತ್ತವು. 'ಅದ್ಯತಾ' ಎನ್ನುವಲ್ಲಿ ಉತ್ಪತ್ತಿ ಹಾಗೂ ವೃದ್ಧಿಗಳೂ, 'ಅತ್ತ್ಯತಾ' ಎನ್ನುವಲ್ಲಿ ಸಂಹಾರಕತ್ವವೂ ಅನ್ನಶಬ್ದದ ಪ್ರವೃತ್ತಿಯಿಂದ ತಿಳಿದುಬರುವುದು.

ಸತ್ಯಶಬ್ದದಿಂದ ಪ್ರಾಣಮಯ ಪ್ರಕರಣವೂ, ಜ್ಞಾನಶಬ್ದದಿಂದ ಮನೋಮಯ ಪ್ರಕರಣವೂ ಹೇಳಲ್ಪಡುತ್ತವೆ ಎಂದು ತಿಳಿಸುತ್ತಾರೆ –

ಪ್ರಾಣಂ ದೇವಾ ಅನುಪ್ರಾಣಂತಿ ಮನುಷ್ಯಾಃ ಪಶವಶ್ಚ ಯೇ ॥೧೯॥
ಆಯುಃ ಪ್ರಾಣೋ ಹಿ ಭೂತಾನಾಮಿತಿ ಯದ್ಗತಿ ಜೀವನೇ ।
ಉಕ್ತೇ ಸದಿತಿ ಧಾತ್ವರ್ಥೋ ಗತಿಶ್ಚಾತೋ ಹಿ ಸತ್ಯತಾ ॥೧೯೫॥
ಪ್ರಾಣತ್ವಮವಬೋಧಾರ್ಥೋ ಮನುಧಾತುಃ ಪ್ರಕೀರ್ತಿತಃ ।

ದೇವತೆಗಳೂ, ಮನುಷ್ಯರೂ ಹಾಗೂ ಪಶುಗಳೂ ಜಗಚ್ಚೇಷ್ಟಕನಾದ ಪ್ರಯುಕ್ತ ಪ್ರಾಣಶಬ್ದವಾಚ್ಯನಾದ ಪರಮಾತ್ಮನನ್ನು ಪ್ರೇರಣೆಯಿಂದ ಚೇಷ್ಟೆ ಮಾಡುತ್ತಾರೆ. ಪ್ರಾಣಿಗಳ ಜೀವನಕ್ಕೆ ಕಾರಣನಾದ್ದರಿಂದ ಪರಮಾತ್ಮನು ಪ್ರಾಣನೆನಿಸುತ್ತಾನೆ. ಈ ರೀತಿಯಾಗಿ ಪರಮಾತ್ಮನಿಂದಲೇ ಎಲ್ಲ ಪ್ರಾಣಿಗಳಿಗೂ ಗಮನ ಜೀವನಗಳು ಹೇಳಲ್ಪಟ್ಟಿವೆ. ಭಾವಪ್ರಧಾನಾರ್ಥವನ್ನು ಇಟ್ಟುಕೊಂಡರೆ ಸತ್ ಧಾತುವಿಗೆ ಸತ್ತ್ವ (ಗತಿ ಅಥವಾ ಜೀವನ) ಎಂದು ಅರ್ಥವಾಗುತ್ತದೆ. ಗತಿಯನ್ನೂ ಜೀವನವನ್ನೂ ಹೊಂದಿಸಿಕೊಡುವುದರಿಂದ ಪರಮಾತ್ಮನು ಸತ್ಯ ಎನಿಸುವನು. ಪ್ರಾಣಶಬ್ದವೂ ಇದನ್ನೇ ಹೇಳುವುದರಿಂದ, ಪ್ರಾಣಮಯ ಪ್ರಕರಣವೂ ಸತ್ಯಶಬ್ದಕ್ಕೆ ವ್ಯಾಖ್ಯಾನವೇ ಆದಂತಾಯಿತು.

'ಮನು ಅವಬೋಧನೇ' ಎಂಬುದಾಗಿ ವ್ಯಾಖ್ಯಾತವಾಗಿರುವ ಮನು ಧಾತುವು ಜ್ಞಾನಾರ್ಥದಲ್ಲಿ ಪ್ರಸಕ್ತವಾಗುವುದರಿಂದ, ಮನೋಮಯ ಪ್ರಕರಣದಿಂದ ಜ್ಞಾನಶಬ್ದವು ವ್ಯಾಖ್ಯಾತವಾದಂತಾಯಿತು. ವಿಜ್ಞಾನಮಯ ಪ್ರಕರಣವೂ ಜ್ಞಾನಶಬ್ದಕ್ಕೆ ವ್ಯಾಖ್ಯಾನ ಎಂಬುದು ಸ್ಪಷ್ಟವೇ ಆಗಿದೆ.

ಆನಂದಮಯ ಪ್ರಕರಣದಿಂದ ಅನಂತತ್ವವು ವ್ಯಾಖ್ಯಾತವಾಗುವುದು ಎಂದು ಹೇಳುತ್ತಾರೆ –

ನಾಲ್ಪೇ ಸುಖಮಿತಿ ಪ್ರೋಕ್ತೈವಾನಂದಮಯತೋಕ್ತಿತಃ ॥೧೯೬॥
ಅನಂತತ್ವಂ ಸುನಿರ್ಣೀತಂ ಪೂರ್ಣಾನಂದೋ ಹಿ ನಾಲ್ಪಕೇ ।

ಅತೋ ಹಿ ಮಂತ್ರವರ್ಣೋಕ್ತ ವಿಸ್ತೃತಿಸ್ತು ಸಮಸ್ತಯಾ ॥೧೯೭॥

ಕ್ರಿಯತೇ ಪರಯಾ ಯಸ್ಮಾತ್ .....।

ಪರಮೇಶ್ವರನು ಅನಂತನು ಪೂರ್ಣಾನಂದನಾಗಿರುವುದರಿಂದ ಎನ್ನುವ ವಚನದಿಂದ ಆನಂದಮಯನಿಗೆ ಅನಂತತ್ವವು ಚೆನ್ನಾಗಿ ನಿರ್ಣಯಿಸಲ್ಪಟ್ಟಿದೆ. ಅಲ್ಪನಲ್ಲಿ ಅಂದರೆ ಅಂತವುಳ್ಳವನಲ್ಲಿ ಸುಖವೇ ಇರುವುದಿಲ್ಲ ಎನ್ನುವ ಶ್ರುತಿವಚನದಿಂದ ಅಲ್ಪನಲ್ಲಿ ಪೂರ್ಣಾನಂದವಿಲ್ಲವೆಂದು ನಿರ್ಣೀತವಾಗುವುದು. ವ್ಯತಿರೇಕವ್ಯಾಪ್ತಿಯಿಂದ ಅನಂತನಲ್ಲಿ ಪೂರ್ಣಾನಂದವಿರುವುದು ಎಂಬುದಾಗಿ ನಿರ್ಣಯ ಮಾಡಬಹುದು. ಮಂತ್ರವರ್ಣದಲ್ಲಿ ಹೇಳಲ್ಪಟ್ಟಿರುವ ಸತ್ಯಂ ಜ್ಞಾನಮನಂತಂ ಬ್ರಹ್ಮ ಎನ್ನುವುದರ ವಿಸ್ತಾರವೇ ಮಂತ್ರವರ್ಣಕ್ಕಿಂತ ಮೇಲಿನದಾದ ಶ್ರುತಿಯಿಂದ ಮಾಡಲ್ಪಡುವ ಕಾರಣ ಅನ್ನಮಯಾದಿ ಶಬ್ದಗಳಿಂದ ವಿಷ್ಣುವೇ ವಾಚ್ಯನಾಗಿದ್ದಾನೆ ಎಂದು ಸಿದ್ಧವಾಗುವುದು.

ಹೀಗೆ 'ಆನಂದಮಯೋಽಭ್ಯಾಸಾತ್' ಇತ್ಯಾದಿ ಸೂತ್ರಗಳಿಂದ ತಮ್ಮ ಪಕ್ಷವನ್ನು ಸಾಧಿಸಿ, ಈಗ ಮುಂದಿನ ಸೂತ್ರದಿಂದ ಪರಪಕ್ಷವನ್ನು ತಿರಸ್ಕರಿಸುತ್ತಾರೆ -

ಸೂತ್ರ: ಓಂ ನೇತರೋಽನುಪಪತ್ತೇಃ ಓಂ (೧-೧-೧೬)

'ಬ್ರಹ್ಮವಿದಾಪ್ನೋತಿ ಪರಂ' ಎಂದು ಹೇಳಿದ ಮುಕ್ತಿಯನ್ನು ಹೊಂದಿಸಿಕೊಡುವ ಜ್ಞಾನವಿಷಯತ್ವವು ವಿಷ್ಣುವಿನಿಂದ ಅನ್ಯರಲ್ಲಿ ಕೂಡುವುದಿಲ್ಲವಾದ್ದರಿಂದ ಅನ್ನಮಯಾದಿ ಶಬ್ದವಾಚ್ಯನು ಪರಬ್ರಹ್ಮನೇ ಎಂಬುದು ಸೂತ್ರಾರ್ಥ.

ಅನ್ನಮಯಾದಿ ಪ್ರತಿಪಾದ್ಯರು ಜೀವಾದಿಗಳಲ್ಲ

.....ಇತರೋಽತ್ರ ನ ಕಥ್ಯತೇ ।

ಇತರರು ಅಂದರೆ ಜೀವರಾಗಲೀ, ಶರೀರಾದಿ ಕೋಶಗಳಾಗಲೀ, ಪ್ರಕೃತಿಯಾಗಲೀ ಈ ಅನ್ನಮಯಾದಿ ಪ್ರಕರಣದಲ್ಲಿ ಹೇಳಲ್ಪಡುವುದಿಲ್ಲ. ಏಕೆಂದರೆ -

ಪುರುಷಂ ವೇತ್ತಿ ಯೋ ಮುಚ್ಯೇನ್ನಾನ್ಯಃ ಪಂಥಾ ಹಿ ವಿದ್ಯತೇ ॥೧೯೮॥

ಇತಿ ಶ್ರುತೇರನ್ಯವೇದೀ ಕಥಂ ಮುಕ್ತಿಂ ಪ್ರಯಾಸ್ಯತಿ ।

ಯಾವನು ಗುಣಪೂರ್ಣನಾದ ಪುರುಷನನ್ನು ತಿಳಿಯುತ್ತಾನೋ ಅವನು ಮುಕ್ತನಾಗುವನು. ಇದಕ್ಕಿಂತ ಬೇರೆಯಾದ ಮೋಕ್ಷಪ್ರಾಪಕ ಮಾರ್ಗವು ಇರುವುದಿಲ್ಲ. ಈ ರೀತಿಯಾಗಿ ಶ್ರುತಿಗಳಲ್ಲಿ ಉಕ್ತವಾಗಿರುವುದರಿಂದ, ಪರಮಾತ್ಮನನ್ನು ಬಿಟ್ಟು ಉಳಿದವರನ್ನು ತಿಳಿದವನು ಹೇಗೆ ತಾನೇ ಮೋಕ್ಷವನ್ನು ಹೊಂದುವನು. 'ತಮೇವ ವಿದ್ವಾನಮೃತ ಇಹ ಭವತಿ। ನಾನ್ಯಃ ಪಂಥಾ ಅಯನಾಯ ವಿದ್ಯತೇ॥' ಎಂಬ ಶ್ರುತಿಯು ಇಲ್ಲಿ ಸೂಚಿತವಾಗಿದೆ.

ಹಾಗಾದರೆ ಪುರುಷನ ಜ್ಞಾನದಿಂದಲೇ ಮೋಕ್ಷವಾಗಲಿ. ಪುರುಷ ಶಬ್ದವಾಚ್ಯನುಮತ್ತೊಬ್ಬನಿರಲು ಸಾಧ್ಯ. ಅಂದಮೇಲೆ ಇತರರ ಜ್ಞಾನದಿಂದ ಮೋಕ್ಷವಾಗುವುದಿಲ್ಲ ಎಂದು ಹೇಳಿದ್ದು ಸರಿಯಲ್ಲ ಎಂದು ಆಕ್ಷೇಪಿಸಿದರೆ -

ವಿಷ್ಣುವೇ ಪುರುಷ ಶಬ್ದವಾಚ್ಯನು

ಪುರುಷಃ ಪರ ಆತ್ಮಾಽಜೋ ಬ್ರಹ್ಮ ನಾರಾಯಣಃ ಪ್ರಭುಃ ॥೧೯೯॥
ಮಹಾನಾನಂದ ಉದ್ವಿಷ್ಣುರ್ಭರ್ಗ ಓಮ ಇತೀರ್ಯತೇ ।
ಸ್ವಯಂ ನಾರಾಯಣೋ ದೇವೋ ನಾನ್ಯಸ್ಯೈತಾನಿ ಕಸ್ಯಚಿತ್ ॥೨೦೦॥
ತಸ್ಮಾದೊಮಿತ್ಯುದಾಹೃತ್ಯ ಯಜ್ಞದಾನಾದಿ ಕುರ್ವತೇ ।

ಪುರುಷ, ಪರ, ಆತ್ಮಾ, ಅಜ, ಬ್ರಹ್ಮ, ನಾರಾಯಣ, ಪ್ರಭು, ಮಹಾನ್, ಆನಂದ, ಉತ್, ವಿಷ್ಣು, ಭರ್ಗ, ಓಂ, ಅಃ ಇತ್ಯಾದಿ ಶಬ್ದಗಳಿಂದ ಕ್ರೀಡಾವಿಶಿಷ್ಟನಾದ ನಾರಾಯಣನೇ ಮುಖ್ಯವೃತ್ತಿಯಿಂದ ಕರೆಸಲ್ಪಡುವನು. ಬೇರೆ ಯಾರಿಗೂ ಎಲ್ಲಿಯೂ ಈ ನಾಮಗಳು ಇರುವುದಿಲ್ಲ. ಓಂಕಾರವು ವಿಷ್ಣುವಿನ ನಾಮವಾಗಿರುವುದರಿಂದಲೇ, ವಿಷ್ಣುವನ್ನು ಉದ್ದೇಶಿಸಿಕೊಂಡು ಯಜ್ಞದಾನಾದಿಗಳನ್ನು ಮಾಡುವವರು ಓಂ ಎಂದು ಉಚ್ಚರಿಸಿಯೇ ಮಂತ್ರಗಳನ್ನು ಹೇಳುತ್ತಾರೆ. ಯಾರಿಗೋ ಸಂಬಂಧಿಸಿದ ನಾಮವನ್ನು ಹೇಳಿ ಇನ್ಯಾರನ್ನೋ ಉದ್ದೇಶಿಸಿ ಯಜ್ಞಾದಿಗಳನ್ನು ಮಾಡುತ್ತಾರೆ ಎನ್ನುವುದು ಕೂಡುವುದಿಲ್ಲವಷ್ಟೆ.

ಯುಕ್ತಿಯಿಂದಲೂ ಪುರುಷಶಬ್ದವು ವಿಷ್ಣುಪರ ಎಂದು ತೋರಿಸುತ್ತಾರೆ -

ಸೂಕ್ತೇನ ಪೌರುಷೇಣೈನಂ ಯಜಂತ್ಯಧ್ಯಾತ್ಮಕೋವಿದಾಃ ॥೨೦೧॥
ಇತಿ ಪೈಂಗಿಶ್ರುತಿಸ್ತೇನ ನಾನ್ಯಜ್ಞಾನಾದ್ವಿಮುಚ್ಯತೇ ।

ಪರಬ್ರಹ್ಮನ ಬಗ್ಗೆ ಸರಿಯಾದ ಅರಿವುಳ್ಳ ಅಧ್ಯಾತ್ಮಕೋವಿದರು ಈ ನಾರಾಯಣನನ್ನು ಕುರಿತು ಪುರುಷಸೂಕ್ತದಿಂದಲೇ ಯಜ್ಞವನ್ನು ಮಾಡುತ್ತಾರೆ. ಹೀಗೆ ಪೈಂಗಿಶ್ರುತಿಯು ಪುರುಷಶಬ್ದಕ್ಕೆ ಪರಮಾತ್ಮನಿಗೊಬ್ಬನಿಗೇ ವಾಚ್ಯತ್ವವನ್ನು ಹೇಳಿರುವುದರಿಂದ 'ತಮೇವ ವಿದ್ವಾನ್' ಎನ್ನುವುದು ವಿಷ್ಣುಪರವೇ ಎಂದು ನಿಶ್ಚಯವಾಗುವುದು.

ವಿಷ್ಣುವನ್ನು ಬಿಟ್ಟು ಇತರರನ್ನು ತೆಗೆದುಕೊಂಡರೆ ಅನುಪಪತ್ತಿಯು ಇರುವಂತೆ ವಿಷ್ಣುವನ್ನು ತೆಗೆದುಕೊಂಡರೂ ಅನುಪಪತ್ತಿಯು ಬಂದೇ ಬರುವುದು. 'ಓಷಧೀಭ್ಯೋನ್ನಂ ಅನ್ನಾತ್ಪುರುಷಃ' ಎಂದು ಪುರುಷನಿಗೆ ವಿಕಾರತ್ವವನ್ನು ಹೇಳಿ, 'ಸ ಏವ ಪುರುಷೋನ್ನರಸಮಯಃ' ಅವನೇ ಅನ್ನರಸಮಯನೆಂದು ಹೇಳಿರುವುದರಿಂದ , ಅನ್ನರಸಮಯತ್ವವು ವಿಷ್ಣುವಿನಲ್ಲಿ ಕೂಡುವುದಿಲ್ಲ. ಪ್ರಾಣಮಯಾದಿಗಳು ವಿಕಾರಪ್ರವಾಹದ ನಡುವೆಯೇ ಉಕ್ತವಾಗಿರುವುದರಿಂದ ಅವು ವಿಷ್ಣುವಿನಲ್ಲಿ ಕೂಡುವುದಿಲ್ಲ ಎಂದು ಹೇಳಿದರೆ-

ಬ್ರಹ್ಮಶಬ್ದೋದಿತೇ ತಸ್ಮಿನ್ನಾತ್ಮಶಬ್ದಂ ಪ್ರಯುಜ್ಯ ಚ ॥೨೦೩॥
ತಸ್ಮಾದಾಕಾಶಸೃಷ್ಟಿಂ ಚ ಪ್ರೋವಾಚಾತ್ರ ಚತುರ್ವಿಧಾಂ ।

'ಬ್ರಹ್ಮವಿದಾಪ್ನೋತಿ ಪರಂ' ಇತ್ಯಾದಿಯಾಗಿ ಬ್ರಹ್ಮ ಶಬ್ದದಿಂದ ಉಕ್ತನಾದ ವಿಷ್ಣುವಿನಲ್ಲಿಯೇ 'ತಸ್ಮಾದ್ವಾ ಏತಸ್ಮಾದಾತ್ಮನಃ ಆಕಾಶಃ ಸಂಭೂತಃ' ಎಂದು ಆತ್ಮ ಶಬ್ದವನ್ನು ಪ್ರಯೋಗಿಸಿ, ಆ ಪರಮಾತ್ಮನಿಂದ ನಾಲ್ಕು ವಿಧವಾದ ಆಕಾಶ ಸೃಷ್ಟಿಯನ್ನೂ ಕೂಡ ಈ ಅನುವಾಕದಲ್ಲಿ ಹೇಳಿದರು.

ವಿಷ್ಣುವೇ ಚತುರ್ವಿಧ ಆಕಾಶಾದಿ ಶಬ್ದವಾಚ್ಯನು

ಭೂತಂ ಭೂತಾಭಿಮಾನೀ ಚ ತದ್ದೇಹೋಂತರ್ನಿಯಾಮಕಃ ॥೨೦೪॥
ಹರಿಶ್ಚಾಕಾಶಶಬ್ದೋಕ್ತೋ ಮುಖ್ಯತೋ ಹರಿರೇವ ಚ ।
ಆಸಮಂತಾತ್ಕಾಶತೇ ಯದಾಕಾಶೋ ಮುಖ್ಯತೋ ಹರಿಃ ॥೨೦೪॥

ಆಕಾಶ ಶಬ್ದದಿಂದ ಭೂತಾಕಾಶವೂ, ಭೂತಾಕಾಶದ ಅಭಿಮಾನಿ ಗಣಪತಿಯೂ, ಆಕಾಶಾಭಿಮಾನಿಯ ಶರೀರವೂ ಹಾಗೂ ಇವುಗಳಲ್ಲಿ ಅಂತರ್ನಿಯಾಮಕಾಗಿ ನೆಲೆಸಿರುವ ಶ್ರೀಹರಿಯೂ ಕೂಡ ಆಕಾಶ ಎನ್ನುವ ಶಬ್ದದಿಂದ ಹೇಳಲ್ಪಡುತ್ತಾನೆ. ಮುಖ್ಯವಾಗಿ ಶ್ರೀಹರಿಯೇ ಆಕಾಶ ಶಬ್ದದಿಂದ

ಪ್ರತಿಪಾದ್ಯನು. ಸುತ್ತಮುತ್ತಲೂ ಚೆನ್ನಾಗಿ ಪ್ರಕಾಶಿಸುತ್ತಾನೆ ಎನ್ನುವ ಕಾರಣದಿಂದ ಶ್ರೀಹರಿಯೇ ಮುಖ್ಯವೃತ್ತಿಯಿಂದ ಆಕಾಶ ಶಬ್ದವಾಚ್ಯನು.

ಹೀಗೆ ಮುಖ್ಯಾಮುಖ್ಯಭೇದದಿಂದ ನಾಲ್ಕು ವಿಧವಾದ ಆಕಾಶದ ದೆಶೆಯಿಂದ 'ಆಕಾಶಾದ್ವಾಯುಃ' ಎಂದು ನಾಲ್ಕು ವಿಧವಾದ ವಾಯುವಿಗೆ ಉತ್ಪತ್ತಿಯನ್ನು ಹೇಳಿದರು. ಇದೇ ರೀತಿ ಕಾರ್ಯ-ಕಾರಣ ಸಂಬಂಧವುಳ್ಳ ಅಗ್ನಿ, ಜಲ, ಪೃಥಿವೀ, ವನಸ್ಪತಿಗಳು ಹಾಗೂ ಅನ್ನಗಳಲ್ಲಿಯೂ ಮುಖ್ಯ ಹಾಗೂ ಅಮುಖ್ಯಭೇದದಿಂದ ನಾಲ್ಕು ವಿಧವೆಂದು ಹೇಳಿ, ಇವೆಲ್ಲ ಶಬ್ದಗಳಿಂದಲೂ ಮುಖ್ಯವಾಗಿ ಶ್ರೀಹರಿಯೇ ವಾಚ್ಯನೆಂದು ಹೇಳುತ್ತಾರೆ -

ಬಲಜ್ಞಾನಸ್ವರೂಪತ್ವಾದ್ವಾಯುರಗ್ನಿರಗಂ ನಯನ್ ।
ಆಪ ಆಪಾಲನಾಚ್ಚೈವ ಪೃಥಿವೀ ಪ್ರಥಿತೋ ಯತಃ ॥೨೦೫॥
ಉಷ್ಣಾನಾಮಾಶ್ರಯತ್ವೇನ ಸ ಏವೌಷಧಿನಾಮಕಃ ।
ಓಷಧೀಷು ಸ್ಥಿತೋ ವಿಷ್ಣುಃ ಕ್ಷುಧಿತೈರಾಶ್ರಿತೋ ಭವೇತ್ ॥೨೦೬॥
ಪುರಿ ಶೇತೇ ಯತಃ ಸೋಽಥ ಪುರುಷಶ್ಚೇತಿ ಗೀಯತೇ ।

ಬಲಜ್ಞಾನಸ್ವರೂಪನಾದ್ದರಿಂದ ಶ್ರೀಹರಿಯು ಮುಖ್ಯವಾಗಿ ವಾಯು ಶಬ್ದವಾಚ್ಯನು. (ವ ಶಬ್ದ ಬಲವಾಚಕ. ಆಯ ದಾತುವಿಗೆ ಗತಿ ಎಂದರ್ಥ. ಗತಿ ಶಬ್ದವು ಜ್ಞಾನವಾಚಕವಾದ್ದರಿಂದ ಆಯು ಎಂದರೆ ಜ್ಞಾನವೆಂದಾಗುವುದು) ನ ಗಚ್ಛತಿ ಎಂಬ ವ್ಯುತ್ಪತ್ತಿಯಿಂದ ಸ್ವತಃ ಪ್ರವರ್ತಿಸಲು ಅಶಕ್ಯವಾದ ಜಗತ್ತು ಅಗ ಎಂದು ಹೇಳಲ್ಪಡುವುದು. ಇಂಥಹ ಜಗತ್ತನ್ನು ಪ್ರವರ್ತಿಸುವುದರಿಂದ ಮುಖ್ಯವಾಗಿ ಅಗ್ನಿ ಶಬ್ದವಾಚ್ಯನು. ಎಲ್ಲವನ್ನೂ ಚೆನ್ನಾಗಿ ರಕ್ಷಿಸುವುದರಿಂದ ಮುಖ್ಯವಾಗಿ ಶ್ರೀಹರಿಯೇ ಆಪಃ ಶಬ್ದವಾಚ್ಯನು. ವಿಸ್ತೃತನಾಗಿರುವ ಪ್ರಯುಕ್ತ (ಪೃಥು ವಿಸ್ತಾರೇ) ಮುಖ್ಯವಾಗಿ ಪೃಥಿವೀ ಶಬ್ದ ವಾಚ್ಯನು ಶ್ರೀಹರಿಯೇ. ಸಂಸಾರದಲ್ಲಿ ಸುಡಲ್ಪಟ್ಟವರಿಗೆ ಮುಖಾಶ್ರಯನಾಗಿರುವುದರಿಂದ ಮುಖ್ಯವಾಗಿ ಓಷಧಿನಾಮಕನು ಶ್ರೀಹರಿಯೇ. ಓಷಧಿನಾಮಕನಾಗಿ ವನಸ್ಪತಿಗಳಲ್ಲಿರುವ ವಿಷ್ಣುವು ಜಾಠರಾಗ್ನಿಯಿಂದ ಸುಡಲ್ಪಟ್ಟವರಿಂದ, ಹಸಿವೆಯಿಂದ ಬಾಧಿತರಾದ ಜನರಿಂದ, ಆಶ್ರಯಿಸಲ್ಪಡುವನು. ಎಲ್ಲರ ಶರೀರಗಳಲ್ಲಿ ನಿಯಾಮಕನಾದ ಪ್ರಯುಕ್ತ ಶ್ರೀಹರಿಯು ಮುಖ್ಯವಾಗಿ ಪುರುಷನೆಂದು ಗಾನಮಾಡಲ್ಪಡುವನು.

ಈ ರೀತಿಯಾಗಿ ಆತ್ಮಾದಿ ಶಬ್ದಗಳಿಗೆ ವ್ಯಾಖ್ಯಾನಮಾಡಿ ಅವುಗಳ ಸೃಷ್ಟಿಯನ್ನು ವಿವರಿಸುತ್ತಾರೆ -

ಜನಿಸ್ವರೂಪ ನಿರೂಪಣೆ

ಕ್ರಿಯಾಪ್ರವರ್ತಕತ್ವೇನ ಪ್ರಾದುರ್ಭಾವೋ ಹರೇರ್ಜನಿಃ ॥೨೦೭॥

ಆಕಾಶಾದಿಷು ನಾನ್ಯಾಸ್ತಿ ಹ್ಯಭಿಮಾನೋಭಿಮಾನಿನಃ ।

ಅಭಿಮಾನಿ ಶರೀರಸ್ಯ ಸಾಕ್ಷಾದ್ಭೂತಸ್ಯ ಚೋದ್ಭವಃ ॥೨೦೮॥

ಆಕಾಶಾದಿಗಳಲ್ಲಿ ಆಯಾ ಕ್ರಿಯೆಗಳನ್ನು ಪ್ರವರ್ತಿಸುವ ನಿಮಿತ್ತದಿಂದ ಅಭಿವ್ಯಕ್ತಿ ವಿಶೇಷವೇ ಶ್ರೀಹರಿಗೆ ಉತ್ಪತ್ತಿ ಎನಿಸುವುದು. ಬೇರೆ ವಿಧವಾದ ಉತ್ಪತ್ತಿಯು ಅವನಿಗಿಲ್ಲ. ಇದು ಶ್ರುತಿಪ್ರಸಿದ್ಧ. ಭೂತಾದಿ ಅಭಿಮಾನಿಗೆ ನನ್ನದು ಎಂಬ ಅಭಿಮಾನ ಬುದ್ಧಿಯೇ ಉತ್ಪತ್ತಿಯು. ಅಭಿಮಾನಿ ಶರೀರಕ್ಕೆ ಹಾಗೂ ಪಂಚಭೂತಗಳಿಗೆ ಸಾಕ್ಷಾತ್ ಉತ್ಪತ್ತಿಯೇ ಜನಿ ಎನಿಸುವುದು.

ಈ ಪ್ರಕಾರವಾಗಿ ಆತ್ಮ, ಆಕಾಶ ಮೊದಲಾದ ಶಬ್ದಗಳಿಂದ ಮುಖ್ಯವಾಗಿ ಶ್ರೀಹರಿಯೇ ಹೇಳಲ್ಪಟ್ಟಿದ್ದಾನೆ. ಪರಮಾತ್ಮನಿಂದ ಬೇರೆಯಾದ ಭೂತಾದಿಗಳು ಅಮುಖ್ಯ ವೃತ್ತಿಯಿಂದ ವಾಚ್ಯವಾಗಿವೆ. ಇದರಿಂದ ಏನು ತಿಳಿಸಿದಂತಾಯಿತು ಎಂದು ಕೇಳಿದರೆ -

'ಸ ವಾ ಏಷ' ಶ್ರುತ್ಯರ್ಥ

ಏವಂ ದೇಹಾದಿಪರ್ಯಂತಮಾಗತಂ ಹರಿಮೇವ ತು ।

ಪರಾಮೃಶತಿ ತಸ್ಯೈವ ಪಂಚರೂಪತ್ವವಿತ್ತಯೇ ॥೨೦೯॥

ತ್ಯಕ್ತ್ವಾ ಭೂತಾದಿಕಂ ಸರ್ವಂ ಸ ವಾ ಏಷ ಇತಿ ಶ್ರುತಿಃ ।

'ಸ ವಾ ಏಷ ಪುರುಷಃ' ಎನ್ನುವ ಶ್ರುತಿಯು ಅಲ್ಲಿ ಹೇಳಲ್ಪಟ್ಟಿರುವ ಭೂತಾದಿ ಎಲ್ಲವನ್ನೂ ಬಿಟ್ಟು, ಆತ್ಮಾದಿ ದೇಹಪರ್ಯಂತವಾಗಿ ಹೇಳಲ್ಪಟ್ಟ ಆಯಾಯ ಶಬ್ದಗಳಿಂದ ಮುಖ್ಯವಾಗಿ ಪರಮಾತ್ಮನ ಬಗ್ಗೆಯೇ ವಿಚಾರ ಮಾಡುತ್ತದೆ. ಸೃಷ್ಟಿಕರ್ತನಾದ ಆ ಶ್ರೀಹರಿಯಲ್ಲಿಯೇ ಅನ್ನಮಯಾದಿ ಪಂಚರೂಪತ್ವವನ್ನು ಪ್ರತಿಪಾದಿಸಲು ಹೀಗೆ ಪರಾಮರ್ಶೆ ಮಾಡುತ್ತದೆ.

ಹಾಗಾದರೆ ಪರಮಾತ್ಮನ ಬಗ್ಗೆಯೇ ಶ್ರುತಿಯು ಹೇಳುತ್ತದೆ ಎಂಬುದಾಗಿ ಹೀಗೆ ಬಹು ಪ್ರಯತ್ನದಿಂದ ಏಕೆ ಸಾಧಿಸಬೇಕು. ಶ್ರುತಿಯಲ್ಲಿ ಕೇವಲ

ಶರೀರವನ್ನೇ ಪರಾಮರ್ಶೆ ಮಾಡಲಾಗಿದೆ ಎಂದು ಏಕೆ ಭಾವಿಸಬಾರದು ಎನ್ನುವುದು ಸರಿಯಲ್ಲ. ಹಾಗೆ ಇಟ್ಟುಕೊಂಡರೆ 'ಏಷಃ ಪುರುಷಃ' ಎಂಬುದಷ್ಟೇ ಸಾಕಾಗುವುದು, ಸಃ ಎಂಬುದು ವ್ಯರ್ಥವಾಗಬೇಕಾಗುವುದು. ಆದ್ದರಿಂದ ನಮ್ಮ ರೀತಿಯಲ್ಲಿಯೇ ಶ್ರುತಿಯು ಪರಾಮರ್ಶೆ ಮಾಡಿದೆಯೆಂದು ಹೇಳುತ್ತಾರೆ –

ಸ ಇತ್ಯಾತ್ಮಪದೋದ್ದಿಷ್ಟಃ ಏಷ ಜೀವ ಶರೀರಗಃ ॥೨೧೦॥

ಸಾರಾನ್ನಮಯ ಏವಾಯಂ ನ ಲೋಕಾನ್ನಮಯಃ ಪ್ರಭುಃ ।

ಇತಿ ತಂ ರಸಶಬ್ದೇನ ವಿಶಿನಷ್ಟಿ ಶರೀರಗಂ ॥೨೧೧॥

ಮೇಲೆ ಉದಾಹರಿಸಿದ ಶ್ರುತಿಯಲ್ಲಿನ **ಸಃ** ಎನ್ನುವ ಪದದಿಂದ ಆತ್ಮ ಶಬ್ದದಿಂದ ಹೇಳಲ್ಪಟ್ಟವನು ಪರಾಮರ್ಶೆ ಮಾಡಲ್ಪಟ್ಟಿದ್ದಾನೆ. **ಏಷಃ** ಎನ್ನುವ ಪದದಿಂದ ಸರ್ವಜೀವರ ಶರೀರದಲ್ಲಿ ಅಂತರ್ಗತನಾಗಿ ನಿಯಾಮಕನಾಗಿರುವ ರೂಪವು ಪರಾಮರ್ಶೆ ಮಾಡಲ್ಪಡುತ್ತದೆ. ಸರ್ವಸಮರ್ಥನಾದ ಈ ಶ್ರೀಹರಿಯು ಶ್ರೇಷ್ಠವಾದ ಅನ್ನಮಯನೇ ಆಗಿರುವನು, ಲೌಕಿಕವಾದ ಅನ್ನಪ್ರಚುರನಲ್ಲ ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕಾಗಿ ಶ್ರುತಿಯು ಶರೀರದಲ್ಲಿ ಅಂತರ್ಗತನಾಗಿರುವ ಪರಮಾತ್ಮನನ್ನು **ರಸ** ಎನ್ನುವ ವಿಶೇಷಣದಿಂದ ಯುಕ್ತನನ್ನಾಗಿ ಹೇಳಿದೆ.

ಶರೀರಕ್ಕೆ ಪರಾಮರ್ಶೆಯೆಂದು ಇಟ್ಟುಕೊಂಡರೆ 'ತಸ್ಯೇದಮೇವ ಶಿರಃ। ಅಯಂ ದಕ್ಷಿಣಪಕ್ಷಃ।' ಇತ್ಯಾದಿ ಅವಯವಗಳ ಉಲ್ಲೇಖವು ಪ್ರತ್ಯಕ್ಷವೇ ಆಗಿರುವುದರಿಂದ ವ್ಯರ್ಥವೇ ಆಗುವುದು. ಈಶ್ವರನ ವಿಷಯವೆಂದು ಇಟ್ಟುಕೊಂಡರೆ, ಅವನಿಗೆ ಅವಯವಾದಿಗಳು ಇಲ್ಲವಾದ್ದರಿಂದ ಅನುಪಪತ್ತಿಯು ಬಂದೇ ಬರುವುದು. ಹೀಗೆ ಆಕ್ಷೇಪಿಸಿದರೆ –

'ತಸ್ಯೇದಮೇವ ಶಿರ' ಇತ್ಯಾದಿ ಶ್ರುತ್ಯರ್ಥ

ಇದಮಿತ್ಥೇವ ನಿರ್ದೇಶೋ ವಸ್ತ್ರಪ್ರಾವೃತವದ್ವಿಭೋಃ ।

ಶಿರ ಆದೇರ್ಭವೇಜ್ಜೀವ ಶಿರ ಆದೌ ವ್ಯವಸ್ಥಿತೇಃ ॥ ೨೧೨॥

ತಂ ವಿದಿತ್ವಾಽಸ್ಯ ಮುಕ್ತಿಃ ಸ್ಯಾನ್ನಾನ್ಯ ಜ್ಞಾನಾತ್ತಥಂಚನ ।

ಜೀವರುಗಳ ಶಿರಸ್ಸು ಮೊದಲಾದವುಗಳಲ್ಲಿ ಪರಮೇಶ್ವರನ ಶಿರಸ್ಸು ಮೊದಲಾದವುಗಳು ವಿಶೇಷ ರೀತಿಯಲ್ಲಿ ಅವಸ್ಥಿತಿ ಹೊಂದಿರುವ ಪ್ರಯುಕ್ತ

'ಇದಂ ಶಿರಂ' ಇತ್ಯಾದಿ ಶ್ರುತಿ ನಿರ್ದೇಶವು ಕೂಡುವುದು. ವಸ್ತ್ರದಿಂದ ಮುಚ್ಚಲ್ಪಟ್ಟ ಕಾಲು ಮೊದಲಾದವುಗಳನ್ನು ವಸ್ತ್ರವನ್ನು ತೊರಿಸಿ ಇದು ಕಾಲು ಇತ್ಯಾದಿ ಹೇಳುವುದು ಹೇಗೆ ಕೂಡುವುದೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. ಪರಮಾತ್ಮನನ್ನು ಈರೀತಿಯಾಗಿ ತಿಳಿದುಕೊಳ್ಳುವ ಜ್ಞಾನಿಗೆ ಮೋಕ್ಷವಾಗುವುದು. ಪರಮಾತ್ಮನ ಹೊರತು ಬೇರೆಯವರ ಜ್ಞಾನದಿಂದ ಯಾವ ರೀತಿಯಿಂದಲೂ ಮೋಕ್ಷವಾಗಲಾರದು.

ಅನ್ನದ ವಿಕಾರವಾಗಿರುವ ಶರೀರವನ್ನು ಹೊಂದಿರುವುದರಿಂದ ಜೀವನೇ ಅನ್ನಮಯಾದಿ ಶಬ್ದವಾಚ್ಯನು. ಶರೀರಕ್ಕೆ ಸಂಬಂಧಿಸಿದ ಶಿರಸ್ಸು ಮೊದಲಾದ ಅವಯವಗಳು ಉಕ್ತವಾಗಿರುವ ಪ್ರಯುಕ್ತ ಅನ್ನಮಯಾದಿ ವಾಚ್ಯತ್ವವು ಜೀವನಲ್ಲಿ ಕೂಡುವುದು. 'ಬ್ರಹ್ಮಪುಚ್ಛಂ ಪ್ರತಿಷ್ಠಾ' ಎಂದಿರುವುದರಿಂದ ಜೀವನಲ್ಲಿ ಕೂಡುವುದಿಲ್ಲ ಎನ್ನಬಾರದು. ಈ ಜೀವನಿಗೆ ಬ್ರಹ್ಮ ಪುಚ್ಛ ಎನ್ನುವುದು ಅಧಿಷ್ಠಾನ ಅಥವಾ ನಿಜಸ್ವರೂಪ ಎನ್ನುವ ಅರ್ಥದಲ್ಲಿ ಕೂಡುವುದು. ಆದ್ದರಿಂದ ಜೀವಾದಿಗಳು ಅನ್ನಮಯಾದಿ ಶಬ್ದವಾಚ್ಯರಲ್ಲ ಎಂದು ಹೇಳುವ ಹಿಂದಿನ ಸೂತ್ರವು ಅಯುಕ್ತವು. ಅನ್ನಮಯಾದಿ ಶಬ್ದವಾಚ್ಯತ್ವವು ಜೀವರಿಗೂ ಕೂಡುವುದು ಎಂದು ಆಶಂಕಿಸಿದರೆ ಅದನ್ನು ಮುಂದಿನ ಸೂತ್ರದಿಂದ ನಿರಾಕರಿಸುತ್ತಾರೆ.

ಸೂತ್ರ: ಓಂ ಭೇದವ್ಯಪದೇಶಾಚ್ಚ ಓಂ (೧-೧-೧೭)

ಆನಂದಮಯನ ದೆಶೆಯಿಂದ ಜೀವಾದಿಗಳಿಗೆ ಭೇದವನ್ನು ಹೇಳಿರುವ ಪ್ರಯುಕ್ತ ಆನಂದಮಯನು ವಿಷ್ಣುವ್ಯತಿರಿಕ್ತರಾದ ಜೀವಾದಿಗಳು ಆಗಲಾರರು.

ಜೀವಬ್ರಹ್ಮರ ಅಭೇದವು ಇಲ್ಲಿ ವಿವಕ್ಷಿತವಲ್ಲ

ಆದಿತ್ಯೇ ಪುರುಷೇ ಚಾಯಮಿತಿ ಭೇದೋಪದೇಶತಃ ॥೨೧೩॥

ನಾಸ್ಯಾಭೇದೋಸ್ತಿ ಜೀವೇನ .....।

ಆದಿತ್ಯನಲ್ಲಿಯೂ, ಪುರುಷನಲ್ಲಿಯೂ ಈ ಪರಬ್ರಹ್ಮನೇ ನಿಯಾಮಕನು ಎಂದು ಬೇದವನ್ನೇ ಹೇಳಿರುವುದರಿಂದ, ಈ ಪರಬ್ರಹ್ಮನಿಗೆ ಜೀವನೊಂದಿಗೆ ಐಕ್ಯವು ಕೂಡುವುದಿಲ್ಲ.

ಈ ಉಪನಿಷತ್ತಿನಲ್ಲಿ ಜೀವ ಪರಮಾತ್ಮರಿಗೆ ಭೇದವೇ ವಿವಕ್ಷಿತವಾಗಿದ್ದರೆ

ಆನಂದಮಯಾದಿಗಳು ಜೀವಪರ ಎಂದು ಹೇಳಬಹುದಿತ್ತು. ಆದರೆ ಹೀಗೆ ಹೇಳಿಲ್ಲ. 'ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ' ಎಂದು ಪುರುಷ, ಆದಿತ್ಯ ಶಬ್ದಗಳಿಂದ ಉಪಲಕ್ಷಿತರಾದ ಸಮಸ್ತ ಜೀವರೂ ನಿಯಮ್ಯರಾಗಿರುವುದರಿಂದ ಅಧಿಕರಣರೂ, ಉತ್ಕೃಷ್ಠನಾದ ಪರಮಾತ್ಮನು ನಿಯಾಮಕನಾದ್ದರಿಂದ ಅಧಿಷ್ಠಾತೃವೂ ಎಂಬುದಾಗಿ ಹೇಳಲ್ಪಟ್ಟಿದ್ದಾರೆ. ಅಲ್ಲದೇ 'ರಸ ಹ್ಯೇವಾಯಂ ಲಬ್ಧ್ವಾ ನಂದೀ ಭವತಿ' 'ಶ್ರೇಷ್ಠನಾದ ಇವನ್ನು ಹೊಂದಿಯೇ ಜೀವನು ಆನಂದವನ್ನು ಗಳಿಸುತ್ತಾನೆ' ಎಂದು ಈಶ-ಜೀವರಿಗೆ ಪ್ರಾಪ್ಯ-ಪ್ರಾಪಕತ್ವವು ಉಕ್ತವಾಗಿದೆ. ಇಲ್ಲಿ ಭೇದೋಪದೇಶವು ಸ್ಪಷ್ಟವೇ ಆಗಿರುವುದು.

ಅನುಮಾನದಿಂದ ಜೀವ ಬ್ರಹ್ಮರಿಗೆ ಅಭೇದವೇ ತಿಳಿದುಬರುವುದರಿಂದ ಭೇದವ್ಯಪದೇಶವು ಕೂಡುವುದಿಲ್ಲ, ಕೇವಲ ವ್ಯಾವಹಾರಿಕ ಭೇದವು ಕೂಡಬಹುದಷ್ಟೆ. ಅನುಮಾನದ ವಿರೋಧ ಬರುವುದರಿಂದ ವಾಸ್ತವವಾಗಿ ಅಭೇದವೇ ವಿವಕ್ಷಿತ ಎಂದರೆ ಮುಂದಿನ ಸೂತ್ರದಿಂದ ಈ ಆಕ್ಷೇಪವನ್ನು ನಿರಾಕರಿಸುತ್ತಾರೆ -

ಸೂತ್ರ: ಓಂ ಕಾಮಾಚ್ಚ ನಾನುಮಾನಾಪೇಕ್ಷಾ ಓಂ (೧-೧-೧೮)

ಅನಮಾನವು ವ್ಯಕ್ತಿಯ ಮನಸ್ಸಿಗೆ ತಕ್ಕಂತೆ ಪ್ರವೃತ್ತವಾಗುವುದರಿಂದ, ಅದೃಷ್ಠದ ವಿಷಯದಲ್ಲಿ ಕೇವಲ ಅನುಮಾನವು ಅಪೇಕ್ಷಿತವಲ್ಲ.

ಕಾಮಚಾರಿಯಾದ ಅನುಮಾನವು ಅಭೇದಸಾಧಕವಲ್ಲ

.....ನಾನುಮಾ ಕಾಮಚಾರಿಣೇ ।
ವಿಮತಾನಿ ಶರೀರಾಣಿ ಮದ್ಭೋಗಾಯತನಾನಿ ಯತ್ ॥೨೧೪॥
ಶರೀರಾಣೀತ್ಯಾದಿಕಾ ತು ತತ್ತ್ವಜ್ಞಾನೇ ಹ್ಯಪೇಕ್ಷ್ಯತೇ ।
ಪ್ರತ್ಯಕ್ಷಾದಿ ವಿರುದ್ಧತ್ವಾದಕ್ಷಾಗಮಭಯೋಜ್ಝಿತಾ ॥೨೧೫॥
ಅನುಮಾ ಕಾಮವೃತ್ತಾ ಹಿ ಕುತ್ರ ನಾವಸರಂ ವ್ರಜೇತ್ ।
ಜಡ ಆತ್ಮೈವ ವಸ್ತುತ್ವಾತ್ಪ್ರಮೇಯತ್ವಾಜ್ಜಡಂ ಚಿತಿಃ ॥೨೧೬॥
ಘನ ಆಕಾಶ ಇತ್ಯಾದ್ಯಾ ವಾರ್ಯಂತೇ ಕೇನ ಹೇತುನಾ ।

ಅನುಮಾನವು ಇಚ್ಛಾನುಸಾರಿಯಾದ್ದರಿಂದ ಅದೃಷ್ಟವಾದ ಪರಬ್ರಹ್ಮನಿಗೂ

ಜೀವನಿಗೂ ಅಭೇದವನ್ನು ಕೇವಲ ಅನುಮಾನದಿಂದ ನಿರ್ಣಯಿಸುವುದು ಶಕ್ಯವಿಲ್ಲ. ಇದಕ್ಕೆ ದೃಷ್ಟಾಂತವನ್ನು ಕೊಡುತ್ತಾರೆ. ವಿವಾದ ವಿಷಯಗಳಾದ ಚೈತ್ರಮೈತ್ರಾದಿ ಶರೀರಗಳು ನನ್ನ ಭೋಗಕ್ಕೆ ಆಶ್ರಯಗಳು ಅವು ನನ್ನ ಶರೀರದಂತೆ ಶರೀರಗಳಾಗಿರುವುದರಿಂದ. ಅದರಂತೆಯೇ ಚೈತ್ರಮೈತ್ರಾದಿಗಳ ಇಂದ್ರಿಯಗಳು ನನಗೇನೆ ಯಥಾರ್ಥಜ್ಞಾನಕ್ಕೆ ಕಾರಣವಾಗಿವೆ, ಅವು ನನ್ನ ಇಂದ್ರಿಯಗಳಂತೆಯೇ ಇಂದ್ರಿಯಗಳಾಗಿರುವುದರಿಂದ ಎಂಬತ್ಯಾದಿ ಅನುಮಾನ ಮಾಡುವುದು ಸಾಧ್ಯವಿದೆ. ಆದಕಾರಣ ಪ್ರತ್ಯಕ್ಷಾನುಭವಕ್ಕೆ ವಿರುದ್ಧವಾದ ಅನುಮಾನವು ಪ್ರಮಾಣವಾಗಲಾರದು. ಪುರುಷನ ಇಚ್ಛಾನುಸಾರವಾದ ಪ್ರವೃತ್ತಿಯುಳ್ಳ ಅನುಮಾನಕ್ಕೆ, ಪ್ರತ್ಯಕ್ಷ ಆಗಮಗಳಿಗೆ ವಿರೋಧವಾಗಿದ್ದರೂ, ಭಯವೇ ಇರುವುದಿಲ್ಲ. ಇಂಥಹ ಅನುಮಾನವು ಎಲ್ಲಿ ತಾನೇ ಅವಕಾಶವು ಇರಲು ಸಾಧ್ಯ? ಜೀವನು ವಸ್ತುವಾಗಿರುವುದರಿಂದ ಜ್ಞಾನಕ್ಕೆ ಆಶ್ರಯವಾಗದ ಜಡದಂತೆ ಅವನೂ ಜಡ, ಘಟ ಮೊದಲಾದ ವಸ್ತುಗಳು ಚೇತನಗಳು ಅವುಗಳಂತೆ ಪ್ರಮೇಯವಾಗಿರುವುದರಿಂದ, ಆಕಾಶ ನಿಬಡವಾಗಿದೆ ಕಲ್ಲಿನಂತೆ ಅದೂ ಒಂದು ಜಡವಸ್ತುವಾಗಿರುವುದರಿಂದ, ಇತ್ಯಾದಿ ಅನುಮಾನಗಳನ್ನು ಮಾಡುವುದು ಸಾಧ್ಯ. ಪ್ರತ್ಯಕ್ಷಾದಿಗಳಿಗೆ ವಿರುದ್ಧವಾದ ಅನುಮಾನವನ್ನು ಪ್ರಮಾಣವೆಂದು ಅಂಗೀಕರಿಸಿದರೆ, ಮೇಲೆ ಉದಾಹರಿಸಿರುವ ಅಪ್ರಾಮಾಣಿಕ ವಿಷಯಗಳನ್ನು ಪ್ರಮಾಣವೆಂದು ಒಪ್ಪಬೇಕಾಗುವುದು.

ಹಾಗಾದರೆ ಜಿಜ್ಞಾಸಾಧಿಕರಣ ಹಾಗೂ ಜನ್ಮಾದ್ಯಧಿಕರಣಗಳ ವ್ಯಾಖ್ಯಾನದ ಸಂದರ್ಭದಲ್ಲಿಯೇ ಜೀವೇಶಭೇದವು ಸಮರ್ಥಿಸಲ್ಪಟ್ಟಿರುವಾಗ, ಪುನಃ ಅದನ್ನೇ ಸಾಧಿಸುವುದು ಪುನರುಕ್ತಿಯಾಗುವುದು ಎಂದರೆ -

ನ ಜೀವಭೇದಸೂತ್ರಾಣಾಂ ಶಂಕ್ಯಾತ್ರ ಪುನರುಕ್ತತಾ ॥೨೧೭॥

ವಾಕ್ಯಾಂತರದ್ಯೋತಕತ್ವಾತ್ ಪೃಥಗಿತ್ಯತ್ರ ಪೂರ್ಣತಾ ।

ಶಾಸ್ತ್ರದಲ್ಲಿ ಆಯಾಯ ಪ್ರಕರಣಗಳಲ್ಲಿ ಕಂಡುಬರುವ ಐಕ್ಯಪರವೆಂದು ತೋರುವ ವಾಕ್ಯಗಳಿಗೆ ಅವುಗಳಲ್ಲಿಯೇ ಅಡಗಿರುವ ಭೇದಸಾಧಕವಾದ ವಾಕ್ಯಾಂತರವನ್ನು ತೋರಿಸಿಕೊಡುವುದರಿಂದ ಸೂತ್ರಗಳಿಗೆ ಭೇದಪರತ್ವವನ್ನು ಸಮರ್ಥನೆ ಮಾಡಲಾಗುತ್ತದೆ. ಹೀಗೆ ತಾತ್ಪರ್ಯಭೇದದ ದೆಶೆಯಿಂದ ಶಾಸ್ತ್ರಕ್ಕೆ

ಪುನರುಕ್ತಿ ದೋಷವು ಬರುವುದಿಲ್ಲ. ಶಾಸ್ತ್ರಕಾರರು ಜಿಜ್ಞಾಸಾ ವಾಕ್ಯಗಳಲ್ಲಿರುವ ಅಭೇದಶಂಕೆಯನ್ನು ಅಲ್ಲಿ ಉಕ್ತವಾಗಿರುವ ಬ್ರಹ್ಮಶಬ್ದದಿಂದಲೇ ನಿರಾಕರಿಸಿ ಭೇದಸಮರ್ಥನೆಯನ್ನು ಮಾಡಿದ್ದಾರೆ. ಸೂತ್ರಕಾರರು 'ಪೃಥಗುಪದೇಶಾತ್' ಎನ್ನುವಲ್ಲಿ ಪ್ರಧಾನವಾಗಿ ಭೇದವನ್ನೇ ಪ್ರತ್ಯೇಕವಾಗಿ ಸಮರ್ಥನೆ ಮಾಡಿದ್ದಾರೆ.

ಶರೀರಾದಿ ಕೋಶಗಳು ಅನ್ನಮಯಾದಿ ಶಬ್ದವಾಚ್ಯಗಳು ಎನ್ನುವ ಪಕ್ಷವೂ ಕೂಡ 'ನೇತರೋನುಪಪತ್ತೇಃ' ಎಂಬುದಾಗಿ ಸಾಧಾರಣ ದೋಷದಿಂದ ದೂಷಿತವೇ ಆಗಿದ್ದರೂ, ಪುನಃ ವಿಶೇಷವಾದ ದೂಷಣೆಯನ್ನು ಹೇಳುತ್ತಾರೆ -

ಸೂತ್ರ: ಓಂ ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ ಓಂ (೧-೧-೧೯)

ಈ ಪ್ರಕರಣದಲ್ಲಿ ಬ್ರಹ್ಮನಿಂದ ಇತರನಾದ ಜೀವನಿಗೆ ಮುಕ್ತಿಯಲ್ಲಿಯೂ ಆನಂದಮಯಾದಿ ರೂಪನಾದ ಬ್ರಹ್ಮನೊಂದಿಗೆ ಕೂಡಿಕೊಂಡು ಭೋಗ ಸಂಬಂಧವನ್ನು ಶ್ರುತಿಯು ಶಾಸನ ಮಾಡುವುದರಿಂದ ಐಕ್ಯವು ಕೂಡುವುದಿಲ್ಲ. ಜೀವಬ್ರಹ್ಮರ ಭೇದವೇ ಇಲ್ಲಿ ಉಕ್ತವಾಗಿದೆ. ಆದಕಾರಣ ಆನಂದಮಯ ಶಬ್ದವಾಚ್ಯನು ಪರಬ್ರಹ್ಮನೇ ಹೊರತು ಜೀವನಲ್ಲ.

ಅನ್ನಮಯಾದಿಗಳಿಗೆ ಕೋಶಪರತ್ವ ನಿರಾಕರಣೆ

ಯೋಗಮನ್ನಮಯಾದ್ಯೈರ್ಯತ್ಫಲತ್ವೇನಾಸ್ಯ ಶಂಸತಿ ॥೨೧೪॥
ಸ್ಥಾನದ್ವಯೇಪ್ಯತಃ ಕೋಶಾ ಏತ ಇತ್ಯತಿಸಾಹಸಂ ।

'ಸ ಯ ಏವಂವಿತ್' ಎಂದು ಉಕ್ತನಾದ ಬ್ರಹ್ಮಜ್ಞಾನಿಗೆ ಫಲವಾಗಿ ಅನ್ನಮಯಾದಿ ಭಗವದ್ರೂಪಗಳ ಉಪಾಸನೆಯಿಂದ ಅನ್ನಮಯಾದಿಗಳ ಪ್ರಾಪ್ತಿಯನ್ನು ಎರಡು ಅನುವಾಕುಗಳಲ್ಲಿಯೂ 'ಏವಮನ್ನಮಯಮಾತ್ಮಾನ-ಮುಪಸಂಕ್ರಾಮತಿ। ಏತಮನ್ನಮಯಮಾತ್ಮಾನಮುಪಸಂಕ್ರಮ್ಯ।' ಇತ್ಯಾದಿಯಾಗಿ ಶ್ರುತಿಯು ಹೇಳುತ್ತದೆ. ಶರೀರಾದಿಗಳು ಶೋಕರೂಪವಾಗಿರುವುದರಿಂದ ಶರೀರದ ಕೋಶಗಳನ್ನೇ ಅನ್ನಮಯಾದಿಗಳೆಂದು ಪರಿಗಣಿಸಿದರೆ 'ತರತಿ ಶೋಕಮಾತ್ಮವಿತ್' ಇತ್ಯಾದಿ ಶ್ರುತಿಗಳಿಗೆ ವಿರೋಧ ಬರುವುದು. ಆದಪ್ರಯುಕ್ತ ಅನ್ನಮಯಾದಿ ಕೋಶಗಳೇ ಇಲ್ಲಿ ಹೇಳಲ್ಪಟ್ಟಿವೆ ಎನ್ನುವ, ಪೂರ್ವೋತ್ತರಗಳನ್ನು ಪರಾಮರ್ಶಿಸದೇ ಮಾಡಿರುವ, ಈ ವ್ಯಾಖ್ಯಾನವು ಅಸಂಗತವಾಗುವುದು.

ಉಪಸಂಕ್ರಮ ಶಬ್ದವು ಅತಿಕ್ರಮಾರ್ಥಕವಾಗಿರುವುದರಿಂದ ಅನ್ನಮಯಾದಿ ಪ್ರಾಪ್ತಿಯು ಇಲ್ಲಿ ಹೇಳಲ್ಪಟ್ಟಿಲ್ಲ ಎಂದರೆ –

ಉಪಸಂಕ್ರಮಣಂ ಚೈವ ದ್ವಿತೀಯೋದ್ದೇಶತಂ ಪ್ರತಿ ॥೨೧೯॥

ಅತಿಕ್ರಮಂ ವದಂತಂ ತಮುಪಶಬ್ದೋ ನಿವಾರಯೇತ್ ।

ದ್ವಿತೀಯಾ ವಿಭಕ್ತಿಯಿಂದ ಕರ್ಮವಾಗಿ ಹೇಳಲ್ಪಟ್ಟ ಅನ್ನಮಯಾದಿಗಳನ್ನು ಕುರಿತುಇಲ್ಲಿ ಉಪಸಂಕ್ರಮಣವು ಹೇಳಲ್ಪಟ್ಟಿದೆ. ಅದು ಅತಿಕ್ರಮಾರ್ಥಕವೆಂದು ಹೇಳುವವನನ್ನು ಉಪ ಶಬ್ದವು ನಿವಾರಿಸುವುದು. ಏಕೆಂದರೆ ಉಪಪೂರ್ವಕವಾದ ಕ್ರಮ್ ಧಾತುವು ಪ್ರಾಪ್ತ್ಯರ್ಥಕ್ಕೆ ಕಾರಣವಾಗಿದೆ.

ಅಶ್ರುತಸ್ಯಾತಿಶಬ್ದಸ್ಯ ಸ್ಥಾನಂ ದದ್ಯಾತ್ಕಥಂ ಪುನಃ ॥೨೨೦॥

ಶ್ರುತಾಶ್ರುತಪರಿತ್ಯಾಗಕಲ್ಪನೇ ವಿಗತಹ್ರಿಯಾಂ ।

ಮೃತಾವೇವ ಪರಿತ್ಯಾಗಃ ಕೃತೋ ಹ್ಯನ್ನಮಯಸ್ಯ ಚ ॥೨೨೧॥

ಇಲ್ಲಿ ಪುನಃ ಶಬ್ದವು ದೋಷಾಂತರ ಸೂಚಕ. ಈ ರೀತಿಯ ವ್ಯಾಖಾಯದಿಂದ ಶ್ರುತವಾದ ಉಪ ಶಬ್ದವನ್ನು ತ್ಯಜಿಸಿ ಅಶ್ರುತವಾದ ಅತಿ ಶಬ್ದಕ್ಕೆ ಸ್ಥಾನವನ್ನು ಕೊಟ್ಟಂತಾಗುವುದು. ಇದರಿಂದ ಶ್ರುತಪರಿತ್ಯಾಗ ಮತ್ತು ಅಶ್ರುತ ಕಲ್ಪನಾ. ಎನ್ನುವ ಎರಡು ರೀತಿಯ ದೋಷಗಳು ಬರಬೇಕಾಗುವುದು. ಇವೆರಡೂ ಲಜ್ಜೆಗೆ ಕಾರಣಗಳು. ಧಾತುಗಳಿಗೆ ಅನೇಕಾರ್ಥವಿರುವುದರಿಂದ ನಮ್ಮ ವ್ಯಾಖ್ಯಾನಕ್ಕೆ ದೋಷವಿಲ್ಲವೆಂದು ಪರರು ಹೇಳುವುದು ಸರಿಯಲ್ಲ. ಏಕೆಂದರೆ ಅನ್ನಮಯ ಮತ್ತು ಪ್ರಾಣಮಯ ಕೋಶಗಳ ಪರಿತ್ಯಾಗವು ಶರೀರ ಮರಣವನ್ನು ಹೊಂದಿದಾಗಲೇ ಮಾಡಲ್ಪಡುತ್ತವೆ.

ಹೀಗೆ ಅನ್ನಮಯಾದಿ ಪಂಚಕೋಶಗಳಿಂದಲೂ ಪರಬ್ರಹ್ಮನೇ ಪ್ರತಿಪಾದ್ಯ ಎಂಬ ಅರ್ಥದಲ್ಲಿ ಸೂತ್ರಗಳಿಗೆ ವ್ಯಾಖ್ಯಾನಮಾಡಿ, ಪುನಃ ಪರಮತದವರಿಂದ ಎದುರಾಗಬಹುದಾದ ಅಪವ್ಯಾಖ್ಯಾನವನ್ನು ತಿರಸ್ಕರಿಸುವುದಕ್ಕಾಗಿ ಶಿಷ್ಯರ ಹಿತದೃಷ್ಟಿಯಿಂದ ಸೂತ್ರದ ಅಭಿಪ್ರಾಯವನ್ನು ಸ್ಪಷ್ಟ ಪಡಿಸುತ್ತಾರೆ –

ಯೇಽನ್ನಂ ಬ್ರಹ್ಮೇತ್ಯಾದ್ಯುಪಾಸಾಂ ಸಾಮಾನಾಧಿಕರಣ್ಯತಃ ।

ಉಕ್ತಾ ಪಂಚಸ್ವರೂಪಾಣಾಂ ಪುನಸ್ತತ್ಪ್ರಾಪ್ತಿವಾದಿನೀ ॥೨೨೨॥

ಸ್ಥಾನದ್ವಯಗತಾ ವೇದವಾಣೀ ತದಪಲಾಪಿನಾಂ ।

ತಮಸೋಽನ್ಯತ್ರ ಸಂಸ್ಥಾನಂ ಕಥಮೇವ ಸಹೇತ ಸಾ ॥೨೨೩॥

ಅನ್ನಮಯಾದಿ ಪಂಚರೂಪಗಳಿಗೆ ಸಮಾನಾಧಿಕರಣವಿರುವ ಪ್ರಯುಕ್ತ 'ಯೇಽನ್ನಂ ಬ್ರಹ್ಮ' ಇತ್ಯಾದಿ ಏಕರೂಪವಾದ ಉಪಾಸನೆಯನ್ನು ಹೇಳಿ, ಪುನಃ ಜ್ಞಾನಫಲರೂಪವಾಗಿ ಅನ್ನಮಯಾದಿಗಳ ಪ್ರಾಪ್ತಿಯನ್ನು ಬ್ರಹ್ಮವಲ್ಲಿ ಹಾಗೂ ಭೃಗುವಲ್ಲಿ ಎಂಬ ಎರಡು ಅನುವಾಕಗಳೂ ಹೇಳುತ್ತವೆ. ಹೀಗೆ ಹೇಳತಕ್ಕ ವೇದವಾಣಿಯು ಅದನ್ನು ಅಪಲಾಪಮಾಡುವ ಮಾಯಾವಾದಿಗಳಿಗೆ ಅಂಧಂತಮಸ್ಸಿಗಿಂತ ಬೇರೆಯಾದ ಸ್ಥಾನಗಳ ಸಂಬಂಧವನ್ನು ಹೇಗೆ ತಾನೆ ಸಹಿಸೀತು. ಅಂದರೆ ಅನ್ನಮಯಾದಿಗಳು ಶರೀರದ ಕೋಶಗಳೇ ಹೊರತು ಬ್ರಹ್ಮನ ರೂಪಗಳಲ್ಲ ಎಂದು ಹೇಳುವವರಿಗೆ ಅಂಧತಮಸ್ಸಿನ ಪ್ರಾಪ್ತಿಯೇ ವೇದವಾಣಿಗೆ ಸಮ್ಮತವಾದುದು ಎಂದು ಭಾವ.

ಹಿಂದೆ 'ಭೃಗೋಶ್ಚ ಏತದ್ವದಿಷ್ಯತಿ' ಎಂದು ಹೇಳಿರುವರು. ಅದರಲ್ಲಿ ಉತ್ತರ ಅನುವಾಕದಲ್ಲಿ (ಭೃಗುವಲ್ಲಿ) ಉಕ್ತವಾಗಿರುವ ಬ್ರಹ್ಮಪರತ್ವವನ್ನು ಈಗ ವಿಸ್ತರಿಸುತ್ತಾರೆ –

ಭೃಗು-ವರುಣ ಸಂವಾದ

ಅಧೀಹಿ ಭಗವೋ ಬ್ರಹ್ಮೇತ್ಯುಕ್ತೋಽನ್ನಪ್ರಾಣಪೂರ್ವಕಂ ।
ಆಹ ಬ್ರಹ್ಮ ಕಥಂ ತನ್ನ ದ್ವಾರಂ ತದಿತಿ ವಾದಿನಃ ॥೨೨೪॥
ಉಪಸತ್ತಿಂ ಕಥಂ ವಿದ್ಯುರುಪಸನ್ನಾಯ ಹಿ ತ್ರಿಶಃ ।
ವಕ್ತವ್ಯಂ ಬ್ರಹ್ಮ ಗುರುಣಾ ಚತುರ್ವಾರಮಥಾಪಿ ವಾ ॥೨೨೫॥
ಸಕೃದ್ವೇತ್ಯಾಗಮಾ ಬ್ರೂಯುಃ ಸಂಪ್ರದಾಯವಿದೋಽಪಿ ಚ ।
ತದ್ಯತ್ಕಿಂಚಿತ್ಕಥಂ ಬ್ರೂಯಾದುಪಸನ್ನಾಯ ದಿಕ್ಪತಿಃ ॥೨೨೬॥
ನ ವದೇದ್ಬ್ರಹ್ಮ ಚ ಕಥಂ ಮಾಯಾವೀ ನ ಹಿ ವಾರಿರಾಟ್ ।

ಹೇ ಭಗವನ್ (ಪೂಜ್ಯನಾದ ವರುಣನೇ), ನನಗೆ ಪರಬ್ರಹ್ಮನ ಬಗ್ಗೆ ಉಪದೇಶಿಸು ಎಂದು ಭೃಗುವಿನಿಂದ ಕೇಳಲ್ಪಟ್ಟ ವರುಣನು, ಅನ್ನ ಪ್ರಾಣ ಮೊದಲಾದುದನ್ನು ಪರಬ್ರಹ್ಮನೆಂಬುದಾಗಿ ಉಪದೇಶಿಸುತ್ತಾನೆ. 'ಭೃಗುರ್ವೈ ವಾರುಣಿಃ। ವರುಣಂ ಪಿತರಮುಪಸಸಾರ। ಅಧೀಹಿ ಭಗವೋ ಬ್ರಹ್ಮೇತಿ। ತಸ್ಮಾ ಏತತ್ಪ್ರೋವಾಚ। ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋ ವಾಚಂ।'

ಈ ರೀತಿ ಬ್ರಹ್ಮನನ್ನು ಕುರಿತಂತೆ ಪ್ರಶ್ನೋತ್ತರ ರೂಪವಾಗಿ ಅನ್ನಾದಿಗಳು ಹೇಳಲ್ಪಟ್ಟಿರುವುದರಿಂದ ಅನ್ನ ಪ್ರಾಣ ಮೊದಲಾದವು ಬ್ರಹ್ಮನ ರೂಪಗಳೇ ಆಗಿವೆ ಎಂದು ತಿಳಿಯುತ್ತದೆ. ಅನ್ನ ಪ್ರಾಣಾದಿಗಳು ಕೇವಲ ಬ್ರಹ್ಮಜ್ಞಾನಕ್ಕೆ ದ್ವಾರವೆಂದು ಹೇಳುವವರು ಬ್ರಹ್ಮಜ್ಞಾನಕ್ಕೋಸ್ಕರ ಉಪಸತ್ತಿಯ ಅನಂತರದಲ್ಲಿ ಗುರುವು ಶಿಷ್ಯನಿಗೆ 'ಅನ್ನ ಪ್ರಾಣಾದಿಗಳಿಂದ ಬ್ರಹ್ಮನೇ ಹೇಳಲ್ಪಟ್ಟಿದ್ದಾನೆ' ಎಂಬುದಾಗಿ ಮಾಡಿದ ಉಪದೇಶವನ್ನು ತಿಳಿದಿರುವುದಿಲ್ಲ. ಉಪಸತ್ತಿಯನ್ನು ಮಾಡಿದ ಶಿಷ್ಯನಿಗೆ ಗುರುಗಳಿಂದ ಮೂರಾವರ್ತಿ ಅಥವಾ ನಾಲ್ಕಾವರ್ತಿ ಒಂದೇಸಲವಾದರೂ ಚೆನ್ನಾಗಿ ಬ್ರಹ್ಮನೇ ಹೇಳಲ್ಪಡಬೇಕು. ಈ ಪ್ರಕಾರವಾಗಿ ವೇದಗಳು ಹೇಳುತ್ತವೆ. ಸ್ಮೃತಿ ಇತಿಹಾಸ ಪುರಾಣಗಳ ಕರ್ತೃಗಳೂ ಹೀಗೆಯೇ ಹೇಳುತ್ತಾರೆ. ಗುರೂಪಸತ್ತಿಯನ್ನು ಮಾಡಿದವನಿಗೆ ಗುರುವು ಯಥಾರ್ಥವಾದುದನ್ನೇ ಉಪದೇಶ ಮಾಡುವನು. ಅನ್ನಪ್ರಾಣಾದಿಗಳು ಪರಬ್ರಹ್ಮನಲ್ಲ, ಅವು ಬ್ರಹ್ಮಜ್ಞಾನಕ್ಕೆ ದ್ವಾರಮಾತ್ರ ಎಂಬ ಯಥಾರ್ಥವಲ್ಲದ ಜ್ಞಾನವನ್ನು ವರುಣನು ಹೇಗೆ ತಾನೆ ಉಪದೇಶಿಸುವನು. ಬ್ರಹ್ಮನ ವಿಷಯವನ್ನು ಉಪದೇಶಿಸಿರೆಂದು ತನ್ನ ಶಿಷ್ಯನಿಂದ ಕೇಳಲ್ಪಟ್ಟ ವರುಣನು, ಕಪಟಿಯಲ್ಲವಾದ್ದರಿಂದ, ಬ್ರಹ್ಮನನ್ನೇ ಹೇಳುವನು. ಆದಪ್ರಯುಕ್ತ ಆಪ್ತನಾದ ವರುಣನು ಬ್ರಹ್ಮನ ವಿಷಯದಲ್ಲಿ ಬಂದ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದು ಅನ್ನಾದಿಗಳಿಗೆ ಬ್ರಹ್ಮತ್ವವನ್ನು ಸಾಧಿಸುವುದಕ್ಕೆ ಹೇತುವೆಂದು ಉಕ್ತವಾಯಿತು.

ಹಾಗಾದರೆ ವರುಣನು ಉಪದೇಶಿಸಿದ ಅನ್ನಾದಿಗಳ ಮಧ್ಯದಲ್ಲಿ ಬರುವ ಅನ್ನ ಪ್ರಾಣ ಮನಸ್ಸುಗಳು ಬ್ರಹ್ಮಸ್ವರೂಪವಾಗಲಿ. ಅನ್ನಾದಿ ಶಬ್ದಗಳಿಗೆ ಅತ್ತೃತ್ವಾದಿ ಅರ್ಥವು ಕೂಡುವುದರಿಂದ ಅನುಪಪತ್ತಿಯು ಇರುವುದಿಲ್ಲ. ಆದರೆ ಚಕ್ಷು ಶ್ರೋತ್ರ ವಾಕ್ ಶಬ್ದಗಳು ಬ್ರಹ್ಮಸ್ವರೂಪ ಆಗಲಾರವು. ನೋಡುವುದರಿಂದ ಕಣ್ಣು, ಕೇಳುವುದರಿಂದ ಕಿವಿ, ವಕ್ತೃತ್ವವಿರುವ ಕಾರಣ ವಾಕ್ ಈ ಪ್ರಕಾರವಾಗಿ ಇವು ಕರಣಾರ್ಥಕಗಳಾಗಿವೆ. ಬ್ರಹ್ಮನಿಗೆ ಕರಣತ್ವ ಕೂಡಲಾರದು ಎಂದು ಹೇಳಿದರೆ –

ಚಷ್ಟ ಇತ್ಯೇವ ತಚ್ಚಕ್ಷುಃ ಶ್ರವಣಾಚ್ಛ್ರೋತ್ರಮುಚ್ಯತೇ ॥೨೨॥
ವಚನಾದೇವ ವಾಗ್ಬ್ರಹ್ಮ ಸೃಷ್ಟಿಸ್ಥಿತ್ಯಾದಿಕಾರಣಂ ।

ತಚ್ಚ ವಾಧೂಲಶಾಖಾಯಾಮಷ್ಟರೂಪಮುದಾಹೃತಂ ॥೨೨೮॥

ವಿಜ್ಞಾನಾನಂದದಸಹಿತಂ ಪೃಥಕ್ ಸೃಷ್ಟ್ಯಾದಿಲಕ್ಷಣೈಃ ।

ಏವ ಶಬ್ದದಿಂದ ಕರಣಸಾಧನತ್ವವನ್ನು ನಿರಾಕರಿಸುತ್ತಾರೆ. ಬ್ರಹ್ಮನು ಚೆನ್ನಾಗಿ ನೋಡುವ ಪ್ರಯುಕ್ತ ಚಕ್ಷು, ಚೆನ್ನಾಗಿ ಕೇಳುವ ಪ್ರಯುಕ್ತ ಶ್ರೋತ್ರ, ಚೆನ್ನಾಗಿ ಹೇಳುವ ಪ್ರಯುಕ್ತದಿಂದಲೇ ವಾಕ್ ಎಂದು ಕರೆಯಲ್ಪಡುತ್ತಾನೆ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ಶ್ರುತಿವಾಕ್ಯಗಳಿಂದ ಬ್ರಹ್ಮನೇ ಸೃಷ್ಟಿ, ಸ್ಥಿತಿ ಮೊದಲಾದವುಗಳಿಗೆ ಕಾರಣನೆಂದೂ ಹೇಳಲ್ಪಟ್ಟಿದ್ದಾನೆ. ವಿಜ್ಞಾನ ಆನಂದಗಳಿಂದ ಕೂಡಿರುವ ಆ ಬ್ರಹ್ಮನು ಅನ್ನ ಮೊದಲಾದ ಆರು ಹೀಗೆ ಒಟ್ಟು ಎಂಟುವಿಧ ರೂಪವುಳ್ಳವನೆಂಬುದಾಗಿ ವಾಧೂಲಶಾಖೆಯಲ್ಲಿ ಉದಾಹೃತನಾಗಿದ್ದಾನೆ. ಆದಕಾರಣ ಪ್ರಥಮ ಅನುವಾಕದಲ್ಲಿ ಚಕ್ಷುರಾದಿ ಮೂರನ್ನೂ ಉತ್ತರ ಅನುವಾಕದಲ್ಲಿ ವಿಜ್ಞಾನ ಆನಂದಗಳೊಂದಿಗೆ ಕೂಡಿಸಿಕೊಂಡಾಗ ಸಂಖ್ಯಾಸಾಮ್ಯ ಬರುವುದು. ಇಲ್ಲದಿದ್ದರೆ ಪ್ರತ್ಯೇಕವಾಗಿ ಸೃಷ್ಟ್ಯಾದಿ ಲಕ್ಷಣಗಳನ್ನು ಪ್ರತಿಪಾದಿಸುವ ವಾಕ್ಯಗಳನ್ನೇ ಇಲ್ಲಿಯೂ ಉದಾಹರಿಸಬೇಕಿತ್ತು. ಸೃಷ್ಟ್ಯಾದಿ ಲಕ್ಷಣಗಳಿಂದ ಅನ್ಯತ್ರ ಉಕ್ತನಾದ ಬ್ರಹ್ಮನೇ ಇಲ್ಲಿ ಚಕ್ಷು ಮೊದಲಾದ ಎಂಟು ರೂಪಗಳಿಂದ ಹೇಳಲ್ಪಟ್ಟಿದ್ದಾನೆ ಎಂದು ತಿಳಿಯಬೇಕು. ಅನೇಕ ಶಾಖೆಗಳನ್ನು ತಿಳಿದವರಿಗೇನೇ ಬ್ರಹ್ಮನನ್ನು ಚೆನ್ನಾಗಿ ತಿಳಿಯಲು ಅಧಿಕಾರ ಎಂದು ಸೂಚಿಸುವುದಕ್ಕಾಗಿಯೇ ಇಲ್ಲಿ ವಾಧೂಲ ಶಾಖೆಯನ್ನು ಉದಾಹರಿಸಲಾಗಿದೆ.

ಹಾಗಾದರೆ ವಾಧೂಲಶಾಖೆಯಲ್ಲಿ ಹೇಳಿದಂತೆಯೇ ಬ್ರಹ್ಮವಲ್ಲಿ ಹಾಗೂ ಭೃಗುವಲ್ಲಿ ಇವೆರಡು ಕಡೆಗಳಲ್ಲಿಯೂ ಎಂಟು ರೂಪಗಳಿಂದೇ ಏಕೆ ಹೇಳಬಾರದು ಎಂದರೆ –

ಆವಾಪೋದ್ವಾಪತಃ ಶಾಖಾ ಯತ ಆಹುಃ ಪರಂ ಪದಂ ॥೨೨೯॥

ಯತೋ ಭೂತಾನಿ ಜಾಯಂತೇ ಇತ್ಯಾದ್ಯೈರ್ಲಕ್ಷಣಂ ಸ್ವಯಂ ।

ಲಕ್ಷಿತಂ ಗುರುಣಾ ಪಶ್ಚಾತ್ತಪಸೈವಾಪರೋಕ್ಷಿತಂ ॥೨೩೦॥

ದೃಷ್ಟೈಕೈಕಸ್ವರೂಪಂ ತು ಸಮಸ್ತೋಕ್ತಾನುದರ್ಶನಂ ।

ಇಚ್ಛತಾಽಽಜ್ಞಾಂ ಗುರೋಃ ಪ್ರಾಪ್ಯ ತಪಸೈವಾಪರೋಕ್ಷಿತಂ ॥೨೩೧॥

ಅಬ್ರಹ್ಮೇತ್ಯೇವ ವದತಾಂ ಶ್ರುತಹಾನ್ಯಶ್ರುತಗ್ರಹೌ ।

ಸಾಕ್ಷಾಲ್ಲಕ್ಷಣತಾಂ ಪ್ರಾಪ್ತಾವಿತಿ ಲಜ್ಜಾ ತದುಕ್ತಿಷು ॥೨೩೨॥

ಬೇರೆ ಕಡೆಗಳಲ್ಲಿ ಹೇಳದಿದ್ದ ಕೆಲವು ವಿಷಯಗಳ ಪ್ರಕ್ಷೇಪ (ಆವಾಪ), ಬೇರೆ ಕಡೆಗಳಲ್ಲಿ ಹೇಳಿರುವ ವಿಷಯಗಳ ಪರಿತ್ಯಾಗ (ಉದ್ವಾಪ), ಬೇರೆ ಬೇರೆ ಶಾಖೆಗಳಲ್ಲಿ ಹೇಳಿರುವ ಕೆಲವನ್ನು ಮತ್ತೊಂದು ಶಾಖೆಯಲ್ಲಿ ಸಂಗ್ರಹ ಮೊದಲಾದ ರೀತಿಗಳಿಂದ ಪರಮೇಶ್ವರನ ಸ್ವರೂಪವನ್ನು ಪ್ರತಿಪಾದಿಸುವುದು ವೇದಶಾಖೆಗಳ ಸ್ವಭಾವವಾಗಿದೆ. ಆದಪ್ರಯುಕ್ತ ಮೇಲೆ ಹೇಳಿದ ವ್ಯಾಖ್ಯಾನಕ್ಕೆ ವಿರೋಧ ಬರುವುದಿಲ್ಲ. ಯಾವ ಪರಮಾತ್ಮನಿಂದ ಪ್ರಾಣಿಗಳೆಲ್ಲವೂ ಹುಟ್ಟುತ್ತವೋ ಇವೇ ಮೊದಲಾದ ಸ್ವರೂಪಲಕ್ಷಣಗಳಿಂದ ಗುರುವಾದ ವರುಣನಿಂದ ಈ ಅನ್ನಾದಿರೂಪ ಬ್ರಹ್ಮನು ಲಕ್ಷಿತನಾಗಿ ಉಪದಿಷ್ಟನಾಗಿದ್ದಾನೆ. ಆಮೇಲೆ ಶಿಷ್ಯನು ಗುರೂಪದಿಷ್ಟನಾದ ಬ್ರಹ್ಮನನ್ನು ತಪಸ್ಸಿನಿಂದಲೇ ಸಾಕ್ಷಾತ್ಕಾರ ಮಾಡಿಕೊಂಡು ಒಂದೊಂದು ರೂಪವನ್ನೂ ನೋಡಿದನು. ಅನಂತರ ಉಪದಿಷ್ಟವಾದ ಎಲ್ಲ ರೂಪಗಳ ಅಪರೋಕ್ಷವನ್ನು ಬಯಸಿ, ಗುರುವಿನ ಅನುಜ್ಞೆಯನ್ನು ಪಡೆದುಕೊಂಡು, ತಪಸ್ಸಿನಿಂದ ಸಾಕ್ಷಾತ್ಕರಿಸಿಕೊಂಡ ರೂಪವನ್ನು ಅದು ಬ್ರಹ್ಮನಲ್ಲ ಎಂದು ಹೇಳುವುದು ಅಸಂಭವ. ಈ ರೀತಿಯಾಗಿ ಹೇಳುವವರಿಗೆ ಶ್ರುತಹಾನಿ, ಅಶ್ರುತ ಕಲ್ಪನಾ ಎಂಬ ಎರಡು ದೋಷಗಳೇ ಮುಖ್ಯ ಲಕ್ಷಣವಾಗಿ ಇರುತ್ತವೆ. ಇಂಥಹ ಅಪದ್ಧ ವಾದವನ್ನು ದೂಷಿಸುವುದಕ್ಕೆ ನಮಗೇ ನಾಚಿಕೆ ಆಗುವುದು. ಅಂದಮೇಲೆ ಹೀಗೆ ವಾದ ಮಾಡುವ ಮಾಯಾವಾದಿಗಳಿಗೆ ಇನ್ನೂ ಹೆಚ್ಚಿನ ನಾಚಿಕೆಯಾಗಬೇಕು.

ಮಿಥ್ಯೆಯಾದ ಜೀವಪರಮಾತ್ಮರ ಭೇದವನ್ನು ಆಶ್ರಯಿಸಿ 'ಭೇದವ್ಯಪದೇಶಾಚ್ಚ' ಎನ್ನುವ ಸೂತ್ರವು ರಚಿತವಾಗಿದೆ. ಆದಕಾರಣ ಅದರ ವ್ಯಾಖ್ಯಾನದಿಂದ ಭೇದವನ್ನು ನಿರ್ಣಯಿಸುವುದು ಕೂಡಲಾರದು ಎಂದು ಹೇಳಿದರೆ –

ಸಮೀಪೇ ಸಹ ಭೋಗಸ್ಯ ಮುಕ್ತತ್ವೇನೋಕ್ತತೋಽಸಕೃತ್ ।

ಭೇದೋ ಜೀವೇಶಯೋರ್ಮಿಥ್ಯೇತ್ಯೇವ ಮಿಥ್ಯಾ ಸ್ವಯಂ ಭವೇತ್ ॥೨೩೩॥

ಪರಮಾತ್ಮನ ಸಮೀಪದಲ್ಲಿಯೇ ಇರುತ್ತ, ಅವನ ಜೊತೆಯಲ್ಲಿಯೇ

ಭೋಗವನ್ನು ಅನುಭವಿಸುವುದೇ ಮುಕ್ತಿ ಎಂದು ಶ್ರುತಿಗಳಲ್ಲಿ ಅನೇಕಾವರ್ತಿ ಹೇಳಿರುವುದರಿಂದ, ಜೀವಬ್ರಹ್ಮರ ಭೇದವು ಮಿಥ್ಯೆ ಎಂದು ಹೇಳುವುದೇ ಸ್ವಯಂ ಮಿಥ್ಯೆಯಾಗುವುದು.

'ಏತಮಾನಂದಮಯಮಾತ್ಮಾನಮುಪಸಂಕ್ರಮ್ಯ' ಇತ್ಯಾದಿಗಳಲ್ಲಿ ಹೇಳಿದ ಸಾಮೀಪ್ಯವೂ, 'ಸೋऽಶ್ನುತೇ ಸರ್ವಾನ್ ಕಾಮಾನ್ ಸಹ' ಇತ್ಯಾದಿಗಳಲ್ಲಿ ಹೇಳಿದ ಸಹಭೋಗವೂ ಭೇದವಿಲ್ಲದೇ ಕೂಡುವುದಿಲ್ಲ. ಮೋಕ್ಷದಲ್ಲಿರುವುದೂ ಮಿಥ್ಯೆ ಎಂದರೆ ಆತ್ಮಸ್ವರೂಪವೇ ಮೋಕ್ಷದಲ್ಲಿರುವುದರಿಂದ ಅದೂ ಮಿಥ್ಯೆಯಾಗಬೇಕಾಗುವುದು. ಆದಪ್ರಯುಕ್ತ 'ಭೇದವ್ಯಪದೇಶಾಚ್ಚ' ಎನ್ನುವ ಸೂತ್ರದಲ್ಲಿ ಹೇಳಿರುವ ಭೇದವು ಮಿಥ್ಯೆಯಾಗುವುದು ಸಾಧ್ಯವಿಲ್ಲ.

ಹೀಗೆ ಮಾಯಾವಾದಿಗಳ ಪಂಚಕೋಶ ವ್ಯಾಖ್ಯಾನವನ್ನು ನಿರಾಕರಿಸಿದರು. ಆದರೆ ಭಾಸ್ಕರಾದಿಗಳು ಆನಂದಮಯ ಮಾತ್ರ ಪರಮಾತ್ಮವಾಚಕ ಉಳಿದ ಅನ್ನಮಯಾದಿ ನಾಲ್ಕು ಕೋಶಗಳು ಎಂದು ಹೇಳುತ್ತಾರೆ. ಈಗ ಈ ವ್ಯಾಖ್ಯಾನವನ್ನು ನಿರಾಕರಿಸುತ್ತಾರೆ –

ಏತೇನ ಮಯಟಶ್ಚೈವ ದ್ವೈವಿಧ್ಯೇನಾರ್ಥಕಲ್ಪನಾತ್ ।
ತದನ್ಯೇಷಾಂ ಮತಮಪಿ ಸತ್ಸಂಪತ್ಸು ನ ಭಾಸತೇ ॥೨೩೪॥

ಅನ್ನಮಯಾದಿ ಐದು ರೂಪಗಳಿಗೂ ಪರಬ್ರಹ್ಮತ್ವವನ್ನು ಪ್ರತಿಪಾದನೆ ಮಾಡಿರುವುದರಿಂದಲೇ, ಮಯಟ್ ಪ್ರತ್ಯಯಕ್ಕಾದರೂ ಎರಡು ವಿಭಿನ್ನ ರೀತಿಯ ಅರ್ಥವನ್ನು ಕಲ್ಪಿಸುವುದರಿಂದ (ಐದೂ ಕೋಶಗಳೆಂದೂ, ನಾಲ್ಕು ಕೋಶಗಳು ಒಂದು ಮಾತ್ರ ಪರಬ್ರಹ್ಮ ಎನ್ನುವ ಎರಡು ರೀತಿಯ ಅರ್ಥಕಲ್ಪನೆ), ಮಾಯಾವಾದಿಗಳು ಹಾಗೂ ಭಾಸ್ಕರಾದಿಗಳ ಮತಗಳು ವಿದ್ವತ್ಸಭೆಗಳಲ್ಲಿ ಶೋಭಿಸುವುದಿಲ್ಲ.

ಹಾಗಾದರೆ ಸೂತ್ರವ್ಯಾಖ್ಯಾನಕ್ಕೆ ಉಪಕ್ರಮಿಸಿ ಪರರ ಅಪವ್ಯಾಖ್ಯಾನವನ್ನು ನಿರಾಕರಿಸುವುದು ಅಸಂಗತ ಎಂದು ಹೇಳಕೂಡದು. ತಾನು ಮಾಡಿದ ವ್ಯಾಖ್ಯಾನದ ದೃಢೀಕರಣಕ್ಕಾಗಿ ಪರರ ವ್ಯಾಖ್ಯಾನವು ತಪ್ಪು ಎಂದು ತೋರಿಸುವುದು ಅವಶ್ಯಕ ಎನ್ನುವ ಅಭಿಪ್ರಾಯದಿಂದ ಅಧಿಕರಣಾರ್ಥವನ್ನು ಉಪಸಂಹಾರ ಮಾಡುತ್ತಾರೆ –

ಅಧಿಕರಣಾರ್ಥ ಉಪಸಂಹಾರ

ಅತೋ ನಾರಾಯಣೋ ದೇವೋ ನಿಶ್ಶೇಷಗುಣವಾಚಕೈಃ ।
ಗುಣಸಾಮಾನ್ಯವಚನೈರಪಿ ಮುಖ್ಯತಯೋದಿತಃ ॥೨೩೫॥
ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಸ್ತಥೈವ ಹ್ಯಧಿಭೂತಗೈಃ ।
ಅನ್ನಾದಿಶಬ್ದೈರ್ಭಗವಾನೇಕೋ ಮುಖ್ಯತಯೋದಿತಃ ॥೨೩೬॥

ಪರರ ವ್ಯಾಖ್ಯಾನವು ಸೂತ್ರಕಾರರ ಅಭಿಪ್ರಾಯಕ್ಕೆ ವಿರುದ್ಧವಿರುವುದರಿಂದ, ಭಗವಂತನಾದ ನಾರಾಯಣನು ಎಲ್ಲ ರೀತಿಯ ಗುಣವಾಚಕ ಶಬ್ದಗಳಿಂದಲೂ ಹಾಗೂ ಗುಣಸಾಮಾನ್ಯವಾಚಕ ಶಬ್ದಗಳಿಂದಲೂ ಮುಖ್ಯವಾಗಿ ಪ್ರತಿಪಾದಿತವಾಗಿದ್ದಾನೆ. ಆಧ್ಯಾತ್ಮಿಕ ಪ್ರಾಣಾದಿ ಶಬ್ದಗಳಿಂದಲೂ , ಆಧಿಭೌತಿಕ ಅನ್ನಾದಿಶಬ್ದಗಳಿಂದಲೂ ಶ್ರೀ ನಾರಾಯಣನೇ ಮುಖ್ಯವಾಗಿ ಹೇಳಲ್ಪಟ್ಟಿದ್ದಾನೆ. ಇದು ಶ್ರುತಿಪ್ರಸಿದ್ಧವಾಗಿದೆ. ಆದಕಾರಣ ನಮ್ಮ ವ್ಯಾಖ್ಯಾನವು ಅಧಿಕರಣದ ಉಪಕ್ರಮಕ್ಕೆ ವಿರೋಧವಾಗಲಿಲ್ಲ.

ಸಕಲ ಶಬ್ದಗಳಿಗೂ ಮುಖ್ಯವೃತ್ತಿಯಿಂದ ಶ್ರೀಹರಿಯಲ್ಲಿಯೇ ಸಮನ್ವಯವನ್ನು ಸಮರ್ಥಿಸುವ ವಿಷಯದಲ್ಲಿ ಸಂಗತಿಯೂ ಯುಕ್ತಿಯೂ ಇಲ್ಲದಿರುವ ಪ್ರಯುಕ್ತ ಇದು ಅಪವ್ಯಾಖ್ಯಾನ ಎಂದು ಆಕ್ಷೇಪಿಸಿದರೆ –

ಸಕಲ ಶಬ್ದಗಳಿಗೂ ಭಗವಂತನಲ್ಲಿಯೇ ಸಮನ್ವಯ

ಜನ್ಮಾದ್ಯಸ್ಯೇತಿ ಸೂತ್ರೇಣ ಗುಣಸರ್ವಸ್ವಸಿದ್ಧಯೇ ।
ಬ್ರಹ್ಮಣೋ ಲಕ್ಷಣಂ ಪ್ರೋಕ್ತಂ ಶಾಸ್ತ್ರಮೂಲಂ ಯತಸ್ತತಃ ॥೨೩೭॥
ಅನ್ವಯಃ ಸರ್ವಶಬ್ದಾನಾಂ ಗುಣಸರ್ವಸ್ವವೇದಕಃ ।

ಮೊದಲನೆಯ ಸೂತ್ರದಿಂದ ಪರಬ್ರಹ್ಮನಿಗೆ ಗುಣಪೂರ್ಣತ್ವವನ್ನು ಸಮರ್ಥಿಸಲಾಯಿತು. ಗುಣಪೂರ್ಣತ್ವದ ಸಿದ್ಧಿಗಾಗಿ ಜನ್ಮಾದ್ಯಸ್ಯ ಯತಃ ಎನ್ನುವ ಎರಡನೆಯ ಸೂತ್ರದಿಂದ ಬ್ರಹ್ಮನ ಲಕ್ಷಣಗಳನ್ನು ಹೇಳಲಾಯಿತು. ಈ ಎರಡು ಸೂತ್ರಗಳಿಂದ ಸಾಧ್ಯವಾಗಿ ಗುಣಪೂರ್ಣತ್ವವೂ, ಸಾಧಕವಾಗಿ ಜನ್ಮಾದಿಕಾರಣತ್ವವೂ ಪ್ರಕೃತವಾಗಿದೆ. ಈ ಲಕ್ಷಣಗಳಿಗೆ ಅನುಮಾನಾದಿಗಳಿಂದ ಅತಿವ್ಯಾಪ್ತಿಯು ಶಂಕಿತವಾದರೆ ಅದರ ನಿವಾರಣೆಗಾಗಿ ಶಾಸ್ತ್ರಯೋನಿತ್ವಾತ್ ಎನ್ನುವ ಮೂರನೆಯ ಸೂತ್ರದಲ್ಲಿ ಶಾಸ್ತ್ರವೇ ಪ್ರಮಾಣವಾಗಿರುವುದರಿಂದ ಈ

ಲಕ್ಷಣಗಳು ಸಿದ್ಧಿಸುತ್ತವೆ ಎಂದು ಹೇಳಲಾಯಿತು. ಶಾಸ್ತ್ರೋಕ್ತವಾದ ಎಲ್ಲ ಶಬ್ದಗಳ ಸಮನ್ವಯದಿಂದಲೇ ಸಕಲಗುಣಪೂರ್ಣತ್ವವು ಸಿದ್ಧಿಸುವುದು. ಆದಪ್ರಯುಕ್ತ ಸಮನ್ವಯ ಸೂತ್ರದಿಂದ ಎಲ್ಲ ಶಬ್ದಗಳಿಗೂ ಸಮನ್ವಯವನ್ನು ಪ್ರತಿಜ್ಞಾ ಮಾಡಿರುವುದರಿಂದ ಅದನ್ನು ವಿಸ್ತರಿಸುವುದರಿಂದ ಸೂತ್ರಕಾರರಿಗೆ ಅಸಂಗತಿಯು ಬರುವುದಿಲ್ಲ.

ಪರಮೇಶ್ವರನಿಗೆ ಮುಖ್ಯಾರ್ಥದಲ್ಲಿ ಸರ್ವಶಬ್ದಗಳ ಸಮನ್ವಯ ಕೂಡುವುದಿಲ್ಲ. ಪರಮೇಶ್ವರನಂತೆಯೇ ಬೇರೆಯವರಲ್ಲೂ ಯೌಗಿಕಾರ್ಥವನ್ನು ಮಾಡಬಹುದು. ಈಶ್ವರನಲ್ಲಿ ರೂಢಿಯಿರುವುದಿಲ್ಲ ಹಾಗೂ ಬೇರೆಯವರಲ್ಲಿ ರೂಢಿಯಿರುವುದರಿಂದ ಆಧಿಕ್ಯ ಬರುವುದು. ಯೋಗವು ಪರಮೇಶ್ವರನಲ್ಲಿ ಹಾಗೂ ಇತರರಲ್ಲಿಯೂ ಸಮಾನವಾಗಿದೆ ಎಂದು ಪರರು ಹೇಳುತ್ತಾರೆ. ಅದನ್ನು ಇಲ್ಲಿ ನಿರಾಕರಿಸುತ್ತಾರೆ -

ಶಬ್ದಪ್ರವೃತ್ತಿಹೇತೂನಾಂ ತಸ್ಮಿನ್ಮುಖ್ಯಸಮನ್ವಯಾತ್ ॥೨೩೮॥
ಅನ್ಯಾರ್ಥೇಷ್ವಲ್ಪತಾ ಹೇತೋಸ್ತನ್ನಿಮಿತ್ತತ್ವತಸ್ತಥಾ।
ತದ್ವಾಚಕಶ್ಚ ಶಬ್ದಾನಾಂ ಬಹುಲಾತಿಪ್ರಯೋಗತಃ ॥೨೩೯॥
ರೂಢಮಿತ್ಯೇವ ಸಾಧ್ಯಂ ಸ್ಯಾದ್ರೂಢಿರ್ಹಿ ದ್ವಿವಿಧಾ ಮತಾ ।
ಅವಿದ್ವದ್ವಿದ್ವದಾಪ್ತ್ಯೈವ ಮುಖ್ಯಾ ಹಿ ವಿದುಷಾಂ ತು ಸಾ ॥೨೪೦॥
ವಿದ್ವದ್ರೂಢಿರ್ಯೌಗಿಕಾ ಸ್ಯಾತ್ಸಾ ಯೋಗಾದೇವ ಲಭ್ಯತೇ ।
ತಸ್ಮಾನ್ಮುಖ್ಯಾರ್ಥತಾ ವಿಷ್ಣೋರಿತಿ ಕೃತ್ವಾ ಹೃದಿ ಪ್ರಭುಃ ॥೨೪೧॥
ಸಮನ್ವಯಂ ಸಾಧಯತಿ .....।

ಇಂದ್ರಾದಿ ಶಬ್ದಗಳ ಪ್ರವೃತ್ತಿಗಳಿಗೆ ಕಾರಣವಾದ ಪರಮೈಶ್ವರ್ಯಾದಿಗಳಿಗೆ ಆ ಪರಮೇಶ್ವರನಲ್ಲಿಯೇ ಮುಖ್ಯವಾಗಿ ಸಂಬಂಧವಿರುವುದರಿಂದ, ಇಂದ್ರಾದಿ ಶಬ್ದಗಳುಪರಮೇಶ್ವರನನ್ನೇ ಹೇಳುತ್ತವೆ. ಇತರರಾದ ಪುರಂದರಾದಿಗಳಲ್ಲಿ ಶಬ್ದಪ್ರವೃತ್ತಿಗೆ ಕಾರಣವಾದ ಐಶ್ವರ್ಯಾದಿಗಳಿಗೆ ಅಲ್ಪತ್ವವಿದೆ. ಅಂದರೆ ದೇಶ, ಕಾಲ ಹಾಗೂ ಸ್ವರೂಪಗಳಿಂದ ಅವು ಸಾವಧಿಕವಾಗಿವೆ. ಅಲ್ಪವಾದ ಐಶ್ವರ್ಯಾದಿಗಳೂ ಭಗವಂತನಲ್ಲಿ ಕೂಡುವುದರಿಂದ, ಇಂದ್ರಾದಿಗಳಲ್ಲಿರುವ ಅಲ್ಪವಾದ ಐಶ್ವರ್ಯಾದಿಗಳೂ ಭಗವದಧೀನವೇ ಆಗಿದ್ದು ಅವನಿಂದಲೇ

ದತ್ತವಾಗಿವೆ. ಐಶ್ವರ್ಯಾದಿಗಳು ಇಂದ್ರಾದಿಗಳಲ್ಲಿ ಸಾವಧಿಕವೂ ಭಗವಂತನಲ್ಲಿ ಪರಮಾಧಿಕವೂ ಆಗಿರುವಾಗ ಸಮಾನಯೋಗವೆನ್ನುವುದು ಕೂಡುವುದಿಲ್ಲ.

ಈಶ್ವರನಲ್ಲಿ ಶಬ್ದಗಳಿಗೆ ರೂಢಿಯಿಲ್ಲವೆಂದು ಹೇಳಿದ್ದನ್ನು ಈಗ ನಿರಾಕರಿಸುತ್ತಾರೆ. ಶ್ರೀಹರಿಯಲ್ಲಿಯೇ ಶಬ್ದಸಮುದಾಯದ ಪ್ರಯೋಗವು ಬಹಳ ಹೇಚ್ಚಿನ ರೀತಿಯಲ್ಲಿ ಇರುವುದರಿಂದ ಎಲ್ಲ ಶಬ್ದಗಳಿಗೂ ಶ್ರೀಹರಿಯಲ್ಲಿಯೇ ರೂಢಿಯು ಕೂಡುವುದು. ಅಜ್ಞರು ಮತ್ತು ಪ್ರಾಜ್ಞರುಗಳಿಗೆ ಸಂಬಂಧಿಸಿದಂತೆ ವಿದ್ವದ್ರೂಢಿ ಮತ್ತು ಅವಿದ್ವದ್ರೂಢಿ ಎಂಬುದಾಗಿ ಎರಡು ವಿಧವಾದ ರೂಢಿಯು ಎಲ್ಲರಿಗೂ ಸಮ್ಮತವಾಗಿದೆ. ಜ್ಞಾನಿಗಳ ಬಹುಲವಾದ ಪ್ರಯೋಗವುಳ್ಳ ರೂಢಿಯು ವೈದಿಕವಾದ ಪ್ರಯೋಗಬಾಹುಲ್ಯದಿಂದ ಪ್ರಮಾಣಿತವಾಗಿದೆ. ಇದನ್ನೇ ವಿದ್ವದ್ರೂಢಿ ಎನ್ನುತ್ತಾರೆ. ಈ ರೀತಿಯ ರೂಢಿಯು ಯೋಗವೃತ್ತಿಯಿಂದಲೇ ಕೂಡಿಬರುವುದು. ಆದ್ದರಿಂದ ವಿದ್ವದ್ರೂಢಿಯು ಲೌಕಿಕ ಸಾಮಾನ್ಯವಾದ ಅವಿದ್ವದ್ರೂಢಿಗಿಂತ ಅತ್ಯಂತ ಮೇಲ್ಮಟ್ಟದ್ದು. ಮಹಾಯೋಗ ಹಾಗೂ ವಿದ್ವದ್ರೂಢಿಗಳಿಂದ ಎಲ್ಲ ಶಬ್ದಗಳಿಗೂ ವಿಷ್ಣುವಿನಲ್ಲೇ ಮುಖ್ಯಾರ್ಥವಿರುವುದು. ಆದ್ದರಿಂದ ಸರ್ವಶಬ್ದಗಳಿಗೂ ವಿಷ್ಣುವಿನಲ್ಲಿಯೇ ಸಮನ್ವಯವಿರುವುದು. ತಮ್ಮ ಹೃದ್ಗತವಾದ ಈ ಅಭಿಪ್ರಾಯದಿಂದಲೇ ಸೂತ್ರಕಾರರು 'ಆನಂದಮಯೋऽಭ್ಯಾಸಾತ್' ಮೊದಲಾದ ಸೂತ್ರಗಳಿಂದ ಎಲ್ಲ ಗುಣಸಾಮಾನ್ಯವಾಚಕ ಶಬ್ದಗಳಿಗೆ ಮುಖ್ಯವೃತ್ತಿಯಿಂದ ಶ್ರೀಹರಿಯಲ್ಲಿಯೇ ಸಮನ್ವಯವನ್ನು ಸಾಧಿಸುತ್ತಾರೆ. ಆದಕಾರಣ ಈ ವ್ಯಾಖ್ಯಾನವು ಯುಕ್ತವೇ ಆಗಿದೆ.

ಅಂತಸ್ಥತ್ವಾಧಿಕರಣ

ತೈತ್ತರೀಯದಲ್ಲಿ ಹೇಳಿರುವ ಅಂತಃಪ್ರವಿಷ್ಟನು ಬ್ರಹ್ಮನೋ ಅಥವಾ ಬ್ರಹ್ಮನಿಂದ ಇತರರಾದ ಇಂದ್ರಾದಿಗಳೋ ಎಂದು ಸಂಶಯ. ಆ ಶ್ರುತಿಯು ಇಂದ್ರಾದಿಗಳಲ್ಲಿ ರೂಢಿಯಿಂದಲೂ ಯೌಗಿಕವಾಗಿಯೂ ಕೂಡುವುದರಿಂದ ಅಂತಃಪ್ರವಿಷ್ಟ ಧರ್ಮದಿಂದ ಶ್ರುತರಾದವರು ಇಂದ್ರಾದಿಗಳೇ ಎಂದು ಪೂರ್ವಪಕ್ಷ. ಅಂತಃಪ್ರವಿಷ್ಟನು ಬ್ರಹ್ಮನೇ, ಇಂದ್ರಾದಿಗಳಲ್ಲ ಎಂದು ನಿರ್ಣಯಿಸಲು ಈ ಅಧಿಕರಣ ಪ್ರಸಕ್ತವಾಗಿದೆ.

ಅಧಿದೈವಗತ ಶಬ್ದಗಳ ಸಮನ್ವಯ

ಸೂತ್ರ: ಓಂ ಅಂತಸ್ತದ್ಧರ್ಮೋಪದೇಶಾತ್ ಓಂ (೧-೧-೨೦)

'ಅಂತಃಪ್ರವಿಷ್ಟಂ ಕರ್ತಾರಮೇತಮನ್ತಶ್ಚದ್ರಮಸಿ ಮನಸಾ ಚರಂತಂ। ಸಹೈವ ಸಂತಂ ನ ವಿಜಾನಂತಿ ದೇವಾ।' ಎಂದು ತೈತ್ತರೀಯ ಶ್ರುತಿಯಲ್ಲಿ ಹೇಳಿರುವ ಅಂತಃಪ್ರವಿಷ್ಟನು ಬ್ರಹ್ಮನೇ, ಇಂದ್ರಾದಿಗಳಲ್ಲ. ಆ ಬ್ರಹ್ಮನ ಸಮುದ್ರಾಂತಸ್ಥತ್ವ, ಬ್ರಹ್ಮಾಂಡವೀರ್ಯತ್ವಾದಿ ರೂಪಗಳಾದ ಧರ್ಮಗಳನ್ನು 'ಅಂತಸ್ಸಮುದ್ರೇ', 'ಯಸ್ಯಾಂಡಕೋಶಂ' ಇತ್ಯಾದಿ ಶ್ರುತಿಗಳಿಂದ ಉಪದೇಶ ಮಾಡಿರುವುದರಿಂದ ಎಂಬುದು ಸೂತ್ರಾರ್ಥ.

'ಆನಂದಮಯೋऽಭ್ಯಾಸಾತ್' ಎನ್ನುವ ಸೂತ್ರದಿಂದಲೇ ಸರ್ವಶಬ್ದಗಳ ಮುಖ್ಯಾರ್ಥನು ವಿಷ್ಣುವೇ ಎಂದು ಸಾಧಿಸಿ ತೋರಿಸಲಾಯಿತು. ಪುನಃ ಅಂತಸ್ಥತ್ವಾದಿ ಧರ್ಮವನ್ನು ಹೇಳಲು ಹೊರಟಿರುವ ಈ ಅಧಿಕರಣಕ್ಕೆ ಪ್ರಸಕ್ತಿಯೇ ಇರುವುದಿಲ್ಲ ಎಂದರೆ, ಸತ್ಯವೇ. ಆದರೂ ಬ್ರಹ್ಮನಲ್ಲಿರುವಂತೆಯೇ ಇಂದ್ರಾದಿಗಳಲ್ಲಿಯೂ ರೂಢಿ ಹಾಗೂ ಯೋಗದಿಂದ ಅಂತಸ್ಥತ್ವಾದಿ ಧರ್ಮಗಳು ಕೂಡಬಹುದೆಂಬ ಅಭಿಪ್ರಾಯದಿಂದ ಪ್ರಸಕ್ತವಾದ ಅಧಿಕಾಶಂಕೆಯ ನಿರಾಸೆಗಾಗಿ. ಅಂತಸ್ತದ್ಧರ್ಮೋಪದೋಶಾತ್ ಎನ್ನುವ ಅಧಿಕರಣದ ತಾತ್ಪರ್ಯವನ್ನು ಇಲ್ಲಿ ತಿಳಿಸುತ್ತಾರೆ –

.....ದೇವಾನಾಂ ತತ್ರ ಶಕ್ತತಾಂ ।
ಆಶಂಕ್ಯ ತತ್ರ ರೂಢಿಂ ಚ ತಚ್ಛಬ್ದಾನಾಮಪಿ ಸ್ವಯಂ ॥೨೪೨॥
ಸಮುದ್ರಾಂತಸ್ಥಿತತ್ವಾದ್ಯೈಸ್ತದ್ಧರ್ಮೈರ್ವಿಷ್ಣುರೂಢತಾಂ ।
ಸಾಧಯಿತ್ವಾಭದಾಂ ತೈಶ್ಚ ಪುನರೇವ ನ್ಯವಾರಯತ್ ॥೨೪೩॥

ಇಂದ್ರಾದಿ ದೇವತೆಗಳಿಗೆ ಆಯಾ ಶಬ್ದಗಳಲ್ಲಿ ಪ್ರವೃತ್ತಿನಿಮಿತ್ತವಾದ ಶಕ್ತಿಯಿದೆ ಹಾಗೂ ಸಾಕ್ಷಾತ್ತಾಗಿಯೂ ಯೋಗದಿಂದಲೂ ರೂಢಿಯಿದೆ ಎನ್ನುವ ಆಶಂಕೆಯನ್ನು ಸೂತ್ರಕಾರರು ಈ ಅಧಿಕರಣದಲ್ಲಿ ನಿವಾರಿಸಿದ್ದಾರೆ. ಸಮುದ್ರಾಂತಸ್ಥತ್ವ ಮೊದಲಾದ ವಿಷ್ಣುಧರ್ಮಗಳಿಂದ ಅಂತಃಪ್ರವಿಷ್ಟತ್ವಕ್ಕೆ ವಿಷ್ಣುವಿನಲ್ಲಿಯೇ ಮುಖ್ಯವಾದ ರೂಢಿಯೂ ಯೋಗವೂ ಇರುವುದೆಂದು 'ಅಂತಸ್ತದ್ಧರ್ಮೋಪದೇಶಾತ್' ಎನ್ನುವ ಸೂತ್ರದಿಂದ ಸಾಧಿಸಿದರು.

ದೇವತೆಗಳಿಗೂ ವಿಷ್ಣುವಿಗೂ ಐಕ್ಯವಿರುವುದರಿಂದ ವಿಷ್ಣುವಿನ ಧರ್ಮವು ಅವರಲ್ಲಿಯೂ ಕೂಡುತ್ತದೆ ಎಂದು ಹೇಳುವುದು ಸರಿಯಲ್ಲ. 'ಇಂದ್ರಸ್ಯಾತ್ಮಾ' ಇತ್ಯಾದಿ ಭೇದವ್ಯಪದೇಶಕವಾದ ಶ್ರುತಿಗಳಿರುವುದರಿಂದಲೂ ಹಾಗೂ ಅಭೇದದ ವಿಷಯದಲ್ಲಿ ಪ್ರಮಾಣವಿಲ್ಲದಿರುವುದರಿಂಲೂ ಇಂದ್ರಾದಿಗಳು ವಿಷ್ಣುವಿನಿಂದ ಭಿನ್ನರು ಎಂಬುದಾಗಿ 'ಭೇದವ್ಯಪದೇಶಾಚ್ಚಾನ್ಯಃ' ಎನ್ನುವ ಸೂತ್ರದಿಂದ ಅಭೇದವನ್ನು ನಿವಾರಿಸಿದರು. ಆದಪ್ರಯುಕ್ತ ಅಂತಃಪ್ರವಿಷ್ಟನು ವಿಷ್ಣುವೇ, ಇಂದ್ರಾದಿಗಳಲ್ಲ ಎನ್ನುವುದೇ ಈ ಅಧಿಕರಣದ ಸಾರಾಂಶ.

ಆಕಾಶಾಧಿಕರಣ

ಈ ಪ್ರಕಾರವಾಗಿ ಅಧಿದೈವಿಕ ಶಬ್ದಗಳ ಸಮನ್ವಯವನ್ನು ಹೇಳಿ, ಈಗ ಅಧಿಭೌತಿಕ ಶಬ್ದಗಳ ಸಮನ್ವಯವನ್ನು ಪ್ರತಿಪಾದಿಸುವ ಇಚ್ಛೆಯುಳ್ಳವರಾಗಿ, ಭೂತಗಳಲ್ಲಿ ಪ್ರಧಾನವಾದ ಆಕಾಶ ಶಬ್ದ ಸಮನ್ವಯವನ್ನು ಶ್ರೀಹರಿಯಲ್ಲಿ ಸೂತ್ರಕಾರರು ಪ್ರತಿಪಾದಿಸುವರು.

ಅಧಿಭೂತ ಶಬ್ದಗಳ ಸಮನ್ವಯ

ಸೂತ್ರ: ಓಂ ಆಕಾಶಸ್ತಲ್ಲಿಂಗಾತ್ ಓಂ (೧-೧-೨೨)

ಛಾಂದೋಗ್ಯದಲ್ಲಿ ಉಕ್ತವಾಗಿರುವ ಆಕಾಶ ಶಬ್ದವಾಚ್ಯನು ಶ್ರೀಹರಿಯೇ, ಪರೋವರೀಯಸ್ತ್ವಾದಿ ವಿಷ್ಣುವಿನ ಲಿಂಗವಿರುವಪ್ರಯುಕ್ತ ಎಂದು ಸೂತ್ರಾರ್ಥ.

'ಅಸ್ಯಲೋಕಸ್ಯ ಕಾ ಗತಿರಿತ್ಯಾಕಾಶ ಇತಿ ಹೋವಾಚ । ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ' ಇತ್ಯಾದಿ ಛಾಂದೋಗ್ಯ ಶ್ರುತಿಯಲ್ಲಿ - ಈ ಲೋಕಕ್ಕೆ ಆಕಾಶವೇ ಆಶ್ರಯವು, ಎಲ್ಲ ಭೂತಗಳೂ ಆಕಾಶದಿಂದಲೇ ಹುಟ್ಟುತ್ತವೆ, ಆಕಾಶದಲ್ಲಿಯೇ ಲೀನವಾಗುತ್ತವೆ, ಎಲ್ಲ ಭೂತಗಳಿಗಿಂತ ಆಕಾಶವೇ ಶ್ರೇಷ್ಠವಾದುದು, ಆಕಾಶವೇ ಮುಖ್ಯಾಶ್ರಯ, ಆಕಾಶವೇ ಸರ್ವೋತ್ತಮ ಹಾಗೂ ಅನಂತವೆಂದು ಗಾನಮಾಡಲ್ಪಡತಕ್ಕದ್ದು ಎಂದು ಹೇಳಲಾಗಿದೆ. ಯೋಗದಿಂದಲೂ ರೂಢಿಯಿಂದಲೂ ಆಕಾಶ ಶಬ್ದವು ಭೂತಾಕಾಶದಲ್ಲಿಯೇ ಪ್ರಸಿದ್ಧವಾಗಿದೆ. ಅವಕಾಶಪ್ರದವಾದ್ದರಿಂದ ಆಕಾಶ ಎಂಬ ನಿರ್ವಚನದಿಂದಲೂ ಇದು ಸಿದ್ಧವಾಗಿದೆ. ಭೂತಾಕಾಶ ವಿಷಯದಲ್ಲಿಯೇ

ಲೌಕಿಕ ಹಾಗೂ ವೈದಿಕ ಪ್ರಯೋಗಗಳೂ ಬಹಳವಾಗಿ ಕಂಡಿವೆ. ಆದಕಾರಣ ಇಲ್ಲಿ ಪ್ರಸಕ್ತವಾಗಿರುವುದು ಭೂತಾಕಾಶವೇ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಲಿಂಗಗಳಿಗೆ ಬಾಹುಲ್ಯದ ನಿಮಿತ್ತವಾದ ಪ್ರಾಬಲ್ಯಕ್ಕಿಂತ ಸ್ವಭಾವ ಪ್ರಯುಕ್ತ ಪ್ರಾಬಲ್ಯವೇ ಬಲಿಷ್ಠವು. ಆದಪ್ರಯುಕ್ತ ಮೊದಲಿಗೆ ತಿಳಿಯಲ್ಪಟ್ಟ ಸ್ವಭಾವತಃ ಪ್ರಬಲವಾದ ಶ್ರುತಿಗೆ ವಿರೋಧವಾಗದಂತೆ ಲಿಂಗಗಳನ್ನು ಯೋಜಿಸಿ ಅರ್ಥಮಾಡಬೇಕು. ಹಾಗಾದರೆ ಅಂತಸ್ತಧರ್ಮೋಪದೇಶಾತ್ ಎನ್ನುವ ಸೂತ್ರದಲ್ಲಿಯೇ ಇಂದ್ರಾದಿ ಶಬ್ದಗಳಿಗೆ ಭಗವತ್ಪರತ್ವವನ್ನು ನಿರ್ಣಯ ಮಾಡಿರುವುದರಿಂದ ಆಕಾಶ ಶಬ್ದವನ್ನು ಭಗವಂತನಲ್ಲಿಯೇ ಸಮನ್ವಯ ಮಾಡಬಹುದಾಗಿದೆ. ಅಭ್ಯಧಿಕಾಶಂಕೆಯೂ ಇರುವುದಿಲ್ಲ. ಅಂದಮೇಲೆ ಈಗ ಹೊಸ ಅಧಿಕರಣದ ಪ್ರಾರಂಭವು ಅನವಶ್ಯಕ ಎಂದು ಹೇಳಿದರೆ, ಹಾಗಲ್ಲ ಇಲ್ಲಿಯೂ ಅಭ್ಯಧಿಕಾಶಂಕೆ ಬರುವುದು ಎಂಬುದನ್ನು ತೋರಿಸಿ ಆಶಂಕೆಯನ್ನು ನಿರಾಸೆ ಮಾಡುತ್ತಾರೆ -

ಚೇಷ್ಟಾ ಹಿ ಚೇತನಾನಾಂ ಯಾ ಸಾ ಭವೇತ್ತತ್ಪ್ರಸಾದತಃ ।
ಅಚೇತನಸ್ವಭಾವಸ್ತು ಏವರಾದಿಃ ಕಥಂ ತತಃ ॥೨೪೪॥
ಇತಿ ಶಂಕಾನಿವೃತ್ತ್ಯರ್ಥಮಾಕಾಶ ಇತಿ ನಾಮ ಚ ।
ಪರತೋಽಪಿ ವರೀಯಸ್ತ್ವಪೂರ್ವಾಲ್ಲಿಂಗಾದ್ಧರೇರ್ಭವೇತ್ ॥೨೪೫॥
ನಭೋ ದದಾತಿ ಶ್ವಸತಾಂ ಮಾರ್ಗಂ ಯನ್ನಿಯಮಾದದಃ ।
ಇತ್ಯಾದಿ ವಾಕ್ಯೈಃ .....॥

ಚೇತನರ ಚೇಷ್ಟೆಗಳು ಶ್ರೀಹರಿಯ ಅನುಗ್ರಹದಿಂದಲೇ ಆಗುವುದು ಎಂಬುದೇನೋ ಸರಿಯೇ. ಆದರೆ ಅಚೇತನಗಳ ಸ್ವಭಾವವನ್ನು ಹೊಂದಿರುವ ಆಕಾಶಾದಿಗಳು ಈಶ್ವರನಿಂದ ಚೇಷ್ಟಿತವು ಹೇಗೆ ಆಗುವುದು ಎನ್ನುವ ಶಂಕಾನಿವೃತ್ತಿಗಾಗಿ, ನಿರವಕಾಶವಾದ ಪರೋವರೀಯಸ್ತ್ವವೇ ಮೊದಲಾದ ಲಿಂಗಗಳಿರುವುದರಿಂದ ಆಕಾಶ ಎಂಬ ನಾಮಧೇಯವೂ ವಿಷ್ಣುವಾಚಕವೇ ಆಗುವುದು ಎಂದು ತಿಳಿಸುತ್ತಾರೆ. ಈ ಆಕಾಶವು ಯಾರ ಪ್ರೇರಣೆಯಿಂದಲೇ ಶ್ವಾಸೋಚ್ಛ್ವಾಸ ಮಾಡುವ ಪ್ರಾಣಿಗಳಿಗೆ ಅವಕಾಶ ಕೊಡುವುದೋ ಇವೇ ಮೊದಲಾದ ವಾಕ್ಯಗಳಿಂದ ಭೂತಾಕಾಶಕ್ಕೆ ಸ್ವಾತಂತ್ರ್ಯೇಣ ಅವಕಾಶಪ್ರದತ್ವವು

ಇರುವುದಿಲ್ಲ ಎಂದು ತಿಳಿದುಬರುವುದು. ನಿರವಧಿಕವಾದ ಅವಕಾಶಪ್ರದತ್ವವು ಸರ್ವೋತ್ತಮನಾದ ವಿಷ್ಣುವಿನ ಧರ್ಮವೇ ಎಂಬುದು ಇದರಿಂದ ನಿಶ್ಚಯವಾಗುತ್ತದೆ. ಆದಪ್ರಯುಕ್ತ ಆಕಾಶ ಮತ್ತು ಅದರಿಂದ ಉಪಲಕ್ಷಿತವಾದ ಎಲ್ಲ ಅಧಿಭೂತ ಶಬ್ದಗಳಿಂದ ಪರಮ ಮುಖ್ಯವೃತ್ತಿಯಿಂದ ಶ್ರೀಹರಿಯೇ ವಾಚ್ಯನು ಎಂದು ಸಿದ್ಧವಾಗುವುದು.

ಪ್ರಾಣಾಧಿಕರಣ

ಪ್ರಾಣಾದಿ ಆಧ್ಯಾತ್ಮಿಕ ಶಬ್ದಗಳ ಸಮನ್ವಯ

ಈಗ ಆಧ್ಯಾತ್ಮಿಕ ಶಬ್ದಗಳ ಸಮನ್ವಯವನ್ನು ಸಾಧಿಸುವ ಇಚ್ಛೆಯುಳ್ಳವರಾಗಿ ಸೂತ್ರಕಾರರು ಪ್ರಧಾನವಾದ ಪ್ರಾಣ ಶಬ್ದದ ಸಮನ್ವಯವನ್ನು ಮಾಡುತ್ತಾರೆ -

ಸೂತ್ರ: ಓಂ ಅತ ಏವ ಪ್ರಾಣಃ ಓಂ (೧-೧-೨೩)

ನಿರವಕಾಶವಾದ ಲಕ್ಷ್ಮೀಪತಿತ್ವ ಲಿಂಗವಿರುವುದರಿಂದ ತೈತ್ತರೀಯದಲ್ಲಿ ಶ್ರುತನಾದ ಪ್ರಾಣ ಶಬ್ದವಾಚ್ಯನು ವಿಷ್ಣುವೇ.

'ತದ್ವೈ ತ್ವಂ ಪ್ರಾಣೋಽಭವಃ। ಮಹಾನ್ಭೋಗಃ ಪ್ರಜಾಪತೇಃ। ಭುಜಃ ಕರಿಷ್ಯಮಾಣಃ ಯದ್ದೇವಾನ್ ಪ್ರಾಣಯೋ ನ ವಾ।' ಎಂದು ತೈತ್ತರೀಯದಲ್ಲಿ ಶ್ರುತವಾಗಿದೆ. ಈ ಪ್ರಾಣ ಶಬ್ದವಾಚ್ಯನು ಪರಮಾತ್ಮನೋ ಮುಖ್ಯಪ್ರಾಣನೋ ಎಂದು ಸಂಶಯ. ಜಡವಾದ ವಾಯುವಿನಲ್ಲಿ ಪ್ರಾಣಶಬ್ದ ಪ್ರಯೋಗವಿದ್ದರೂ ಅದು ಇಲ್ಲಿ ಕೂಡುವುದಿಲ್ಲ. ಏಕೆಂದರೆ ಅಚೇತನವನ್ನು ಕುರಿತು 'ತದ್ವೈ ತ್ವಂ' ಎಂದು ಹೇಳುವುದಿಲ್ಲ. ಅಂದಮೇಲೆ ಮುಖ್ಯಪ್ರಾಣನೆಂದೇ ಹೇಳಬೇಕು. ಪ್ರಾಣಶಬ್ದಕ್ಕೆ ಲೌಕಿಕ ವೈದಿಕ ಗ್ರಂಥಗಳಲ್ಲಿ ಮುಖ್ಯಪ್ರಾಣನಲ್ಲಿಯೇ ಪ್ರಯೋಗ ಬಾಹುಲ್ಯವಿದೆ. ಜೊತೆಗೆ 'ಪ್ರಾಣಂತಿ ಅನೇನ' ಎಂಬ ನಿರುಕ್ತಿಯೂ ಉಂಟು. ಆದ್ದರಿಂದ ಇಲ್ಲಿ ಮುಖ್ಯಪ್ರಾಣನೇ ಹೇಳಲ್ಪಟ್ಟಿದ್ದಾನೆ ಎಂದು ಆಶಂಕಿಸಿದರೆ -

.....ಅಧ್ಯಾತ್ಮಮನ್ವಯವ್ಯತಿರೇಕತಃ ॥೨೪॥

ಪ್ರಾಣಾದಿ ಹೇತುತಾದೃಷ್ಟೇರತಿದೇಶೋ ಹಿ ತಾದೃಶಃ ।
ಲಿಂಗಂ ಬಲವದೇವ ಸ್ಯಾತ್ ಪ್ರೇರಕೋಽಸ್ಯಾಪಿ ಯದ್ಧರಿಃ ॥೨೪॥

ಆತ್ಮನನ್ನು ಅಧಿಕರಿಸಿಕೊಂಡು ಆತ್ಮನಿಗೆ ಭೋಗಕ್ಕೆ ಆಶ್ರಯವಾದುದರಿಂದ ಶರೀರವು ಅಧ್ಯಾತ್ಮ ಎನಿಸುವುದು. ಆ ಶರೀರದಲ್ಲಿ ಮುಖ್ಯಪ್ರಾಣನಿದ್ದರೆ ಮಾತ್ರ ಜೀವನ ಇಲ್ಲದಿದ್ದರೆ ಜೀವನವಿಲ್ಲ ಎನ್ನುವ ಅನ್ವಯ-ವ್ಯತಿರೇಕಗಳಿಂದ ಶರೀರಸ್ಥನಾದ ಜೀವನ ಚೇಷ್ಟಾದಿ ಕಾರಣತ್ವವು ಮುಖ್ಯಪ್ರಾಣನಿಗೇನೇ ದೃಶ್ಯವಾಗಿದೆ. ಪ್ರಾಣಾದಿ ಕಾರಣತ್ವವು ಪರಮಾತ್ಮನಲ್ಲಿ ತೋರುವುದಿಲ್ಲ. ಆದಕಾರಣ ಇಲ್ಲಿ ಮುಖ್ಯಪ್ರಾಣನೇ ಪ್ರಾಣಶಬ್ದದಿಂದ ಹೇಳಲ್ಪಟ್ಟಿದ್ದಾನೆ ಎಂದು ಹೇಳುವುದು ಸರಿಯಲ್ಲ. ಪ್ರಬಲವಾದ ಶ್ರೇಪತಿತ್ವ ಎಂಬ ವಿಷ್ಣುಲಿಂಗವು ಇಲ್ಲಿ ಶ್ರುತವಾಗಿರುವ ಪ್ರಯುಕ್ತ ಪ್ರಾಣ ಶಬ್ದವು ಮುಖ್ಯಾರ್ಥದಲ್ಲಿ ವಿಷ್ಣುವಿಗೇ ಅನ್ವಯಿಸುತ್ತದೆ. ಶರೀರಸ್ಥ ಜೀವನು ಯಾವ ಮುಖ್ಯಪ್ರಾಣನಿಗೆ ಅಧೀನನೋ, ಆ ಮುಖ್ಯಪ್ರಾಣನೂ ಶ್ರೀಹರಿಯಿಂದ ಪ್ರೇರಿತನಾಗಿಯೇ ಅಧೀನನಾಗಿಯೇ ಪ್ರವೃತ್ತನಾಗುವನು. ಆದ್ದರಿಂದ ಶ್ರೀಹರಿಯೇ ಮುಖ್ಯತಃ ಪ್ರಾಣಶಬ್ದವಾಚ್ಯನು.

ಜ್ಯೋತಿರಧಿಕರಣ

ಸೂತ್ರ: ಓಂ ಜ್ಯೋತಿಶ್ಚರಣಾಭಿಧಾನಾತ್ ಓಂ (೧-೧-೨೪)

ಅಗ್ನಿಸೂಕ್ತದಲ್ಲಿ ಉಕ್ತನಾದ ಜ್ಯೋತಿಶಬ್ದವಾಚ್ಯನು ವಿಷ್ಣುವೇ, ಅಗ್ನಿಯಲ್ಲ. ವಿಷ್ಣುವಿಗೆ ಇಂದ್ರಿಯ ವಿದೂರತ್ವ ಲಿಂಗವು ಉಕ್ತವಾಗಿರುವುದರಿಂದ.

ಈ ಅಧಿಕರಣದ ಅಧಿಕಾತಂಕಾವನ್ನು ಭಾಷ್ಯದಲ್ಲಿಯೇ ಅಗ್ನಿಸೂಕ್ತತ್ವಾತ್ ಎಂದು ತೋರಿಸಿರುವದರಿಂದ ಈ ಅಧಿಕರಣವನ್ನು ಇಲ್ಲಿ ವಿವರಿಸಿಲ್ಲ.

ಗಾಯತ್ರ್ಯಧಿಕರಣ

ಅಧಿವೇದಗತ ಶಬ್ದಗಳ ಸಮನ್ವಯ

ಈ ಅಧಿಕರಣದಲ್ಲಿ ಅಧಿವೇದಗತ ಗಾಯತ್ರಿಯೇ ಮೊದಲಾದ ಅಶೇಷ ಛಂದೋವಾಚಕ ನಾಮಗಳ ಸಮನ್ವಯ ಮಾಡುತ್ತಾರೆ. ಛಂದಸ್ಸುಗಳಲ್ಲಿ ಗಾಯತ್ರಿಯೇ ಪ್ರದಾನವಾದ್ದರಿಂದ ಇಲ್ಲಿ ಗಾಯತ್ರಿಯನ್ನು ತೆಗೆದುಕೊಳ್ಳಲಾಗಿದೆ. ಉಪಲಕ್ಷಣಯಾ ಎಲ್ಲ ಛಂದೋವಾಚಕ ಶಬ್ದಗಳನ್ನು ಇಲ್ಲಿ ಪರಿಗಣಿಸಬೇಕು.

ಸೂತ್ರ: ಓಂ ಛಂದೋಭಿಧಾನಾನ್ನೇತಿ ಚೇನ್ನ ತಥಾ ಚೇತೋರ್ಪಣ

ನಿಗದಾತ್ತಥಾ ಹಿ ದರ್ಶನಂ ಓಂ (೧-೧-೨೫)

ಗಾಯತ್ರಿಯು ಒಂದು ಛಂದಸ್ಸು ಎಂದು ಪ್ರಸಿದ್ಧವಾಗಿರುವುದರಿಂದ ಗಾಯತ್ರೀ ಶಬ್ದವಾಚ್ಯನು ಪರಬ್ರಹ್ಮನಲ್ಲ ಎಂದು ಹೇಳಿದರೆ ಅದು ಸರಿಯಲ್ಲ. ಉಪಾಸನೆಗಾಗಿ 'ಗಾಯತ್ರೀ ವಾ ಇದಂ ಭೂತಂ' ಎಂದು ಹೇಳುವ ಶ್ರುತಿಯು ಮುಂದೆ 'ಗಾಯತಿ ಚ ತ್ರಾಯತೇ ಚ ತಸ್ಮಾದ್ಗಾಯತ್ರೀ' ಎಂದು ಗಾನ ತ್ರಾಣ ಕರ್ತೃತ್ವರೂಪವಾದ ವಿಷ್ಣುಲಿಂಗವನ್ನು ಗಾಯತ್ರಿಯ ಲಕ್ಷಣವಾಗಿ ಹೇಳುವುದು. ಆದಪ್ರಯುಕ್ತ ಗಾಯತ್ರೀ ಶಬ್ದವಾಚ್ಯನು ವಿಷ್ಣುವೇ, ಪ್ರಸಿದ್ಧವಾದ ಛಂದಸ್ಸಲ್ಲ.

'ಗಾಯತ್ರೀ ವಾ ಇದಂ ಸರ್ವಂ' ಇತ್ಯಾದಿ ಛಾಂದೋಗದಲ್ಲಿ ಶ್ರುತವಾಗಿದೆ. ಗಾಯತ್ರೀ ಎನ್ನುವುದು ಮಂತ್ರವೋ ಅಥವಾ ವಿಷ್ಣುವೋ ಎಂದು ಸಂಶಯ. ಛಂದೋ ವಿಶೇಷದಲ್ಲಿ ಪ್ರಸಿದ್ಧವಾಗಿರುವುದರಿಂದ ಗಾಯತ್ರಿಯು ಮಂತ್ರವೇ ಎಂದು ಪೂರ್ವಪಕ್ಷ. ಇದೂ ಕೂಡ ಪೂರ್ವನ್ಯಾಯದಿಂದಲೇ ಪರಿಹೃತವಾಗಿದೆ ಎಂದು ಅಭ್ಯಧಿಕಾಶಂಕೆ ಮಾಡಿ ಅದನ್ನು ಪರಿಹರಿಸುತ್ತಾರೆ.

ನಿತ್ಯತ್ವತ್ವಾದೇವ ಶಬ್ದಸ್ಯ ತತ್‌ಸ್ವಭಾವಃ ಕಥಂ ಹರೇಃ ।
ಕಥಂ ಪ್ರಸಿದ್ಧಬಹುಲಶಬ್ದಾನಾಮನ್ಯತಾರ್ಥತಾ ॥೨೪೮॥
ಇತಿ ಚೇತ್ತದ್ಧರೇರೇವ ಬಾಹುಲ್ಯಾಚ್ಛ್ರುತಿಲಿಂಗಯೋಃ ।
ತಾದೃಶತ್ವಾಚ್ಚ ತಚ್ಛಕ್ತೇಃ .....॥

ವೇದವು ನಿತ್ಯವಾದುದರಿಂದ, ನಿತ್ಯವಾದ ಶಬ್ದಸ್ವಭಾವವು ಶ್ರೀಹರಿಯ ಅಧೀನವಾಗುವದು ಹೇಗೆ ಸಾಧ್ಯ. ಸ್ವಬಾವಕ್ಕೆ ಅನ್ಯಾಧೀನತ್ವವಿರುವುದಿಲ್ಲ. 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ' ಇತ್ಯಾದಿ ಶಬ್ದಗಳಲ್ಲಿಯೇ ಪ್ರಸಿದ್ಧವಾದ ಅನೇಕ ಶಬ್ದಗಳು ಕೇಳಿಬರುತ್ತವೆ. ಯಾವುದೇ ಬಾಧಕವಿಲ್ಲದೇ ಅಂಥಹ ಶಬ್ದಗಳಿಗೆ ಅನ್ಯಾರ್ಥ ಕಲ್ಪಿಸುವುದು ಸಾಧ್ಯವಿಲ್ಲ. ಹೀಗೆ ಹೇಳುವುದು ಉಚಿತವಲ್ಲ. ಜ್ಯೋತಿ ಪ್ರಕರಣ ಹಾಗೂ ಗಾಯತ್ರೀ ಪ್ರಕರಣದಲ್ಲಿ ಉಕ್ತವಾಗಿರುವ ಶಬ್ದಗಳು ಶ್ರೀಹರಿಯನ್ನೇ ಹೇಳುತ್ತವೆ. ಗಾಯತ್ರೀ ಪದ ಪ್ರವೃತ್ತಿನಿಮಿತ್ತವು ಮುಖ್ಯವಾಗಿ ಹರಿಯಲ್ಲಿಯೇ ಕೂಡುವುದು. ಇತರವಾದ ಛಂದಸ್ಸಿನಲ್ಲಿರುವ ಪ್ರವೃತ್ತಿನಿಮಿತ್ತವೂ ಶ್ರೀಹರಿಯ ಅಧೀನವೇ.

ಗಾಯತ್ರೀ ಜ್ಯೋತಿ ಇತ್ಯಾದಿ ನಾಮಗಳಿಗೆ ಶ್ರುತಿ ಮತ್ತು ಲಿಂಗಗಳ ಬಾಹುಲ್ಯದಿಂದ ಪರಮಾತ್ಮನಲ್ಲಿಯೇ ವಾಚಕತ್ವವು ಕೂಡುವುದು. ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವು ಅವುಗಳ ಸ್ವಭಾವವಾಗಿದ್ದರೂ, ಎಲ್ಲ ವಸ್ತುಗಳ ಸ್ವಭಾವವೂ ಪರಮಾತ್ಮನ ನಿಯಮನ ಶಕ್ತಿಗೆ ಅಧೀನವಾಗಿರುವುದರಿಂದ ಸರ್ವವೂ ಪರಮಾತ್ಮನ ಅಧೀನವೇ ಆಗಿದ್ದು, ಮುಖ್ಯವೃತ್ತಿಯಿಂದ ಪರಮಾತ್ಮವಾಚಕಗಳೇ ಆಗಿರುತ್ತವೆ. ಆದ್ದರಿಂದ ಗಾಯತ್ರೀ ಶಬ್ದವಾಚ್ಯನು ಪರಮಾತ್ಮನೇ ಆಗಿರುವನು.

ಪಾದಾಂತ್ಯಪ್ರಾಣಾಧಿಕರಣ

ಸೂತ್ರ: ಓಂ ಪ್ರಾಣಸ್ತಥಾನುಗಮಾತ್ ಓಂ (೧-೧-೨೮)

'ಅತ ಏವ ಪ್ರಾಣಃ' ಎನ್ನುವ ಪ್ರಾಣಾಧಿಕರಣದಿಂದಲೇ ಈ ಅಧಿಕರಣವು ಗತಾರ್ಥವಾಗಿರುವುದರಿಂದ ಆರಂಭಣೀಯವಲ್ಲ ಎಂದರೆ ಅದು ಸರಿಯಲ್ಲ. 'ತಾ ಏತಾಃ ಶೀರ್ಷನ್ ಶ್ರಿಯಃ ಶ್ರಿತಾಃ' ಇತ್ಯಾದಿ ವಾಕ್ಯಾಂತರ ವಿಷಯತ್ವವಿರುವುದರಿಂದ ಈ ಅಧಿಕರಣವು ವ್ಯರ್ಥವಲ್ಲ ಎಂದು ಹೇಳುತ್ತೇವೆ ಎಂದರೆ ಹಾಗೆ ಹೇಳಕೂಡದು. ವಿಷಯ ವಾಕ್ಯಗಳು ಬೇರೆ ಇರುವುದರಿಂದ ಬೇರೆ ಅಧಿಕರಣವನ್ನು ಹೇಳುವುದಾದರೆ ಶಾಸ್ತ್ರಗಳಿಗೆ ಪರ್ಯವಸಾನವೇ ಇಲ್ಲದಂತಾಗುವುದು. ಅಭ್ಯಧಿಕಾಶಂಕೆಯಿರುವುದರಿಂದ ಎಂದು ಹೇಳಿದರೆ, ಇಲ್ಲಿ ಅಂತಹದೇನೂ ತೋರುವುದಿಲ್ಲ. ಒಂದುವೇಳೆ ಅಂತಹ ಶಂಕೆಯಿರುವುದಾದರೆ ಆ ಸೂತ್ರ ಹೇಳಿದೊಡನೆಯೇ ಈ ಅಧಿಕರಣವನ್ನು ಆರಂಭಿಸಬೇಕಿತ್ತು. ಹೀಗೆ ಅಧಿಕಾಶಂಕೆ ಮಾಡಿಕೊಂಡು ನಿರಾಕರಿಸುತ್ತಾರೆ -

.....ಬಾಹುಲ್ಯೇ ಶ್ರುತಿಲಿಂಗಯೋಃ ॥೨೪೯॥

ಅನ್ಯಸ್ಯ ಮುಖ್ಯವಾಚ್ಯತ್ವಮಿತಿ ತನ್ನಾತ್ರಗಸ್ಯ ಹಿ ।
ವಿಷ್ಣೋವೇವ ತು ಲಿಂಗಾನಿ ಪ್ರಾಣಸ್ಥಾನಿ ತು ಸರ್ವಶಃ ॥೨೫೦॥
ಪ್ರಾಣಸಂವಾದಪೂರ್ವಾಣಿ ಮುಖ್ಯತೋ ಜೀವಗಾನಿ ಚ ।
ಅಭ್ಯರ್ಚ್ಯಚ್ಛತವರ್ಷಾಣಿ ಪ್ರಾಣವಂಶತ್ವಮಿತ್ಯಪಿ ॥೨೫೧॥

ವಿಷ್ಣುವಿನಿಂದ ಇತರರಾದ ಜೀವ ಇಂದ್ರ ಪ್ರಾಣಾದಿಗಳ ಪರವಾಗಿ ಬಹಳವಾದ ಶ್ರುತಿ ಲಿಂಗಗಳು ಕಂಡಿರುವ ಪ್ರಯುಕ್ತ ಇಂದ್ರಾದಿಗಳಿಗೇ

ಮುಖ್ಯವಾಗಿ ಪ್ರಾಣಶಬ್ದ ವಾಚ್ಯತ್ವವು ಕೂಡುವುದು ಎಂದು ಆಶಂಕಿಸಿದರೆ, ಅದು ಯುಕ್ತವಲ್ಲ. ಏಕೆಂದರೆ ಪರಬ್ರಹ್ಮವಿಷಯಕವಾದ ಶ್ರುತಿ ಲಿಂಗಗಳಿಗೆ ಬಾಹುಲ್ಯವಿರುವಾಗ ಇತರರಾದ ಇಂದ್ರಾದಿಗಳಿಗೆ ಪ್ರಾಣಶಬ್ದ ಮುಖ್ಯವಾಚ್ಯವು ಕೂಡುವುದಿಲ್ಲ. ಪ್ರಾಣನನ್ನೇ ಹೇಳುವಂತೆ ತೋರುವ 'ಪ್ರಾಣೋ ವಂಶಃ' ಇತ್ಯಾದಿ ವಾಕ್ಯಗಳಲ್ಲಿ ಹೇಳಿದ ಚಕ್ಷುರಾದಿ ಇಂದ್ರಿಯಗಳ ಆಶ್ರಯತ್ವ ಮೊದಲಾದ ಎಲ್ಲ ಪ್ರಾಣಲಿಂಗಗಳೂ, ಜೀವರಲ್ಲಿ ತೋರತಕ್ಕ 'ತಂ ಯಚ್ಛತಂ ವರ್ಷಾಣ್ಯಭ್ಯಾರ್ಚತ್' ಇತ್ಯಾದಿ ವಾಕ್ಯಗಳಲ್ಲಿ ಹೇಳಿದ ಶತಾಯುಷ್ಯ ಮೊದಲಾದ ಎಲ್ಲ ಜೀವಲಿಂಗಗಳೂ ಮುಖ್ಯವಾಗಿ ಇಂದ್ರ ಮತ್ತು ಜೀವಾದಿಗಳಲ್ಲಿರತಕ್ಕ ವಿಷ್ಣುವಿಗೇ ಕೂಡುತ್ತವೆ.

ಪಾದಾರ್ಥ ಉಪಸಂಹಾರ

ತಸ್ಮಾದನ್ಯತ್ರಗೈಃ ಶಬ್ದೈರುಕ್ತನ್ಯಾಯೈಃ ಸಮಂತತಃ ।
ಏಕೋ ನಾರಾಯಣೋ ದೇವೋ ಭಣ್ಯತೇ ನಾತ್ರ ಸಂಶಯಃ ॥೨೫೨॥

ಆದಕಾರಣ ವಿಷ್ಣುವ್ಯತಿರಿಕ್ತರಾದ ಇಂದ್ರಾದಿಗಳ ಪರವೆಂದು ತೋರುವಂತೆ ಹೇಳಲ್ಪಟ್ಟ ನ್ಯಾಯಗಳಿಂದ ಎಲ್ಲ ವೇದಗಳಲ್ಲಿರತಕ್ಕ ನಾಮಾತ್ಮಕ ಶಬ್ದಗಳಿಂದ ಮುಖ್ಯಾರ್ಥನಾಗಿ ಕ್ರೀಡಾದಿ ವಿಶಿಷ್ಟನಾದ ನಾರಾಯಣನೇ ಹೇಳಲ್ಪಡುತ್ತಾನೆ. ಈ ವಿಷಯದಲ್ಲಿ ಸಂಶಯವಿರುವುದಿಲ್ಲ.

ವಾಸುದೇವಾದಿ ರೂಪೇಣ ಚತುರ್ಮೂರ್ತಿಶ್ಚ ಸರ್ವಶಃ ।
ಅಥವಾ ಪಂಚಮೂರ್ತಿಃ ಸ ಪ್ರೋಕ್ತೋಧಿಕರಣಂ ಪ್ರತಿ ॥೨೫೩॥

ವಾಸುದೇವ ಮೊದಲಾದ ನಾಲ್ಕು ರೂಪಗಳಿಂದ (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ) ಎಲ್ಲ ಪಾದಗಳಲ್ಲಿಯೂ ಅಥವಾ ನಾರಾಯಣ, ವಾಸುದೇವ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಐದು ರೂಪಗಳಿಂದ ಆ ಪರಮಾತ್ಮನು ಎಲ್ಲ ಅಧಿಕರಣಗಳಲ್ಲಿಯೂ ವಿಶೇಷವಾಗಿ ಹೇಳಲ್ಪಟ್ಟಿದ್ದಾನೆ. ಅದೇ ನಾರಾಯಣನೇ ಎಲ್ಲ ಸೂತ್ರಗಳಲ್ಲಿಯೂ, ಎಲ್ಲ ಪದಗಳಲ್ಲಿಯೂ, ಎಲ್ಲ ಅಕ್ಷರಗಳಲ್ಲಿಯೂ ವರ್ಣಿಸಲ್ಪಟ್ಟಿದ್ದಾನೆ.

ಪ್ರತಿಸೂತ್ರಂ ಪ್ರತಿಪದಂ ಪ್ರತ್ಯಕ್ಷರಮಥಾಪಿ ವಾ ।
ತೈಸ್ತೈರ್ಯುಕ್ತಿಶ್ರುತಿನ್ಯಾಯವಿಶೇಷೈರ್ಯೋಗ್ಯತಾ ಯಥಾ ॥೨೫೪॥

ಆಯಾಯ ಮೂರ್ತಿಗಳಲ್ಲಿ ಪ್ರಸಿದ್ಧವಾದ ಲಿಂಗ, ಶ್ರುತಿ, ಸಮಾಖ್ಯಾದಿ ಭೇದಜ್ಞಾಪಕ ನ್ಯಾಯಗಳಿಂದ ಆಯಾಯ ಮೂರ್ತಿಗಳು ಪ್ರತಿಪಾದಿತವಾಗಿವೆ ಎಂದು ತಿಳಿದುಕೊಳ್ಳಬಹುದು. ಹಾಗಾದರೆ ವಾಸುದೇವಾದಿ ನಾಲ್ಕು ಅಥವಾ ನಾರಾಯಣಾದಿ ಐದು ರೂಪಗಳು ಎಲ್ಲ ಅಕ್ಷರ, ಪದ, ಸೂತ್ರ, ಅಧಿಕರಣ, ಪಾದಗಳಲ್ಲಿ ತೋರುತ್ತವೆ ಎಂಬುದು ಹೇಗೆ ಕೂಡುತ್ತದೆ ಎಂದರೆ, ಆಯಾ ಪುರುಷರ ಯೋಗ್ಯತೆಗೆ ತಕ್ಕಂತೆ ತೋರುವುದರಿಂದ ಇಲ್ಲಿ ಹೇಳಿರುವ ವಿಕಲ್ಪವು ಕೂಡುವುದು.

ಬೃಹತ್ತಂತ್ರಪ್ರಮಾಣೇನ ಬಹ್ವರ್ಥಮಪಿ ಸಂಗ್ರಹಾತ್ ।
ಉಚ್ಯತೇ ನರಬುದ್ಧೀನಾಮಪಿ ಕಿಂಚದ್ಗ್ರಹಾರ್ಥತಃ ॥೨೫೫॥

ಬೃಹತ್ತಂತ್ರ ಪ್ರಮಾಣದಿಂದ ಇಂಥಹ ವಿಶೇಷ ಅರ್ಥಗಳು ಬಹಳವಾಗಿ ತಿಳಿಯಲ್ಪಡುತ್ತವೆ. ಈ ಗ್ರಂಥದಲ್ಲಿ ಸೂತ್ರಗಳಿಗೆ ಅನೇಕ ಅರ್ಥಗಳು ಉಕ್ತವಾಗಿದ್ದರೂ, ಅಲ್ಪ ಬುದ್ಧಿಯುಳ್ಳವರಿಗೂ ಸ್ವಲ್ಪವಾದರೂ ಸೂತ್ರಗಳ ಅರ್ಥಜ್ಞಾನವಾಗಲಿ ಎಂಬ ಉದ್ದೇಶದಿಂದ ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ.

ಗ್ರಂಥೋಯಮಪಿ ಬಹ್ವರ್ಥೋ ಭಾಷ್ಯಂ ಚಾತ್ಯರ್ಥವಿಸ್ತರಂ ।
ಬಹುಜ್ಞಾ ಏವ ಜಾನಂತಿ ವಿಶೇಷೇಣಾರ್ಥಮೇತಯೋಃ ॥
ತಸ್ಮಾನ್ಮಹಾಗುಣೋ ವಿಷ್ಣುರ್ನಾಮ್ನಾಮಪುನರುಕ್ತತಃ ॥೨೫೬॥

ಸಂಪೂರ್ಣವಾಗಿ ಅರ್ಥಗಳನ್ನು ಇಲ್ಲಿ ವ್ಯಾಖ್ಯಾನ ಮಾಡದೇ ಇದ್ದರೂ, ಈ ಅನುವ್ಯಾಖ್ಯಾನವು ಅನೇಕಾರ್ಥವುಳ್ಳದ್ದಾಗಿದೆ. ನಮ್ಮಿಂದ ರಚಿತವಾದ ಭಾಷ್ಯಗ್ರಂಥವೂ ಹೆಚ್ಚಿನ ಅರ್ಥವಿಸ್ತಾರವನ್ನು ಹೊಂದಿದೆ. ಹೆಚ್ಚಿನ ಜ್ಞಾನವುಳ್ಳವರೇ ವಿಶೇಷವಾಗಿ ಈ ಗ್ರಂಥಗಳ ಅರ್ಥಗಳನ್ನು ತಿಳಿಯಲು ಸಾಧ್ಯ. ಎಲ್ಲ ವೇದಗಳಲ್ಲಿರತಕ್ಕ ಎಲ್ಲ ನಾಮಗಳಿಂದಲೂ ವಾಚ್ಯನಾದ ಪ್ರಯುಕ್ತವೂ, ನಾಮಗಳಿಗೆ ಪುನರುಕ್ತಿಯಿಲ್ಲದಿರುವದರಿಂದಲೂ ವಿಷ್ಣುವು ಅನಂತಕಲ್ಯಾಣಗುಣಗಣಪರಿಪೂರ್ಣನು ಎಂಬುದು ಸಿದ್ಧವಾಗುವುದು.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದನುವ್ಯಾಖ್ಯಾನೇ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ॥

* * *

ಮೊದಲನೆಯ ಅಧ್ಯಾಯ

ಎರಡನೆಯ ಪಾದ

ಮೊದಲನೆಯ ಪಾದದಲ್ಲಿ ಅನ್ಯತ್ರ ಪ್ರಸಿದ್ಧವಾದ ಎಲ್ಲ ನಾಮಾತ್ಮಕ ಶಬ್ದಗಳಿಗೆ ಸಮನ್ವಯವನ್ನು ನಿರೂಪಿಸಿದರು. ಎರಡನೆಯ ಪಾದದಲ್ಲಿ ಎಲ್ಲ ಲಿಂಗಾತ್ಮಕ ಶಬ್ದಗಳಿಗೆ ಸಮನ್ವಯವನ್ನು ನಿರೂಪಿಸುತ್ತಾರೆ. ಈ ಪಾದಕ್ಕೆ ಪೂರ್ವೋತ್ತರ ಪಾದಭೇದ ಹಾಗೂ ತನ್ನಲ್ಲಿ ಏಕವಾಕ್ಯತ್ವವು ಸಿದ್ಧಿಸುವುದಕ್ಕಾಗಿ ಈ ಪಾದದಲ್ಲಿ ಪ್ರತಿಪಾದಿತವಾದ ಅರ್ಥವನ್ನು ತೋರಿಸುತ್ತಾರೆ.

ಓಂ ಲಿಂಗಾತ್ಮಕಾನಾಂ ಶಬ್ದಾನಾಂ ವೃತ್ತಿರ್ನಾರಾಯಣೇ ಪರೇ ।

ಚಿಂತ್ಯತೇ .....॥

ಯಾವ ಶಬ್ದಗಳಿಗೆ ಲಿಂಗವೇ ಪ್ರವೃತ್ತಿ ನಿಮಿತ್ತವೋ ಅಥವಾ ಸ್ವರೂಪವೋ ಅವೇ ಲಿಂಗಾತ್ಮಕ ಶಬ್ದಗಳು. ವೇದಗಳಲ್ಲಿರತಕ್ಕ ಅಂಥಹ ಎಲ್ಲ ಶಬ್ದಗಳಿಗೂ ಸರ್ವೋತ್ತಮನಾದ ನಾರಾಯಣನಲ್ಲಿಯೇ ಮುಖ್ಯವೃತ್ತಿಯು ಎಂಬುದು ಈ ಪಾದದಲ್ಲಿ ಸಮರ್ಥಿಸಲ್ಪಡುತ್ತದೆ.

ಸರ್ವಗತತ್ವಾಧಿಕರಣ

ಸತ್ತಾಲಿಂಗಸಮನ್ವಯ

ಸೂತ್ರ : ಓಂ ಸರ್ವತ್ರ ಪ್ರಸಿದ್ಧೋಪದೇಶಾತ್ ಓಂ (೧-೨-೧)

'ಮನೋಮಯಃ ಪ್ರಾಣಶರೀರೋ ಭಾರೂಪಃ' ಎಂದು ಹೇಳಿದ ಮನೋಮಯತ್ವಾದಿಗಳಿಂದ ಪರಮಾತ್ಮನು ಉಪಾಸ್ಯನು ಎಂದು ಪ್ರತಿಪಾದಿಸಲು ಈ ಅಧಿಕರಣವೆಂದು ಮಾಯಾವಾದಿಗಳು ಹಾಗೂ ರಾಮಾನುಜೀಯರು ವ್ಯಾಖ್ಯಾನ ಮಾಡುತ್ತಾರೆ. ಅದು ಸರಿಯಲ್ಲ ಎಂದು ಇಲ್ಲಿ ನಿರೂಪಿಸುತ್ತಾರೆ –

..... ಸರ್ವಗತ್ವಂ ತು ಪ್ರಥಮಂ ಪ್ರವಿಚಾರ್ಯತೇ ॥೧॥

ತತ್ರ ತತ್ರ ಸ್ಥಿತೋ ವಿಷ್ಣುಸ್ತತ್ಭಕ್ತಿಪ್ರಬೋಧಕಃ ।

ದೂರತೋಽತಿಶಕ್ತಃ ಸ ಲೀಲಯಾ ಕೇವಲಂ ಪ್ರಭುಃ ॥೨॥

ಇತಿ ಜ್ಞಾಪಯಿತುಂ .....।

ಸರ್ವಸಮರ್ಥನಾದ ವಿಷ್ಣುವು ದೂರದಲ್ಲಿದ್ದುಕೊಂಡೇ ಆಯಾಯ ವಸ್ತುಗಳಿಗೆ ಆಯಾಯ ಶಕ್ತಿಯನ್ನು ಹೊಂದಿಸಿಕೊಡುವುದರಲ್ಲಿ ಅತ್ಯಂತ ಸಮರ್ಥನಾಗಿದ್ದರೂ, ಕೇವಲ ಕ್ರೀಡೆಯಿಂದ ಆಯಾಯ ವಸ್ತುಗಳಲ್ಲಿಯೇ ಅಂತರ್ಯಾಮಿಯಾಗಿ ಇದ್ದುಕೊಂಡು ಆಯಾಯ ವಸ್ತುಗಳಲ್ಲಿರುವ ಸಹಜವಾದ ಶಕ್ತಿಯನ್ನು ಪ್ರಬೋಧಿಸಿ ಅವುಗಳನ್ನು ಕಾರ್ಯದಲ್ಲಿ ತೊಡಗಿಸುತ್ತಾನೆ. ಇದನ್ನು ತಿಳಿಸಿಕೊಡಲು 'ಏತಮಸ್ಯಾಮೇತಂ ದಿವಿ' ಇತ್ಯಾದಿ ವಾಕ್ಯಗಳಿಂದ ಉಕ್ತವಾದ ಪರಮೇಶ್ವರನ ಸರ್ವಗತತ್ವ ಧರ್ಮವೇ ಈ ಪಾದದಲ್ಲಿ ಪ್ರಥಮವಾಗಿ ವಿಚಾರಮಾಡಲ್ಪಡುತ್ತದೆ.

'ಸರ್ವೇಷು ಭೂತೇಷು' ಎಂದು ಸರ್ವಗತನಿಗೆ ಅಲ್ಪಾಶ್ರಯತ್ವವು ಶ್ರುತವಾಗಿರುವುದರಿಂದಲೂ, ಚಕ್ಷುರ್ಮಯತ್ವಾದಿ ಜೀವಲಿಂಗಗಳನ್ನು ಹೇಳಿರುವುದರಿಂದಲೂ, ಆದಿತ್ಯಶ್ರುತಿಯಿದ್ದ ಪ್ರಯುಕ್ತವೂ ಸರ್ವತ್ರ ಹೇಳಲ್ಪಟ್ಟವನು ಬ್ರಹ್ಮನೇ ಎನ್ನುವುದು ಯುಕ್ತವಲ್ಲ ಎಂದರೆ, ಅದು ಸರಿಯಲ್ಲ. ಹೀಗೆ ಹೇಳಿರುವುದು ಉಪಾಸನೆಗೆ ಅನುಕೂಲವಾಗಲೆಂದು ಮಾತ್ರ. ವ್ಯಾಪ್ತವಾದ ಆಕಾಶಕ್ಕೆ ಏಕದೇಶದಲ್ಲಿ ಹೇಗೆ ಅವಸ್ಥಿತಿಯು ಕೂಡುವುದೋ ಹಾಗೆಯೇ ಸರ್ವಗತನಾದ ವಿಷ್ಣುವಿಗೂ ಅಲ್ಪವಾದ ಭೂತಾದಿಗಳಲ್ಲಿ ಅವಸ್ಥಿತಿಯು ಕೂಡುವುದು.

ಜೀವನ ಶರೀರದಲ್ಲಿ ವಿಷ್ಣುವು ಜೀವನ ಜೊತೆಯಲ್ಲಿಯೇ ಇರುವುದಾದರೆ, ಆಗ ವಿಷ್ಣುವಿಗೆ ಜೀವನೊಂದಿಗೆ ಸಮಾನಭೋಗ ಬರಬೇಕಾಗುವುದು ಎಂದರೆ, ವಿಷ್ಣುವಿಗೆ ವಿಶೇಷ ಸಾಮರ್ಥ್ಯವಿರುವುದರಿಂದ ಹಾಗೆ ಹೇಳಕೂಡದು. ಇದಕ್ಕೆ ಉತ್ತರವಾಗಿ ಮುಂದಿನ ಸೂತ್ರ –

ಸೂತ್ರಃ ಓಂ ಕರ್ಮಕರ್ತೃವ್ಯಪದೇಶಾಚ್ಚ ಓಂ (೧-೨-೪)

'ಆತ್ಮಾನಂ ಪರಸ್ಮೈ ಶಂಸತಿ' ಎನ್ನುವ ಶಂಸನಕ್ರಿಯೆಯಲ್ಲಿ ಆತ್ಮಶಬ್ದವಾಚ್ಯನಾದ ವಿಷ್ಣುವು ಕರ್ಮನೆಂದೂ ಜೀವನು ಕರ್ತನೆಂದೂ ಹೇಳಲ್ಪಟ್ಟಿರುವುದರಿಂದ ಶರೀರವುಳ್ಳ ಈ ಜೀವನು ಸರ್ವಗತನಲ್ಲ.

ಯಾವುದೇ ಕ್ರಿಯೆಯಲ್ಲಿ ಒಬ್ಬನಿಗೇ ಕರ್ಮ-ಕರ್ತೃಭಾವ ಕೂಡುವುದಿಲ್ಲ. ಆದಪ್ರಯುಕ್ತ ಕರ್ಮ-ಕರ್ತೃಗಳಿಗೆ ಯಾವಾಗಲೂ ಭೇದವೇ ನಿಯತವಾದುದು ಎಂಬುದೇ ಸೂತ್ರದ ಅಭಿಪ್ರಾಯ.

ಕರ್ಮಕರ್ತೃಗಳಿಗೆ ಯಾವಾಗಲೂ ಭೇದವೇ ವಿವಕ್ಷಿತ ಎನ್ನುವ ನಿಯಮ ಕೂಡುವುದಿಲ್ಲ. ಏಕೆಂದರೆ 'ಮಾಮಹಂ ಜಾನಾಮಿ', ನನ್ನನ್ನು ನಾನು ತಿಳಿಯುತ್ತೇನೆ, ಎನ್ನುವಲ್ಲಿ ಒಂದು ಕ್ರಿಯೆಯಲ್ಲಿ ಒಬ್ಬನಿಗೇ ಕರ್ತೃತ್ವವೂ ಕರ್ಮತ್ವವೂ ದೃಷ್ಟವಾಗಿದೆ. ಭೇದವನ್ನು ಅಂಗೀಕರಿಸಿದರೆ ತನ್ನನ್ನು ತಾನು ತಿಳಿಯುವುದು ಎನ್ನುವ ಅನುಭವಕ್ಕೆ ವಿರೋಧ ಬರುವುದು. ಆದ್ದರಿಂದ ಕರ್ಮಕರ್ತೃಭಾವವು ಭೇದವ್ಯಾಪ್ತವಲ್ಲ ಎಂಬುದು ಸಿದ್ಧವಾಗುವುದು. ಆದಕಾರಣ ಕರ್ಮಕರ್ತೃಗಳಿಗೆ ಭೇದವನ್ನು ಹೇಳುವುದು ಕೂಡುವುದಿಲ್ಲ ಎಂದರೆ –

.....ಕರ್ಮಕರ್ತೃರುತ್ಸರ್ಗತೋ ಭಿದಾ ।
ಅಭೇದೋऽಪಿ ವಿಶೇಷೇ ಸ್ಯಾದ್ಬಲೀ ಸೋऽಪ್ಯನಪೋದಿತಃ ॥೩॥

ಅಪವಾದವಿಲ್ಲದಿದ್ದಾಗ ಕರ್ಮಕರ್ತೃಗಳಿಗೆ ಸ್ವಾಭಾವಿಕವಾಗಿ ನಿಯತವಾದ ಭೇದವು (ಔತ್ಸರ್ಗಿಕ ಭೇದ) ಇರುವುದು. ಅಪವಾದವಿರುವಾಗ ಅಭೇದವೂ ಕೂಡುವುದು. ಅಪವಾದವಿಲ್ಲದಿದ್ದರೆ ಔತ್ಸರ್ಗಿಕ ಭೇದವು ಬಲಿಷ್ಠವಾಗುವುದು.

ಅಪವಾದವಿಲ್ಲದಿದ್ದರೆ ಕರ್ತೃಕರ್ಮಭಾವಕ್ಕೆ ನಿಯಮೇನ ಭೇದವಿರುವುದು. ಆದರೂ 'ತದಾತ್ಮಾನಮೇವಾವೇತ್' 'ಮಾಮಹಂ ಜಾನಾಮಿ' ಇತ್ಯಾದಿಗಳಲ್ಲಿ ಒಂದೇ ವಸ್ತುವಿಗೆ ಕರ್ತೃಕರ್ಮಭಾವವು ಶ್ರುತವಾಗಿದೆ. ಇಂಥಹ ಕಡೆಗಳಲ್ಲಿ ಅಭೇದವು ಕೂಡುವುದು.

ಈ ಅಧಿಕರಣದಲ್ಲಿ ಸರ್ವಗತತ್ವವು ಪ್ರತಿಪಾದಿಸಲ್ಪಡುವುದೆಂದು ಉಕ್ತವಾಯಿತು. ಅದನ್ನು ಮಾತ್ರ ಪ್ರತಿಪಾದಿಸುವುದಾದಲ್ಲಿ, ಸೂತ್ರಗಳಿಗೆ ವಿಶ್ವತೋಮುಖತ್ವ ಇಲ್ಲವೆಂದೂ, ಶಾಸ್ತ್ರಕ್ಕೆ ಪರ್ಯವಸಾನವೇ ಇಲ್ಲವೆಂದೂ ಆಗಬೇಕಾದೀತು. ಸರ್ವಗತತ್ವವು ಇತರ ಸೂತ್ರಗಳಿಗೆ ಉಪಲಕ್ಷಣವೆಂದು ಹೇಳುವ ಪಕ್ಷದಲ್ಲಿ ಉಪಾಧಿಗಳನ್ನು ಹೇಳಬೇಕು. ಇಲ್ಲವಾದರೆ ಬೇರೆ ಅಧಿಕರಣಗಳ ಪ್ರಸಕ್ತಿಯೇ ಇಲ್ಲದಂತಾದೀತು. ಹೀಗೆ ಆಕ್ಷೇಪಿಸಿದರೆ,

ಪ್ರಥಮಾಧಿಕರಣದ ಉಪಾಧಿಯನ್ನು ಇಲ್ಲಿ ಹೇಳುತ್ತ ಪ್ರಸಂಗದಿಂದ ಎಲ್ಲ ಅಧಿಕರಣಗಳ ಉಪಾಧಿಗಳನ್ನು (ಸಂಗ್ರಾಹಕ ಧರ್ಮಗಳನ್ನು) ಹೇಳುತ್ತಾರೆ.

ಈ ಪಾದದಲ್ಲಿನ ಅಧಿಕರಣಗಳ ಉಪಾಧಿಗಳು

ಏತದ್ಭಾವಾಭಿದಂ ಲಿಂಗಂ ಕ್ರಿಯಾಲಿಂಗೇ ತತಃ ಪರಂ ।
ಅಂತರ್ಯಾಮ್ಯಂತರಶ್ಚೇತಿ ಕ್ರಿಯಾಭಾವಾಖ್ಯಮುಚ್ಯತೇ ॥೪॥
ಅದೃಶ್ಯತ್ವಾದ್ಭಾವಾಖ್ಯಂ ಶ್ರುತಿರ್ಲಿಂಗಾಧಿಕಾ ಪರಾ ।

ಇಲ್ಲಿ ಹೇಳಿರುವ ಸರ್ವಗತತ್ವವು ಭಾವಾಖ್ಯವಾದ ಅಂದರೆ ಸತ್ತಾ ಎನ್ನುವ ಲಿಂಗವನ್ನು ಹೇಳುತ್ತದೆ. ಮುಂದಿನ ಅತ್ತೃತ್ವಾಧಿಕರಣ, ಗುಹಾಧಿಕರಣಗಳಲ್ಲಿ ಕ್ರಿಯಾತ್ಮಕಲಿಂಗವೂ, ಅಂತರಾಧಿಕರಣದಲ್ಲಿ ಅಂತಸ್ಥಿತಿಸಹಿತರಮಣರೂಪವಾದ ಕ್ರಿಯಾತ್ಮಕಲಿಂಗವೂ, ಅಂತರ್ಯಾಮ್ಯಧಿಕರಣದಲ್ಲಿ ಅಂತಸ್ಥಿತಿಸಹಿತವಾದ ನಿಯಮನರೂಪಕ್ರಿಯಾತ್ಮಕಲಿಂಗವೂ ಹೇಳಲ್ಪಡುತ್ತವೆ. ಅದೃಶ್ಯತ್ವಾಧಿಕರಣದಲ್ಲಿ ಅಭಾವಾತ್ಮಕಲಿಂಗವೂ, ವೈಶ್ವಾನರಾಧಿಕರಣದಲ್ಲಿ ವಾಚಕತ್ವ ಮೊದಲಾದ ಬಹು ಲಿಂಗಗಳಿಂದ ಕೂಡಿರುವ ವೈಶ್ವಾನರನಾಮವೂ ಪ್ರತಿಪಾದಿಸಲ್ಪಡುವುದು.

ಅತ್ತೃತ್ವಾಧಿಕರಣ

ಕ್ರಿಯಾಲಿಂಗ ಸಮನ್ವಯ

ಸೂತ್ರ: ಓಂ ಅತ್ತಾ ಚರಾಚರಗ್ರಹಣಾತ್ ಓಂ (೧-೨-೯)

ಈ ಅಧ್ಯಾಯದಲ್ಲಿ ಸಮನ್ವಯ ಮಾಡಲಾಗುವ ಎಲ್ಲ ಶಬ್ದಗಳೂ ಬ್ರಹ್ಮನ ಲಕ್ಷಣವಾಗಿಯೇ ಪ್ರಕೃತವಾಗಿವೆ ಎಂದು ಆನಂದಮಯಾಧಿಕರಣದ ಅಂತ್ಯದಲ್ಲಿ ಹೇಳಲ್ಪಟ್ಟಿದೆ. ಲಕ್ಷಣವು ಲಕ್ಷ್ಯನಾದ ಬ್ರಹ್ಮನಿಂದ ಅಭಿನ್ನವೆಂದು ಲಕ್ಷಣಸೂತ್ರದಲ್ಲಿ ಪ್ರತಿಪಾದಿತವಾಗಿದೆ. ಈ ಅಧಿಕರಣದಲ್ಲಿ ಕ್ರಿಯಾಲಿಂಗ ಸಮನ್ವಯವೆಂದು ಉಕ್ತವಾಗಿದೆ. ಇದರಿಂದ ಅದನಾದಿ ಕ್ರಿಯೆಗಳಿಗೆ ಪರಮೇಶ್ವರಸ್ವರೂಪತ್ವವನ್ನು ಹೇಳಿದಂತಾಯಿತು. ಇದಕ್ಕೆ ಆಕ್ಷೇಪವನ್ನು ತೋರಿಸಿ ಪರಿಹರಿಸುತ್ತಾರೆ –

ಅನಿತ್ಯತ್ವಾತ್ಕ್ರಿಯಾಣಾಂ ತು ಕಥಮೇವ ಸ್ವರೂಪತಾ ॥೫॥
ಇತಿ ಚೇತ್ಸವಿಶೇಷೋಪಿ ಕ್ರಿಯಾಶಕ್ತ್ಯಾತ್ಮನಾ ಸ್ಥಿರಃ ।

ಅದನಾದಿ ಕ್ರಿಯೆಗಳಾದರೂ ಅನಿತ್ಯಗಳಾಗಿರುವುದರಿಂದ ಅವು ನಿತ್ಯನಾದ ಪರಮೇಶ್ವರನ ಸ್ವರೂಪ ಹೇಗಾದೀತು? ವಿರುದ್ಧ ಧರ್ಮಗಳಿಂದ ಕೂಡಿರುವ ನಿತ್ಯ ಮತ್ತು ಅನಿತ್ಯ ವಸ್ತುಗಳಿಗೆ ಅಭೇದವು ಕೂಡುವುದಿಲ್ಲ. ಒಂದುವೇಳೆ ಅಭೇದವನ್ನು ಒಪ್ಪಿದರೆ ಜಗತ್ತಿಗೂ ಪರಮೇಶ್ವರನಿಗೂ ಅಭೇದ ಬರಬೇಕಾದೀತು. ಹೀಗೆ ಆಕ್ಷೇಪಿಸಿದರೆ ಅದು ಅಯುಕ್ತ. ಕ್ರಿಯಾರೂಪವಾದ ಆ ವಿಶೇಷ ಧರ್ಮವೂ ಪರಮಾತ್ಮನಲ್ಲಿ ಶಕ್ತಿರೂಪವಾಗಿ ನಿತ್ಯದಲ್ಲಿಯೂ ಇರುವುದು. ಪರಮಾತ್ಮನಿಗೆ ಸಂಬಂಧಿಸಿದ ಕ್ರಿಯೆಗಳೂ ನಿತ್ಯ, ಪರಮಾತ್ಮನೂ ನಿತ್ಯವಾದುದರಿಂದ ಅಭೇದವು ಕೂಡುವುದು.

ಪರಮಾತ್ಮನ ಸ್ವರೂಪವಾಗಿರುವ ಸಂಹಾರಾದಿ ಕ್ರಿಯೆಗಳು ಶಕ್ತಿರೂಪದಲ್ಲಿ ನಿತ್ಯವಾಗಿವೆ ಎಂದು ಒಪ್ಪಿದರೂ ಎಲ್ಲ ಕ್ರಿಯೆಗಳೂ ಎಲ್ಲ ಕಾಲದಲ್ಲಿ ಅಭಿವ್ಯಕ್ತಿರೂಪ ಪಡೆಯುವುದಿಲ್ಲ. ಸೃಷ್ಟಿಕಾಲದಲ್ಲಿ ಸಂಹಾರಕ್ರಿಯೆಯು ವ್ಯಕ್ತವಾಗದು. ಅಂತೆಯೇ ಸಂಹಾರಕಾಲದಲ್ಲಿ ಸೃಷ್ಟಿಕ್ರಿಯೆಯು ವ್ಯಕ್ತವಾಗುವುದಿಲ್ಲ. ಅಂದಮೇಲೆ ಕ್ರಿಯೆಯ ಶಕ್ತಿ ಮತ್ತು ವ್ಯಕ್ತಿರೂಪಗಳು ಪರಸ್ಪರ ಭಿನ್ನಗಳೋ ಅಥವಾ ಅಭಿನ್ನಗಳೋ? ಮೊದಲನೇ ಕಲ್ಪದಲ್ಲಿ ಕ್ರಿಯೆಯು ಶಕ್ತಿರೂಪದಿಂದ ನಿತ್ಯವಾದರೆ ವ್ಯಕ್ತಿರೂಪದಿಂದ ಅನಿತ್ಯವಾಗಬೇಕಾಗುವುದು. ಎರಡನೆಯ ಕಲ್ಪದಲ್ಲಿ, ಅಂದರೆ ಅಭಿನ್ನವೆಂದು ಒಪ್ಪುವುದಾದರೆ, ಸದಾ ವ್ಯವಹಾರಾದಿಗಳು ಬರಬೇಕಾಗುವುವು ಎಂದರೆ -

ಶಕ್ತಿತಾ ವ್ಯಕ್ತಿತಾ ಚೇತಿ ವಿಶೇಷೋಽಪಿ ವಿಶೇಷವಾನ್ ॥೬॥

ಅಭಿನ್ನೋಽಪಿ ಕ್ರಿಯಾದಿಶ್ಚ ಸ್ವಭಾವ ಇತಿ ಹಿ ಶ್ರುತಿಃ ।

ಶಕ್ತಿವ್ಯಕ್ತಿಗಳು ಅಭಿನ್ನಗಳೇ ಆಗಿವೆ. ಆದರೂ ಸದಾ ವ್ಯವಹಾರಾದಿಗಳು ಬರಬೇಕಾಗುವುವು ಎಂದು ಮೇಲೆ ಹೇಳಿದ ದೋಷವು ಬರುವುದಿಲ್ಲ. ಏಕೆಂದರೆ ಈ ವಿಷಯದಲ್ಲಿ ಶಕ್ತಿತ್ವ ಮತ್ತು ವ್ಯಕ್ತಿತ್ವ ಎನ್ನುವ ಭೇದನಿರ್ವಾಹಕ ವಿಶೇಷವೂ ಇದೆ. ಎರಡು ಪ್ರಕಾರವಾಗಿರುವ ಈ ವಿಶೇಷವು ಅಭಿನ್ನವಾಗಿದ್ದರೂ, ಸ್ವನಿರ್ವಾಹಕವಾದ್ದರಿಂದ, ವಿಶೇಷವುಳ್ಳದ್ದೆಂದು ಅಗೀಕರಿಸಲ್ಪಡುವುದು. ಆದ್ದರಿಂದ ಅನುಪಪತ್ತಿಯು ಇರುವುದಿಲ್ಲ. ಪರಮೇಶ್ವರನ ಕ್ರಿಯೆಗಳು ನಿತ್ಯವೆಂಬುದಕ್ಕೆ 'ಪರಾಸ್ಯ ಶಕ್ತಿರ್ವಿವಿಧೈವ

ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' ಇತ್ಯಾದಿ ಶ್ರುತಿಗಳು ಪ್ರಮಾಣವಾಗಿವೆ. ಆದಪ್ರಯುಕ್ತ ಪರಮೇಶ್ವರನ ಕ್ರಿಯೆಗಳು ಅವನ ಸ್ವಭಾವವಾಗಿವೆ, ಅಂದರೆ ನಿತ್ಯವಾಗಿವೆ, ಎಂದು ಸಿದ್ಧವಾಗುವುದು.

ಈ ವಿಷಯದಲ್ಲಿ ಸ್ಪಷ್ಟವಾದ ಶ್ರುತಿಯನ್ನು ಉದಾಹರಿಸುತ್ತಾರೆ -

ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ ಬಲಂ ಶಕ್ತಿಃ ಪರಮಾತ್ಮನಃ ॥೭॥
ನಿತ್ಯಾನಂದೋಽವ್ಯಯಃ ಪೂರ್ಣೋ ಭಗವಾನ್ವಿಷ್ಣುರಚ್ಯುತಃ ।
ಇತಿ ಪೈಂಗಿಶ್ರುತಿಶ್ಚಾಹ .....॥

ಪರಮಾತ್ಮನ ಜ್ಞಾನವು ನಿತ್ಯ, ಕ್ರಿಯೆಯು ನಿತ್ಯ, ಬಲ ಶಕ್ತಿಗಳೂ ನಿತ್ಯ. ಶ್ರೀಹರಿಯು ನಿತ್ಯವಾದ ಆನಂದವುಳ್ಳವನು, ವೃದ್ಧಿಹ್ರಾಸ ರಹಿತನು, ಗುಣಪೂರ್ಣನು, ವ್ಯಾಪ್ತನು ಹಾಗೂ ವಿನಾಶರಹಿತನು. ಈ ಪ್ರಕಾರವಾಗಿ ಪೈಂಗಿಶ್ರುತಿಯು ಪ್ರತಿಪಾದಿಸುತ್ತದೆ.

ಹಾಗಾದರೆ, ಈಶ್ವರನ ಕ್ರಿಯೆಗಳಿಗೆ ನಿತ್ಯತ್ವವಿರಲಿ, ಜೀವರಲ್ಲಿರತಕ್ಕ ಎಲ್ಲ ಕ್ರಿಯೆಯೂ ಅನಿತ್ಯವೋ ಎಂದು ಆಶಂಕಿಸಿದರೆ, ಅದಕ್ಕೆ ಪ್ರಮಾಣಾಂತರದಿಂದ ಭೇದವನ್ನು ತೋರಿಸುತ್ತಾರೆ -

.....ಶಕ್ತಿಸದ್ಭಾವ ಏವ ತು ॥೮॥
ಕ್ರಿಯಾದಿ ನಿತ್ಯತಾ ಜ್ಞೇಯಾ ತದನ್ಯತ್ರ ತ್ವನಿತ್ಯತಾ ।
ಇತಿ ಸತ್ತತ್ವವಚನಂ.....॥

ಶಕ್ತಿಗೆ ನಿತ್ಯತ್ವವಿದ್ದರೆ ಕ್ರಿಯಾದಿಗಳು ನಿತ್ಯವೆಂದು ತಿಳಿಯತಕ್ಕದ್ದು. ಶಕ್ತಿಗೆ ನಿತ್ಯತ್ವವಿಲ್ಲದಿರುವ ಕಡೆಗಳಲ್ಲಿ (ಅಂದರೆ ಜೀವಾದಿಗಳಲ್ಲಿ), ಕ್ರಿಯಾದಿಗಳು ಅನಿತ್ಯತ್ವವೆಂದು ತಿಳಿಯಬೇಕು. ಹೀಗೆ ಸತ್ತತ್ವ ಎಂಬ ಗ್ರಂಥದಲ್ಲಿ ಹೇಳಿದೆ.

ಗುಹಾಧಿಕರಣ

ಫಲಭೋಗರೂಪ ಕ್ರಿಯಾಲಿಂಗ ಸಮನ್ವಯ

ಸೂತ್ರ: ಓಂ ಗುಹಾಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ಓಂ (೧-೨-೧೧)

'ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ' ಎನ್ನುವ ಶ್ರುತಿಯು ಜೀವನ ಹೃದಯ ಗುಹೆಯಲ್ಲಿದ್ದು ಸುಕೃತಗಳನ್ನು ಭೋಗಿಸುವವರು

ಜೀವ ಮತ್ತು ಪರಮೇಶ್ವರ ಎಂದು ಇಬ್ಬರನ್ನು ಪ್ರತಿಪಾದಿಸುವುದೋ ಅಥವಾ ಕೇವಲ ಪರಮೇಶ್ವರನನ್ನೋ ಎಂದು ಸಂಶಯ. ದ್ವಿವಚನವಿರುವುದರಿಂದ ಜೀವ ಮತ್ತು ಈಶ್ವರ ಇಬ್ಬರನ್ನು ಎಂದು ಪೂರ್ವಪಕ್ಷ. ಬ್ರಹ್ಮಶಬ್ದ ಮೊದಲಾದ ಬಾಧಕವೂ ಇಲ್ಲ. ಕೇವಲ ಈಶ್ವರ ಎಂದಿಟ್ಟುಕೊಂಡರೆ ಕರ್ಮಫಲಭೋಗವು ಈಶ್ವರನಿಗೆ ಕೂಡುವುದಿಲ್ಲ. ಜೀವನೊಬ್ಬನಿಗೇ ಮುಖ್ಯವಾಗಿ ಕರ್ಮಫಲಭೋಗವು, ಈಶ್ವರನಿಗೆ ಛತ್ರಿನ್ಯಾಯದಿಂದ ಔಪಚಾರಿಕವಾಗಿ ಫಲಭೋಗವು. ಆದಪ್ರಯುಕ್ತ ಜೀವ ಮತ್ತು ಈಶ್ವರ ಇಬ್ಬರನ್ನೂ ಇಲ್ಲಿ ಹೇಳಲಾಗಿದೆ ಎಂದು ಹೇಳಿದರೆ, ಅದು ಸರಿಯಲ್ಲ. ಗುಹಾಪ್ರವಿಷ್ಟತ್ವರೂಪಲಿಂಗ ಹಾಗೂ ಬ್ರಹ್ಮಶಬ್ದದಿಂದ ವಿಶೇಷಣವಿದ್ದ ಪ್ರಯುಕ್ತ ಈ ಶ್ರುತಿ ವಾಕ್ಯವು ಪರಮೇಶ್ವರನೊಬ್ಬನನ್ನೇ ಪ್ರತಿಪಾದಿಸುತ್ತದೆ ಎಂದು ಸಿದ್ಧಾಂತ ಮಾಡಿರುವರು. ಇದರಲ್ಲಿ ಕರ್ಮಫಲಭೋಗವು ಭಾಷ್ಯದಲ್ಲಿ ಪ್ರತಿಪಾದಿತವಾಗಿದೆ. ದ್ವಿವಚನ ವಿಷಯದಲ್ಲಿ ಸ್ಪಷ್ಟವಾದ ಪರಿಹಾರವು ಅಲ್ಲಿ ಹೇಳಲ್ಪಟ್ಟಿಲ್ಲ. ಅದನ್ನು ಇಲ್ಲಿ ಪರಿಹರಿಸುತ್ತಾರೆ.

ಗುಹಾಪ್ರವಿಷ್ಟನು ಪರಮೇಶ್ವರನೊಬ್ಬನು ಮಾತ್ರ ಎಂದು ಇಟ್ಟುಕೊಂಡರೆ, ಸ್ವಗತಭೇದವಿವರ್ಜಿತನಾದ ಪರಮೇಶ್ವರನಲ್ಲಿ ಭೇದವನ್ನು ಹೇಳುವ ದ್ವಿವಚನವು ಕೂಡುವುದಿಲ್ಲ. ಆದಕಾರಣ ಜೀವ ಮತ್ತು ಈಶ್ವರ ಇಬ್ಬರೂ ಇಲ್ಲಿ ಪ್ರತಿಪಾದಿತರಾಗಿರುವರು ಎಂದು ಹೇಳಿದರೆ –

ಸೂತ್ರ: ಓಂ ವಿಶೇಷಣಾಚ್ಚ ಓಂ (೧-೨-೧೨)

.....ದ್ವಿತ್ವಂ ಚೈಕಸ್ಯ ಯುಜ್ಯತೇ ॥

ಯಃ ಸೇತುರಿತಿ ಚೈಕತ್ವವಚನೇನ ವಿಶೇಷಣಾತ್ ॥೯॥

ದ್ವಿವಚನವು ಭೇದರಹಿತನಾದ ಒಬ್ಬನೇ ಪರಮಾತ್ಮನಲ್ಲಿ ಕೂಡುವುದು. ಏಕೆಂದರೆ, 'ಋತಂ ಪಿಬಂತೌ' ಎಂದು ದ್ವಿವಚನದಿಂದ ಜೀವ ಮತ್ತು ಪರಮೇಶ್ವರ ಇಬ್ಬರೂ ಇಲ್ಲಿ ಪ್ರತೀತರಾದಂತೆ ತೋರಿದರೂ, ಇವರಿಗೆ 'ಯಃ ಸೇತುಃ' ಎನ್ನುವ ಏಕವಚನದಿಂದ ವಿಶೇಷಣವಿದೆ. ಅಲ್ಲದೆ ದ್ವಿವಚನವು ಭೇದವನ್ನೇ ಹೇಳುತ್ತದೆ ಎನ್ನುವ ವಿಷಯದಲ್ಲಿ ವ್ಯಾಕರಣದ ಅನುಶಾಸನವಿರುವುದಿಲ್ಲ. ಅಭೇದವಿದ್ದರೂ ಅನೇಕತ್ವವು ಕೂಡುವುದು.

ಆದಪ್ರಯುಕ್ತ ಪರಮಾತ್ಮನೊಬ್ಬನೇ ಆತ್ಮ ಅಂತರಾತ್ಮ ಎಂಬ ಎರಡು ರೂಪಗಳಿಂದ ಉಕ್ತನಾಗಿರುವನು.

ಅಂತರಾಧಿಕರಣ

ಕ್ರಿಯಾಭಾವರೂಪ ಲಿಂಗ ಸಮನ್ವಯ

ಸೂತ್ರ: ಓಂ ಅಂತರ ಉಪಪತ್ತೇಃ ಓಂ (೧-೨-೧೩)

ಅಂತರ ಉಪಪತ್ತೇಃ ಎನ್ನುವ ಸೂತ್ರದಲ್ಲಿ ಭಾವವನ್ನೇ ಪ್ರತಿಜ್ಞಾ ಮಾಡಿರುತ್ತಾರೆ, ಕ್ರಿಯೆಯನ್ನು ಹೇಳಿಲ್ಲ. ಆದಕಾರಣ ಈ ಅಧಿಕರಣದಲ್ಲಿ ಕ್ರಿಯಾಭಾವರೂಪ ಲಿಂಗಸಮನ್ವಯವೆಂದು ಹೇಳುವುದು ಅಯುಕ್ತ ಎಂದು ಆಕ್ಷೇಪಿಸಿದರೆ, ಅಂತರ ಶಬ್ದವು ಎರಡು ಅರ್ಥಗಳನ್ನು ಹೊಂದಿದೆ ಎಂದು ವ್ಯಾಖ್ಯಾನ ಮಾಡುತ್ತಾರೆ.

ಅಂತಸ್ಥಿತ್ವಾ ರಮಣಕೃದಂತರಃ ಸ ಉದಾಹೃತಃ ।
ರಮಣಂ ಚಾತ್ಮಶಬ್ದೇನಾऽऽದೇಯಂ ಮಾತೀತಿ ಚೋಚ್ಯತೇ ॥೧೦॥

ಆ ಪರಮೇಶ್ವರನು ಚಕ್ಷುಸ್ಸಿನೊಳಗೆ ಇದ್ದು ಕ್ರೀಡಿಸುವನಾದ್ದರಿಂದ ಅಂತರ ಎಂದು ಹೇಳಲ್ಪಟ್ಟಿದ್ದಾನೆ. ಕೇವಲ ಅಕ್ಷಿಸ್ಥಿತತ್ವವಷ್ಟೇ ಅಲ್ಲ ರಮಣಕರ್ತೃತ್ವವೂ ಕೂಡ ಇಲ್ಲಿ ಉಕ್ತವಾಗಿದೆ ಎಂದು ಮೊದಲನೆಯ ಚ ಶಬ್ದದಿಂದ ಅವಗತವಾಗುತ್ತದೆ. ಕೇವಲ ಸೂತ್ರದಲ್ಲಿ ಮಾತ್ರವಲ್ಲ ಶ್ರುತಿಯಲ್ಲಿಯೂ ಕೂಡ 'ಏಷ ಆತ್ಮಾ' ಎನ್ನುವ ವಾಕ್ಯದಿಂದ ಹೇಳಲ್ಪಟ್ಟಿದೆ ಎಂದು ಎರಡನೆಯ ಚ ಶಬ್ದದಿಂದ ಸೂಚಿತವಾಗಿದೆ. 'ಯ ಏಷೋಂऽತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ' ಎಂಬುದೇ ಇಲ್ಲಿ ಉದಾಹೃತ ಶ್ರುತಿವಾಕ್ಯ. 'ಆದೇಯಂ' ಉಪಾದೇಯವಾದ ಸುಖವನ್ನೂ ಸುಖಸಾಧನವನ್ನೂ 'ಮಾತಿ' ಅನುಭವಿಸುತ್ತಾನೆ ಎಂಬ ನಿರ್ವಚನದಿಂದ ಆತ್ಮ ಶಬ್ದದಿಂದ ಹೇಳಲ್ಪಡುತ್ತಾನೆ.

ಸೂತ್ರಕಾರರಿಗೆ ಇಲ್ಲಿ ರಮಣಕರ್ತೃತ್ವರೂಪವಾದ ಅರ್ಥವೇ ವಿವಕ್ಷಿತವಾಗಿದೆ. ಇಲ್ಲದಿದ್ದರೆ ಅಂತರುಪಪತ್ತೇಃ ಎಂದಿಷ್ಟೇ ಹೇಳುತ್ತಿದ್ದರು. ಹೀಗೆ ಹೇಳಿದರೆ ಸೂತ್ರಕ್ಕೆ ಲಘುತ್ವವೂ ಬರುತ್ತಿತ್ತು. ಅಂತಃ ಶಬ್ದಕ್ಕೆ

ಕ್ರೀಡಾರ್ಥಕವಾದ ರಮ್ ಧಾತುವನ್ನು ಹಚ್ಚಿರುವುದರಿಂದ ಸೂತ್ರಕಾರರಿಗೆ ಈ ಸೂತ್ರದಿಂದ ರಮಣರೂಪವಾದ ಅರ್ಥವನ್ನು ಹೇಳುವ ಉದ್ದೇಶವಿರುವುದು.

ಚಕ್ಷುರಂತಸ್ಥನು ವಿಷ್ಣುವೇ

'ಸುಖವಿಶಿಷ್ಟಾಭಿಧಾನಾದೇವ ಚ' ಎನ್ನುವ ಸೂತ್ರದಲ್ಲಿ ವಿಶಿಷ್ಟ ಪದವು ವ್ಯರ್ಥ. ಸುಖಾಭಿಧಾನಾದೇವ ಎಂದು ಹೇಳಿದ್ದರೆ ಪೂರ್ಣವಾಗುತ್ತಿತ್ತು. ಸೂತ್ರಕ್ಕೆ ಲಘುತ್ವವೂ ಬರುತ್ತಿತ್ತು. ಸುಖ ಸಂಬಂಧವನ್ನು ಹೇಳುವುದೇ ಅಯುಕ್ತ. 'ಪ್ರಾಣೋ ಬ್ರಹ್ಮ ಕಂ ಬ್ರಹ್ಮ' ಎನ್ನುವ ಶ್ರುತಿಯಲ್ಲಿ ಸುಖವನ್ನು ಮಾತ್ರ ಹೇಳಿದೆ ಎಂದರೆ -

ವಿಶಿಷ್ಟಸುಖವತ್ತ್ವಾಚ್ಚ ಬ್ರಹ್ಮತ್ವಂ ಚ ವಿಶಿಷ್ಟತಾ ।

ಇಲ್ಲಿ ವಿಶಿಷ್ಟಸುಖವತ್ವ ಎಂದರೆ ಪೂರ್ಣಸುಖರೂಪತ್ವ ಎಂದರ್ಥ. ಬ್ರಹ್ಮತ್ವವೆಂದರೂ ವಿಶಿಷ್ಟತಾ ಅಥವಾ ಪೂರ್ಣತಾ ಎಂದೇ ಅರ್ಥವು. ಪೂರ್ಣ ಸುಖತ್ವವನ್ನೇ 'ಕಂ ಬ್ರಹ್ಮ' ಎಂಬುದಾಗಿ ಶ್ರುತಿಯಲ್ಲಿ ಹೇಳಿದೆ.

ಚಕ್ಷುರಂತಸ್ಥನು ಈಶ್ವರನೇ ಆಗಿದ್ದರೂ, ಕಣ್ಣು ಮತ್ತು ಆದಿತ್ಯರಿಗೆ ಅಗ್ನಿಯೇ ನಿಯಾಮಕನಾಗಿ ಇಲ್ಲಿ ಉಕ್ತನಾಗಿದ್ದಾನೆ ಎಂದು ಪೂರ್ವಪಕ್ಷ. ಇದನ್ನು ನಿರಾಕರಿಸುವ 'ಓಂ ಅನವಸ್ಥಿತೇರಸಂಭವಾಚ್ಚ ನೇತರಃ ಓಂ' ಎನ್ನುವ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಾರೆ.

ಅನ್ಯೋನ್ಯನಿಯತಿಶ್ಚೇಶನಿಯಮೇ ನಾನ್ಯಥಾ ಭವೇತ್ ॥೧೧॥
ಚೇತನಾನಾಂ ವಿಶೇಷೋ ಯಃ ಸ್ವಭಾವೋಽಪೀಶ್ವರಾರ್ಪಿತಃ ।
ಅನ್ಯೋನ್ಯನಿಯಮೇ ತಸ್ಮಾದನವಸ್ಥಿತ್ಯಸಂಭವೌ ॥೧೨॥

ಜೀವರಿಗೆ ನಿಯತವಾಗಿರುವ ನಿಯಮ್ಯ-ನಿಯಾಮಕ ಭಾವವು (ಬ್ರಹ್ಮಾದಿ ದೇವತೆಗಳಿಗೆ ನಿಯಾಮಕತ್ವ ಹಾಗೂ ಜೀವರಿಗೆ ನಿಯಮ್ಯತ್ವ ಎಂಬ ಅನ್ಯೋನ್ಯ ನಿಯತ ಸಂಬಂಧವು) ಈಶ್ವರನ ಪ್ರೇರಣೆಯಿದ್ದರೆ ಮಾತ್ರ ಯುಕ್ತವಾಗುವುದು. ಪ್ರೇರಕ ಪರಂಪರೆಯು ಪರನಿರಪೇಕ್ಷನಾದ ಭಗವಂತನಲ್ಲಿ ಕೊನೆಗೊಳ್ಳುವುದರಿಂದ ಅನವಸ್ಥಿತಿ ಅಸಂಭವಾದಿಗಳು ಉಂಟಾಗದು. ಶ್ರೀಹರಿಯ ಪ್ರೇರಣೆಯಿಲ್ಲವಾದರೆ ಅನ್ಯೋನ್ಯ ನಿಯಮನವು ಕೂಡಲಾರದು. ಬ್ರಹ್ಮಾದಿಗಳ ನಿಯಾಮಕತ್ವ ಹಾಗೂ ಮನುಷ್ಯಾದಿಗಳ ನಿಯಮ್ಯತ್ವ

ರೂಪವಾದ ವಿಶೇಷವು ಅವರವರ ಸ್ವಭಾವವೇ ಎನ್ನುವುದು ನಿಜವೇ. ಆದರೆ ಆ ಸ್ವಭಾವವೂ ಕೂಡ ಈಶ್ವರನಿಂದಲೇ ಕೊಡಲ್ಪಟ್ಟದ್ದು. ಈಶ್ವರನನ್ನು ಅಂಗೀಕರಿಸದೇ ಚೇತನರಿಗೆ ನಿಯಮ್ಯ-ನಿಯಾಮಕತ್ವ ಸ್ವಬಾವವನ್ನು ಒಪ್ಪಿದರೆ ಅನವಸ್ಥಿತಿ ಅಸಂಭವಾದಿಗಳು ಉಂಟಾಗುತ್ತವೆ.

ಈಶ್ವರನನ್ನು ಅಂಗೀಕರಿಸಿ, ಅಗ್ನಿಯು ಅಕ್ಷಿ ಮತ್ತು ಆದಿತ್ಯನಲ್ಲಿದ್ದು ನಿಯಾಮಕನಾಗಿ ಹೇಳಲ್ಪಡುತ್ತಾನೆ ಎನ್ನುವರಿಗೆ ದೋಷವನ್ನು ಹೇಳುತ್ತಾರೆ.

ಈಶ್ವರಶ್ಚೇನ್ನಿಯಂತಾ ಸ್ಯಾತ್ಸ ಏವ ಪ್ರಥಮಾಗತಃ ।
ಕಿಮಿತ್ಯಪೋದ್ಯತೇ ಕಸ್ಮಾದ್ವೃಥಾऽವಸ್ಥಿತಿಕಲ್ಪನಾ ॥೧೩॥
ದೋಷವತ್ಯೇವ ತಸ್ಮಾತ್ಸಾ ನೈವ ಕಾರ್ಯಾ ಕಥಂಚನ ।

ಈಶ್ವರನು ಎಲ್ಲರಿಗೂ ನಿಯಾಮಕನೆಂದು ಒಪ್ಪುವುದಾದರೆ, ಆಗ ಮುಖ್ಯವಾಗಿ ಅಕ್ಷಿ ಮತ್ತು ಆದಿತ್ಯಸ್ಥನಾಗಿರುವನೆಂದು ಪ್ರಮಾಣಸಿದ್ಧವಾದ ಆ ಈಶ್ವರನನ್ನು ಹೇಗೆ ತಾನೇ ಪರಿತ್ಯಾಗ ಮಾಡಲು ಸಾಧ್ಯ? ಯಾವ ಕಾರಣದಿಂದ ಈಶ್ವರ ಮತ್ತು ಆದಿತ್ಯರ ನಡುವೆ ವ್ಯರ್ಥವಾಗಿ ಅಗ್ನಿಗೆ ನಿಯಾಮಕತಯಾ ಅವಸ್ಥಿತಿಯು ಕಲ್ಪನೆ ಮಾಡಲ್ಪಡುತ್ತದೆ? ಹೀಗೆ ಕಲ್ಪನೆ ಮಾಡುವುದು ಶ್ರುತಹಾನಿ ಹಾಗೂ ಅಶ್ರುತ ಕಲ್ಪನಾ ಎಂಬ ದೋಷವುಳ್ಳದ್ದೇ ಆಗುವುದು. ಆದಕಾರಣ ಎಂದಿಗೂ ಈರೀತಿಯ ಕಲ್ಪನಾ ಮಾಡತಕ್ಕದ್ದಲ್ಲ.

ಅಂತರ್ಯಾಮ್ಯಧಿಕರಣ

ರಮಣರೂಪ ಕ್ರಿಯಾಲಿಂಗ ಸಮನ್ವಯ

ಸೂತ್ರ: ಓಂ ಅಂತರ್ಯಾಮ್ಯಧಿದೈವಾದಿಷು

ತದ್ಧರ್ಮವ್ಯಪದೇಶಾತ್ ಓಂ (೧-೨-೧೮)

ಶರೀರಾಂತಸ್ಥನಾಗಿ ನಿಯಮನ ಮಾಡುವುದೇ ಅಂತರ್ಯಾಮಿತ್ವ ಎಂದು ಹೇಳಲ್ಪಡುತ್ತದೆ. ಇದನ್ನು ಈಗಾಗಲೇ ಅಂತರಾಧಿಕರಣದಲ್ಲಿಯೇ ಪ್ರತಿಪಾದಿಸಲಾಗಿದೆ ಎಂದು ಹೇಳಿದರೆ, ಪ್ರಮೇಯ ಭೇದವಿರುವುದರಿಂದ ಈ ಅಧಿಕರಣವು ಗತಾರ್ಥವಾಗುವುದಿಲ್ಲ ಎಂದು ಹೇಳುತ್ತಾರೆ. ಈ ಅಧಿಕರಣದಲ್ಲಾದರೋ ಅಂತಸ್ಥಿತಿರೂಪವಾದ ಭಾವಯುಕ್ತವಾದ

ನಿಯಮನಾಖ್ಯವಾದ ಕ್ರಿಯಾತ್ಮಕಲಿಂಗಕ್ಕೆ ಸಮನ್ವಯವನ್ನು ಸಾಧಿಸಲಾಗುವುದು.

'ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ' ಎಂದು ಶ್ರುತವಾದ ಅಂತರ್ಯಾಮಿಯು ಬ್ರಹ್ಮನೇ. 'ಯಂ ಪೃಥಿವೀ ನ ವೇದ ಯಃ ಪೃಥಿವೀಮಂತರೋ ಯಮಯತಿ' ಇತ್ಯಾದಿಗಳಿಂದ ಈ ಅಂತರ್ಯಾಮಿಗೆ ಪೃಥಿವ್ಯಾದಿಗಳಿಂದ ತಿಳಿಯಲ್ಪಡದಿರುವಿಕೆ, ಅವುಗಳ ಒಳಗಿದ್ದುಕೊಂಡು ನಿಯಮನ ಮಾಡುವಿಕೆ ಮೊದಲಾದ ಬ್ರಹ್ಮನ ಧರ್ಮಗಳನ್ನು ಹೇಳಿರುವುದರಿಂದ, ಪ್ರಕೃತಿಯಾಗಲೀ ಜೀವರಾಗಲೀ ಇಲ್ಲಿ ಹೇಳಲ್ಪಟ್ಟಿಲ್ಲ.

ಬಹಳ ಕೆಲಸವನ್ನು ಮಾಡುವವರಿಗೆ ಬಹಳಷ್ಟು ಪ್ರಯತ್ನ ಬೇಕು. ಲೋಕದಲ್ಲಿ ಅತಿಯತ್ನದ ನಿಮಿತ್ತ ಅತಿಯಾದ ಕ್ಲೇಶಗಳು ಹಾಗೂ ಅದರಿಂದ ಚಿತ್ತವಿಕ್ಷೇಪಾದಿಗಳು ನಿಯತವಾಗಿ ಕಂಡುಬರುತ್ತವೆ. ಚಿತ್ತವಿಕ್ಷೇಪದಿಂದ ಕೂಡಿರುವವರಿಗೆ ರಮಣತ್ವ ಕೂಡುವುದಿಲ್ಲ. ಬಹುಯತ್ನಪೂರ್ವಕವಾದ ಸರ್ವವನ್ನೂ ನಿಯಮನ ಮಾಡುವ ಶ್ರೀಹರಿಗೆ ಚಿತ್ತವಿಕ್ಷೇಪದ ಸಾಧ್ಯತೆ ಇರುವುದರಿಂದ, ನಿಯಾಮಕತ್ವವೂ ರಮಣತ್ವವೂ ಒಟ್ಟಿಗೆ ಕೂಡುವುದಿಲ್ಲ. ಆದ್ದರಿಂದ ಸರ್ವನಿಯಾಮಕತ್ವವು ಕೂಡುವುದಿಲ್ಲ ಎಂದು ಪೂರ್ವಪಕ್ಷ. ಸರ್ವಾಂತರ್ಯಾಮಿತ್ವ ಎಂಬ ಹೇತುವಿನಿಂದ ಈ ಪೂರ್ವಪಕ್ಷವನ್ನು ನಿರಾಕರಿಸಿ ಶ್ರೀಹರಿಗೆ ರಮಣರೂಪವಾದ ಸರ್ವನಿಯಾಮಕತ್ವವನ್ನು ಇಲ್ಲಿ ಸಮರ್ಥಿಸುತ್ತಾರೆ.

ರಮಣಂ ನಾತಿಯತ್ನಸ್ಯ ವಿಕ್ಷೇಪಾದೇವ ಯುಜ್ಯತೇ ॥೧೪॥
ಇತಿ ಚೇತ್ಸರ್ವನಿಯಮೋ ಯಸ್ಯ ಕಸ್ಮಾನ್ನ ಶಕ್ಯತೇ ।
ಸ್ವಾತ್ಮನಾऽನಿಯತಂ ವಸ್ತು ಪ್ರತೀಪಂ ಹ್ಯಾತ್ಮನೋ ಭವೇತ್ ॥೧೫॥
ಸ್ವಾಧೀನಸತ್ತಾಶಕ್ತ್ಯಾದಿ ಕಥಮಾತ್ಮಪ್ರತೀಪಕಂ ।

ಅತಿಯತ್ನವುಳ್ಳವರಿಗೆ ಚಿತ್ತವಿಕ್ಷೇಪದಿಂದಾಗಿಯೇ ರಮಣವು ಕೂಡುವುದಿಲ್ಲ ಎಂದು ಆಕ್ಷೇಪಿಸಿದರೆ, ಇದು ಲೋಕದಲ್ಲಿ ಕಂಡಿರುವ ಸಾಮಾನ್ಯವಾದ ನಿಯಮ. ಆದರೆ ಪರಮೇಶ್ವರನು ಸರ್ವಾಂತರ್ಯಾಮಿಯಾಗಿರುವುದರಿಂದಲೇ ಈ ನಿಯಮವು ಕೂಡುವುದಿಲ್ಲ. ಈಶ್ವರನಿಗೆ ಚಿತ್ತವಿಕ್ಷೇಪವು ಅಶಕ್ಯವಾದುದು. ಆದಪ್ರಯುಕ್ತ ಅವನಿಗೆ ಸರ್ವನಿಯಾಮಕತ್ವವು ರಮಣತ್ವಕ್ಕೆ ಕಾರಣವಾದ

ಕ್ರೀಡೆಯೇ ಎನಿಸುವುದು. ಯಾವ ವಸ್ತುವು ನಮ್ಮ ನಿಯಮನಕ್ಕೆ ಒಳಪಡುವುದಿಲ್ಲವೋ ಅದು ನಮ್ಮ ಮನೋವ್ಯಾಕುಲತೆಗೆ ಕಾರಣವಾಗುವುದು. ಈ ಜಗತ್ತಿನ ಸತ್ತಾ ಶಕ್ತಿ ಇತ್ಯಾದಿ ಎಲ್ಲವೂ ಸರ್ವದಾ ಈಶ್ವರನ ಅಧೀನವೇ ಆಗಿರುವಾಗ, ಅವನಿಗೆ ಚಿತ್ತವಿಕ್ಷೇಪವು ಹೇಗೆ ಸಾಧ್ಯ?

ಅದೃಶ್ಯತ್ವಾದ್ಯಧಿಕರಣ

ಅದೃಶ್ಯತ್ವಾದಿ ಗುಣಗಳ ಸಮನ್ವಯ

ಸೂತ್ರ: ಓಂ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ಓಂ (೧-೨-೨೧)

ಈ ಅಧಿಕರಣದಲ್ಲಿ 'ಯತ್ತದದ್ರೇಶ್ಯಂ' ಇತ್ಯಾದಿ ವಾಕ್ಯಗಳಲ್ಲಿ ಹೇಳಿದ ಅದೃಶ್ಯತ್ವಾದಿ ಧರ್ಮಗಳನ್ನು ಬ್ರಹ್ಮನಲ್ಲಿ ಸಮನ್ವಯವನ್ನು ಪ್ರತಿಪಾದಿಸುತ್ತಾರೆ. ಹಿಂದೆ ಜನ್ಮಾಧಿಕರಣ ಹಾಗೂ ಅತ್ತೃತ್ವಾಧಿಕರಣದಲ್ಲಿ ಹೇಳಿದ ಪ್ರಕಾರ ಅದೃಶ್ಯತ್ವಾದಿ ಧರ್ಮಗಳಿಗೂ ಬ್ರಹ್ಮಸ್ವರೂಪತ್ವವು ಅಂಗೀಕೃತವಾಗಿದೆ. ಅದಕ್ಕೆ ಅಭ್ಯಧಿಕಾಶಂಕೆಯಿಂದ ಬರುವ ಆಕ್ಷೇಪವನ್ನು ತೋರಿಸುತ್ತಾರೆ.

ಗುಣಕ್ರಿಯಾದಯೋ ಭಾವಾ ಯದಿ ವಾ ಸ್ಯುರಭೇದಿನಃ ॥೧೬॥

ಅಭೇದೋऽಭಾವಧರ್ಮಾಣಾಂ ಬ್ರಹ್ಮಣಾ ಯುಜ್ಯತೇ ಕಥಂ ।

ಆನಂದಾದಿ ಗುಣಗಳು, ಸಂಹರಣಾದಿ ಕ್ರಿಯೆಗಳು, ಸರ್ವಗತತ್ವಾದಿ ಭಾವಗಳು, ಅನ್ನಮಯಾದಿ ರೂಪಗಳು ಹಾಗೂ ಪುಚ್ಛಾದಿ ಅವಯವಗಳು ಭಾವ ಪದಾರ್ಥಗಳಾಗಿರುವುದರಿಂದ, ಅವುಗಳಿಗೆ ಭಾವ ಪದಾರ್ಥವಾದ ಬ್ರಹ್ಮನೊಂದಿಗೆ ಅಭೇದವಿದೆ ಎಂದು ಹೇಳಿದರೆ ಹಾಗೆಯೇ ಆಗಲಿ. ಆದರೆ ಅದೃಶ್ಯತ್ವಾದಿ ಧರ್ಮಗಳು, ಅಭಾವ ಪದಾರ್ಥಗಳಾಗಿರುವುದರಿಂದ, ಬ್ರಹ್ಮನೊಂದಿಗೆ ಅಭೇದವನ್ನು ಹೇಳುವುದು ಯುಕ್ತವಲ್ಲ. ಭಾವ ಮತ್ತು ಅಭಾವಗಳು ವಿರುದ್ಧವಾದ ಧರ್ಮಗಳಾಗಿರುವುದರಿಂದ ಅವುಗಳಿಗೆ ಐಕ್ಯವು ಕೂಡುವುದಿಲ್ಲ. ಈ ಆಕ್ಷೇಪವನ್ನು ಮುಂದಿನ ವಾಕ್ಯದಿಂದ ಪರಿಹರಿಸುತ್ತಾರೆ.

ನಾಭಾವೋ ಭಾವ ಇತಿ ಚ ವಿಶೇಷಃ ಪ್ರಾಯಶೋ ಭವೇತ್ ॥೧೭॥

ಅನ್ಯೋನ್ಯಾಭಾವಕ್ಕೂ ಭಾವಕ್ಕೂ ವಿಶೇಷ ಅಥವಾ ಭೇದವು ಲೋಕದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ.

ಅನ್ಯೋನ್ಯಾಭಾವದ ವಿವರಣೆ

ಇಲ್ಲಿ ಅಭಾವ ಎಂದರೆ ಅನ್ಯೋನ್ಯಾಭಾವ ಎಂದರ್ಥ. ದೃಶ್ಯದಿಂದ ಬೇರೆಯಾದುದು ಅದೃಶ್ಯ, ಅದರ ಭಾವ ಅಥವಾ ಧರ್ಮವೇ ಅದೃಶ್ಯತ್ವ. ಅದೃಶ್ಯತ್ವಾದಿ ಶಬ್ದಗಳಿಂದ ದೃಶ್ಯಾದಿ ಅನ್ಯೋನ್ಯಾಭಾವವು ಹೇಳಲ್ಪಡುತ್ತದೆ. ಅಭಾವ ಎಂದರೆ ದೃಶ್ಯಾದಿ ವಿರೋಧಿತ್ವ ರೂಪವಾದ ಅರ್ಥವಾಗಲಿ ಎನ್ನುವುದು ಸರಿಯಲ್ಲ. ಬ್ರಹ್ಮನು ದೃಶ್ಯನಾಗಿದ್ದರೂ ಅವನ ಧರ್ಮಗಳು ಅದೃಶ್ಯವಾಗಿರಲಿ ಎಂದು ಹೇಳುವುದು ಸ್ವವ್ಯಾಘಾತ ನಿಮಿತ್ತದಿಂದಾಗಿ ಕೂಡುವುದಿಲ್ಲ. ಬ್ರಹ್ಮ ಹಾಗೂ ಅವನ ದೃಶ್ಯಾದಿ ಧರ್ಮಗಳೂ ಭಾವ ಪದಾರ್ಥಗಳೇ ಆಗಿವೆ. ಆದಕಾರಣ ಭಾವಾಭಾವರೂಪವಾದ ವಿರೋಧವಿಲ್ಲ. ಅನ್ಯೋನ್ಯಾಭಾವಕ್ಕೂ ಭಾವಕ್ಕೂ ಲೋಕದಲ್ಲಿಯೂ ಹೆಚ್ಚಾಗಿ ಭೇದವು ಕಂಡುಬರದು. ಆದ್ದರಿಂದ ಅನ್ಯೋನ್ಯಾಭಾವಕ್ಕೂ ಬ್ರಹ್ಮನಿಗೂ ಅಭೇದವನ್ನು ಹೇಳಿದರೆ ಅನುಪಪತ್ತಿಯು ಬರುವುದಿಲ್ಲ. ಅನ್ಯೋನ್ಯಾಭಾವವು ನಿಯಮೇನ ಪ್ರತಿವಸ್ತುವಿನಲ್ಲಿಯೂ ಪ್ರಾಗಭಾವಾದಿಗಳಿಗಿಂತ ಹೆಚ್ಚಾಗಿ ಇರುವುದು. ನಿತ್ಯ ಹಾಗೂ ಅನಾದಿ ವಸ್ತುಗಳಿಗೆ ಪ್ರಾಗಭಾವವು ಅಸಂಭವ. ಅನ್ಯೋನ್ಯಾಭಾವವೇ ಬೇರೆ ಕಡೆಗಳಲ್ಲಿ ಧರ್ಮಿಸ್ವರೂಪವಾಗಿರುವುದರಿಂದ ಬ್ರಹ್ಮನಲ್ಲಿಯೂ ಧರ್ಮಿಸ್ವರೂಪವೆಂದು ಅಂಗೀಕರಿಸಬೇಕು.

ಯಾರು ಅನ್ಯೋನ್ಯಾಭಾವವನ್ನು ಧರ್ಮಿಸ್ವರೂಪವೆಂದು ಒಪ್ಪುವುದಿಲ್ಲವೋ ಅವನನ್ನು ಪ್ರಶ್ನಿಸಬೇಕು. ನೀನು ಯಾವ ಕಾರಣದಿಂದ ಒಪ್ಪುವುದಿಲ್ಲ, ವಿರೋಧದ ಶಂಕೆಯಿಂದಲೋ, ಪ್ರಮಾಣವಿಲ್ಲವೆಂದೋ ಅಥವಾ ಬಾಧಕವಿರುವುದರಿಂದಲೋ? ಮೊದಲನೆಯ ಕಲ್ಪದಲ್ಲಿ ಅನ್ಯೋನ್ಯಾಭಾವಕ್ಕೆ ಧರ್ಮಿಯಿಂದ ವಿರೋಧವು ಹೇಗೆಂದು ಕೇಳಬೇಕು. ವಿಧಿನಿಷೇಧರೂಪತ್ವದ ನಿಮಿತ್ತದಿಂದ ಎಂದು ಹೇಳಿದರೆ, ಅದಾದರೂ ಹೇಗೆ ಕೂಡುತ್ತದೆ ಎಂದು ಕೇಳಬೇಕು. ನಿಷೇಧಾರ್ಥಕವಾದ ನಞ್ ಇದ್ದರೆ ನಿಷೇಧರೂಪತ್ವವೂ ಅದಿಲ್ಲದಿದ್ದರೆ ವಿಧಿರೂಪತ್ವವೂ ಎಂದು ಹೇಳಿದರೆ –

ಅತದ್ಭಾವೋऽನ್ಯತಾ ಚೇತಿ ನ ವಿಶೇಷೋऽಸ್ತಿ ಕಶ್ಚನ ।
ದೋಷಾಭಾವೋ ಗುಣ ಇತಿ ಪ್ರಸಿದ್ಧೋ ಲೌಕಿಕೇಷ್ವಪಿ ॥೧೮॥

ಅದೃಶ್ಯತ್ವಾದಿಕಾಂಸ್ತಸ್ಮಾದ್ಗುಣಾನಾಹ ಸ್ವಯಂ ಪ್ರಭುಃ ।

'ಪಟಕ್ಕೆ ಘಟತ್ವವಿಲ್ಲ' 'ಅದು ಘಟದಿಂದ ಬೇರೆಯೇ ಆಗಿರುವುದು' ಹೀಗೆ ಎರಡು ಪ್ರಕಾರದಿಂದ ಹೇಳಿದರೂ ತಾತ್ಪರ್ಯ ಒಂದೇ ಆಗುವುದು. ಈ ಹೇಳಿಕೆಗಳಲ್ಲಿ ಯಾವುದೇ ರೀತಿಯ ವೈಲಕ್ಷಣ್ಯವಿರುವುದಿಲ್ಲ. ದೋಷಾಭಾವವೇ ಗುಣ, ಗುಣಾಭಾವವೇ ದೋಷ ಇತ್ಯಾದಿ ವ್ಯವಹಾರವು ಲೌಕಿಕರಲ್ಲಿಯೂ ಪ್ರಸಿದ್ಧವಾಗಿದೆ. ವಿಧಿರೂಪಗಳಿಗೆ ನಞ್ ಪ್ರಯೋಗದಿಂದ ನಿಷೇಧರೂಪತ್ವವೂ, ನಿಷೇಧಗಳಿಗೆ ನಞ್ ಪ್ರಯೋಗದಿಂದ ವಿಧಿರೂಪತ್ವವೂ ಬರುವುದು. ಈ ಪ್ರಕಾರವಾಗಿ ನಞ್ ಪ್ರಯೋಗವಿದ್ದರೂ ಗುಣರೂಪತ್ವವು ಕೂಡುವುದರಿಂದ ಸೂತ್ರಕಾರರಾದ ತಾವು ನಞ್ ಪ್ರಯೋಗವಿರುವ ಅದೃಶ್ಯತ್ವಾದಿಗಳನ್ನು ಗುಣವೆಂದೇ ಹೇಳಿದ್ದಾರೆ.

ಭಾವಾಭಾವವಿರೋಧೋऽಪಿ ನ ತು ಸರ್ವತ್ರ ವಿದ್ಯತೇ ॥೧೯॥

ತದಭಾವೋ ಹಿ ತದ್ಭಾವವಿರೋಧೀ ನ ತತೋ ಪರಃ ।

ಭಾವ ಮತ್ತು ಅಭಾವಗಳಿಗೆ ವಿರೋಧವೂ ಕೂಡ ಎಲ್ಲ ಕಡೆಗಳಲ್ಲಿ ಇರುವುದಿಲ್ಲ. ಉದಾಹರಣೆಗೆ, ಘಟ ಇದ್ದಲ್ಲಿಯೇ ಪಟಾಭಾವವು ಕಂಡುಬರುವುದು. ಘಟದಲ್ಲಿನ ಪಟಾಭಾವವು ಘಟಸ್ವರೂಪದಿಂದ ವಿರೋಧಿಯಾದುದಲ್ಲ. ಹಾಗೆಯೇ ಪಟದಲ್ಲಿರುವ ಘಟಾಭಾವವು ಪಟಸ್ವರೂಪದಿಂದ ವಿರೋಧಿಯಾದುದಲ್ಲ. ಇವೆರಡೂ ಅನುಭವ ಸಿದ್ಧವು.

ಹಾಗಾದರೆ ಅನ್ಯೋನ್ಯಾಭಾವಕ್ಕೆ (ಘಟದಲ್ಲಿ ಪಟದ ಅಭಾವ, ಪಟದಲ್ಲಿ ಘಟದ ಅಭಾವ) ಧರ್ಮಿಸ್ವರೂಪತ್ವ ವಿಷಯದಲ್ಲಿ ಪ್ರಮಾಣವಿಲ್ಲ ಎಂದು ಹೇಳಿದರೆ, ಹಾಗೆ ಹೇಳಕೂಡದು. ಅನ್ಯೋನ್ಯಾಭಾವವೂ ಭೇದವೂ ಒಂದೇ ಆಗಿವೆ. ಭೇದವು ವಸ್ತು ಸ್ವರೂಪವೆಂದು ಎಲ್ಲರೂ ಅಂಗೀಕರಿಸಿರುವರು. ಇಲ್ಲವಾದರೆ ಅನವಸ್ಥಾದಿ ದೋಷಗಳು ಉಂಟಾಗುತ್ತವೆ.

ಹಾಗಾದರೆ ಪೃಥಕ್ತ್ವ, ಅನ್ಯೋನ್ಯಾಭಾವ ಮತ್ತು ಸ್ವರೂಪ ಎಂದು ಮೂರು ವಿಧವಾದ ಭೇದವನ್ನು ನಾವು ಅಂಗೀಕರಿಸುತ್ತೇವೆ. ದ್ರವ್ಯದಲ್ಲಾದರೋ ಮೂರು ವಿಧವಾದ ಭೇದವೂ ಕೂಡುವುದು. ಗುಣಾದಿ ಪಂಚಕದಲ್ಲಿ ಎರಡೇ ವಿಧವು. ಪೃಥಕ್ತ್ವವೂ ಒಂದು ಗುಣವಾಗಿರುವುದರಿಂದ ಗುಣಾದಿಗಳಲ್ಲಿ ಪೃಥಕ್ತ್ವ ಎಂಬ

ಭೇದವು ಅಸಂಭವ. ಅಭಾವದಲ್ಲಿ ಸ್ವರೂಪಭೇದ ಮಾತ್ರ ಕೂಡುವುದು. ಅಭಾವದಲ್ಲಿ ಅನ್ಯೋನ್ಯಾಭಾವರೂಪ ಭೇದವನ್ನು ಒಪ್ಪಿದರೆ ಅನವಸ್ಥಾ ದೋಷವು ಬರುವುದು. ಅನ್ಯೋನ್ಯಾಭಾವವು ಭೇದವೇ ಆಗಿದ್ದರೂ, ಭೇದವು ಧರ್ಮಿಸ್ವರೂಪವೇ ಆಗಿದ್ದರೂ, ಅನ್ಯೋನ್ಯಾಭಾವಕ್ಕೆ ಧರ್ಮಿಸ್ವರೂಪತ್ವವು ಇರುವುದಿಲ್ಲ. ಏಕೆಂದರೆ ಅದು ಸ್ವರೂಪಭೇದದಿಂದ ಬೇರೆಯಾದ ಭೇದವಾಗಿದೆ. ಹೀಗೆ ಹೇಳಿದರೆ -

ಪೃಥಕ್ತ್ವಾಭಾವತದ್ರೂಪಾನ್ಭೇದಾಂಸ್ತ್ರೀನ್ಕಲ್ಪಯಂತಿ ಚೇತ್ ॥೨೦॥
ಕಲ್ಪನಾಗೌರವಾದ್ಯಾಸ್ತು ದೋಷಾಸ್ತತ್ರ ವಿರೋಧಿನಃ ।
ಪೃಥಕ್ತ್ವಾನ್ಯತ್ವಭೇದಾಸ್ತು ಪರ್ಯಾಯೇಣೈವ ಲೌಕಿಕೈಃ ॥೨೧॥
ವ್ಯವಹ್ರಿಯಂತೇ ಸತತಂ ವೈದಿಕೈರಪಿ ಸರ್ವಶಃ ।

ಪೃಥಕ್ತ್ವ, ಅನ್ಯೋನ್ಯಾಭಾವ, ಸ್ವರೂಪಭೇದ ಹೀಗೆ ಮೂರು ವಿಧಗಳಾದ ಭೇದಗಳನ್ನು ಕಲ್ಪಿಸುವುದಾದರೆ, ಕಲ್ಪನಾಗೌರವ ದೃಷ್ಟಹಾನಿ ಅದೃಷ್ಟಕಲ್ಪನಾ ಎನ್ನುವ ದೋಷಗಳು ವಿರೋಧಿಗಳಾಗಿ ಬರುತ್ತವೆ. ಪೃಥಕ್ತ್ವ ಅನ್ಯೋನ್ಯಾಭೇದ ಸ್ವರೂಪಭೇದ ಇವುಗಳು ಎಲ್ಲ ಲೌಕಿಕ ಹಾಗೂ ವೈದಿಕರಿಂದಲೂ ಪರ್ಯಾಯಾರ್ಥಕವಾಗಿಯೇ ಯಾವಾಗಲೂ ವ್ಯವಹರಿಸಲ್ಪಡುತ್ತವೆ.

ದೃಷ್ಟಹಾನಿರದೃಷ್ಟಸ್ಯ ಕಲ್ಪನೇತ್ಯೇವ ದೂಷಣಂ ॥೨೨॥
ಯದಾ ತದಧಿಕೋ ದೋಷೋ ವಿದ್ಯತೇ ಕೋ ನು ವಾದಿನಾಂ ।

ದೃಷ್ಟಹಾನಿ, ಅದೃಷ್ಟಕಲ್ಪನಾ, ಕಲ್ಪನಾಗೌರವಾದಿ ದೋಷಗಳು ಬಂದರೆ ಬರಲಿ ಮುಂದೆ ಏನು ಎಂದು ಕೇಳಿದರೆ, ವಾದಿಗಳಿಗೆ ಅವುಗಳಿಗಿಂತ ಮೀರಿದ ಅಧಿಕವಾದ ದೋಷವು ಬೇರೆ ಯಾವುದಾದರೂ ಇರಲು ಸಾಧ್ಯವೇ ಎಂದು ಶ್ರೀಮದಾಚಾರ್ಯರು ಪರಿಹಾಸ ಮಾಡುತ್ತಾರೆ.

ಭಾವಾಭಾವಸ್ವರೂಪಸ್ತು ವಿಶೇಷಾ ಏವ ವಸ್ತುನಃ ॥೨೩॥
ಅಭಿನ್ನಾ ಏವ ಸಂಗ್ರಾಹ್ಯಾ ವ್ಯವಹಾರಪ್ರಸಿದ್ಧಯೇ।

ಭಾವಾಭಾವಸ್ವರೂಪವುಳ್ಳ ಅತ್ಸ್ವತ್ವ, ಅದೃಶ್ಯತ್ವ ಇತ್ಯಾದಿಗಳೂ ಬ್ರಹ್ಮನಿಂದ ಅಭಿನ್ನವೇ ಆಗಿದ್ದರೂ, ಧರ್ಮ-ಧರ್ಮಿ ಮೊದಲಾದ ವ್ಯವಹಾರ ಸಿದ್ಧಿಗಾಗಿ ಧರ್ಮಗಳಿಗೂ ಧರ್ಮಿಗೂ ಸವಿಶೇಷಾಭೇದವನ್ನು ಅಂಗೀಕರಿಸಬೇಕು.

ವಿಶೇಷಕ್ಕೂ ಧರ್ಮಿಗೂ ಭೇದವಿಲ್ಲದಿದ್ದರೂ ವಿಶೇಷವು ಭೇದನಿಮಿತ್ತಕವಾದ ವ್ಯವಹಾರವನ್ನು ನಿರ್ವಹಿಸುತ್ತದೆ ಎಂದು ಸ್ವರೂಪಗ್ರಾಹಕ ಪ್ರಮಾಣದಿಂದಲೇ ಸಿದ್ಧವಾಗುವುದು.

ಕೆಲವರು ಗುಣಕ್ರಿಯಾದಿಗಳಿಗೆ ದ್ರವ್ಯದಿಂದ ಅತ್ಯಂತಭೇದವನ್ನು ಹಾಗೂ ಸಮವಾಯವನ್ನು ಅಂಗೀಕರಿಸಿ ವ್ಯವಹಾರಾದಿಗಳನ್ನು ಮಾಡುವರು. ಅವರು ವಿಶೇಷವನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಶ್ರುತಿಗಳು ಧರ್ಮ-ಧರ್ಮಿಗಳಿಗೆ ಅಭೇದವನ್ನು ಪ್ರತಿಪಾದಿಸುವುದು ಕೇವಲ ಉಪಾಸನಾರ್ಥವಾಗಿ ಅಥವಾ ಧರ್ಮಗಳೂ ಧರ್ಮಿಯಂತೆಯೇ ನಿತ್ಯ ಎಂದು ಹೇಳುವುದಕ್ಕಾಗಿ. ವಿಶೇಷವನ್ನು ಒಪ್ಪದ ಇನ್ನೂ ಕೆಲವರು ಭೇದಪ್ರತಿಷೇಧವನ್ನು ಶ್ರುತ್ಯರ್ಥವಾಗಿ ಹೇಳುತ್ತಾರೆ. ಕೆಲವರು ಬ್ರಹ್ಮನು ಅಖಂಡ ಅಥವಾ ನಿರ್ವಿಶೇಷವೆಂದು ಅಂಗೀಕರಿಸಿ ಭೇದಾಭೇದಾದಿ ವ್ಯವಹಾರವೆಲ್ಲವೂ ಅವಿದ್ಯಾರೋಪಿತ ನಿಮಿತ್ತಕವೆಂದು ಹೇಳುತ್ತ ವಿಶೇಷವನ್ನು ಅಲ್ಲಗೆಳೆಯುತ್ತಾರೆ. ಈ ಮೂರು ಪ್ರಕಾರದ ವಾದಿಗಳಿಂದಲೂ ವಿಶೇಷವನ್ನು ಒಪ್ಪುವಂತೆ ಮಾಡುತ್ತಾರೆ.

ಯದ್ಯೈಕಃ ಸಮವಾಯೋ೨ಪಿ ಭೇದಾಭೇದೌ ಚ ವಸ್ತುನಿ ॥೨೪॥
ಅಂಗೀಕಾರ್ಯಾ ವಿಶೇಷೇಣ ಸ್ಥಾನೇಷು ವ್ಯವಹರ್ತೃಭಿಃ ।
ಅಖಂಡವಾದಿನೋ೨ಪಿ ಸ್ಯಾದ್ವಿಶೇಷೋ೨ನಿಚ್ಛತೋ೨ಪ್ಯಸೌ ॥೨೫॥
ವ್ಯಾವೃತ್ತೇ ನಿರ್ವಿಶೇಷೇ ತು ಕಿಂ ವ್ಯಾವರ್ತ್ಯಬಹುತ್ವತಃ ।

ಧರ್ಮ-ಧರ್ಮಿಗಳಿಗೆ ಭೇದವನ್ನು ಪ್ರತಿಪಾದಿಸುವವರು ತಮ್ಮ ಶಾಸ್ತ್ರದ ಎಲ್ಲ ಪ್ರದೇಶಗಳಲ್ಲಿಯೂ ಒಂದೇ ಸಮವಾಯವು ಸಮತ್ವ ಬುದ್ಧಿಯನ್ನು ಉಂಟುಮಾಡುತ್ತದೆ ಎಂದು ಹೇಳುತ್ತ ಸಮವಾಯಕ್ಕೂ ವಸ್ತುವಿಗೂ ಅಭೇದವನ್ನು ಹೇಳುತ್ತಾರೆ. ಭೇದಾಭೇದಗಳಿಗೆ ಧರ್ಮಿಯಿಂದ ಅಭೇದವನ್ನು ಹೇಳುವವರು ವ್ಯವಹಾರ ನಿರ್ವಹಣೆಗಾಗಿ ಭೇದವನ್ನೂ ಅಂಗೀಕರಿಸುತ್ತಾರೆ. ಹೀಗೆ ಭೇದವಿರುವಲ್ಲಿ ಅಭೇದವನ್ನೂ, ಭೇದಾಭೇದವಿರುವಲ್ಲಿ ಭೇದವನ್ನೂ ನಿರ್ವಹಿಸಲು ವಿಶೇಷವನ್ನು ಅಂಗೀಕರಿಸದೇ ಗತ್ಯಂತರವಿಲ್ಲ. ಅದರಂತೆಯೇ ಬ್ರಹ್ಮ ನಿರ್ವಿಶೇಷ ಎಂದು ಹೇಳುವ ಅಖಂಡವಾದಿಗಳೂ ಕೂಡ ತಮಗೆ ಅನಿಷ್ಟವಾಗಿದ್ದರೂ ವಿಶೇಷವನ್ನು ಅಂಗೀಕರಿಸಲೇಬೇಕು. ಲಕ್ಷ್ಯವಾದ ಅರ್ಥಕ್ಕೆ

ಭೇದವಿಲ್ಲವಾದರೂ ಬ್ರಹ್ಮನಲ್ಲಿ ಆರೋಪಿತವಾದ ಅಸತ್ಯತ್ವ, ಅಜ್ಞಾನತ್ವ ಮೊದಲಾದ ಧರ್ಮಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಯುಕ್ತ ಅವುಗಳನ್ನು ತೆಗೆದುಹಾಕಿ ಬ್ರಹ್ಮನಿಗೆ ಅಖಂಡತ್ವವನ್ನು ಪ್ರತಿಪಾದಿಸುವುದರಲ್ಲಿ ಸತ್ಯ ಜ್ಞಾನ ಮೊದಲಾದ ಶಬ್ದಗಳಿಗೆ ಸಾರ್ಥಕ್ಯವಿದೆ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಅಖಂಡವಾದಿಗಳು ವ್ಯಾವೃತ್ತನಾದ ಅಂದರೆ ನಿರ್ಗುಣನಾದ ಬ್ರಹ್ಮನಲ್ಲಿ ಯಾವುದೇ ವ್ಯಾವರ್ತಕ ವಿಶೇಷಗಳನ್ನು ಒಪ್ಪಿರುವುದಿಲ್ಲ. ಆದಪ್ರಯುಕ್ತ ಎಲ್ಲರೂ ವಿಶೇಷವನ್ನು ಒಪ್ಪಲೇಬೇಕು. ವಿಶೇಷದ ಬಲದಿಂದ ಧರ್ಮ-ಧರ್ಮಿ ಎನ್ನುವ ವ್ಯವಹಾರವು ಕೂಡುವುದರಿಂದ ಅದೃಶ್ಯತ್ವಾದಿ ಗುಣಗಳು ಬ್ರಹ್ಮನ ಸ್ವರೂಪ ಎನ್ನುವುದು ಸಿದ್ಧವಾಗುವುದು.

ವೈಶ್ವಾನರಾಧಿಕರಣ

ಸೂತ್ರ: ಓಂ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ಓಂ (೧-೨-೨೪)

ಈ ಅಧಿಕರಣದಲ್ಲಿ ನಾಮಾತ್ಮಕ ಶಬ್ದಗಳನ್ನು ಸಮನ್ವಯ ಮಾಡುವ ಪ್ರಯುಕ್ತ ಈ ಪಾದದಲ್ಲಿ ಅಂತರ್ಭಾವ ಕೂಡುವುದಿಲ್ಲ. ಲಿಂಗಸಮನ್ವಯವೂ ಇಲ್ಲಿ ಸಿದ್ಧವಾಗುವುದರಿಂದ ಹಿಂದಿನ ಪಾದದಲ್ಲಿಯೂ ಇದು ಕೂಡುವುದಿಲ್ಲ. ಅನ್ಯತ್ರ ಪ್ರಸಿದ್ಧವಾದ ಶಬ್ದಗಳ ಸಮನ್ವಯವು ಮಾಡಲ್ಪಡುವ ಪ್ರಯುಕ್ತ ಈ ಎರಡು ಪಾದಗಳಲ್ಲಿಯೂ ಕೂಡುವುದಿಲ್ಲ ಎಂದೂ ಹೇಳುವಹಾಗಿಲ್ಲ. ಇಲ್ಲಿ ಹೇಳಲು ಅನರ್ಹವೆಂದರೆ ಸಮನ್ವಯವೇ ಸಿದ್ಧಿಸದು. ಆದಕಾರಣ ಈ ಅಧಿಕರಣದಲ್ಲಿ ಅಂತರ್ಭಾವವು ಹೇಗೆ ಎಂದು ಕೇಳಿದರೆ, ಲಿಂಗಾಧಿಕಾ ಎನ್ನುವಲ್ಲಿ ಅಂತರ್ಭಾವವನ್ನು ಸಮರ್ಥನೆ ಮಾಡಿರುವರು. ಅಥವಾ ಎರಡು ಪಾದಗಳ ಅರ್ಥವಾಗಿರುವ ಕಾರಣ ಒಂದೇ ಪಾದದಲ್ಲಿ ಪ್ರವೇಶವು ಕೂಡದಿರುವುದರಿಂದ, ಪಾದದ್ವಯ ಶೇಷವಾಗಿ ಎರಡೂ ಪಾದಗಳ ಅಂತ್ಯದಲ್ಲಿ ಈ ಅಧಿಕರಣವನ್ನು ನಿಬಂಧನೆ ಮಾಡಿದ್ದಾರೆ. ಇದನ್ನು ತಿಳಿಸಲು ಪಾದದ್ವಯಾರ್ಥವನ್ನು ಉಪಸಂಹಾರ ಮಾಡುತ್ತಾರೆ.

ಬಹುಲಿಂಗಸಮಾಯುಕ್ತೈರ್ಬಹುಭೀ ರೂಢನಾಮಭಿಃ ॥೨೬॥

ಪ್ರಸಿದ್ಧೈರನ್ಯಗತ್ವೇನ ವಾಚ್ಯಃ ಸಾಕ್ಷಾಜ್ಜನಾರ್ದನಃ ।

ಅನ್ಯತ್ರ ಪ್ರಸಿದ್ಧವಾದ ಅನೇಕ ಲಿಂಗಗಳಿಂದ ಕೂಡಿರುವ, ಅನೇಕ

ರೂಢಿನಾಮಗಳಿಂದ ಮುಖ್ಯವೃತ್ತಿಯಿಂದ ಶ್ರೀಹರಿಯು ವಾಚ್ಯನೆನಿಸುತ್ತಾನೆ.

ವೈಶ್ವಾನರಾಧಿಕರಣದ ತಾತ್ಪರ್ಯ

ವೈಶ್ವಾನರಾದಯಃ ಶಬ್ದಾ ಅಪಿ ತದ್ವಾಚನಸ್ತತಃ ॥೨೭॥

ಅಗ್ನಿ ಇತ್ಯಾದಿಗಳಲ್ಲಿ ಪ್ರಸಿದ್ಧವಾದ ವೈಶ್ವಾನರ ಮೊದಲಾದ ಶಬ್ದಗಳೂ ಪರಮೇಶ್ವರ ವಾಚಕಗಳೇ ಆಗಿವೆ. ಹಾಗಾದರೆ ವೈಶ್ವಾನರನಿಗೆ ವಿಷ್ಣುತ್ವ ನಿರ್ಧಾರಣವು ಹೇಗೆ ಆಗುವುದೆಂದರೆ -

ತಾನಿ ಲಿಂಗಾನಿ ತೇ ಶಬ್ದಾ ಅಪಿ ತದ್ಗಾ ಹಿ ಸರ್ವಶಃ ।

ಬಹುಲಾಪ್ಯಜ್ಞರೂಢಿಸ್ತತ್ರಾಜ್ಞರೂಢಿಂ ನ ಬಾಧತೇ ॥೨೮॥

ಆಯಾಯ ಪ್ರಕರಣಗಳಲ್ಲಿರತಕ್ಕ ಎಲ್ಲ ಲಿಂಗಗಳೂ, ಎಲ್ಲ ಶಬ್ದಗಳೂ ಪರಮೇಶ್ವರ ವಿಷಯಕಗಳೇ ಆಗಿವೆ. ಇದು ಶ್ರುತಿಪ್ರಸಿದ್ಧವು. ಹಾಗಾದರೆ ಅಗ್ನ್ಯಾದಿ ಶಬ್ದಗಳು ಅನ್ಯತ್ರ ರೂಢವಾಗಿರುವುದರಿಂದ ವಿಷ್ಣುಪರ ಎಂದು ಹೇಳುವುದು ಉಚಿತವಲ್ಲ. ವಿಷ್ಣುವಿನಲ್ಲಿಯೂ ರೂಢಿಯಿರುವುದರಿಂದ ಎಂದು ಹೇಳಕೂಡದು. ವಿಷ್ಣುವಿನಲ್ಲಿ ಅಲ್ಪ ರೂಢಿಯಿದ್ದರೆ ಅನ್ಯತ್ರ ಬಹಳ ಹೆಚ್ಚಿನ ರೂಢಿಯಿರುವುದು. ಬಾಹುಲ್ಯದ ನಿಮಿತ್ತ ಅನ್ಯತ್ರ ರೂಢಿಯೇ ಪ್ರಬಲ. ಆದಪ್ರಯುಕ್ತ ವಿಷ್ಣುವಿನಲ್ಲಿ ಕೂಡುವುದಿಲ್ಲ ಎಂದು ಹೇಳಿದರೆ - ಅನ್ಯತ್ರ ಇರುವುದು ಅಜ್ಞರೂಢಿ. ವಿಷ್ಣುವಿನಲ್ಲಿ ಪ್ರಾಜ್ಞರೂಢಿ. ಅಜ್ಞರೂಢಿಯು ಎಷ್ಟೇ ಹೆಚ್ಚಿದ್ದರೂ, ಪ್ರಾಜ್ಞರೂಢಿಯನ್ನು ಬಾಧಿಸಲಾರದು.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದನುವ್ಯಾಖ್ಯಾನೇ ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ ॥

*

॥ ಇಲ್ಲಿಗೆ ಶ್ರೀಮನ್ನ್ಯಾಯಸುಧಾ ಟೀಕಾನುಸಾರಿ ವಿವರಣೆ ಸಹಿತ ರಚಿತವಾದ
ಶ್ರೀಮದನುವ್ಯಾಖ್ಯಾನದ ಮೊದಲನೆಯ ಅಧ್ಯಾಯದ ಎರಡನೆಯ ಪಾದದ
ಕನ್ನಡಾನುವಾದವು ಮುಕ್ತಾಯವಾಯಿತು ॥

* * *

ಮೊದಲನೆಯ ಅಧ್ಯಾಯ

ಮೂರನೆಯ ಪಾದ

ಈ ಪಾದದಲ್ಲಿ ಉಭಯತ್ರ ಪ್ರಸಿದ್ಧವಾದ, ಅಂದರೆ ವಿಷ್ಣುವಿನಲ್ಲಿಯೂ ಹಾಗೂ ಬೇರೆ ಕಡೆಗಳಲ್ಲಿಯೂ ಪ್ರಸಿದ್ಧವಾದ, ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯ ಮಾಡುತ್ತಾರೆ.

ಪೂರ್ವೋತ್ತರ ಪಾದಗಳಿಂದ ಈ ಪಾದಕ್ಕೆ ಭಿನ್ನವಾಕ್ಯತ್ವವನ್ನೂ ಹಾಗೂ ತನ್ನಲ್ಲಿ ಏಕವಾಕ್ಯತ್ವವನ್ನೂ ಸಿದ್ಧಿಸುವುದಕ್ಕಾಗಿ ಮೂರನೆಯ ಪಾದದಲ್ಲಿ ಪ್ರತಿಪಾದಿಸಲ್ಪಡುವ ಅರ್ಥವನ್ನು ತೋರಿಸುತ್ತಾರೆ.

ತತ್ರಾನ್ಯತ್ರ ಪ್ರಸಿದ್ಧಾನಾಂ ಲಿಂಗನಾಮ್ನಾಂ ಪುನರ್ಹರಿಃ ।
ವಿಶೇಷಾನ್ಮುಖ್ಯತೋ ವೃತ್ತಿಂ ಸ್ವಸ್ಮಿನ್ನೇವಾತ್ರ ವಕ್ಷ್ಯಜಃ ॥೧॥

ಜನ್ಮಾದಿ ದೋಷರಹಿತರಾದ ಸೂತ್ರಕಾರರು ಈ ಮೂರನೆಯ ಪಾದದಲ್ಲಿ ಶ್ರೀಹರಿಯಲ್ಲಿಯೂ ಹಾಗೂ ಬೇರೆ ಕಡೆಗಳಲ್ಲಿಯೂ ಪ್ರಸಿದ್ಧವಾದ ದ್ಯುಭುವಾದಿ ಆಶ್ರಯತ್ವಾದಿ ಲಿಂಗಗಳಿಗೂ, ಭೂಮಾದಿ ನಾಮಗಳಿಗೂ ವಿಶೇಷವಾಗಿ ಪರಮಮುಖ್ಯವೃತ್ತಿಯಿಂದ ಶ್ರೀಹರಿಯಲ್ಲಿ ಸಮನ್ವಯವನ್ನು ಹೇಳುತ್ತಾರೆ.

ದ್ಯುಭ್ವಾದ್ಯಧಿಕರಣ

ಸೂತ್ರ: ಓಂ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ಓಂ (೧-೩-೧)

ಈ ಅಧಿಕರಣದಲ್ಲಿ ಮೊದಲನೆಯ ಸೂತ್ರದಿಂದ 'ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಮೋತಂ ಮನಃ ಸ ಪ್ರಾಣೈಶ್ಚ ಸರ್ವೈಃ ತಮೇವೈಕಂ ಜಾನಥ ಆತ್ಮಾನಂ' ಇತ್ಯಾದಿ ವಾಕ್ಯಗಳಿಂದ ಹೇಳಲ್ಪಟ್ಟ ಸ್ವರ್ಗ, ಪೃಥಿವೀ ಮೊದಲಾದ ಲೋಕಗಳಿಗೆ ಆಶ್ರಯನು (ದ್ಯುಭುವಾದ್ಯಾಶ್ರಯನು) ವಿಷ್ಣುವೇ, ಆತ್ಮಶಬ್ದದ ಪ್ರಯೋಗವಿರುವುದರಿಂದ ಎಂದು ಪ್ರತಿಪಾದಿಸಿದರು. ದ್ಯುಭುವಾದ್ಯಾಶ್ರಯತ್ವವು ರುದ್ರಾದಿಗಳಿಗೆ ಹೇಳಲ್ಪಟ್ಟಿದೆ, ವಿಷ್ಣುವಿಗಲ್ಲ ಎಂದು ಶಂಕಿಸುವ ಪೂರ್ವಪಕ್ಷವನ್ನು 'ನಾನುಮಾನಮತಚ್ಛಬ್ದಾತ್' 'ಪ್ರಾಣಭೃಚ್ಚ' ಎಂಬ

ಸೂತ್ರಗಳಿಂದ ನಿರಾಕರಿಸುವರು. ಇಲ್ಲಿ 'ಅತತ್' ಶಬ್ದಕ್ಕೆ 'ತಚ್ಛಬ್ದಾಭಾವಾತ್' (ಅಂದರೆ ರುದ್ರಾದಿವಾಚಕ ಶಬ್ದವಿಲ್ಲದಿರುವುದರಿಂದ) ಎಂಬುದಾಗಿ ಭಾಷ್ಯದಲ್ಲಿ ವ್ಯಾಖ್ಯಾನಮಾಡಲಾಗಿದೆ. ಈರೀತಿಯ ಸಮಾಸವು ಕೂಡುವುದಿಲ್ಲವಾದ್ದರಿಂದ ಈ ವ್ಯಾಖ್ಯಾನವು ಅಯುಕ್ತವೆಂದು ತೋರುತ್ತದೆ. ಹೀಗೆ ಆಶಂಕಿಸಿದರೆ -

ಆತ್ಮಶಬ್ದವಾಚ್ಯನು ವಿಷ್ಣುವೇ

ವಿಷ್ಣೋವೇವ ಆತ್ಮಶಬ್ದಸ್ಯ ರೂಢತ್ವಾನ್ನ ಶಿವಾದಿಕಾನ್ ।

ಶ್ರುತಿರ್ವಕ್ತಿ.....॥

ಆತ್ಮ ಶಬ್ದಕ್ಕೆ ವಿಷ್ಣುವಿನಲ್ಲಿಯೇ ಶ್ರುತಿಪ್ರಸಿದ್ಧವಾದ ರೂಢಿಯಿರುವುದರಿಂದ 'ಯಸ್ಮಿನ್ ದ್ಯೌಃ' ಇತ್ಯಾದಿ ಶ್ರುತಿಯು ರುದ್ರಾದಿಗಳನ್ನು ಆತ್ಮ ಶಬ್ದದಿಂದ ಹೇಳುವುದಿಲ್ಲ. ಆದಕಾರಣ ದ್ಯುಭುವಾದ್ಯಾಶ್ರಯನು ವಿಷ್ಣುವೇ, ರುದ್ರಾದಿಗಳಲ್ಲ.

ಭೂಮಾಧಿಕರಣ

ಸೂತ್ರ: ಓಂ ಭೂಮಾಸಂಪ್ರಸಾದಾದಧ್ಯುಪದೇಶಾತ್ ಓಂ (೧-೩-೮)

ಶಂಕರಾಚಾರ್ಯರು ಹಾಗೂ ರಾಮಾನುಜಾಚಾರ್ಯರು ಈ ಸೂತ್ರದಲ್ಲಿ 'ಭೂಮ' ಎಂಬ ಶಬ್ದದಿಂದ ಹೇಳಲ್ಪಟ್ಟವನು ಪರಬ್ರಹ್ಮನೇ ಎಂದು ಒಪ್ಪಿದರೂ ಅದಕ್ಕೆ 'ಸಂಪ್ರಸಾದಾತ್' ಎನ್ನುವುದು ಮಾತ್ರ ಹೇತುವೆಂದು ವ್ಯಾಖ್ಯಾನ ಮಾಡಿದ್ದಾರೆ. ಸಂಪ್ರಸಾದ ಎಂದರೆ ಸುಪ್ತಿ. ಇಲ್ಲಿ ಜಾಗ್ರತನಾದ ಪ್ರಾಣನೇ ಲಕ್ಷಿತನಾಗಿದ್ದಾನೆ. ಆ ಪ್ರಾಣನ ದೆಶೆಯಿಂದ ಮುಂದೆ ಉಪದೇಶ ಮಾಡಿರುವುದರಿಂದ (ಅಧ್ಯುಪದೇಶಾತ್), ಭೂಮ ಶಬ್ದವಾಚ್ಯನು ಪರಬ್ರಹ್ಮ ಎನ್ನುವುದು ಶಂಕರಾಚಾರ್ಯರ ವ್ಯಾಖ್ಯಾನ. ರಾಮಾನುಜಾಚಾರ್ಯರು ಸಂಪ್ರಸಾದ ಎಂದರೆ ಜೀವಾತ್ಮಾ ಎಂದು ಅರ್ಥ ಮಾಡಿದ್ದಾರೆ. ಇವೆರಡು ವ್ಯಾಖ್ಯಾನಗಳೂ ಅಯುಕ್ತ. ಏಕೆಂದರೆ ಪ್ರಸಿದ್ಧವಾದ ಪ್ರಾಣಾದಿ ಪದಗಳನ್ನು ಬಿಟ್ಟು ಅಪ್ರಸಿದ್ಧವಾದ ಸಂಪ್ರಸಾದ ಪದವನ್ನು ಸ್ವೀಕರಿಸಲಿಕ್ಕೆ ಕಾರಣವೇ ಇರುವುದಿಲ್ಲ. ಇಲ್ಲಿ ಭೂಮಶಬ್ದವಾಚ್ಯತ್ವನ್ನು ಉಪಪಾದಿಸಲು ಸೂತ್ರಕಾರರು ಸಂಪ್ರಸಾದ ಹಾಗೂ ಅಧ್ಯುಪದೇಶ ಎಂಬ ಎರಡು ಹೇತುಗಳನ್ನು ಹೇಳಿದ್ದಾರೆ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ. ಅಧ್ಯುಪದೇಶಾತ್ ಎನ್ನುವ

ಹೇತುವು ಅನ್ಯತ್ರದಲ್ಲಿಯೂ ಕೂಡುವುದರಿಂದ ಅದು ಪರಮಾತ್ಮನನ್ನೇ ಹೇಳುತ್ತದೆ ಎಂದು ಹೇಗೆ ಹೇಳುತ್ತೀರಿ ಎಂದು ಪ್ರಶ್ನಿಸಿದರೆ -

ಭೂಮಶಬ್ದವಾಚ್ಯನು ವಿಷ್ಣುವೇ

.....ಅಖಿಲೇಶತ್ವಾದ್ಭೂಮಾ ವಿಷ್ಣುಃ ಸುಖಾಧಿಕಃ ॥೨॥

ಅಧಿ ಶಬ್ದವು ವಿಷ್ಣುವಾಚಕ. ಅಧ್ಯುಪದೇಶಾತ್ ಎಂದರೆ ಅಖಿಲೇಶತ್ವಾತ್ ಎಂದೂ, ಸಂಪ್ರಸಾದಾತ್ ಎಂದರೆ ಪೂರ್ಣಸುಖರೂಪತ್ವಾತ್ ಎಂದೂ ಅರ್ಥವಾಗುವುದರಿಂದ, ಸರ್ವನಿಯಾಮಕನೂ ಸುಖಪೂರ್ಣನೂ ಆಗಿರುವ ಪ್ರಯುಕ್ತ ವಿಷ್ಣುವೇ ಭೂಮಶಬ್ದವಾಚ್ಯನು.

ಅಕ್ಷರಾಧಿಕರಣ

ಬ್ರಹ್ಮನು ಅಕ್ಷರಶಬ್ದವಾಚ್ಯನು

ಸೂತ್ರಃ ಓಂ ಅಕ್ಷರಮಂಬರಾಂತಧೃತೇಃ ಓಂ (೧-೩-೧೦)

'ಏತದ್ವೈ ತದಕ್ಷರಂ ಗಾರ್ಗಿ' ಎನ್ನುವ ಶ್ರುತಿಯಲ್ಲಿ ಹೇಳಲ್ಪಟ್ಟ ಅಕ್ಷರನು ಬ್ರಹ್ಮನೇ. ಅಕ್ಷರನೇ ಆಕಾಶಕ್ಕೆ ಆಧಾರನು ಹಾಗೂ ಈ ಅಕ್ಷರನ ಶಾಸನದಿಂದಲೇ ಆಕಾಶವು ವಸ್ತುಗಳಿಗೆ ಆಧಾರವಾಗಿರುವುದು. ಈ ರೀತಿ ಶ್ರುತಿಗಳಲ್ಲಿ ಉಕ್ತವಾಗಿದೆ. ಅಕ್ಷರನಿಗೆ ಬ್ರಹ್ಮತ್ವವನ್ನು ಉಪಪಾದಿಸುವುದಕ್ಕಾಗಿ ಹೇತ್ವಂತರವನ್ನು ಅನ್ಯಭಾವವ್ಯಾವೃತ್ತೇಶ್ಚ ಎನ್ನುವ ಸೂತ್ರವು ಹೇಳುತ್ತದೆ ಎಂಬುದಾಗಿ ಭಾಷ್ಯದಲ್ಲಿ ವ್ಯಾಖ್ಯಾತವಾಗಿದೆ. ಇದು ಸರಿಯಲ್ಲ. ಏಕೆಂದರೆ 'ಅಸ್ಥೂಲಮನಣ್ವಹ್ರಸ್ವಮದೀರ್ಘಂ' ಎನ್ನುವ ಶ್ರುತಿಯಲ್ಲಿ ಅಣುತ್ವ-ಮಹತ್ವ, ಹ್ರಸ್ವತ್ವ-ದೀರ್ಘತ್ವ ಇತ್ಯಾದಿ ಒಂದಕ್ಕೊಂದು ವಿರುದ್ಧವಾದ ಧರ್ಮಗಳು ಬ್ರಹ್ಮನಿಗೆ ಹೇಳಲ್ಪಟ್ಟಿವೆ. ಪರಸ್ಪರ ವಿರುದ್ಧವಾದ ಧರ್ಮಗಳು ಒಂದೇ ಕಡೆಯಲ್ಲಿ ಒಟ್ಟಿಗೇ ಕೂಡಲಾರವು. ಆದಪ್ರಯುಕ್ತ ಅಕ್ಷರ ಶಬ್ದವಾಚ್ಯನು ಬ್ರಹ್ಮನಲ್ಲ ಎಂದು ಹೇಳಿದರೆ -

ಅತೋ ವಿರುದ್ಧವದ್ಭಾತಮಪಿ ವ್ಯಾಖ್ಯಾಯ ತತ್ತ್ವತಃ ।
ಯೋಜನೀಯಂ ಹರೌ ವಾಕ್ಯಂ ವಿರುದ್ಧೈರ್ಲಕ್ಷಣೈರ್ಯುತಂ ॥೩॥

ಪರಸ್ಪರ ವಿರುದ್ಧಗಳಾದ ಲಕ್ಷಣಗಳಿಂದ ಯುಕ್ತನಾಗಿರುವುದೇ ಪರಬ್ರಹ್ಮನ

ವಿಶೇಷ ಲಕ್ಷಣ. ಆದಪ್ರಯುಕ್ತ ಪರಸ್ಪರ ವಿರುದ್ಧಾರ್ಥಕವೆಂದು ತೋರುವ ವಾಕ್ಯವನ್ನು ಯಥಾರ್ಥ ವ್ಯಾಖ್ಯಾನದಿಂದ ಶ್ರೀಹರಿಯಲ್ಲಿ ಕೂಡಿಸಲು ಸಾಧ್ಯ.

ಬ್ರಹ್ಮನು ವಿರುದ್ಧಲಕ್ಷಣಗಳಿಂದ ಯುಕ್ತನೆನ್ನುವುದು ಅಯುಕ್ತವು. ನನ್ನ ತಾಯಿ ಬಂಜೆ ಎನ್ನುವಂತೆ ವ್ಯಾಹತವಾದುದು. ಅಣುತ್ವ ಮಹತ್ವಾದಿಗಳು ವಿರುದ್ಧವೆಂದರೆ ಅವುಗಳಿಂದ ಕೂಡಿದ್ದು ಒಂದೇ ಆಗಿರುವುದು ಹೇಗೆ ಸಾಧ್ಯ. ಒಬ್ಬನಲ್ಲಿಯೇ ಅವುಗಳು ಕೂಡಿವೆಯೆಂದರೆ ಅವು ವಿರುದ್ಧವಾಗಿರಲು ಹೇಗೆ ಸಾಧ್ಯ. ಅವಿರೋಧವಿದ್ದಾಗ ಮಾತ್ರ ಒಂದೆಡೆಯಲ್ಲಿ ಇರುವಿಕೆಯೆಂಬುದು ಕೂಡುವುದು. ಹೀಗೆ ಆಶಂಕಿಸಿದರೆ -

ಅಣುತ್ವ-ಮಹತ್ವಾದಿ ಧರ್ಮಗಳಿಗೆ ಬ್ರಹ್ಮನಲ್ಲಿ ವಿರೋಧವಿಲ್ಲ

ಬ್ರಹ್ಮ್ಯೈವ ತಾನಿ ಲಿಂಗಾನಿ ತದನ್ಯತ್ರ ತ್ವಸಂತ್ಯಪಿ ।
ಅವಿರೋಧೇನ ಗೋವಿಂದೇ ಸಂತ್ಯಸ್ಥೂಲಾದಿಕಾನಿ ಚ ॥೪॥

ಬ್ರಹ್ಮನನ್ನು ಬಿಟ್ಟು ಇತರ ಕಡೆಗಳಲ್ಲಿ ಅಣುತ್ವ-ಮಹತ್ವಾದಿ ಲಕ್ಷಣಗಳು ಪರಸ್ಪರ ವಿರುದ್ಧವಾದುದರಿಂದಲೇ ಕೂಡಲಾರವು. ಆದರೆ ಬ್ರಹ್ಮನಲ್ಲಿ ಅದೇ ಲಕ್ಷಣಗಳು ಅವಿರೋಧವಾಗಿಯೇ ಒಟ್ಟಿಗೇ ಇರುತ್ತವೆ. ಅಣೋರಣೀಯಾನ್ ಇತ್ಯಾದಿ ಶ್ರುತಿಗಳೂ, ಯಶೋದ, ಅರ್ಜುನ ಮೊದಲಾದವರ ಪ್ರತ್ಯಕ್ಷವೂ ಇದಕ್ಕೆ ಪ್ರಮಾಣವಾಗಿದೆ. ಅಲ್ಲದೆ ಅಣುತ್ವ-ಮಹತ್ವಾದಿಗಳು ಬ್ರಹ್ಮನಲ್ಲಿ ಒಟ್ಟಿಗೇ ಇರುತ್ತವೆ ಎನ್ನುವುದನ್ನು ವಿರೋಧಿಸುವ ಯಾವದೇ ಪ್ರಮಾಣವೂ ಇರುವುದಿಲ್ಲ.

ಈ ಪ್ರಕಾರವಾಗಿ ಅಸ್ಥೂಲಾದಿ ಪದಗಳಿಗೆ ಅಣುತ್ವಾದಿ ಅರ್ಥವನ್ನು ಸ್ವೀಕರಿಸಿ ಶ್ರುತಿಗೆ ಬ್ರಹ್ಮವಿಷಯತ್ವವನ್ನು ಪ್ರತಿಪಾದಿಸಿದರು. ಈಗ ಸ್ಥೂಲತ್ವಾದಿ ನಿವೃತ್ತಿಪರವೆಂದು ಇಟ್ಟುಕೊಂಡರೂ ದೋಷವಿಲ್ಲ ಎಂಬ ಅಭಿಪ್ರಾಯದಿಂದ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ.

ಬ್ರಹ್ಮನಿಗೆ ಅಸ್ವಭಾವತ್ವವಿಲ್ಲ

ಅನ್ಯವಸ್ತು ಸ್ವಭಾವಾನಾಂ ಸ್ಥೌಲ್ಯಾದೀನಾಮಪಾಕೃತಿಂ ।
ನಾರಾಯಣೇ ಶ್ರುತಿರ್ವಕ್ತಿ ನ ತು ತಸ್ಯಾಸ್ವಭಾವತಾಂ ॥೫॥
ಸರ್ವಧರ್ಮಾ ಸರ್ವನಾಮಾ ಸರ್ವಕರ್ಮಾ ಗುಣಾಃ ಶ್ರುತಾಃ ।

ರಾಯದುರ್ಗದ ಮಠದ ಕೃಷ್ಣಾಚಾರ್
ಬಳ್ಳಾರಿ

ದೋಷಾಃ ಶ್ರುತಾಶ್ಚ ನೇತ್ಯಾದ್ಯಾ ಪ್ರಮಾಣಂ ಶ್ರುತಿರತ್ರ ಚ ॥೬॥

ಬ್ರಹ್ಮನ ದೆಶೆಯಿಂದ ಇತರವಾದ ಘಟಾದಿಗಳ ಸ್ವಭಾವಭೂತವಾದ ಸ್ಥೂಲತ್ವಾದಿ ಧರ್ಮಗಳು ನಾರಾಯಣನಲ್ಲಿ ಇಲ್ಲವೆಂದು ಅಸ್ಥೂಲಮನಣು ಇತ್ಯಾದಿ ಶ್ರುತಿಯು ಹೇಳುತ್ತದೆಯೇ ಹೊರತು ಅವನಿಗೆ ಅಸ್ವಭಾವತ್ವವನ್ನು ಹೇಳುವುದಿಲ್ಲ. ಹೀಗೇಕೆ ಅರ್ಥ ಮಾಡಬೇಕು ಎಂದರೆ - ಬ್ರಹ್ಮನು ಎಲ್ಲ ಧರ್ಮಗಳನ್ನೂ, ಎಲ್ಲ ನಾಮಗಳನ್ನೂ, ಎಲ್ಲ ಕರ್ಮಗಳನ್ನೂ ಹೊಂದಿರುವನು ಎಂಬುದಾಗಿ ಗುಣಗಳೇ ಶ್ರುತವಾಗಿವೆ. ಅವನಲ್ಲಿ ಯಾವುದೇ ದೋಷಗಳು ಶ್ರುತವಾಗಿಲ್ಲ. ಇದೇ ಮೊದಲಾದ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗಿದೆ. ಬ್ರಹ್ಮನಲ್ಲಿರುವ ಸ್ಥೂಲತ್ವ-ಅಣುತ್ವ ಇತ್ಯಾದಿ ಧರ್ಮಗಳು ಅಪ್ರಾಕೃತವಾಗಿರುವುದರಿಂದ ಅವುಗಳಿಗೆ ವಿರೋಧವಿರುವುದಿಲ್ಲ.

ಈ ಪಾದದಲ್ಲಿ ಉಕ್ತವಾಗಿರುವ ಮುಂದಿನ ಸೂತ್ರಗಳಿಗೆ ಭಾಷ್ಯದಲ್ಲಿಯೇ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿರುವುರಿಂದ ಇಲ್ಲಿ ಹೇಳತಕ್ಕ ವಿಶೇಷಾಂಶಗಳೇನೂ ಇರುವುದಿಲ್ಲ. ಆದರೂ 'ಪರಮಾಖ್ಯವಿದ್ಯಾವ್ಯಾಖ್ಯಾಂ ಕರೋಮಿ' ಎಂದು ಈ ಗ್ರಂಥದಲ್ಲಿ ಪ್ರತಿಜ್ಞಾ ಮಾಡಿರುವುದರಿಂದ, ಇಲ್ಲಿ ಈ ಪಾದದ ಅಧಿಕರಣಗಳಿಗೆ ಸಂಬಂಧಿಸಿದಂತೆ ಪೂರ್ವಪಕ್ಷಯುಕ್ತಿ ಹಾಗೂ ಸಿದ್ಧಾಂತಯುಕ್ತಿಗಳನ್ನು ಸಂಗ್ರಹವಾಗಿ ತಿಳಿಸುತ್ತಾರೆ.

ಶ್ರೀಮಜ್ಜಯತೀರ್ಥರು ಶ್ರೀಮನ್ನ್ಯಾಯಸುಧಾದಲ್ಲಿ ಈ ಶ್ಲೋಕಗಳಿಗೆ ವ್ಯಾಖ್ಯಾನ ಮಾಡಿರುವುದಿಲ್ಲ. ಶ್ರೀಪರಿಮಳಾಚಾರ್ಯರು ಶ್ರೀಮದಾಚಾರ್ಯರ ಈ ಶ್ಲೋಕಗಳ ಭಾವವನ್ನು ತಮ್ಮ ಟಿಪ್ಪಣಿ ಪರಿಮಳದಲ್ಲಿ ಸ್ವಲ್ಪ ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಅದರ ತಾತ್ಪರ್ಯವನ್ನು ಇಲ್ಲಿ ನೀಡಲಾಗಿದೆ.

ಲಿಂಗಂ ಸಾಧಾರಣ ಶಬ್ದೌ ಸ್ಥಾನಂ ಲಿಂಗಮನುಗ್ರಹಃ ।

ಪುನಃ ಶಬ್ದಾ ಲಿಂಗಶಬ್ದೌ ವಿಚಾರ್ಯಾ ದ್ವಿಃಸ್ಥಿತಾ ಇಹ ॥೭॥

ದ್ಯುಭ್ವಾದ್ಯಧಿಕರಣದಲ್ಲಿ ಸರ್ವಾಧಾರತ್ವ ಲಿಂಗವೂ, ಭೂಮ ಮತ್ತು ಅಕ್ಷರಾಧಿಕರಣಗಳಲ್ಲಿ ಆಯಾಯ ನಾಮಾತ್ಮಕ ಶಬ್ದಗಳು, ಈಕ್ಷತ್ಯಧಿಕರಣದಲ್ಲಿ ಸೃಷ್ಟಿಸ್ಥಾನವು ಅಂದರೆ ಸೃಷ್ಟ್ಯರ್ಥವಾಗಿ ಪ್ರಲಯಕಾಲದಲ್ಲಿ ಇರುವಿಕೆಯು, ದಹರಾಧಿಕರಣದಲ್ಲಿ ಹೃತ್ಪದ್ಮದಲ್ಲಿ ಇರುವಿಕೆ ಎಂಬ ಲಿಂಗವು,

ಅನುಕೃತ್ಯಧಿಕರಣದಲ್ಲಿ ಆನುಕೂಲ್ಯ ಗ್ರಹಣ ಎಂಬ ಲಿಂಗವು, ಮತ್ತೆ ಶಬ್ದಾದೇವ ಪ್ರಮಿತಃ, ಕಂಪನಾತ್, ಜ್ಯೋತಿಃ, ಆಕಾಶ ಎಂಬ ನಾಲ್ಕು ಅಧಿಕರಣಗಳಲ್ಲಿ ಕ್ರಮವಾಗಿ ಈಶಾನ-ವಜ್ರ-ಜ್ಯೋತಿ-ಆಕಾಶ ಶಬ್ದಗಳು, ಸುಷುಪ್ತ್ಯಧಿಕರಣದಲ್ಲಿ ಸ್ವಪ್ನಾದಿ ದ್ರಷ್ಟೃತ್ವ ಲಿಂಗ, ಪತ್ಯಧಿಕರಣದಲ್ಲಿ ಬ್ರಾಹ್ಮಣ ಶಬ್ದ ಈ ಪ್ರಕಾರವಾಗಿ ಈ ಮೂರನೆಯ ಪಾದದ ಅಧಿಕರಣಗಳಲ್ಲಿ ಉಭಯತ್ರ ಸಾಧಾರಣವಾಗಿರುವ ಧರ್ಮಗಳು ವಿಚಾರ ಮಾಡಲ್ಪಡುತ್ತವೆ.

ಅಧಿಕರಣಗಳಲ್ಲಿ ಸೂಚಿತವಾಗಿರುವ ಪೂರ್ವಪಕ್ಷ ನ್ಯಾಯಗಳು

ಬಾಹುಲ್ಯಂ ಲಿಂಗಶಬ್ದಾನಾಮನುಕ್ತಿಶ್ಚ ವಿರುದ್ಧತಾ ।
ಅದೃಷ್ಟಿರನ್ವಯಾಭಾವೋ ವಿಪರೀತಶ್ರುತಿಭ್ರಮಃ ॥೮॥
ಲಿಂಗಾವಕಾಶರಾಹಿತ್ಯಭ್ರಮಸ್ತಾದೃಗ್ದ್ವಯಂ ತಥಾ ।
ಬಹುತಾದೃಕ್ತ್ವಮುಕ್ತಸ್ಯ ವಿರೋಧೋऽರ್ಥಾತ್ತಥಾಗತಿಃ ॥೯॥
ಸಮಸ್ತಮೇತದಿತ್ಯತ್ರ ಪೂರ್ವಪಕ್ಷೇಷು ಯುಕ್ತಯಃ ।
ತಾ ಏವ ಬಲವತ್ಸ್ವತ್ರ ಗತ್ಯಂತರವಿವರ್ಜಿತಾಃ ॥೧೦॥
ಸಿದ್ಧಾಂತಯುಕ್ತಯೋ ಜ್ಞೇಯಾ ದೃಶ್ಯಂತೇ ತಾಶ್ಚ ಸರ್ವಶಃ ।

ದ್ಯುಭ್ವಾದ್ಯಧಿಕರಣದಲ್ಲಿ ದ್ಯುಭುವಾಶ್ರಯತ್ವಾದಿ ಲಿಂಗಪ್ರತಿಪಾದಕಶಬ್ದಗಳಿಗೆ ರುದ್ರಾದಿ ಪ್ರತಿಪಾದಕಶ್ರುತಿಗಳ ಲಿಂಗಬಾಹುಲ್ಯವು, ಭೂಮಾಧಿಕರಣದಲ್ಲಿ ಪ್ರಾಣನ ದೆಶೆಯಿಂದ ಮತ್ತೊಬ್ಬ ಶ್ರೇಷ್ಠನನ್ನು ಹೇಳದಿರುವುದು, ಅಕ್ಷರಾಧಿಕರಣದಲ್ಲಿ ಅತೃತ್ಜವನ್ನು ಹೇಳಿ 'ನ ತದಶ್ನಾತಿ ಕಿಂಚನ' ಎಂಬುದಾಗಿ ವಿರೋಧ ಹೇಳುವುದು, ಈಕ್ಷತ್ಯಧಿಕರಣದಲ್ಲಿ ಜಗತ್ತಿಗಿಂತ ಅತ್ಯಂತ ಭಿನ್ನನಾದ ಶ್ರೀಹರಿಗೆ ಪ್ರಪಂಚರೂಪದಿಂದ ಪರಿಣಾಮವು, ದಹರಾಧಿಕರಣದಲ್ಲಿ ವಾಕ್ಯಗಳಿಗೆ ಅನ್ವಯವಿಲ್ಲವೆಂದು ಹೇಳುವುದು, ಅನುಕೃತ್ಯಧಿಕರಣದಲ್ಲಿ 'ಕಥಂ ನು ತದಿತಿ' ಎನ್ನುವ ತತ್ ಶಬ್ದ ಶ್ರುತಿಯು ಜ್ಞಾನಿಸುಖ ಪರಾಮರ್ಶೆಯನ್ನು ಮಾಡುವುದರಿಂದ ಪರಮಾತ್ಮನಿಗೆ ಸಂಬಂಧಿಸಿಲ್ಲ ಎನ್ನುವ ಭ್ರಮೆಯು, ಶಬ್ದಾದೇವ ಎನ್ನುವ ಅಧಿಕರಣದಲ್ಲಿ ಪ್ರಾಣಾಪಾನನೇತೃತ್ವಾದಿ ಲಿಂಗಗಳಿಗೆ ಪ್ರಾಣನಿಂದ ಇತರನಾದ ವಿಷ್ಣುವಿನಲ್ಲಿ ಅವಕಾಶವಿಲ್ಲವೆನ್ನುವ ಭ್ರಮೆಯು, ಕಂಪನಾಧಿಕರಣದಲ್ಲಿ ವಜ್ರಶಬ್ದ ಮತ್ತು ಉದ್ಯತತ್ವ ಎನ್ನುವ ನಿರವಕಾಶ ಶ್ರುತಿ

ಮತ್ತು ಲಿಂಗಗಳು, ಜ್ಯೋತಿರಧಿಕರಣದಲ್ಲಿ ಜೀವಪ್ರಾಪಕವಾದ ಬಹಳವಾದ ಲಿಂಗಗಳಿರುವುದರಿಂದ ಜೀವನಿಂದ ಇತರನಾದ ಪರಮಾತ್ಮನಲ್ಲಿ ಅವಕಾಶವು ಇಲ್ಲವೆಂದು ಹೇಳುವುದು, ಆಕಾಶಾಧಿಕರಣದಲ್ಲಿ ಆಕಾಶ ಶಬ್ದಕ್ಕೆ ರೂಢಿಯನ್ನು ಬಿಟ್ಟು ವಿಷ್ಣುಪರವಾದ ಯೌಗಿಕಾರ್ಥವನ್ನು ಸ್ವೀಕರಿಸುವುದಕ್ಕೆ ವಿರೋಧವು, ಸುಷುಪ್ತಿ ಅಧಿಕರಣದಲ್ಲಿ ಜೀವೇಶ್ವರರಿಗೆ ಅಭೇದವಿರುವ ಪ್ರಯುಕ್ತ ಶ್ರುತಿಯು ಈಶ್ವರನನ್ನು ಕುರಿತು ಹೇಳಿದರೂ ಅದು ಜೀವನ ವಿಷಯಕವೆಂಬುದಾಗಿ ಅರ್ಥ ಮಾಡುವುದು, ಪತ್ಯಧಿಕರಣದಲ್ಲಿ ನಿರವಕಾಶವಾದ ಎರಡು ಶ್ರುತಿಗಳಿರುವುದರಿಂದ ಚತುರ್ಮುಖನಿಗೂ ಪರಮಾತ್ಮನಿಗೂ ಅಭೇದವನ್ನು ಹೇಳದೇ ಗತಿಯಿಲ್ಲವೆಂದು - ಇವೆಲ್ಲವೂ ಕ್ರಮವಾಗಿ ಈ ಪಾದದ ಪ್ರಥಮ ಹನ್ನೆರಡು ಅಧಿಕರಣಗಳಲ್ಲಿ ಉಕ್ತವಾಗಿರುವ ಪೂರ್ವಪಕ್ಷ ಯುಕ್ತಿಗಳು ಎಂದು ತಿಳಿಯಬೇಕು.

ಸೂತ್ರಗಳಲ್ಲಿ ಸೂಚಿತವಾಗಿರುವ ಸಿದ್ಧಾಂತನ್ಯಾಯಗಳು

ಮುಕ್ತೋಪಸೃಪ್ಯತಾ ಪ್ರಾಣಾದಾಧಿಕ್ಯಂ ಸರ್ವತಸ್ತಥಾ ॥೧೧॥
ವೈಲಕ್ಷಣ್ಯಂ ಸ್ವಭಾವಸ್ಯ ಪ್ರೇಕ್ಷಾಪೂರ್ವಾ ಕ್ರಿಯಾ ತಥಾ ।
ಅರಸ್ಯ ಣ್ಯಸ್ಯ ಚೇಶತ್ವಂ ಸೂರ್ಯಾದ್ಯನುಕೃತಿಸ್ತಥಾ ॥೧೨॥
ವಾಮನಾಖ್ಯಾ ಸರ್ವಕಂಪಸ್ತಚ್ಚಬ್ದಾನನ್ಯಸಿದ್ಧತಾ ।
ಅನಾಮರೂಪತಾ ಭೇದಸ್ಯೋಪಜೀವ್ಯಪ್ರಮಾಣತಾ ॥೧೩॥
ಸರ್ವೈಶ್ವರ್ಯಾದಿಕಾದ್ಯಾಸ್ತಾ ವೇದೇಶೇನ ಪ್ರದರ್ಶಿತಾಃ ।

'ಮುಕ್ತೋಪಸೃಪ್ಯವ್ಯಪದೇಶಾತ್' ಎನ್ನುವ ೨ನೇ ಸೂತ್ರದಿಂದ ವಿಷ್ಣುವಿಗೆ ಮುಕ್ತಪ್ರಾಪ್ಯತ್ವವೂ, 'ಭೂಮಾ ಸಂಪ್ರಸಾದಾದಧ್ಯುಪದೇಶಾತ್' ಎನ್ನುವ ೮ನೇ ಸೂತ್ರದಿಂದ ಪ್ರಾಣನೂ ಸೇರಿದಂತೆ ಸರ್ವವಸ್ತುಗಳಿಂದಲೂ ಉತ್ತಮತ್ವವೂ, 'ಅನ್ಯಭಾವವ್ಯಾವೃತ್ತೇಶ್ಚ' ಎನ್ನುವ ೧೨ನೇ ಸೂತ್ರದಿಂದ ಶ್ರೀಹರಿಗೆ ಅನ್ಯವಸ್ತುಗಳ ಧರ್ಮಗಳ ದೆಶೆಯಿಂದ ಎಲ್ಲ ರೀತಿಯಿಂದ ವೈಲಕ್ಷಣ್ಯವೂ, ಹಾಗೆಯೇ 'ಅಕ್ಷರಂಬರಾಂತಧೃತೇಃ' ಎನ್ನುವ ೧೦ನೇ ಸೂತ್ರದಿಂದ ಆಕಾಶಾಂತವಾದ ಸಮಸ್ತ ಪ್ರಪಂಚಧಾರಕತ್ವವೂ, 'ಈಕ್ಷತಿಕರ್ಮವ್ಯಪದೇಶಾತ್ಸಃ' ಎನ್ನುವ ೧೩ನೇ ಸೂತ್ರದಿಂದ ಪ್ರೇಕ್ಷಾಪೂರ್ವಕವಾದ ಸೃಷ್ಟ್ಯಾದಿ

ವ್ಯಾಪಾರಗಳೂ, ಹಾಗೆಯೇ 'ದಹರ ಉತ್ತರೇಭ್ಯಃ' ಎನ್ನುವ ೧೪ನೇ ಸೂತ್ರದಿಂದ ಪಾಪಾದಿಗಳ ಅತ್ಯಂತ ಅಭಾವವೂ, 'ಗತಿ ಶಬ್ದಾಭ್ಯಾಂ ತಥಾಹಿ ದೃಷ್ಟಂ ಲಿಂಗಂ ಚ' ಎನ್ನುವ ೧೫ನೇ ಸೂತ್ರದಿಂದ ಅಮೃತ(ಅರ) ಮತ್ತು ಸಮುದ್ರ(ಣ್ಯ)ಗಳಿಗೆ ನಿಯಾಮಕತ್ವವೂ, 'ಅನುಕೃತೇಸ್ತಸ್ಯ ಚ' ಎನ್ನುವ ೨೨ನೇ ಸೂತ್ರದಿಂದ ಸರ್ವಪ್ರಕಾಶಕತ್ವವೂ, 'ಶಬ್ದಾದೇವ ಪ್ರಮಿತಃ' ಎನ್ನುವ ೨೪ನೇ ಸೂತ್ರದಿಂದ ವಾಮನ ಎಂಬ ನಾಮಧೇಯವೂ, 'ಕಂಪನಾತ್' ಎನ್ನುವ ೩೯ನೇ ಸೂತ್ರದಿಂದ ಸರ್ವಜಗಚ್ಚೇಷ್ಟಕತ್ವವೂ, 'ಜ್ಯೋತಿರ್ದರ್ಶನಾತ್' ಎನ್ನುವ ೪೦ನೇ ಸೂತ್ರದಿಂದ ಜ್ಯೋತಿ ಶಬ್ದಕ್ಕೆ ವಿಷ್ಣುವನ್ನು ಬಿಟ್ಟು ಬೇರೆ ಕಡೆಗಳಲ್ಲಿ ಅಸಂಭವತ್ವವೂ, 'ಆಕಾಶೋಽರ್ಥಾಂತರತ್ವಾದಿ ವ್ಯಪದೇಶಾತ್' ಎನ್ನುವ ೪೧ನೇ ಸೂತ್ರದಿಂದ ನಾಮಾತ್ಮಕ ಹಾಗೂ ರೂಪಾತ್ಮಕವಾದ ಪ್ರಪಂಚದ ದೆಶೆಯಿಂದ ಭೇದವೂ, 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎನ್ನುವ ೪೩ನೇ ಸೂತ್ರದಿಂದ ಭೇದಕ್ಕೆ ಉಪಜೀವ್ಯಪ್ರಮಾಣತ್ವವೂ, 'ಪತ್ಯಾದಿಶಬ್ದೇಭ್ಯಃ' ಎನ್ನುವ ೪೫ನೇ ಸೂತ್ರದಿಂದ ಸರ್ವೇಶ್ವರ್ಯ ಸರ್ವಾಧಿಪತ್ಯ ಮೊದಲಾದವುಗಳೂ, ಹೀಗೆ ವೇದನಿಯಾಮಕರಾದ ಶ್ರೀ ವೇದವ್ಯಾಸರಿಂದ ಸಿದ್ಧಾಂತಯುಕ್ತಿಗಳು ಸೂತ್ರಗಳಿಂದ ತೋರಿಸಲ್ಪಟ್ಟಿವೆ.

ಭಾಷ್ಯದ ಪ್ರಕಾರ ಈ ಪಾದದಲ್ಲಿ ಹದಿನಾಲ್ಕು ಅಧಿಕರಣಗಳಿವೆಯೆಂದು ಪ್ರತಿಪಾದಿತವಾಗಿದೆ. ಆದರೆ ಇಲ್ಲಿ ಪೂರ್ವಪಕ್ಷ ಹಾಗೂ ಸಿದ್ಧಾಂತ ನ್ಯಾಯಗಳು ಕೇವಲ ಹನ್ನೆರಡು ಅಧಿಕರಣಗಳಿಗೆ ಸರಿಹೊಂದುವಂತೆ ಹೇಳಲ್ಪಟ್ಟಿವೆ. ವಿಷಯಾದಿಗಳಿಲ್ಲದೆ ಅಧಿಕರಣವು ಕೂಡುವುದಿಲ್ಲ. ಈ ಪಾದದಲ್ಲಿ ಸೇರಿರುವ ದೇವತಾಧಿಕರಣ ಮತ್ತು ಅಪಶೂದ್ರಾಧಿಕರಣ ಎನ್ನುವ ಎರಡು ಅಧಿಕರಣಗಳು ಸಮನ್ವಯವನ್ನು ಹೇಳುವುದಿಲ್ಲ. ಇವು ಅಧಿಕಾರ-ಅನಧಿಕಾರಗಳನ್ನು ಹೇಳುವುದರಿಂದ ಸಮನ್ವಯಾಧ್ಯಾಯದಲ್ಲಿಯೇ ಕೂಡುವುದಿಲ್ಲ ಎಂದಮೇಲೆ ಈ ಪಾದದಲ್ಲಿ ಅವು ಹೇಗೆ ಸಂಗತವಾಗುತ್ತವೆ ಎಂದು ಪ್ರಶ್ನಿಸಿದರೆ -

ಅಧಿಕಾರಶ್ಚ ತದ್ಧಾನಿಃ ಪ್ರಸಂಗಾದೇವ ಚಿಂತಿತೌ ॥೧೪॥

ಈ ಪಾದದಲ್ಲಿ ಅಂತರ್ಭಾವರೂಪವಾದ ಸಂಗತಿಯು ಇಲ್ಲವಾದರೂ,

ವೇದವಿದ್ಯೆಯಲ್ಲಿ ದೇವತೆಗಳಿಗೆ ಅಧಿಕಾರವುಂಟು, ಶೂದ್ರರಿಗೆ ಇಲ್ಲ ಎನ್ನುವ ವಿಷಯವು ಪ್ರಸಂಗರೂಪವಾದ ಸಂಗತಿಯು ಇರುವುದರಿಂದಲೇ ಇಲ್ಲಿ ವಿಚಾರ ಮಾಡಲ್ಪಟ್ಟಿವೆ.

ದೇವತೆಗಳಿಗೆ ವೈದಿಕ ಉಪಾಸನಾದಿಗಳಲ್ಲಿ ಅಧಿಕಾರವಿಲ್ಲ. ಏಕೆಂದರೆ, ದೇವತಾ ಪದವಿಯಲ್ಲಿರುವ ಅವರಿಗೆ ಉಪಾಸನಾದಿಗಳ ಫಲದ ಅಪೇಕ್ಷೆಯೇ ಇರುವುದಿಲ್ಲ. ಫಲದ ಕಾಮನೆ ಇರುವವರಿಗೆ ಮಾತ್ರ ಉಪಾಸನಾದಿ ವೈದಿಕ ವಿಧಿಯು ಹೇಳಲ್ಪಟ್ಟಿದೆ. ಹೀಗೆ ಜೈಮಿನ್ಯಾಚಾರ್ಯರು ಅಭಿಪ್ರಾಯ ಪಡುತ್ತಾರೆ. ಇದನ್ನು ನಿರಾಕರಿಸಿ ದೇವತೆಗಳಿಗೂ ಮಧು ಮೊದಲಾದ ಎಲ್ಲ ವೈದಿಕ ವಿದ್ಯೆಗಳಲ್ಲಿಯೂ ಅಧಿಕಾರವಿದೆ ಎಂದು ಸಮರ್ಥಿಸಬೇಕಾಗಿದೆ. ಜೊತೆಗೆ ಶೂದ್ರಾದಿಗಳಿಗೆ ವೇದೋಕ್ತ ಮಧುವಿದ್ಯಾದಿಗಲ್ಲಿ ಅಧಿಕಾರವಿಲ್ಲ ಎನ್ನುವುದನ್ನೂ ಸ್ಥಾಪಿಸಬೇಕಾಗಿದೆ. ಈ ಪ್ರಕಾರವಾಗಿ ಸಂಗತಿಯು ಇರುವುದರಿಂದ ಮೇಲೆ ಆಕ್ಷೇಪಿಸಲಾದ ಎರಡು ಅಧಿಕರಣಗಳಿಗೂ ಈ ಪಾದದಲ್ಲಿ ಅವಕಾಶ ಕೊಟ್ಟಿರುವುದು ಸುಸಂಗತವೇ ಆಗುವುದು.

ದೇವತಾಧಿಕರಣ

ಸೂತ್ರ: ಓಂ ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ ಓಂ (೧-೩-೩೧)

ಸೂತ್ರ: ಓಂ ಜ್ಯೋತಿಷಿ ಭಾವಾಚ್ಚ ಓಂ (೧-೩-೩೨)

ದೇವತೆಗಳಿಗೆ ವೇದವಿದ್ಯಾಧಿಕಾರವನ್ನು ಆಕ್ಷೇಪಿಸುವುದೇ ಈ ಅಧಿಕರಣದ ಮೊದಲೆರಡು ಸೂತ್ರಗಳ ವಿಷಯ.

ಮಧುವಿದ್ಯಾದಿ ವೈದಿಕವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆಂದು ಜೈಮಿನ್ಯಾಚಾರ್ಯರು ತಿಳಿಯುತ್ತಾರೆ. ದೇವತಾ ಪದವಿಯನ್ನು ಗಳಿಸುವಾಗಲೇ ಮೋಕ್ಷೇತರವಾದ ಫಲಗಳೂ ಅವರಿಗೆ ಸಿಕ್ಕಿರುತ್ತವೆ. ಆದ್ದರಿಂದ ಅವರಿಗೆ ಫಲಗಳ ಕಾಮನೆಯಿರುವುದಿಲ್ಲ. ಆದಪ್ರಯುಕ್ತ ದೇವತೆಗಳಿಗೆ ವೇದವಿದ್ಯೆಗಳಲ್ಲಿ ಅಧಿಕಾರ ಕೂಡುವುದಿಲ್ಲ. ದೇವತೆಗಳು ಸರ್ವಜ್ಞರಾದ ಪ್ರಯುಕ್ತ ಮೋಕ್ಷಾರ್ಥ ವಿದ್ಯೆಯಲ್ಲಿಯೂ ಅವರಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ ಮೋಕ್ಷಾರ್ಥ ವಿದ್ಯೆಯಿಂದ ಸಾಧ್ಯವಾದ ಜ್ಞಾನವನ್ನು ಅವರು ಪದವಿಪ್ರಾಪ್ತವಾಗುವಾಗಲೇ ಪಡೆದಿರುತ್ತಾರೆ.

ದೇವತೆಗಳಿಗೂ ವೇದವಿದ್ಯಾಧಿಕಾರವುಂಟು

ಜೈಮಿನ್ಯಾಚಾರ್ಯರ ಮೇಲಿನ ಅಭಿಪ್ರಾಯವನ್ನು ನಿರಾಕರಿಸಿ ದೇವತೆಗಳಿಗೆ ವೇದವಿದ್ಯಾಧಿಕಾರವುಂಟು ಎನ್ನುವುದನ್ನು ಸಮರ್ಥಿಸಲು ಮುಂದಿನ ಸೂತ್ರ.

ಸೂತ್ರ: ಓಂ ಭಾವಂ ತು ಬಾದರಾಯಣೋ ಽಸ್ತಿ ಓಂ (೧-೩-೩೩)

ಮೋಕ್ಷಫಲ ಮತ್ತು ಅದಕ್ಕೆ ಕಾರಣವಾದ ಜ್ಞಾನದಲ್ಲಿಯೂ ಅತಿಶಯವಿರುವುದರಿಂದ ದೇವತೆಗಳಿಗೆ ವೇದವಿದ್ಯಾಧಿಕಾರವುಂಟು ಎಂದು ಬಾದರಾಯಣರು (ವೇದವ್ಯಾಸರು) ತಿಳಿಯುತ್ತಾರೆ.

ಜೈಮಿನಿ ಮತ್ತು ಬಾದರಾಯಣರ ಮತಗಳಿಗೆ ವಿರೋಧವಿಲ್ಲ

ಮೇಲೆ ಹೇಳಿದ ಸೂತ್ರದಲ್ಲಿ ಜೈಮಿನಿ ವಚನಕ್ಕೆ ಸೂಕ್ತವಾದ ಪರಿಹಾರ ಸೂಚಿತವಾಗಿಲ್ಲ. ಬಾದರಾಯಣರ ಮತಕ್ಕೆ ವಿರುದ್ಧವಾಗಿರುವುದರಿಂದ ಅದು ಅಪ್ರಮಾಣವೆಂದು ತಿಳಿಯಬೇಕೋ ಎಂದು ಕೇಳಿದರೆ, ಹಾಗೆ ಹೇಳಕೂಡದು. ವಿಷಯಗಳು ಬೇರೆಬೇರೆಯಾಗಿರುವುದರಿಂದ ಜೈಮಿನಿಯವರ ಅಭಿಪ್ರಾಯಕ್ಕೂ ಬಾದರಾಯಣರಿಗೂ ವಿರೋಧವಿಲ್ಲ ಎನ್ನುತ್ತಾರೆ -

ಶಕ್ಯಲಾಯ ವಿಧಿಃ ಸಿದ್ಧೇ ಚೋಪಾಸಾಯ ನಿರಾಕೃತಃ ।
ಯತೋ ಜೈಮಿನಿನಾ ಽನ್ಯಾರ್ಥಮಸಿದ್ಧೇ ಽರ್ಥೇ ವಿಧಿಸ್ತಥಾ ॥೧೫॥
ವಿದ್ಯಾಧಿರಾಜಸ್ಯ ಮತಮವಿರೋಧಸ್ತತಸ್ತಯೋಃ ।

'ಸ ಏತದೇವಾಮೃತಂ ವೇದ ವಸೂನಾಮೇವೈಕೋ ಭೂತ್ವಾ ಅಗ್ನಿನೈವ ಮುಖೇನೈತೇದೇವಾಮೃತಂ ದೃಷ್ಟ್ವಾ ತೃಪ್ಯತಿ' ಇತ್ಯಾದಿ ಶ್ರುತಿಸಿದ್ಧವಾದ ವಸುಪದ ಪ್ರಾಪ್ತಿಯೇ ಮೊದಲಾದ ಫಲಕ್ಕೋಸ್ಕರ ಜ್ಞಾತವಾದ ಬ್ರಹ್ಮಸ್ವರೂಪದ ವಿಷಯದಲ್ಲಿ ಉಪಾಸನಾ ವಿಧಿಯು ಜೈಮಿನ್ಯಾಚಾರ್ಯರಿಂದ ನಿರಾಕರಿಸಲ್ಪಟ್ಟಿದೆ. ಅನ್ಯಫಲಕ್ಕೋಸ್ಕರ, ಅಜ್ಞಾತವಾದ ಬ್ರಹ್ಮನ ಗುಣಾದಿಗಳ ವಿಷಯದಲ್ಲಿ ಉಪಾಸನೆಯು ವಿದ್ಯಾಧಿರಾಜರಾದ ವೇದವ್ಯಾಸರಿಂದ ವಿಧಿಸಲ್ಪಟ್ಟಿದೆ. ಆದಕಾರಣ ಅವರ ಮತಗಳಲ್ಲಿ ವಿರೋಧವಿರುವುದಿಲ್ಲ.

ಹಾಗಾದರೆ ಅನ್ಯಫಲವೆಂದರೇನು? ಸರ್ವಜ್ಞರಾದ ದೇವತೆಗಳಿಗೂ ಉಪಾಸನಾ ವಿಧಿಗೆ ಕಾರಣವಾದ ಅಸಿದ್ಧವಾದ ಅರ್ಥವು ಹೇಗೆ ಕೂಡುವುದು ಎಂದರೆ -

ಮೋಕ್ಷೇ ಫಲವಿಶೇಷೋಽಸ್ತಿ ನ ಚ ಸರ್ವಂ ಪ್ರಕಾಶತೇ ॥೧೬॥

ಸರ್ವದಾ ತೇನ ದೇವಾನಾಮಪಿ ಯಕ್ತಾ ಹ್ಯುಪಾಸನಾ ।

ಮೋಕ್ಷದಲ್ಲಿಯೂ ಫಲವಿಶೇಷವಿದೆ. ಬ್ರಹ್ಮನ ಎಲ್ಲ ಗುಣಸಮೂಹವೂ ದೇವತೆಗಳಿಗೆ ಯಾವಾಗಲೂ ಪ್ರಕಾಶಿಸುವುದಿಲ್ಲ. ಯಾವುದು ಪ್ರಕಾಶಿಸುತ್ತದೋ ಅದೂ ಕೂಡ ಸದಾ ಪ್ರಕಾಶವಾಗುವುದಿಲ್ಲ. ಆಗಾಗ ತಿರೋಹಿತವಾಗುವುದು. ಆದಪ್ರಯುಕ್ತ ತಿರೋಹಿತವಾದುದು ಪುನಃ ಪ್ರಕಾಶಿಸುವುದಕ್ಕಾಗಿಯೂ ಹಾಗೂ ಮುಕ್ತಿಯಲ್ಲಿ ಸುಖವಿಶೇಷರೂಪದ ಫಲಕ್ಕಾಗಿ ಅಜ್ಞಾತವಾದ ಗುಣವಿಶೇಷಗಳ ಪ್ರಕಾಶನಕ್ಕಾಗಿಯೂ ದೇವತೆಗಳಿಗೂ ಉಪಾಸನೆಯು ಯುಕ್ತವೇ ಆಗುವುದು.

ಪರಮೇಶ್ವರನಿಂದ ಇತರರು ಸರ್ವಜ್ಞರಲ್ಲ

ಸರ್ವಜ್ಞರಾದ ದೇವತೆಗಳಿಗೆ ಸರ್ವವೂ ಪ್ರಕಾಶಿಸುವುದಿಲ್ಲ ಎನ್ನುವುದು ಕೂಡುವುದಿಲ್ಲ ಎಂದರೆ ಹಾಗೆ ಹೇಳಕೂಡದು. ಏಕೆಂದರೆ ಪರಮೇಶ್ವರನಿಂದ ಇತರರಾದವರಿಗೆ ಸರ್ವಜ್ಞತ್ವವೇ ಸಿದ್ಧವಾಗದು ಎನ್ನುತ್ತಾರೆ –

ನಿತ್ಯಂ ವೃದ್ಧಿಕ್ಷಯಾಪೇತಂ ವಿಷ್ಣೋಃ ಪೂರ್ಣಂ ತು ವೇದನಂ ॥೧೭॥

ಸ್ಪಷ್ಟಾತಿಸ್ಪಷ್ಟವಿಶದಂ ಬ್ರಹ್ಮಣೋಽಶೇಷವಸ್ತುಗಂ ।

ಅನ್ಯೇಷಾಂ ಕ್ರಮಶೋ ಜ್ಞಾನಂ ಮಿತವಸ್ತುಗತಂ ಸದಾ ॥೧೮॥

ಸದಾಕಾಲವೂ ವೃದ್ಧಿಕ್ಷಯರಹಿತವಾದ ಸರ್ವವಿಷಯಕವಾದ ನಿರತಿಶಯ ಸ್ಪಷ್ಟವಾದ ಜ್ಞಾನವು ವಿಷ್ಣುವಿಗೆ ಮಾತ್ರ ಇರುವುದು. ಚತುರ್ಮುಖ ಬ್ರಹ್ಮನಿಗೆ ಪರ್ಯಾಲೋಚನೆಯಿಂದ ವಿಷ್ಣುವ್ಯತಿರಿಕ್ತ ಅಶೇಷ ವಸ್ತುವಿಷಯಕ ಜ್ಞಾನವಿದೆ. ಇತರ ದೇವತೆಗಳಿಗೆ ಪರಮೇಶ್ವರಾತಿರಿಕ್ತ ಅಶೇಷ ವಸ್ತುವಿಷಯಕ ಜ್ಞಾನವು ಅಸಂಭವ. ಆಯಾ ದೇವತೆಗಳ ಯೋಗ್ಯತೆ ಹಾಗೂ ಉಪಾಸನೆಗಳಿಗೆ ತಕ್ಕಂತೆ ಕ್ರಮವಾದ ವಸ್ತುವಿಷಯಕ ಜ್ಞಾನವು ಯಾವಾಗಲೂ ಇರುವುದು.

ಇತ್ಯಾದಯೋ ವಿಶೇಷಾಸ್ತು ಸದಾ ವಿದ್ಯಾಪತೇರ್ಹೃದಿ ।

ಜೈಮಿನ್ಯಾದ್ಯಾಸ್ತು ಸಾಮಾನ್ಯವೇತ್ತೃತ್ವಾತ್ತಥಾಽವದನ್ ।

ವಿದ್ಯೇಶಮತಮೇತಸ್ಮಾನ್ನೈವ ಸದ್ಭಿರ್ವಿರುದ್ಧ್ಯತೇ ॥೧೯॥

ಬ್ರಹ್ಮಾದಿ ಎಲ್ಲ ದೇವತೆಗಳ ಜ್ಞಾನದಲ್ಲಿನ ಕ್ರಮವಿಶೇಷತೆಗಳ ಸಂಪೂರ್ಣವಾದ ತಿಳಿವಳಿಕೆಯು ಸರ್ವಜ್ಞರಾದ ವೇದವ್ಯಾಸರ ಮನಸ್ಸಿನಲ್ಲಿ

ಯಾವಾಗಲೂ ಇರುತ್ತದೆ. ಜೈಮಿನ್ಯಾದಿಗಳು ಯೋಗ್ಯರೇ ಆಗಿದ್ದರೂ ಎಲ್ಲ ದೇವತೆಗಳ ಬಗ್ಗೆ ಸಾಮಾನ್ಯವಾದ ಜ್ಞಾನವನ್ನು ಹೊಂದಿರುವ ಕಾರಣ 'ದೇವತೆಗಳಿಗೆ ವೇದವಿದ್ಯೆಗಳ ಉಪಾಸನೆಯಲ್ಲಿ ಅಧಿಕಾರವಿಲ್ಲ' ಎಂದು ಹೇಳಿದರು. ಆದಪ್ರಯುಕ್ತ ಜೈಮಿನ್ಯಾದಿಗಳ ಮತವು, 'ಮೋಕ್ಷದಲ್ಲಿ ವಿಶೇಷ ಫಲಕ್ಕೋಸ್ಕರ ದೇವತೆಗಳಿಗೆ ಉಪಾಸನೆ ಕೂಡುವುದು' ಎನ್ನುವ ವೇದವ್ಯಾಸರ ಮತವನ್ನು ವಿರೋಧಿಸಲಾರದು.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದನುವ್ಯಾಖ್ಯಾನೇ ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ ॥

॥ ಇಲ್ಲಿಗೆ ಶ್ರೀಮನ್ನ್ಯಾಯಸುಧಾ ಟೀಕಾನುಸಾರಿ ವಿವರಣೆ ಸಹಿತ ರಚಿತವಾದ
ಶ್ರೀಮದನುವ್ಯಾಖ್ಯಾನದ ಮೊದಲನೆಯ ಅಧ್ಯಾಯದ
ಮೂರನೆಯ ಪಾದದ ಕನ್ನಡಾನುವಾದವು ಮುಕ್ತಾಯವಾಯಿತು ॥

* * *

ಮೊದಲನೆಯ ಅಧ್ಯಾಯ

ನಾಲ್ಕನೆಯ ಪಾದ

ಈ ಪಾದದಲ್ಲಿ ವಿಷ್ಣುವಿನಲ್ಲಿ ಅಪ್ರಸಿದ್ಧವಾದ ಮತ್ತು ಬೇರೆ ಕಡೆಯಲ್ಲಿ ಮಾತ್ರ ಪ್ರಸಿದ್ಧವಾದ ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು ಮಾಡುತ್ತಾರೆ.

ಆನುಮಾನಿಕಾಧಿಕರಣ

ದುಃಖಿ, ಬದ್ಧ, ಇತ್ಯಾದಿ ಶಬ್ದಗಳ ಸಮನ್ವಯ

ಸೂತ್ರ: 'ಓಂ ಆನುಮಾನಿಕಮಪ್ಯೇಕೇಷಾಮಿತಿ ಚೇನ್ನ ಶರೀರರೂಪಕವಿನ್ಯಸ್ತಗೃಹೀತೇ ರ್ದರ್ಶಯತಿ ಚ ಓಂ' (೧-೪-೧)

ಇಲ್ಲಿ 'ಮಹತಃ ಪರಮವ್ಯಕ್ತಮವ್ಯಕ್ತಾತ್ಪುರುಷಃ ಪರಃ' ಎನ್ನುವ ವಾಕ್ಯವನ್ನು ಉದಾಹರಿಸಿ, ಅವ್ಯಕ್ತ ಶಬ್ದವನ್ನು ಪರಬ್ರಹ್ಮನಲ್ಲಿಯೇ ಉಪಪಾದಿಸಲಾಯಿತು. ಈ ವಿಷಯದಲ್ಲಿ ಸಕಲ ಶ್ರುತಿ ಸ್ಮೃತಿಗಳ ವಿರೋಧಬರುವುದರಿಂದ, 'ಅವ್ಯಕ್ತ ಶಬ್ದವಾಚ್ಯನು ಪರಬ್ರಹ್ಮನೆಂದಾದರೆ ಆಗ ಅವನಿಗೆ ಪುರುಷನಿಂದ ಅವರತ್ವವು ಬರಬೇಕಾಗುವುದು' ಎನ್ನುವ ಪೂರ್ವಪಕ್ಷಿಯ ಹೇಳಿಕೆಯನ್ನು ನಿರಾಕರಿಸಿ ಅದಕ್ಕೆ ಮುಂದಿನ ಸೂತ್ರದಿಂದ ಪರಿಹಾರವನ್ನು ಸೂಚಿಸುತ್ತಾರೆ.

ಸೂತ್ರ: ಓಂ ತದಧೀನತ್ವಾದರ್ಥವತ್ ಓಂ (೧-೪-೨)

ದುಃಖಿಬದ್ಧಾವರಾದ್ಯಾಸ್ತು ತದಧೀನತ್ವ ಹೇತುತಃ ।
ಶಬ್ದಾಃ ಬ್ರಹ್ಮಣಿ ವರ್ತಂತೇ ರಾಜ್ಞಿ ಯದ್ವತ್ಪರಾಜಯಃ ॥೧॥

ರಾಜನ ಅಧೀನರಾಗಿರುವ ಸೈನಿಕರು ಪರಾಜಿತರಾದಾಗ, ರಾಜನೇ ಪರಾಜಿತನೆಂದು ಹೇಗೆ ಹೇಳುವರೋ, ಹಾಗೆಯೇ ದುಃಖಿ, ಬದ್ಧ ಅವರ ಮೊದಲಾದ ಶಬ್ದಗಳಾದರೂ ಶ್ರೀಹರಿಯಲ್ಲಿ ಇಲ್ಲದಿದ್ದರೂ ಪ್ರಧಾನಾದಿಗಳಂತೆ ಅವನ ಅಧೀನದಲ್ಲಿರುವುದರಿಂದ ಸ್ವಾಮಿತ್ವೇನ ಆ ಶಬ್ದಗಳಿಗೆ ಶ್ರೀಹರಿಯಲ್ಲಿ ವಾಚ್ಯತ್ವವು ಕೂಡುವುದು. 'ನಿರವಷ್ಯೋ ನಿರವದ್ಯಃ', 'ನಾಮಾನಿ ಸರ್ವಾಣಿ

ಯಮಾ ವಿಶಂತಿ', ಈ ಎರಡು ಶ್ರುತಿಗಳನ್ನು ಅನುಸರಿಸಿ ದುಃಖಾದಿಗಳು ಶ್ರೀಹರಿಯಲ್ಲಿ ಸರ್ವಥಾ ಇಲ್ಲದಿದ್ದರೂ ಜೀವರಲ್ಲಿರುವ ದುಃಖಾದಿಗಳಿಗೆ ಶ್ರೀಹರಿಯೇ ಸ್ವಾಮಿಯಾಗಿರುವುದರಿಂದ ದುಃಖಾದಿ ಶಬ್ದವಾಚ್ಯನೆಂದು ಒಪ್ಪಿದರೆ ಯಾವ ಅನುಪಪತ್ತಿಯೂ ಇರುವುದಿಲ್ಲ.

ಸ್ವಾತಂತ್ರ್ಯಂ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಂ ।

ಸ್ವಾತಂತ್ರ್ಯ ತತ್ರ ಮುಖ್ಯಂ ಸ್ಯಾತ್ ಕುತೋ ರಾಜ್ಞಿ ಜಯೋऽನ್ಯಥಾ ॥೨॥

ಸಾಂತಂತ್ರ್ಯ ಮತ್ತು ತದ್ಗತತ್ವಗಳು ಶಬ್ದಗಳ ಪ್ರವೃತ್ತಿಗೆ ಕಾರಣವಾಗಿವೆ. ಇವುಗಳಲ್ಲಿ ಸ್ವಾತಂತ್ರ್ಯವೇ ಮುಖ್ಯವಾದ ಕಾರಣ. ಸ್ವಾತಂತ್ರ್ಯವು ಶಬ್ದಪ್ರವೃತ್ತಿಗೆ ಕಾರಣವಾಗದಿದ್ದರೆ ರಾಜನಲ್ಲಿ ಜಯನಿಮಿತ್ತಕವಾದ ಜಯಿ ಶಬ್ದವು ಹೇಗೆ ಕೂಡುವುದು?

ಸ್ವಾತಂತ್ರ್ಯಕ್ಕೆ ಮುಖ್ಯ ಕಾರಣತ್ವವನ್ನು ಉಪಪಾದಿಸುತ್ತಾರೆ –

ನ ಹಿ ಭೃತ್ಯಸ್ಯ ವಿಜಯಿಶಬ್ದಸ್ತಾವತ್ಪ್ರಯುಜ್ಯತೇ ।

ಯಾವದ್ರಾಜ್ಞ್ಯನ್ಯಗತ್ವೇऽಪಿ ಸ್ವಾತಂತ್ರ್ಯಾಭಾಸಮಾತ್ರತಃ ॥೩॥

ಜಯವು ಭೃತ್ಯನಲ್ಲಿದ್ದರೂ, ವಿಜಯಿ ಶಬ್ದವು ಕೇವಲ ಸ್ವಾತಂತ್ರ್ಯಾಭಾಸದಿಂದ ರಾಜನಲ್ಲಿ ಪ್ರಯೋಗಿಸಲ್ಪಡುವಷ್ಟು ಮುಖ್ಯವಾಗಿ ಭೃತ್ಯನಲ್ಲಿ ಪ್ರಯೋಗಿಸಲ್ಪಡುವುದಿಲ್ಲ. ಆದಪ್ರಯುಕ್ತ ಶಬ್ದಪ್ರವೃತ್ತಿಗೆ ಮುಖ್ಯವಾದ ನಿಮಿತ್ತವು ಸ್ವಾತಂತ್ರ್ಯವೇ ಹೊರತು ತದ್ಗತತ್ವವಲ್ಲ.

ಸ್ವಾಮಿತ್ವವು ಪ್ರವೃತ್ತಿನಿಮಿತ್ತವೆಂದು ಒಪ್ಪುವುದಾದರೆ, ಆಗ ಭೃತ್ಯನು ಬದ್ಧನಾದರೆ ಅಥವಾ ಮೃತನಾದರೆ ರಾಜನು ಬದ್ಧನಾದನು ಅಥವಾ ರಾಜನು ಮೃತನಾದನು ಎಂದು ಹೇಳಬೇಕಾಗುವುದು. ಆದ್ದರಿಂದ ಸ್ವಾಮಿತ್ವವು ಪ್ರವೃತ್ತಿನಿಮಿತ್ತವಲ್ಲ ಎಂದು ಹೇಳಿದರೆ –

ಭೃತ್ಯಬಂಧಾದಿಕಂ ರಾಜ್ಞಿ ರಾಜ್ಞೋ ಬಂಧಾದಿಯೋಗ್ಯತಃ ।

ಕಾರಣಂ ಸಂಶಯಸ್ಯ ಸ್ಯಾದಿತಿ ನೈವ ಪ್ರಯುಜ್ಯತೇ ॥೪॥

ರಾಜನಿಗೂ ಬಂಧಾದಿಗಳನ್ನು ಹೊಂದುವ ಯೋಗ್ಯತೆಯಿರುವ ಪ್ರಯುಕ್ತ, ರಾಜನ ಅಧೀನನಾದ ಭೃತ್ಯನ ಬಂಧಾದಿಗಳನ್ನು ವಿವಕ್ಷಾ ಮಾಡಿಕೊಂಡು 'ರಾಜಾ ಬದ್ಧಃ' ಇತ್ಯಾದಿ ವಾಕ್ಯಗಳನ್ನು ರಾಜನಲ್ಲಿ ಪ್ರಯೋಗ ಮಾಡುವುದಿಲ್ಲ.

ರಾಜಾಧೀನನಾದ ಭೃತ್ಯನು ಬಂಧಿತಾಗಿರುವನೋ ಅಥವಾ ರಾಜನೇ ಬಂಧಿತನಾಗಿರುವನೋ ಎಂಬ ಸಂಶಯದ ಕಾರಣದಿಂದ ಭೃತ್ಯನ ಬಂಧನಾದಿಗಳು ರಾಜನಲ್ಲಿ ಪ್ರಯೋಗಿಸಲ್ಪಡುವುದಿಲ್ಲ.

ಸಂಶಯಕ್ಕೆ ಕಾರಣವಾದರೂ ವಾಕ್ಯವನ್ನು ಪ್ರಯೋಗಿಸಲು ಅಡ್ಡಿಯೇನಿಲ್ಲ. ಏಕೆಂದರೆ ವ್ಯಾಖ್ಯಾನದಿಂದ ಸಂಶಯವನ್ನು ನಿವಾರಿಸಬಹುದು. ಇಲ್ಲದಿದ್ದರೆ ರಾಜಾ ಜಯೀ ಎಂಬ ಪ್ರಯೋಗದಲ್ಲಿಯೂ ಸಂಶಯ ಬರುಬಹುದಾದ್ದರಿಂದ ಪ್ರಯೋಗವು ಕೂಡದೇ ಹೋಗುವುದು ಎಂದರೆ –

ಅಮಂಗಲತ್ವಾಚ್ಛಬ್ದಾನಾಂ ರಾಜ್ಞೋ ಯೋಗಾದಮಂಗಲೇ ।
ಅಪ್ರಿಯತ್ವಾತ್ತು ಶಬ್ದಸ್ಯ ಸ್ಯಾತ್ಪ್ರಯೋಗನಿವರ್ತನಂ ॥೫॥

ರಾಜನಿಗೆ ಅಮಂಗಲವಾದ ಬಂಧನಾದಿಗಳಲ್ಲಿ ಯೋಗವಿರುವುದರಿಂದ, ಬದ್ಧ ಮೃತ ಮೊದಲಾದ ಶಬ್ದಗಳು ಅಮಂಗಲಕರವೂ ಹಾಗೂ ರಾಜ ಮತ್ತು ಅವನ ಸಂಬಂಧಿಗಳಿಗೆ ಅಪ್ರೀತಿಕರವೂ ಆದುದರಿಂದ ಅಂಥಹ ಶಬ್ದಗಳು ರಾಜನಲ್ಲಿ ಪ್ರಯೋಗಿಸಲ್ಪಡುವುದಿಲ್ಲ. ಜಯ ಪರಾಜಯಗಳು ಭೃತ್ಯರಿಂದಲೇ ಆಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲದಿರುವುದರಿಂದ ರಾಜನಲ್ಲಿ ಅವುಗಳ ಪ್ರಯೋಗವು ಸ್ವಾತಂತ್ರ್ಯದ ನಿಮಿತ್ತ ಕೂಡುತ್ತದೆ.

ರಾಜನಲ್ಲಿ ಹೇಗೆ ಬದ್ಧ, ದುಃಖ ಮೊದಲಾದ ಶಬ್ದಗಳಿಗೆ ಪ್ರಯೋಗವಿಲ್ಲವೋ ಹಾಗೆಯೇ ವಿಷ್ಣುವಿನಲ್ಲಿಯೂ ಪ್ರಯೋಗವಿಲ್ಲವೆಂದು ಏಕೆ ಹೇಳಬಾರದು ಎಂದರೆ –

ಗುಣಾಸ್ತು ತಾದೃಶಾ ಯತ್ರ ಪ್ರಯುಜ್ಯಂತೇऽಖಿಲಾ ಅಪಿ ।
ಪೂಜ್ಯೇಷ್ವೇವ ವಿಶೇಷೇಣ ಸ್ವಾತಂತ್ರ್ಯಂ ಮುಖ್ಯಕಾರಣಂ ॥೬॥

ಯಾವ ಪಕ್ಷದಲ್ಲಿ ಸ್ವಾಮ್ಯನಿಮಿತ್ತಕವಾದ ಶಬ್ದಗಳು ಶುಭವನ್ನೇ ಹೇಳುತ್ತವೋ ಹಾಗೂ ಪಾಕ್ಷಿಕವಾಗಿ ಅಮಂಗಲವನ್ನು ಸೂಚಿಸುವುದಿಲ್ಲವೋ ಅಂಥಹ ಪಕ್ಷದಲ್ಲಿ ಎಲ್ಲ ಶಬ್ದಗಳೂ ಪ್ರಯೋಗಿಸಲ್ಪಡುತ್ತವೆ. ಸ್ವಾಮಿತ್ವವನ್ನು ಹೊಂದಿರುವ ರಾಜಾದಿಗಳಲ್ಲಿ ಶಬ್ದಪ್ರವೃತ್ತಿಗೆ ಸ್ವಾತಂತ್ರ್ಯವೇ ಮುಖ್ಯಕಾರಣ. ಮಂಗಲಕರವಾದ ಶಬ್ದಗಳು ರಾಜಾದಿಗಳಲ್ಲಿಯೇ ಪ್ರಾಚುರ್ಯದಿಂದ ಪ್ರಯೋಗಿಸಲ್ಪಡುತ್ತವೆ, ತದ್ಗತತ್ವವನ್ನುಳ್ಳ ಭೃತ್ಯಾದಿಗಳಲ್ಲಿ ಅಮುಖ್ಯವಾಗಿ

ಪ್ರಯೋಗಿಸಲ್ಪಡುತ್ತವೆ. ಆದಪ್ರಯುಕ್ತ ಶಬ್ದಪ್ರವೃತ್ತಿಗೆ ಸ್ವಾತಂತ್ರ್ಯವೇ ಮುಖ್ಯ ಕಾರಣವೆಂದು ನಿಶ್ಚಯಿಸಲ್ಪಡುತ್ತದೆ.

ಅತೋ ದೋಷಾತಿದೂರತ್ವಾತ್ಸಂಶಯಸ್ಯಾಪ್ಯಸಂಭವಾತ್ ।
ದೋಷಾಣಾಂ ವಿಷ್ಣುಗತ್ವಸ್ಯ ಪ್ರಾಜ್ಞಬುದ್ಧಿವ್ಯಪೇಕ್ಷಯಾ ॥೭॥
ಸ್ವಾತಂತ್ರ್ಯಾರ್ಥಮಭಿಪ್ರೇತ್ಯ ದೋಷಶಬ್ದಾಶ್ಚ ವಿಷ್ಣವಿ ।

ವಿಷ್ಣುವು ದೋಷಾತಿದೂರನೆಂದು ನಿಶ್ಚಯವಾಗಿರುವುದರಿಂದ ಪ್ರಾಜ್ಞರ ಬುದ್ಧಿಯ ಅಪೇಕ್ಷೆಯಿಂದ ದುಃಖ ಬದ್ಧ ಅವರ ಇತ್ಯಾದಿ ದೋಷವನ್ನು ಹೇಳುವ ಶಬ್ದಗಳಿಗೆ ವಿಷ್ಣುಗತತ್ವವು ಸಂಶಯಕ್ಕೂ ಅತಿದೂರವಾದುದು. ಆದಪ್ರಯುಕ್ತ ದೋಷ ಶಬ್ದಗಳೂ ಕೂಡ ವಿಷ್ಣುವಿನಲ್ಲಿ ಸ್ವಾತಂತ್ರ್ಯ, ಸೂಚಿಸುವ ಅರ್ಥದಿಂದ ಪ್ರಯೋಗಿಸಲ್ಪಡುತ್ತವೆ. ವಿಷ್ಣವಿ ಎನ್ನುವ ಪ್ರಯೋಗ ವೈದಿಕಸಾಹಿತ್ಯದಲ್ಲಿ ಕಂಡುಬರುತ್ತದೆ. ಶ್ರೀಮದಾಚಾರ್ಯರು ತಾವು ಪರಮವೈದಿಕರು ಎಂದು ತಿಳಿಸುವುದಕ್ಕಾಗಿ ವಿಷ್ಣೌ ಎನ್ನುವ ಬದಲಿಗೆ ವಿಷ್ಣವಿ ಎಂದು ಪ್ರಯೋಗಿಸಿದ್ದಾರೆ.

ದೋಷ ಶಬ್ದಗಳೂ ವಿಷ್ಣುವಿನಲ್ಲಿ ಗುಣವಾಚಕಗಳಾಗಿಯೇ ಕೂಡುತ್ತವೆ ಎನ್ನುವ ವಿಷಯದಲ್ಲಿ ಶ್ರುತಿಸಮ್ಮತಿಯನ್ನು ಹೇಳುತ್ತಾರೆ -

ವಾಸುದೇವಶ್ರುತಿಶ್ಚಾಹ ನೈವ ವಿಷ್ಣಾವಮಂಗಲಂ ॥೮॥
ಮಂಗಲಾಮಂಗಲೇಽನ್ಯತ್ರ ತತೋ ನಾಮಂಗಲಂ ವದೇತ್ ।
ಸ್ವಾತಂತ್ರ್ಯಾಪೇಕ್ಷಯಾ ವಿಷ್ಣೌ ದೋಷೋ ನಾಮಂಗಲೋಕ್ತಿತಃ ॥೯॥

ವಿಷ್ಣುವಿನಲ್ಲಿ ದುಃಖಾದಿ ಅಮಂಗಲಗಳು ಎಂದಿಗೂ ಇಲ್ಲವೇ ಇಲ್ಲ. ಆದಕಾರಣ ಸ್ವಾತಂತ್ರ್ಯಾಪೇಕ್ಷೆಯಿಂದ ವಿಷ್ಣುವಿನಲ್ಲಿ ಅಮಂಗಲೋಕ್ತಿಯಿಂದ ಅನರ್ಥವಿಲ್ಲ. ವಿಷ್ಣುವಿನಲ್ಲಿರುವಂಥ ಸ್ವಾತಂತ್ರ್ಯ-ಸ್ವಾಮಿತ್ವಗಳು ರಾಜಾದಿಗಳಲ್ಲಿ ಇಲ್ಲದಿರುವುದರಿಂದ ಮಂಗಲ-ಅಮಂಗಲಗಳೆರಡೂ ಅವರಲ್ಲಿ ಸಂಭವವಿವೆ. ವಿಷ್ಣುವಿನಲ್ಲಿ ಎಂದಿಗೂ ಅಮಂಗಲವಾಚಕ ಶಬ್ದಗಳನ್ನು ಹೇಳಬಾರದು - ಹೀಗೆ ವಾಸುದೇವಶ್ರುತಿಯೂ ಹೇಳಿದೆ.

ಒಂದು ಶಬ್ದವು ಕೆಲವು ಸಂದರ್ಭಗಳಲ್ಲಿ ದೋಷವನ್ನು ಹೇಳುವುದರಿಂದ ಅನರ್ಥಕ್ಕೆ ಕಾರಣವಾದರೂ, ಅದೇ ಶಬ್ದವು ಕೆಲವು ಕಡೆಗಳಲ್ಲಿ ದೋಷಕ್ಕೆ

ಕಾರಣವಾಗುವುದಿಲ್ಲ ಎಂಬುದನ್ನು ದೃಷ್ಟಾಂತದಿಂದ ತಿಳಿಸಿಕೊಡುತ್ತಾರೆ -

ಬಹುಭುಕ್ತ್ಯಂ ಯಥಾ ದೋಷೋ ನೃಷು ನೈವ ಹರೌ ಕ್ವಚಿತ್ ।
ಏವಂ ದುಃಖ್ಯಾದಿಶಬ್ದಾಶ್ಚ ಸ್ವಾತಂತ್ರ್ಯಾಪೇಕ್ಷಯೋದಿತಾಃ ॥೧೦॥
ನೈವ ದೋಷಾ ಹರೌ ತದ್ಗಬುದ್ಧ್ಯೋಕ್ತಾ ದೋಷಕಾರಿಣಃ ।
ತಸ್ಮಾತ್ತೇ ದೋಷಶಬ್ದಾಶ್ಚ ತತ್ರೈವ ಗುಣವಾಚಕಾಃ ॥೧೧॥

ಬಹುವಾಗಿ ತಿನ್ನುವಿಕೆ ಎನ್ನುವುದು ಮನುಷ್ಯರಲ್ಲಿ ದೋಷವೇ ಆಗಿದ್ದರೂ, ಶ್ರೀಹರಿಯ ವಿಷಯದಲ್ಲಿ ಸ್ವಲ್ಪಮಾತ್ರವೂ ದೋಷವೆನಿಸಲಾರದು. 'ಅಸ್ವರ್ಗ್ಯಂ ಚಾತಿಭೋಜನಂ' ಎಂದು ಮನುಸ್ಮೃತಿಯು ಮನುಷ್ಯರಲ್ಲಿ ಬಹುಭೋಜನವನ್ನು ನಿಂದಿಸುತ್ತದೆ. ಸಂಸಾರಧರ್ಮಗಳ ಅತ್ಯಂತಾಭಾವವಿರುವ ಪ್ರಯುಕ್ತ ಹಾಗೂ ಸರ್ವಸಂಹರ್ತೃತ್ವರೂಪ ಗುಣವು ಹೇಳಲ್ಪಟ್ಟಿರುವುದರಿಂದ, ಪರಮಾತ್ಮನ ಪಕ್ಷದಲ್ಲಿ ಬಹುಭೋಕ್ತೃತ್ವವು ದೋಷವಾಗುವುದಿಲ್ಲ. ಇದೇರೀತಿ ದುಃಖಿ ಮೊದಲಾದ ಶಬ್ದಗಳೂ ಶ್ರೀಹರಿಯಲ್ಲಿ ಸ್ವಾತಂತ್ರ್ಯವನ್ನು ಅಪೇಕ್ಷಿಸಿಕೊಂಡು ಹೇಳುವ ಕಾರಣ ದೋಷಗಳು ಆಗುವುದೇ ಇಲ್ಲ. ರಾಜಾದಿಗಳಲ್ಲಾದರೋ ದುಃಖಾದಿಗಳು ಇರುವುದಾಗಿ ಕಂಡುಬರುವುದರಿಂದ ದುಃಖಿ ಮೊದಲಾದ ಪ್ರಯೋಗಗಳು ದೋಷಕ್ಕೆ ಕಾರಣಗಳಾಗುತ್ತವೆ. ಆದ್ದರಿಂದ ಬೇರೆಕಡೆಗಳಲ್ಲಿ ದೋಷಕ್ಕೆ ಕಾರಣಗಳಾಗುವ ಶಬ್ದಗಳೂ ಕೂಡ ಶ್ರೀಹರಿಯಲ್ಲಿ ಗುಣವಾಚಕಗಳಾಗಿಯೇ ಇರುತ್ತವೆ.

ಹೀಗೆ ಆನುಮಾನಿಕಾಧಿಕರಣದಲ್ಲಿ ಶ್ರೀಮದಾಚಾರ್ಯರು 'ಅವ್ಯಕ್ತ ಶಬ್ದವಾಚ್ಯನು ಪರಬ್ರಹ್ಮನೆಂದಾದರೆ ಆಗ ಅವನಿಗೆ ಪುರುಷನಿಂದ ಅವರತ್ವವು ಬರಬೇಕಾಗುವುದು' ಎನ್ನುವ ಪೂರ್ವಪಕ್ಷಿಯ ಆಶಂಕೆಯನ್ನು ನಿವಾರಿಸಿ, ಅವರತ್ವಾದಿಗಳು ಪರಮಾತ್ಮನಲ್ಲಿ ದೋಷವೇ ಆಗಲಾರವು ಎನ್ನುವುದನ್ನು ಶ್ರುತಿ ಹಾಗೂ ಯುಕ್ತಿಗಳಿಂದ ಸಮರ್ಥಿಸಿದರು. ಆದಪ್ರಯುಕ್ತ ಪರಮಾತ್ಮನು ಅವ್ಯಕ್ತಾದಿ ಶಬ್ದವಾಚ್ಯನು ಎನ್ನುವುದು ಸಿದ್ಧವಾಯಿತು.

ಜ್ಯೋತಿರುಪಕ್ರಮಾಧಿಕರಣ

ಈ ಅಧಿಕರಣದಲ್ಲಿ ಜ್ಯೋತಿಷ್ಟೋಮಾದಿ ಸಕಲ ಕ್ರಿಯಾವಾಚಕ ಶಬ್ದಗಳನ್ನು ಪರಬ್ರಹ್ಮನಲ್ಲಿ ಸಮನ್ವಯ ಮಾಡುತ್ತಾರೆ.

ಕ್ರಿಯಾವಾಚಕ ಶಬ್ದಗಳ ಸಮನ್ವಯ

ಜ್ಯೋತಿಷ್ಟೋಮಾದಿ ಕರ್ಮಪರವಾದ ಎಲ್ಲ ಶಬ್ದಗಳೂ ಪರಮಾತ್ಮನನ್ನೇ ಹೇಳುವುದಾದರೆ, ಕ್ರಿಯಾವಿಧಿಗಳನ್ನು ಹೇಳುವ ಶಬ್ದಗಳ ಅಭಾವದಿಂದಾಗಿ ಕರ್ಮಾನುಷ್ಠಾನವೇ ಕೂಡುವುದಿಲ್ಲ. ಈ ರೀತಿ ಕರ್ಮಲೋಪದ ಪ್ರಸಂಗ ಬರುವುದರಿಂದ ಕ್ರಿಯೆಯನ್ನು ಹೇಳುವ ಶಬ್ದಗಳನ್ನು ಪರಬ್ರಹ್ಮನಲ್ಲಿ ಸಮನ್ವಯ ಮಾಡಕೂಡದು ಎಂದು ಹೇಳಿದರೆ ಸೂತ್ರವನ್ನು ಪಠಿಸಿ ಸಮನ್ವಯವನ್ನು ತೋರಿಸುತ್ತಾರೆ -

ಸೂತ್ರ: ಓಂ ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ ಏಕೇ ಓಂ (೧-೪-೧೦)

'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ। ವಸಂತೇ ವಸಂತೇ ಜ್ಯೋತಿಷಾ ಯಜೇತ' ಇತ್ಯಾದಿ ಕರ್ಮಕಾಂಡದಲ್ಲಿ ಜ್ಯೋತಿರಾದಿ ಶಬ್ದದಿಂದ ಪರಮ ಮುಖ್ಯವೃತ್ತಿಯಿಂದ ಪರಬ್ರಹ್ಮನೇ ಹೇಳಲ್ಪಟ್ಟಿದ್ದಾನೆ, ಕರ್ಮಾದಿಗಳಲ್ಲ. ಏಕೆಂದರೆ ಆ ಬ್ರಹ್ಮನನ್ನು 'ಏಷ ಇಮಂ ಲೋಕಮಭ್ಯಾರ್ಚತ್' ಎಂದು ಉಪಕ್ರಮಿಸಿಯೇ ಸರ್ವಶಬ್ದವಾಚ್ಯನೆಂದು 'ತಾ ವಾ ಏತಾಃ ಸರ್ವಾ ಋಚಃ' ಇವೇ ಮೊದಲಾದ ಶ್ರುತಿಗಳಿಂದ ಅಧ್ಯಯನ ಮಾಡುತ್ತಾರೆ.

ಜಾತಮೋತಂ ಹರೌ ಯಸ್ಮಾಜ್ಜ್ಯೋತಿಃ ಷಃ ಪ್ರಾಣರೂಪತಃ ।
ಆಯಜೇತಶ್ಚಾಯಜೇತೋ ವಸಂತಿಶ್ಚ ವಸಂತತಃ ॥೧೨॥

ಜಿ-ಜಾತಮ್, ಓತಿಃ-ಓತಮ್ (ಜಿಃ ಓತಿಃ ಯಸ್ಮಿನ್ ಸಃ ಜ್ಯೋತಿಃ). ಹುಟ್ಟಿದ ಜಗತ್ತು ಯಾರಲ್ಲಿ ಪ್ರವಿಷ್ಟವಾಗಿದೆಯೋ (ರಕ್ಷಿತವಾಗಿದೆಯೋ) ಅವನೇ ಜ್ಯೋತಿ ಶಬ್ದವಾಚ್ಯನು. ಚೇಷ್ಟಕರೂಪನಾದ್ದರಿಂದ ಷಃ ಎನಿಸುತ್ತಾನೆ. (ಷಕಾರಃ ಪ್ರಾಣ ಆತ್ಮಾ). ಜಗದಾಶ್ರಯನೂ ಚೇಷ್ಟಕನೂ ಆದ ಶ್ರೀಹರಿಯೇ ಜ್ಯೋತಿಷ ಶಬ್ದವಾಚ್ಯ. (ಜ್ಯೋತಿಶ್ಚಾಸೌ ಷಶ್ಚೇತಿ ಜ್ಯೋತಿಷಃ, ತಸ್ಯ ಸಂಬುದ್ಧಿಃ ಜ್ಯೋತಿಷ).

ಎಲ್ಲರೀತಿಯಿಂದಲೂ ಚೆನ್ನಾಗಿ ಯಜ್ಞಾಖ್ಯಕರ್ಮದಿಂದ ಅಥವಾ ಯಾಜ್ಞಿಕ ಪುರುಷರಿಂದ ಹೊಂದಲ್ಪಟ್ಟವನಾದ್ದರಿಂದ ಆಯಜೇತ. ಅಂದರೆ ಶ್ರೀಹರಿಯು ಸಕಲ ಯಜ್ಞಕರ್ಮಗಳನ್ನು ಭೋಗಿಸುವವನೂ ಯಜ್ಞಮಾಡುವವರಿಂದ ಜ್ಞಾನದ್ವಾರಾ ಪ್ರಾಪ್ಯನೂ ಆಗಿರುವನು. ಸರ್ವತ್ರ ವ್ಯಾಪ್ತನಾಗಿರುವುದರಿಂದ

ವಸಂತ. ಆದರವನ್ನು ಸೂಚಿಸುವುದಕ್ಕಾಗಿ ವಸಂತೇ ವಸಂತೇ ಎಂದು ಎರಡಾವರ್ತಿ ಸಂಬೋಧನೆಯು.

ವಿಗತಚ್ಛಾದನತ್ವಾತ್ತು ಗಚ್ಛಭೂತಕ್ಷರಂಕರಃ ।
ಭುಂಕ್ಷ್ವೇತ್ಯುಕ್ತೋ ಹರಿರ್ಹುಂ ಚ ಹುತಮಸ್ಮಿನ್ ಜಗದ್ಯತಃ ॥೧೩॥

ಅವಿದ್ಯಾದಿ ಆವರಣವು ಯಾರಿಂದ ಹೋಗಲ್ಪಟ್ಟಿದೆಯೋ ಅಂದರೆ ಯಾರು ಅವಿದ್ಯಾದಿಗಳಿಂದ ಅತ್ಯಂತ ದೂರನಾಗಿರುವನೋ ಅವನೇ ಗಚ್ಛ ಎಂಬುದಾಗಿ ಕರೆಯಲ್ಪಡುತ್ತಾನೆ. ಸರ್ವಪ್ರಾಣಿಗಳನ್ನು ಸಂಹರಿಸುತ್ತಾನಾದ್ದರಿಂದ ಶ್ರೀಹರಿಯು ಭುಂಕ್ಷ್ವನೆಂದು ಸಂಬೋಧಿಸಲ್ಪಡುತ್ತಾನೆ. ಪ್ರಲಯಕಾಲದಲ್ಲಿ ಈ ಜಗತ್ತು ಶ್ರೀಹರಿಯ ದೆಶೆಯಿಂದ ಶ್ರೀಹರಿಯಲ್ಲಿಯೇ ಹೋಮಿಸಲ್ಪಡುವುದು. ಆದಕಾರಣ ಶ್ರೀಹರಿಯು ಹುಂ ಶಬ್ದವಾಚ್ಯನು. ಹುಂ ಎಂದರೆ ಸರ್ವಜಗನ್ನಾಶಕನು ಎಂದರ್ಥ.

ಸ್ಫುಟತ್ವಾತ್ ಸ್ಫಡಿತಿ ಪ್ರೋಕ್ತಃ ಕವರಕ್ಷಣ ಇತ್ಯತಃ ।
ಕವಚಂ ವರ್ತತೇ ಯಸ್ಮಾತ್ ಷಡ್ಗುಣತ್ವೇನ ಸರ್ವದಾ ॥೧೪॥
ವಷಟ್ ತದ್ಗತ್ವತಸ್ತೇಷಾಂ ವೌಷಡಿತ್ಯೇವ ಕಥ್ಯತೇ ।

ಭಕ್ತರಿಗೆ ತನ್ನನ್ನು ಕುರಿತು ವ್ಯಕ್ತನಾಗುವ ಪ್ರಯುಕ್ತ ಅಥವಾ ಅಸಂಕುಚಿತ ವ್ಯಾಪಾರವುಳ್ಳ ಪ್ರಯುಕ್ತ (ಸ್ಫುಟ ವಿಕಸನೆ) ಫಟ್ ಎಂದು ಹೇಳಿಸಿಕೊಳ್ಳುತ್ತಾನೆ. ಸರ್ವರಕ್ಷಕನಾದ ಪ್ರಯುಕ್ತ ಕವಚ (ಕವತಿ ರಕ್ಷತಿ ಇತಿ ಕವಚಮ್). ಯಾವಾಗಲೂ ಷಡ್ಗುಣಗಳಿಂದ ಇರುತ್ತಾನೆ ಆದ್ದರಿಂದ ವಷಟ್ (ವರ್ತತೇ ಇತಿ ವಃ, ಷಡ್ಗುಣಾತ್ಮಕತ್ವಾತ್ ಷಟ್, ವಶ್ಚಾಸೌ ಷಟ್ ಚ ಇತಿ ವಷಟ್). ಷಟ್ ಅಂದರೆ ಆರು ಗುಣಗಳಿಗೆ ವೌ ಅಂದರೆ ವಿಷ್ಣುವಿನಲ್ಲಿಯೇ ಸ್ವರೂಪತ್ವ ಕೂಡುವ ಪ್ರಯುಕ್ತ ವಿಷ್ಣುವು ವೌಷಟ್ ಎಂದೇ ಹೇಳಲ್ಪಡುತ್ತಾನೆ.

ಸ್ವೀಯಂ ಸ್ವೀಕುರುತೇ ಯಸ್ಮಾತ್ಸ್ವಹೇತ್ಯುಕ್ತೋ ಜನಾರ್ದನಃ ॥೧೫॥
ನಮಂತ್ಯಸ್ಮಿನ್ ಗುಣಾ ಯಸ್ಮಾನ್ನಮ ಇತ್ಯೇವ ಕಥ್ಯತೇ ।

ಬೇರೆ ದೇವತೆಗಳನ್ನು ಉದ್ದೇಶಿಸಿ ಸಮರ್ಪಿತವಾದ ಹವಿರಾದಿಗಳನ್ನು, ಅವು ಸ್ವಾಭಾವಿಕವಾಗಿ ತನ್ನದೇ ಆಗಿರುವುದರಿಂದ, ತಾನೇ ಸ್ವೀಕರಿಸುವ ಪ್ರಯುಕ್ತ ಸ್ವಾಹಾ ಎನಿಸುತ್ತಾನೆ. ಈ ವಿಷ್ಣುವಿನಲ್ಲಿಯೇ ಎಲ್ಲ ಗುಣಗಳೂ

ನಮ್ಯತಾಭಾವವನ್ನು ಹೊಂದಿರುವ ಪ್ರಯುಕ್ತ ಅಥವಾ ಈ ಪರಮೇಶ್ವರನಲ್ಲಿ ಅಪ್ರಧಾನರಾದ ಬ್ರಹ್ಮಾದಿ ಎಲ್ಲ ದೇವತೆಗಳೂ ಶರಣು ಬರುವುದರಿಂದಲೂ ಶ್ರೀಹರಿಯು ನಮಃ ಎಂದು ಕರೆಯಲ್ಪಡುತ್ತಾನೆ.

ಇತ್ಯಶೇಷಕ್ರಿಯಾನಾಮಶಬ್ದೈರೇಕೋ ಜನಾರ್ದನಃ ॥೧೬॥
ಉಚ್ಯತೇ ಮುಖ್ಯತೋ ಯಸ್ಮಾತ್ಪದವರ್ಣಸ್ವರಾತ್ಮಭಿಃ ।
ತಸ್ಮಾದನಂತಗುಣತಾ ಶ್ರುತಿತಾತ್ಪರ್ಯತೋಽಸ್ಯ ಹಿ ॥೧೭॥

ಈ ಪ್ರಕಾರವಾಗಿ ಎಲ್ಲ ಪದ, ವರ್ಣ, ಸ್ವರ, ಕ್ರಿಯಾ ಹಾಗೂ ನಾಮವಾಚಕ ಸಮಸ್ತ ಶಬ್ದಗಳಿಂದಲೂ ಒಬ್ಬನೇ ಒಬ್ಬನಾದ ಶ್ರೀಹರಿಯು ಪರಮ ಮುಖ್ಯವೃತ್ತಿಯಿಂದ ಹೇಳಲ್ಪಡುತ್ತಾನೆ. ಆದಪ್ರಯುಕ್ತ ಸಕಲ ಶ್ರುತಿಗಳ ತಾತ್ಪರ್ಯವನ್ನನುಸರಿಸಿ ಈ ಶ್ರೀಹರಿಗೇ ಅನಂತಗುಣಗಳು ಇರುತ್ತವೆ ಎನ್ನುವುದು ಸಿದ್ಧವಾಗುವುದು.

ಈ ರೀತಿಯಲ್ಲಿ ಯೋಗವೃತ್ತಿಯನ್ನು ಆಶ್ರಯಿಸಿ ಪರಮಾತ್ಮನಲ್ಲಿ ಸರ್ವಶಬ್ದಗಳ ಸಮನ್ವಯವನ್ನು ಸಾಧಿಸುವುದರಿಂದ ಪ್ರಯೋಜನವಿದೆ ಎಂದು ಹೇಳುತ್ತಾರೆ –

ವಿಜ್ಞಾನಾರ್ಥತ್ವತಃ ಸರ್ವಶಬ್ದಾನಾಂ ನಾಸ್ತಿ ದೂಷಣಂ ।
ಅಂಗೀಕೃತೇಽಪಿ ನೈವಾಸ್ತಿ ದೋಷೋ ವಾಕ್ಯಸಮನ್ವಯೇ ॥೧೮॥

ವಸಂತ ಮೊದಲಾದ ಶಬ್ದಗಳನ್ನು ರೂಢಿಗನುಸಾರವಾಗಿ ಅರ್ಥಮಾಡಿದಾಗ ಅನಿತ್ಯತ್ವ ಮೊದಲಾದ ದೂಷಣಗಳು ಬರುತ್ತವೆ. ಮೇಲೆ ಹೇಳಿರುವ ಪ್ರಕಾರವಾಗಿ ಪರಮಾತ್ಮನ ಅನಂತಾನಂತಗುಣಗಳ ವಿಶೇಷ ಜ್ಞಾನವನ್ನು ಪ್ರತಿಪಾದಿಸುವ ಸಲುವಾಗಿ ಪರಮಮುಖ್ಯಯೋಗವೃತ್ತಿಯಿಂದ ಎಲ್ಲ ವೈದಿಕ ಶಬ್ದಗಳಿಗೂ ಪರಮಾತ್ಮನಲ್ಲಿ ಸಮನ್ವಯ ಮಾಡಿದಾಗ ಯಾವುದೇ ದೋಷಗಳು ಇರುವುದಿಲ್ಲ. ಈ ಪ್ರಕಾರವಾಗಿ ಕರ್ಮಕಾಂಡದಲ್ಲಿರತಕ್ಕ ಎಲ್ಲ ಪದಗಳಿಗೂ ಪರಮಾತ್ಮನಲ್ಲಿ ಸಮನ್ವಯವನ್ನು ಸಾಧಿಸಿ ಸಮನ್ವಯಸೂತ್ರದ ಅನುಪಪತ್ತಿಯನ್ನು ಪರಿಹರಿಸಿದರು. ಇದೇ ರೀತಿ ವಾಕ್ಯಾನ್ವಯಪಕ್ಷವನ್ನು ಅಂಗೀಕರಿಸಿದರೂ ಯಾವುದೇ ದೋಷವಿರುವುದಿಲ್ಲ. ಇದರಿಂದ ವಾಕ್ಯಾನ್ವಯಾತ್ ಎನ್ನುವ ೨೦ನೇ ಸೂತ್ರದ ತಾತ್ಪರ್ಯವೂ

ಉಕ್ತವಾಯಿತು.

ಹಾಗಾದರೆ ಕರ್ಮಕಾಂಡಗಳಲ್ಲಿ ಬರತಕ್ಕ ವಾಕ್ಯಗಳು ಸಾಂಗವಾದ ಕರ್ಮಗಳ ಪರವಾಗಿಯೇ ಎಂದು ಪ್ರಸಿದ್ಧವಾಗಿರುವಾಗ ಆ ವಾಕ್ಯಗಳನ್ನು ಪರಬ್ರಹ್ಮನಲ್ಲಿ ಸಮನ್ವಯ ಮಾಡುವುದು ಯುಕ್ತವಲ್ಲ ಎಂದರೆ –

ತದರ್ಥತ್ವೇನ ಕರ್ಮಾದೇಃ ಸಂಭವಾದಲ್ಪಬುದ್ಧಯೇ ।

ಅಲ್ಪಬುದ್ಧಿಗಳ ಕರ್ಮಾದಿಗಳಿಗೂ ಬ್ರಹ್ಮಜ್ಞಾನಾರ್ಥತ್ವವು ಕೂಡುವುದರಿಂದ ವಾಕ್ಯಾನ್ವಯಕ್ಕೆ ಅನುಪಪತ್ತಿಯು ಬರುವುದಿಲ್ಲ.

ಅಲ್ಪಬುದ್ಧಿಗಳಿಗೆ ಪದಾನ್ವಯವೇ ಬ್ರಹ್ಮಜ್ಞಾನಕ್ಕೆ ಕಾರಣವಾಗುವುದಾದರೆ ವಾಕ್ಯಾನ್ವಯದಿಂದ ಏನು ಪ್ರಯೋಜನ ಎಂದು ಕೇಳಿದರೆ –

ಕಶ್ಛಂದಸಾಂ ಯೋಗಮಿತಿ ಶ್ರುತೇರ್ಯೋಗಾರ್ಥತತ್ತ್ವವಿತ್ ॥೧೯॥

ಬ್ರಹ್ಮೈಕೋ ನೈವ ಚಾನ್ಯೋಽಸ್ತಿ ಕ ಇತ್ಯಸ್ಯೋಭಯಾರ್ಥತಃ ।

'ಕಶ್ಛಂದಸಾಂ ಯೋಗಮಾವೇದ ಧೀರಃ' ಎಂದು ಶ್ರುತಿಯು ಹೇಳುವಂತೆ, ವೈದಿಕ ಪದಗಳ ಯೋಗವೃತ್ತಿಯನ್ನು ಮಹಾಬುದ್ಧಿವಂತರೇ ತಿಳಿಯಲು ಅಸಾಧ್ಯ ಎಂದಮೇಲೆ ಅಲ್ಪಬುದ್ಧಿಗಳಿಗೆ ಹೇಗೆ ತಾನೇ ತಿಳಿದೀತು. ಆದ್ದರಿಂದ ವಾಕ್ಯಾನ್ವಯವನ್ನು ಹೇಳಿದ್ದು ಯುಕ್ತವೇ ಆಗುವುದು. ಹೀಗೆಂದ ಮಾತ್ರಕ್ಕೆ ಯೋಗಾರ್ಥಜ್ಞಾನವುಳ್ಳವರು ಯಾರೂ ಇಲ್ಲವೆಂದು ತಿಳಿಯಬಾರದು. ಇಲ್ಲಿ ಶ್ರುತಿಯು ಕಃ ಪದವನ್ನು ಉಭಯಾರ್ಥದಲ್ಲಿ ಪ್ರಯೋಗಿಸಿದೆ. ಕಃ ಎನ್ನುವುದಕ್ಕೆ ಚತುರ್ಮುಖಬ್ರಹ್ಮನಲ್ಲಿಯೂ ಪ್ರಸಿದ್ಧಿ ಇರುವುದರಿಂದ, ಬ್ರಹ್ಮನೊಬ್ಬನೇ ಪದಗಳ ಅವಯವ ಶಕ್ತಿಯ ಯಥಾರ್ಥವಾದ ಜ್ಞಾನವನ್ನು ಹೊಂದಿರುವನು. ಅಂಥಹ ಜ್ಞಾನವು ಮತ್ತೊಬ್ಬರಿಗೆ ಇಲ್ಲವೇ ಇಲ್ಲ.

ಬ್ರಹ್ಮನೊಬ್ಬನೇ ಪದಗಳ ಯೋಗವೃತ್ತಿಯಿಂದ ಅರ್ಥಸಂಬಂಧವನ್ನು ತಿಳಿದಿರುವನೆಂದಾದರೆ, 'ಏಕಸ್ಯ ಪ್ರತಿಭಾತಂ ಕೃತಕಾನ್ನ ವಿಶಿಷ್ಯತೇ' ಎನ್ನುವ ನ್ಯಾಯದಿಂದ ಶಬ್ದಾರ್ಥಸಂಬಂಧವು ಕೃತಕ ಎಂದಾಗುವುದು. ಇದರಿಂದಾಗಿ ಜೈಮಿನ್ಯಾಚಾರ್ಯರು ಹೇಳಿರುವ ಶಬ್ದಗಳಿಗೆ ಅರ್ಥಗಳಿಂದ ಸಹಜವಾದ ಸಂಬಂಧವನ್ನು (ಔತ್ಪತ್ತಿಕಸ್ತು ಶಬ್ದಸ್ಯಾರ್ಥೇನ ಸಂಬಂಧಃ) ಬಿಟ್ಟಂತೆಯೇ ಆಗುವುದು ಎಂದರೆ –

ತಸ್ಯಾಪಿ ಪೂರ್ವಸಿದ್ಧಸ್ಯ ಜ್ಞಾನಮೇವೇತಿ ನಿಶ್ಚಯಾತ್ ॥೨೦॥

ನಿತ್ಯಯೋಗೋಽಪಿ ಶಬ್ದಾನಾಮರ್ಥೈರ್ನೈವ ನಿಷಿದ್ಧ್ಯತೇ ।

ಬ್ರಹ್ಮನೊಬ್ಬನಿಗೇ ಶಬ್ದಾರ್ಥಗಳ ಸಂಬಂಧ ಜ್ಞಾನವು ಇರುವುದು ಎಂಬುದು ನಿಶ್ಚಿತವಾದರೂ, ಈ ಹಿಂದೆ ಇದ್ದುದೇ ಮತ್ತು ತಿಳಿಯಲ್ಪಟ್ಟುದೇ ಆದ ಶಬ್ದಾರ್ಥಸಂಬಂಧದ ಜ್ಞಾನವೇ ಆಗುವುದು. ಕೇವಲ ಉತ್ಪ್ರೇಕ್ಷೆಯಲ್ಲ. ಇದು ಶ್ರುತ್ಯಾದಿಗಳಿಂದ ನಿರ್ಣಯಿಸಲ್ಪಟ್ಟ ಜ್ಞಾನವೇ ಆಗಿರುವುದು. ಆದಪ್ರಯುಕ್ತ ಅರ್ಥಗಳಿಂದ ಶಬ್ದಗಳಿಗೆ ನಿತ್ಯವಾದ ಸಂಬಂಧವಿದೆ ಎಂಬ ಜೈಮಿನ್ಯಾಚಾರ್ಯರ ಅಭಿಪ್ರಾಯವನ್ನು ನಾವು ಪರಿತ್ಯಾಗಮಾಡಿಲ್ಲ.

ಬ್ರಹ್ಮನಿಗೆ ಸರ್ವಶಬ್ದಗಳ ಯೋಗಾರ್ಥಜ್ಞಾನವಿದೆ ಹಾಗೂ ಇತರ ಅಧಿಕಾರಿಗಳಲ್ಲಿ ಏಕದೇಶದಲ್ಲಿ ಯೋಗಾರ್ಥಜ್ಞಾನವಿದೆ ಎಂದೂ ಪ್ರಮಾಣಗಳಿಂದ ತಿಳಿದುಬರುವುದರಿಂದ, ಶಾಸ್ತ್ರಗಳಿಗೆ ಅನೇಕ ಅಧಿಕಾರಿಗಳು ಇದ್ದಾರೆಂಬುದು ನಿಶ್ಚಯವಾಗುವುದು.

ಪ್ರಕೃತ್ಯಧಿಕರಣ

ಈಗ 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' 'ಏತೇನ ಸರ್ವೇ ವ್ಯಾಖ್ಯಾತಾಃ ವ್ಯಾಖ್ಯಾತಾಃ' ಎನ್ನುವ ೬ನೇ ಮತ್ತು ೭ನೇ ಅಧಿಕರಣಗಳ ತಾತ್ಪರ್ಯವನ್ನು ಸಂಕ್ಷೇಪವಾಗಿ ಹೇಳುತ್ತಾರೆ -

ಸ್ತ್ರೀಶಬ್ದಾಶ್ಚ ನಿಷೇಧಾರ್ಥಾಃ ಸರ್ವೇಽಪಿ ಬ್ರಹ್ಮವಾಚಕಾಃ ॥೨೧॥

ಪ್ರಕೃತ್ಯಾದಿ ಎಲ್ಲ ಸ್ತ್ರೀಲಿಂಗ ಶಬ್ದಗಳೂ, ನಿಷೇಧ ಅಥವಾ ಅಭಾವವನ್ನು ಹೇಳುವ ಅಸತ್ ಶೂನ್ಯ ಇತ್ಯಾದಿ ಎಲ್ಲ ಶಬ್ದಗಳೂ ಪರಬ್ರಹ್ಮನನ್ನೇ ಪ್ರತಿಪಾದಿಸುತ್ತವೆ.

ಇಲ್ಲಿ ಶ್ರೀಮದಾಚಾರ್ಯರು ಎಲ್ಲ ಸೂತ್ರಗಳನ್ನೂ ವ್ಯಾಖ್ಯಾನ ಮಾಡಿಲ್ಲ. ಆದ್ದರಿಂದ 'ವ್ಯಾಖ್ಯಾಂ ಕರೋಮ್ಯನ್ವಪಿ ಬಾಹಮೇವ' ಎಂಬ ಪ್ರತಿಜ್ಞೆಗೆ ಹಾನಿಯಾಗುವುದಿಲ್ಲವೇ ಎಂದು ಆಕ್ಷೇಪ ಬಂದರೆ - ವಿಷಯಾದಿಗಳನ್ನು ಹೇಳುವುದರಿಂದಲೇ ವ್ಯಾಖ್ಯಾನ ಮಾಡಿದಂತೆ ಆಗುವುದು ಎಂಬ ಅಭಿಪ್ರಾಯದಿಂದ ಈ ಪಾದದಲ್ಲಿರುವ ಎಲ್ಲ ಅಧಿಕರಣಗಳ ವಿಷಯ ಪೂರ್ವಪಕ್ಷ ಸಿದ್ಧಾಂತಯುಕ್ತಿಗಳನ್ನು ಹೇಳುತ್ತಾರೆ.

ಅಧಿಕರಣಗಳ ಉಪಾಧಿಗಳು

ವಿರೋಧಿಸರ್ವಬಾಹುಲ್ಯಕಾರಣಸ್ತ್ರೀನಿಷೇಧಿನಾಂ ।
ಪೃಥಕ್ ಸಮನ್ವಯಾರ್ಥಾನಿ ಸ್ಥಾನಾನ್ಯೇತಾನಿ ಸರ್ವಶಃ ॥೨೨॥

ಪರಮೈಶ್ವರ್ಯಕ್ಕೆ ವಿರೋಧಿಗಳಾದ ಬದ್ಧ ದುಃಖಿ ಅವರ ಮೊದಲಾದ ಶಬ್ದಗಳೂ (೧), ಹಿಂದೆ ಹೇಳಿದ ಮತ್ತು ಮುಂದೆ ಹೇಳಲ್ಪಡುವ ವಾಕ್ಯರೂಪ ಸಮನ್ವಯ ಪ್ರಕಾರಕ್ಕೆ ವ್ಯತಿರಿಕ್ತವಾದ ಅಂದರೆ ಪದವರ್ಣಸ್ವರಾದಿ ರೂಪವಾದ ಎಲ್ಲ ಶಬ್ದಗಳೂ (೨), ಬಾಹುಲ್ಯವಿಶಿಷ್ಟಾರ್ಥವನ್ನು ಹೇಳುವ ಎಲ್ಲ ಶಬ್ದಗಳೂ (೩), ಅವಾಂತರಕಾರಣಗಳನ್ನು ಹೇಳುವ ಶಬ್ದಗಳೂ (೪), ಸ್ತ್ರೀಲಿಂಗಗಳಾದ ಪ್ರಕೃತ್ಯಾದಿ ಶಬ್ದಗಳೂ (೬), ಹಾಗೂ ನಿಷೇಧವನ್ನು ಹೇಳುವ ಶೂನ್ಯ ಅಸತ್ ಮೊದಲಾದ ಶಬ್ದಗಳೂ (೭) ಹೀಗೆ ಏಳು ಪ್ರಕಾರದ ಶಬ್ದಗಳಿಗೆ ಪ್ರತ್ಯೇಕವಾಗಿ ಸಮನ್ವಯವನ್ನು ಸಾಧಿಸುವುದೇ ಈ ಪಾದದಲ್ಲಿರುವ ಎಲ್ಲ ಅಧಿಕರಣಗಳ ಪ್ರಯೋಜನವಾಗಿದೆ.

ಈ ಪಾದದಲ್ಲಿ ಏಳು ಅಧಿಕರಣಗಳೆಂದು ಭಾಷ್ಯಟೀಕೆಗಳಿಂದ ತೋರುವುದು. ಆದರೆ ಇಲ್ಲಿ ಆರು ಅಧಿಕರಣಗಳ ಉಪಾಧಿಗಳು ಮಾತ್ರ ಹೇಳಲ್ಪಟ್ಟಿವೆ. ಸಮಾಕರ್ಷಾತ್ ಇತ್ಯಾದಿ ಎಂಟು ಸೂತ್ರಗಳನ್ನೊಳಗೊಂಡಿರುವ ಐದನೇ ಅಧಿಕರಣವು ನಾಲ್ಕನೆಯ ಅಧಿಕರಣದ ಶೇಷವೆಂದು ಪರಿಗಣಿಸಿದರೆ ತಾತ್ಪರ್ಯದಲ್ಲಿ ಆರೇ ಅಧಿಕರಣವೆಂದಾಗುವುದು. ನಾಲ್ಕನೆಯ ಅಧಿಕರಣದ ಉಪಾಧಿಯೇ ಇಲ್ಲಿಗೂ ಅನ್ವಯವಾಗುವುದು. ಅಥವಾ ೫ನೇ ಅಧಿಕರಣವನ್ನು ಪ್ರತ್ಯೇಕವಾಗಿ ಪರಿಗಣಿಸಿದರೂ ಎರಡನೆಯ ಅಧಿಕರಣದ ಉಪಾಧಿಯನ್ನು ಹೇಳುವ **ಸರ್ವ** ಎಂಬ ಶಬ್ದದಿಂದಲೇ ಐದನೇ ಅಧಿಕರಣದ ಉಪಾಧಿಯೂ ಹೇಳಿದಂತಾಗುವುದು. ಈ ಪ್ರಕಾರ ಎಲ್ಲ ಅಧಿಕರಣಗಳ ಉಪಾಧಿಗಳನ್ನೂ ಇಲ್ಲಿ ಹೇಳಿದ್ದಾರೆ ಎಂದು ತಿಳಿಯಬೇಕು.

ಪೂರ್ವಪಕ್ಷಯುಕ್ತಿಗಳು

ಸರ್ವಮಾನೈರ್ವಿರೋಧಶ್ಚ ವ್ಯುತ್ಪತ್ತೇರಪ್ಯಶಕ್ಯತಾ ।
ಪರಸ್ಪರವಿರೋಧಶ್ಚ ವಿರೋಧಃ ಕಾರ್ಯತದ್ವತೋಃ ॥೨೩॥
ಸ್ತ್ರೀಲಿಂಗತ್ವಂ ನಿಷೇಧಶ್ಚ ಪೂರ್ವಪಕ್ಷೇಷು ಯುಕ್ತಯಃ ।

ಸಿದ್ಧಾಂತಯುಕ್ತಿಗಳು

ದೋಷಾತ್ಯಸ್ಪೃಷ್ಟಿನಿಯಮಃ ಶಬ್ದಾರ್ಥಾನೇಕತಾ ತಥಾ ॥೨೪॥
ಬಹುರೂಪತ್ವಮೀಶಸ್ಯ ವ್ಯಕ್ತ್ಯವ್ಯಕ್ತಿ ವಿಶೇಷಿತಾ ।
ಉತ್ಪಾದನಂ ಸ್ವದೇಹಾಚ್ಚ ದುರ್ಜ್ಞಾನಾವ್ಯಕ್ತತಾ ತಥಾ ॥೨೫॥
ಇತ್ಯಾದಿ ಯುಕ್ತಯಃ ಸಾಕ್ಷಾತ್ಸಿದ್ಧಾಂತಸ್ಥಾಪಿಕಾ ಇಹ ।

'ಸರ್ವಮಾನೈರ್ವಿರೋಧ' ಎನ್ನುವುದರಿಂದ ಪ್ರಾರಂಭಿಸಿ 'ನಿಷೇಧಶ್ಚ' ಎನ್ನುವವರೆಗೆ ಪೂರ್ವಪಕ್ಷಯುಕ್ತಿಗಳು. 'ದೋಷ' ಎನ್ನುವುದರಿಂದ ಪ್ರಾರಂಭಿಸಿ 'ಅವ್ಯಕ್ತತಾ' ಎನ್ನುವವರೆಗೆ ಸಿದ್ಧಾಂತದಯುಕ್ತಿಗಳು. ಈ ಯುಕ್ತಿಗಳನ್ನು ಶ್ರೀರಾಘವೇಂದ್ರತೀರ್ಥರು ತಮ್ಮ ಪರಿಮಳ ಗ್ರಂಥದಲ್ಲಿ ಸೂಕ್ತವಾಗಿ ಹೊಂದಿಸಿ ಸಂಗ್ರಹವಾಗಿ ತಿಳಿಸಿದ್ದಾರೆ. ಅದರ ಸಂಗ್ರಹವನ್ನೇ ಇಲ್ಲಿ ನೀಡಲಾಗಿದೆ.

ಆನುಮಾನಿಕಾಧಿಕರಣದಲ್ಲಿ ಸರ್ವಪ್ರಮಾಣಗಳಿಂದ ವಿರೋಧ ಎಂದು ಪೂರ್ವಪಕ್ಷಯುಕ್ತಿ, ನಿಯಮೇನ ಶ್ರೀಹರಿಯಲ್ಲಿ ದೋಷಗಳ ಸಂಪರ್ಕವೇ ಇಲ್ಲವೆಂದು ಸಿದ್ಧಾಂತಯುಕ್ತಿ. **ಜ್ಯೋತಿರಧಿಕರಣ**ದಲ್ಲಿ ಅವಯವಾರ್ಥಕ್ಕೆ ಅಶಕ್ಯತಾ ಎಂದು ಪೂರ್ವಪಕ್ಷಯುಕ್ತಿ, ಶಬ್ದಾರ್ಥಗಳಿಗೆ ಅನೇಕತ್ವವಿದೆ ಎಂದು ಸಿದ್ಧಾಂತಯುಕ್ತಿ. **ನಸಂಖ್ಯಾಧಿಕರಣ**ದಲ್ಲಿ ಒಬ್ಬನಲ್ಲಿಯೇ ಏಕತ್ವ-ಬಹುತ್ವ ಇತ್ಯಾದಿ ಧರ್ಮಗಳು ಪರಸ್ಪರವಿರೋಧವಾದ್ದರಿಂದ ಕೂಡುವುದಿಲ್ಲ ಎಂದು ಪೂರ್ವಪಕ್ಷಯುಕ್ತಿ, ಶ್ರೀಹರಿಗೆ ಬಹುರೂಪತ್ವವಿರುವುದರಿಂದ ವಿರೋಧವಿಲ್ಲ ಎಂದು ಸಿದ್ಧಾಂತಯುಕ್ತಿ. **ಕಾರಣತ್ವೇನಾಧಿಕರಣ**ದಲ್ಲಿ ಒಬ್ಬನಲ್ಲಿಯೇ ಕಾರ್ಯ-ಕಾರಣಭಾವಗಳಿಗೆ ವಿರೋಧ ಎಂದು ಪೂರ್ವಪಕ್ಷಯುಕ್ತಿ, ಶ್ರೀಹರಿಯಲ್ಲಿ ಅಭಿವ್ಯಕ್ತಿ-ಅನಭಿವ್ಯಕ್ತಿರೂಪ ವಿಶೇಷತೆಯು ಸಿದ್ಧಾಂತಯುಕ್ತಿ. **ಪ್ರಕೃತ್ಯಧಿಕರಣ**ದಲ್ಲಿ ಸ್ತ್ರೀಲಿಂಗತ್ವವು ಪೂರ್ವಪಕ್ಷಯುಕ್ತಿ, ಸ್ವದೇಹದಿಂದ ಉತ್ಪಾದನೆ ಎಂದು ಸಿದ್ಧಾಂತಯುಕ್ತಿ. **ಏತೇನ ಸರ್ವೇ ವ್ಯಾಖ್ಯಾತಾಃ** ಎಂಬ ಅಧಿಕರಣದಲ್ಲಿ ನಿಷಿದ್ಧಾತ್ಮಕತ್ವ ಎಂದು ಪೂರ್ವಪಕ್ಷಯುಕ್ತಿ, ದುರ್ಜನರಿಗೆ ವ್ಯಕ್ತವಾಗದಿರುವಿಕೆ ಎಂದು ಸಿದ್ಧಾಂತಯುಕ್ತಿ.

ಈ ರೀತಿ **ಆನುಮಾನಿಕಮಪ್ಯೇಕೇಷಾಂ** ಇವೇ ಮೊದಲಾದ ಸೂತ್ರಗಳನ್ನು

ಸಂಕ್ಷೇಪವಾಗಿ ವ್ಯಾಖ್ಯಾನಮಾಡಿ, ಈಗ ಸಿಂಹಾವಲೋಕನ ನ್ಯಾಯದಿಂದ **ಸಮಾಕರ್ಷಾಧಿಕರಣ, ಜ್ಯೋತಿರಧಿಕರಣ**ಗಳನ್ನು 'ಅನ್ವಯಃ ಸರ್ವಶಬ್ದಾನಾಂ' ಇತ್ಯಾದಿಗಳಿಂದ ಸ್ವಲ್ಪವಿಸ್ತಾರವಾಗಿ ವ್ಯಾಖ್ಯಾನ ಮಾಡುತ್ತಾರೆ.

ಅನ್ವಯಃ ಸರ್ವಶಬ್ದಾನಾಮಶಕ್ಯೋ ಜ್ಞಾತುಮಂಜಸಾ ॥೨೬॥

ಇತಿ ಯಲ್ಲೋಕವೈಮುಖ್ಯಂ ಜೈಮಿನ್ಯಾದಿಮತಂ ವದನ್ ।

ವಿದ್ಯಾಧಿನಾಥೋ ಭಗವಾನಪಾಚಕ್ರೇ ಸ್ವಯಂ ಪ್ರಭುಃ ॥೨೭॥

ಸ್ವಶಿಷ್ಯಾಣಾಂ ಪ್ರಸಿದ್ಧ್ಯರ್ಥಂ ಮತಮಾತ್ಮೀಯಮಂಶತಃ ।

ವಿಜ್ಞಾತಂ ತೈಃ ಜಗಾದಾತ್ರ ತಾರತಮ್ಯಂ ನೃಣಾಂ ವದನ್ ॥೨೮॥

ಪರಬ್ರಹ್ಮನಲ್ಲಿ ಎಲ್ಲ ಶಬ್ದಗಳಿಗೂ ಸಮನ್ವಯವನ್ನು ಚೆನ್ನಾಗಿ ತಿಳಿಯಲು ಅಶಕ್ಯರಾದ ಮಂದಜನರು ಮೋಕ್ಷಮಾರ್ಗದಿಂದ ವಿಮುಖರಾಗಿ ಸುಲಭವಾಗಿ ಫಲದೊರೆಯುವ ಧರ್ಮಮಾರ್ಗದಲ್ಲಿ ಪ್ರವತ್ತರಾಗಿ ಮೋಕ್ಷದಿಂದ ವಂಚಿತರಾಗುವರು. ಆದಪ್ರಯುಕ್ತ ಸ್ವಯಂ ಸಮರ್ಥರಾದ ಭಗವಾನ್ ವೇದವ್ಯಾಸರು ತಾವೇ ಜೈಮಿನ್ಯಾದಿಗಳ ಮತವನ್ನು ಹೇಳುತ್ತ ವಾಕ್ಯಾನ್ವಯವನ್ನು ತೋರಿಸಿ ನಿರಾಕರಿಸಿದರು. ಜೈಮಿನ್ಯಾದಿಗಳು ವೇದವ್ಯಾಸರ ಶಿಷ್ಯರೇ ಆಗಿರುವುದರಿಂದ ಅವರಿಗೆ ಪ್ರಸಿದ್ಧಿ ಬರುವುದಕ್ಕೋಸ್ಕರ ತಮ್ಮದೇ ಮತವು ಜೈಮಿನ್ಯಾದಿಗಳಿಂದ ಏಕದೇಶವಾಗಿ(ಭಾಗಶಃ) ತಿಳಿಯಲ್ಪಟ್ಟಿದೆಯೆಂದು ಹೇಳುತ್ತ, ಅಲ್ಪಾಧಿಕಾರಿಗಳಲ್ಲಿರುವ ಅವಸ್ಥಾತಾರತಮ್ಯ ದೃಷ್ಟಿಯಿಂದ ಮತಭೇದವಿದೆ (ಅಮುಮುಕ್ಷಾ, ಮುಮುಕ್ಷಾ ಹಾಗೂ ಜ್ಞಾನಿತ್ವರೂಪ ಅವಸ್ಥಾತ್ರಯದಲ್ಲಿ ಉತ್ತರೋತ್ತರ ಆಧಿಕ್ಯವು), ಆದರೆ ವಿರೋಧವಿರುವುದಿಲ್ಲ ಎಂದು ಹೇಳಿದರು.

ಶಬ್ದಪ್ರವೃತ್ತಿಯ ಪ್ರಭೇದಗಳು

ಜ್ಯೋತಿರಧಿಕರಣದಲ್ಲಿ ಯೋಗವೃತ್ತಿಯಿಂದ ಪರಮೇಶ್ವರನಲ್ಲಿ ಎಲ್ಲ ಶಬ್ದಗಳಿಗೂ ಸಮನ್ವಯವನ್ನು ಹೇಳಿದರು. ಇದು ಯುಕ್ತವಲ್ಲ. ಪ್ರಕೃತ್ಯಾದಿಗಳಿಗೆ ಅನ್ಯಪರತ್ವವಿಲ್ಲವಾದರೆ ನಿರ್ವಚನವೇ ಕೂಡಲಾರದು. ಪ್ರಕೃತ್ಯಾದಿ ಶಬ್ದಗಳಿಗೆ ಅನ್ಯಪರವೆಂದು ಅರ್ಥಮಾಡಿದರೆ ಭಗವಂತನಿಗೆ ಸರ್ವಶಬ್ದಗಳ ವಾಚ್ಯತ್ವವು ಇಲ್ಲದೇ ಹೋಗುವುದು. 'ವಸಂತೇ ವಸಂತೇ ಜ್ಯೋತಿಷಾ ಯಜೇತ'

ಇತ್ಯಾದಿಗಳಿಗೆ ಭಗವತ್ಪರತ್ವವನ್ನು ಹೇಳಿದರೆ ಲೋಕವ್ಯವಹಾರಕ್ಕೇ ಲೋಪ ಬರುವುದು. ಹೀಗೆ ಹೇಳಿದರೆ –

ತೇಷು ತೇಷು ಪದಾರ್ಥೇಷು ರೂಢಿರಂಗೀಕೃತಾ ಯತಃ ।
ಪ್ರಯೋಜನಬಹುತ್ವೇನ ತಸ್ಯ ತಸ್ಯಾವಿರೋಧತಃ ॥೨೯॥
ಉಪದೇಶಾದಿಸಾಮರ್ಥ್ಯಾದ್ವಿಷ್ಣೌ ಶಕ್ತಿಶ್ಚ ಗೃಹ್ಯತೇ ।

ವ್ಯುತ್ಪತ್ತಿಯು ಕೂಡುವುದು, ಕರ್ಮಾನುಷ್ಠಾನವು ಕೂಡುವುದು, ಲೋಕವ್ಯವಹಾರಕ್ಕೆ ಬಾಧಕವಿಲ್ಲದಿರುವುದು- ಹೀಗೆ ಅನೇಕ ಪ್ರಯೋಜನಗಳು ಕಂಡಿರುವುದರಿಂದ ಆಯಾಯ ಶಬ್ದಗಳಿಂದ ವಾಚ್ಯಗಳೆಂದು ಪ್ರಸಿದ್ಧಗಳಾದ ಅರ್ಥಗಳಲ್ಲಿ ಆಯಾಯ ಶಬ್ದಗಳಿಗೆ ರೂಢಿಯು ಅಂಗೀಕೃತವಾಗಿದೆ. ಆದಕಾರಣ ಆ ಅರ್ಥಗಳನ್ನು ಬಿಡದೆ, ಉಪದೇಶ ಲಿಂಗ ಪ್ರಕರಣಾದಿಗಳ ಬಲದಿಂದ ಎಲ್ಲ ಶಬ್ದಗಳಿಗೂ ವಿಷ್ಣುವಿನಲ್ಲಿ ಶಕ್ತಿಯು ಗ್ರಹಿಸಲ್ಪಡುತ್ತದೆ.

ಹಾಗಾದರೆ ಎಲ್ಲ ಶಬ್ದಗಳಿಗೂ ಈಶ್ವರನಲ್ಲಿಯೂ ಬೇರೆಕಡೆಗಳಲ್ಲಿಯೂ ಹೀಗೆ ಉಭಯಾರ್ಥತ್ವ ಒಪ್ಪುವುದಾದರೆ, ಈಶ್ವರನಂತೆಯೇ ಇತರರಿಗೂ ಸರ್ವೋತ್ತಮತ್ವವನ್ನು ಒಪ್ಪಬೇಕಾದೀತು. ಇದು ಈಶ್ವರತ್ವಕ್ಕೇ ವಿರೋಧ. ಆದ್ದರಿಂದ ಎರಡು ಅರ್ಥಗಳನ್ನು ಅಂಗೀಕರಿಸುವಂತಿಲ್ಲ ಎಂದು ಹೇಳಿದರೆ –

ತಥಾಪ್ಯೇತದ್ವಿರೋಧೇ ತು ತದ್ವಾಚಿತ್ವಮಪೋದ್ಯತೇ ॥೩೦॥
ಅವಿರೋಧೇ ತು ಬಹ್ವರ್ಥಾಃ ಏತನ್ಮೂಲತಯಾ ಮತಾಃ ।

ಶಬ್ದಗಳು ಉಭಯಾರ್ಥಕಗಳು ಎಂದು ಸಾಮಾನ್ಯರೂಪದಲ್ಲಿ ಹೇಳಿದ್ದು. ಹಾಗಿದ್ದರೂ ಪರಮೇಶ್ವರತ್ವಕ್ಕೆ ವಿರೋಧ ಬರುವುದಾದರೆ ಅನ್ಯಪರವಾದ ಅರ್ಥವನ್ನು ಬಿಡತಕ್ಕದ್ದು. ಎಲ್ಲ ಶಬ್ದಗಳಿಗೂ ಪರಮಮುಖ್ಯವೃತ್ತಿಯಿಂದ ಪರಮಾತ್ಮನ ಪರವಾಗಿಯೇ ಅರ್ಥ ಮಾಡಬೇಕು. ಅಮುಖ್ಯಾರ್ಥದಿಂದ ಇತರ ಪದಾರ್ಥಗಳಲ್ಲಿ ಅನ್ವಯಿಸಬೇಕು. ಏಕೆಂದರೆ ಎಲ್ಲ ಶಬ್ದಗಳಿಗೂ ಪರಮೇಶ್ವರನೇ ಮುಖ್ಯಾರ್ಥನು. ಪರಮೇಶ್ವರತ್ವಕ್ಕೆ ವಿರೋಧ ಬಾರದಂತೆ ಶಬ್ದಗಳಿಗೆ ಬಹ್ವರ್ಥಗಳನ್ನು ಮಾಡುವುದಕ್ಕೆ ಅಡ್ಡಿಯಿಲ್ಲ.

ಪುರಂದರಾದಿಗಳಲ್ಲಿಯೂ ಇಂದ್ರಾದಿ ಶಬ್ದಗಳು ಮುಖ್ಯವೃತ್ತಿಗಳೆಂದು ಹೇಳಲ್ಪಡುವ ರೂಢಿಯೋಗಗಳಿಂದಲೇ ಪ್ರವೃತ್ತವಾಗುತ್ತವೆ. ಆದ್ದರಿಂದ ಅಕ್ಷ

ಇತ್ಯಾದಿ ಶಬ್ದಗಳಂತೆಯೇ ಇಂದ್ರಾದಿ ಶಬ್ದಗಳಿಗೂ ವಿಷ್ಣು ಹಾಗೂ ಇಂದ್ರಪರ ಎಂಬುದಾಗಿ ಎರಡು ಅರ್ಥಗಳೂ ಮುಖ್ಯವೇ ಆಗುತ್ತವೆ. ಕೇವಲ ವಿಷ್ಣುವನ್ನೇ ಹೇಳುತ್ತವೆ ಎನ್ನುವುದು ಸರಿಯಲ್ಲ ಎಂದರೆ –

ಇತೋ ಹಿ ರೂಢತಾಽನ್ಯೇಷಾಮುಪಜೀವ್ಯತ್ವಮತ್ರ ಹಿ ॥೩೧॥

ತತ್ಸಿದ್ಧಿಸ್ತದಪೇಕ್ಷಾ ಚ ಸಾಪೇಕ್ಷಾ ಚ ಹರೀಚ್ಛಯಾ ।

ಪುರಂದರಾದಿಗಳಿಗೆ ಇಂದ್ರಾದಿ ಶಬ್ದಗಳಿಂದ ವಾಚ್ಯತ್ವವು ರೂಢಿಯಲ್ಲಿದೆ ಎನ್ನುವುದು ಸತ್ಯವೇ ಆದರೂ, ಆ ರೂಢಿಯೂ ಕೂಡ ಶ್ರೀಹರಿಯಿಂದಲೇ ಆಗುವುದು. ಈ ಯೋಗವಿಷಯತ್ವದಲ್ಲಿ ಶ್ರೀಹರಿಗೇ ಉಪಜೀವ್ಯತ್ವವು. ಆದ್ದರಿಂದ ಶ್ರೀಹರಿಯೇ ಮುಖ್ಯಾರ್ಥನು, ಪುರಂದರಾದಿಗಳಲ್ಲ. ಶ್ರೀಹರಿಯ ಅಪೇಕ್ಷೆಯನ್ನನುಸರಿಸಿಯೇ ಬೇರೆ ಕಡೆಗಳಲ್ಲಿ ಶಬ್ದಗಳ ಪ್ರವೃತ್ತಿಯು ಸಿದ್ಧಿಸುವುದು. ಆದರೆ ಶ್ರೀಹರಿಯಲ್ಲಿ ಮಾತ್ರ ಅನ್ಯಾಪೇಕ್ಷೆಯಿಲ್ಲದೆಯೇ ಶಬ್ದಗಳಿಗೆ ಪ್ರವೃತ್ತಿಯು ಕೂಡುವುದು.

ವಿವರಣೆ:

ಯಾವುದಿಲ್ಲದೆ ಯಾವುದಕ್ಕೆ ಪ್ರವೃತ್ತ್ಯಾದಿಗಳು ಆಗುವುದಿಲ್ಲವೋ ಅದು ಅದಕ್ಕೆ ಉಪಜೀವ್ಯವೆನಿಸುವುದು. ಉಪಜೀವ್ಯವನ್ನು ಅವಂಲಂಬಿಸಿಕೊಂಡು ತನ್ನ ಪ್ರವೃತ್ತ್ಯಾದಿಗಳನ್ನು ಮಾಡುವ ವಸ್ತು ಉಪಜೀವಕವೆನಿಸುವುದು. ಉಪಜೀವ್ಯವು ಮುಖ್ಯ. ಉಪಜೀವಕವು ಅಮುಖ್ಯ. ಸುಡುವುದು ಎನ್ನುವುದು ಬೆಂಕಿಯಲ್ಲಿ ಮುಖ್ಯಾರ್ಥ, ಕಾದ ಕಬ್ಬಿಣದಲ್ಲಿ ಅಮುಖ್ಯಾರ್ಥ. ಎಲ್ಲ ಶಬ್ದಗಳಿಗೂ ಶ್ರೀಹರಿಯಲ್ಲಿಯೇ ಮುಖ್ಯಾರ್ಥ, ಬೇರೆ ಕಡೆಗಳಲ್ಲಿ ಅಮುಖ್ಯಾರ್ಥ. ಅರ್ಥಾಂತರವನ್ನು ಅಪೇಕ್ಷಿಸಿಯೇ ಶ್ರೀಹರಿಯಲ್ಲಿ ಶಬ್ದಗಳ ಪ್ರವೃತ್ತಿಯು. ಆದ್ದರಿಂದ ಶ್ರೀಹರಿಯಲ್ಲಿಯೂ ಅಮುಖ್ಯಾರ್ಥವೆಂದು ಹೇಳಕೂಡದು. ಏಕೆಂದರೆ ಆ ಅರ್ಥಾಂತರಾಪೇಕ್ಷೆಯೂ ಶ್ರೀಹರಿಯ ಇಚ್ಛೆ ಮತ್ತು ನಿಯಮನಕ್ಕೆ ಒಳಪಟ್ಟಿರುವುದು.

ಈ ಪ್ರಕಾರವಾಗಿ ಶ್ರೀಹರಿಯ ಸನ್ನಿಧಾನಾದಿಗಳಿಂದಲೇ ಶಬ್ದಗಳಿಗೆ ಬೇರೆ ಕಡೆಗಳಲ್ಲಿ ಪ್ರವೃತ್ತಿಯನ್ನು ಅಂಗೀಕರಿಸಿದರೆ, ಕಾದಕಬ್ಬಿಣದಲ್ಲಿ ಸುಡುವುದು ಎನ್ನುವ ಅರ್ಥ ಹೇಗೆ ಲಾಕ್ಷಣಿಕವೋ ಹಾಗೆಯೇ ಲೋಕದಲ್ಲಿ ಎಲ್ಲ

ಶಬ್ದಗಳೂ ಲಾಕ್ಷಣಿಕವೇ ಆಗಬೇಕಾಗುವುದು. ಗಂಗಾ ಎಂಬ ಶಬ್ದಕ್ಕೆ ಗಂಗಾ ಪ್ರವಾಹ ಎನ್ನುವುದು ಮುಖ್ಯಾರ್ಥ, ತೀರ ಎನ್ನುವುದು ಲಾಕ್ಷಣಿಕಾರ್ಥ ಎಂಬ ವಿಶೇಷವೇ ಕೂಡಲಾರದು. ಎರಡೂ ಲಾಕ್ಷಣಿಕಾರ್ಥಗಳೇ ಆಗಬೇಕಾಗುತ್ತವೆ. ಹೀಗೆ ಆಶಂಕಿಸಿದರೆ **ಈಕ್ಷತ್ಯಧಿಕರಣದಲ್ಲಿ ತನ್ಮೂಲತಯಾ** ಇತ್ಯಾದಿಗಳಿಂದ ಹೇಳಿದ ಅರ್ಥವನ್ನು ಇಲ್ಲಿ ಉಪಸಂಹಾರ ಮಾಡುತ್ತಾರೆ.

ತಸ್ಮಾತ್ಪರಮಮುಖ್ಯತ್ವಂ ವಿಷ್ಣಾವನ್ಯತ್ರ ಮುಖ್ಯತಾ ॥೩॥

ಉಪಲಕ್ಷಣಾ ಚ ಗೌಣೀ ಚ ತಿಸ್ರಃ ಶಬ್ದಸ್ಯ ವೃತ್ತಯಃ ।

ಪುರಂದರಾದಿಗಳಲ್ಲಿ ಇಂದ್ರಾದಿ ಶಬ್ದಗಳು ಲಾಕ್ಷಣಿಕವಲ್ಲ. ರೂಢಿಯು ಕೋಶಗಳಿಂದ ಸಿದ್ಧವಾಗಿದೆ. ಪರಮೈಶ್ವರ್ಯರೂಪವಾದ ಯೌಗಿಕಾರ್ಥವೂ ಇದೆ. ಆದರೆ ಈ ರೀತಿಯ ಅರ್ಥಗಳು ಪರಮೇಶ್ವರನ ಅಧೀನವಾಗಿ ಅವನ ಇಚ್ಛೆಯಿಂದಲೇ ಪ್ರವೃತ್ತಿಯನ್ನು ಹೊಂದಿವೆ. ಶ್ರೀಹರಿಯಲ್ಲಾದರೋ ಬೇರೆ ಯಾರ ಅಧೀನ ಅಥವಾ ಅಪೇಕ್ಷೆಯಿಲ್ಲದೆ ಶಬ್ದಗಳಿಗೆ ಪ್ರವತ್ತಿಯು ಇರುವುದು. ಹೀಗೆ ಎಲ್ಲ ಶಬ್ದಗಳಿಗೂ ಶ್ರೀಹರಿಯಲ್ಲಿ ಪರಮಮುಖ್ಯಾರ್ಥವೂ ಬೇರೆ ಕಡೆಗಳಲ್ಲಿ ಮುಖ್ಯಾರ್ಥವೂ ಎಂದು ತಿಳಿಯುವುದು. ಮುಖ್ಯಾರ್ಥದಲ್ಲಿಯೂ ಲಕ್ಷಣಾವೃತ್ತಿ ಮತ್ತು ಗೌಣೀವೃತ್ತಿ ಎಂಬುದಾಗಿ ಎರಡು ವಿಧ. ಈ ಪ್ರಕಾರವಾಗಿ ಮೂರು ವಿಧದ ಶಬ್ದವೃತ್ತಿಗಳು ಪ್ರಸಿದ್ಧವಾಗಿವೆ.

ಪರಮಮುಖ್ಯವೃತ್ತಿಯಲ್ಲಿ ಮಹಾಯೋಗ ಮತ್ತು ಮಹಾಯೋಗರೂಢಿ ಎಂದು ಎರಡು ವಿಧ. ಯೋಗವಿಲ್ಲದೆ ವಿದ್ವದ್ರೂಢಿ ಸಾಧ್ಯವಿಲ್ಲವಾದ್ದರಿಂದ ಈಶ್ವರನಲ್ಲಿ ಮಹಾರೂಢಿ ಎಂಬ ಇನ್ನೊಂದು ಪ್ರಕಾರದ ವೃತ್ತಿಯು ಸಂಭವಿಸುವುದಿಲ್ಲ. ಇಲ್ಲಿ ಮಹಾಯೋಗ ಮತ್ತು ಮಹಾಯೋಗರೂಢಿ ಲಕ್ಷಣಗಳನ್ನು ಹೇಳುತ್ತಾರೆ-

ಪ್ರವೃತ್ತಿಹೇತೋರ್ಬಾಹುಲ್ಯಂ ಜ್ಞೇಯಂ ಪರಮಮುಖ್ಯತಾ ॥೪॥

ತತ್ರ ಪ್ರಯೋಗಬಾಹುಲ್ಯಂ ಯದಿ ತತ್ಪರತಾ ಕಿಮು ।

ಉಭಯಂ ದೃಶ್ಯತೇ ವಿಷ್ಣೌ ಶಬ್ದಾನಾಮಪಿ ಸರ್ವಶಃ ॥೪॥

ಪ್ರಯೋಗಮಾತ್ರ ಬಾಹುಲ್ಯಂ ರೂಢಿರಿತ್ಯಭಿಧೀಯತೇ ।

ಶಬ್ದಪ್ರವೃತ್ತಿಗೆ ಕಾರಣವಾದ ಅರ್ಥದಲ್ಲಿ ಬಾಹುಲ್ಯವಿದ್ದರೆ ಅಂಥಹ

ಶಬ್ದವೃತ್ತಿಯನ್ನು ಮಹಾಯೋಗರೂಪವಾದ ಪರಮಮುಖ್ಯವೃತ್ತಿಯೆಂದು ತಿಳಿಯಬೇಕು. ಅದರೊಂದಿಗೆ ರೂಢಿನಿಮಿತ್ತಕ ಪ್ರಯೋಗಕ್ಕೂ ಬಾಹುಲ್ಯವಿದ್ದರೆ, ಆಗ ಅದಕ್ಕಿಂತ ಪರಮಮುಖ್ಯವಾದ ವೃತ್ತಿಯು ಬೇರೆ ಯಾವುದಿರಲು ಸಾಧ್ಯ? ಅಂಥಹ ಶಬ್ದವೃತ್ತಿಯನ್ನು ಮಹಾಯೋಗರೂಢಿವೃತ್ತಿ ಎಂದು ತಿಳಿಯತಕ್ಕದ್ದು. ಎಲ್ಲ ಶಬ್ದಗಳಿಗೂ ವಿಷ್ಣುವಿನಲ್ಲಿ ಮಹಾಯೋಗ, ಮಹಾಯೋಗರೂಢಿ ಎನ್ನುವ ಎರಡು ವೃತ್ತಿಗಳೂ ಪ್ರಮಾಣಗಳಿಂದ ಕಂಡುಬರುತ್ತವೆ. ಯಾವ ಶಬ್ದಕ್ಕೆ ಯಾವ ಅರ್ಥದಲ್ಲಿ ಪ್ರಯೋಗಮಾತ್ರ ಬಾಹುಲ್ಯವಿದೆಯೋ ಆ ಅರ್ಥದಲ್ಲಿ ಆ ಶಬ್ದವೃತ್ತಿಯು ರೂಢಿ ಎಂದು ಕರೆಸಲ್ಪಡುವುದು.

ಹೀಗೆ ಅವ್ಯವಹಿತವಾದ, ಅಂದರೆ ಮುಖ್ಯಾರ್ಥವ್ಯವಧಾನವಿಲ್ಲದೇ ಶಬ್ದಾರ್ಥ ಜ್ಞಾನಕ್ಕೆ ಕಾರಣಭೂತವಾದ ಮುಖ್ಯವೃತ್ತಿಯ ಲಕ್ಷಣವನ್ನು ನಿರೂಪಿಸಿ, ಈಗ ವ್ಯವಹಿತವಾದ, ಅಂದರೆ ಮುಖ್ಯಾರ್ಥವ್ಯವಧಾನದಿಂದ ಶಬ್ದಾರ್ಥ ಜ್ಞಾನಕ್ಕೆ ಕಾರಣಭೂತವಾದ ಗೌಣೀ, ಲಕ್ಷಣಾ ಎನ್ನುವ ಅಮುಖ್ಯವೃತ್ತಿಯನ್ನು ನಿರೂಪಿಸುತ್ತಾರೆ –

ಪ್ರಯೋಗಯುಕ್ತಸಾದೃಶ್ಯಂ ಸಂಬಂಧೋ ವಾऽಪ್ಯಮುಖ್ಯತಃ ॥೩೪॥

ವೃತ್ತಿಹೇತುರಿತಿ ಜ್ಞೇಯಃ ಪೂರ್ವಾಯೋಗೇ ಪರಗ್ರಹಃ ।

ಪದಾರ್ಥಶಕ್ತಿಗೆ ವಿಷಯವಾದ ಮುಖ್ಯಾರ್ಥಕ್ಕೆ ಸಾದೃಶ್ಯ ಅಥವಾ ಸಂಬಂಧವೂ ಕೂಡ ಅಮುಖ್ಯವೃತ್ತಿಗೆ ಹೇತುವೆಂಬುದಾಗಿ ತಿಳಿಯತಕ್ಕದ್ದು. ಸಾದೃಶ್ಯವು ಗೌಣೀವೃತ್ತಿಗೂ, ಸಂಬಂಧವು ಲಕ್ಷಣಾವೃತ್ತಿಗೂ ಕಾರಣವು. ಆದರೆ ಮುಖ್ಯಾರ್ಥವು ಕೂಡದಿರುವಾಗ ಮಾತ್ರ ಅಮುಖ್ಯಾರ್ಥವನ್ನು ಗ್ರಹಿಸಬೇಕು.

'ಉಭಯಂ ದೃಶ್ಯತೇ ವಿಷ್ಣೌ' ಎನ್ನುವಲ್ಲಿ ಸೂಚಿತವಾದ ಮಹಾಯೋಗ ಮತ್ತು ಮಹಾಯೋಗರೂಢಿ ಎಂಬ ಎರಡು ರೀತಿಯ ವೃತ್ತಿಗಳಲ್ಲಿ ಮಹಾಯೋಗವು ಅಜ್ಞರೂಢಿಗಿಂತ ಪ್ರಬಲ ಎಂಬುದನ್ನು ಇಲ್ಲಿ ಉಪಪಾದಿಸುತ್ತಾರೆ –

ಏತಮೇವ ತಥಾ ಸಂತಂ ಶತರ್ಚೇತ್ಯಾದಿ ನಾಮಭಿಃ ॥೩೬॥

ಆಚಕ್ಷತ ಇತಿ ಹ್ಯತ್ರ ಸಂತಮಿತ್ಯವಧಾರಣಾತ್ ।

ಯೋಗಸ್ಯ ರೂಢೇಃ ಪ್ರಾಬಲ್ಯಂ ವಿದ್ವದ್ರೂಢಿಂ ಚ ತತ್ರಗಾಂ ॥೬೭॥

ಬಹುಶೋ ದರ್ಶಯತ್ಕಂಜಸ್ತಾತ್ಪರ್ಯಾತ್ಸನಿರುಕ್ತಿಕಂ ।

'ತಂ ಯಚ್ಛತಂ ವರ್ಷಾಣ್ಯಭ್ಯರ್ಚತ್ತಸ್ಮಾಚ್ಛತರ್ಚಿನ ಇತ್ಯಾಚಕ್ಷತ। ಏತಮೇವ ಸಂತಂ। ಸ ಯದಿದಂ ಸರ್ವಂ ಮಧ್ಯತೋ ದಧೇ। ಯದಿದಂ ಕಿಂಚ ತಸ್ಮಾನ್ಮಧ್ಯಮಾ ತಸ್ಮಾನ್ಮಧ್ಯಮಾ ಇತ್ಯಾಚಕ್ಷತ। ಏತಮೇವ ಸಂತಂ' ಹೀಗೆ ಶ್ರುತಿಯಿದೆ. ಪುರುಷರಲ್ಲಿ ನೂರು ವರ್ಷ ಪರ್ಯಂತವಾಗಿ ಇರುವ ಕಾರಣದಿಂದ ಈ ಶ್ರೀಹರಿಯನ್ನೇ ಶತರ್ಚಿ ಮೊದಲಾದ ನಾಮಗಳಿಂದ ವಾಚ್ಯನಾಗಿ ಅಥವಾ 'ಶತಂ ಅರ್ಚಂತಿ' ಎನ್ನುವ ವ್ಯುತ್ಪತ್ತಿಯಿಂದ ಶತರ್ಚಿ ಎನ್ನುವ ನಾಮದಿಂದ ವಿದ್ವಾಂಸರು ಹೇಳುತ್ತಾರೆ. ಅಲ್ಲದೆ ಈ ಶ್ರುತಿಯು 'ಸಂತಂ' ಎನ್ನುವ ಪದದಿಂದಲೂ 'ಏತಮೇವ' ಎನ್ನುವ ಅವಧಾರಣದಿಂದಲೂ ಲೋಕರೂಢಿಯ ದೆಶೆಯಿಂದ ಭಗವದ್ವಿಷಯಕ ಯೋಗಕ್ಕೆ ಪ್ರಾಬಲ್ಯವನ್ನು ತೋರಿಸುತ್ತದೆ. ಪರಮೇಶ್ವರನ ವಿಷಯದಲ್ಲಿ ವಿದ್ವದ್ರೂಢಿಯನ್ನೂ ಕೂಡ ಅನೇಕಾವರ್ತಿ ಚೆನ್ನಾಗಿ ನಿರುಕ್ತಿಸಹಿತವಾಗಿ ತಾತ್ಪರ್ಯಪೂರ್ವಕವಾಗಿಯೇ ತೋರಿಸುತ್ತದೆ.

'ಆಚಕ್ಷತೇ' ಎಂದು ವಿದ್ವಾಂಸರ ಪ್ರಯೋಗಬಾಹುಲ್ಯವನ್ನು ಹೇಳಿರುವುದರಿಂದ, ಶತರ್ಚ್ಯಾದಿ ಶಬ್ದಗಳಿಗೆ ವಿದ್ವದ್ರೂಢಿಯು ಹೇಳಿದಂತಾಯಿತು. 'ತಥಾ ಸಂತಂ' ಎನ್ನುವುದರಿಂದ ಶ್ರೀಹರಿಯಲ್ಲಿಯೇ ಮುಖ್ಯಾರ್ಥವನ್ನು ಸೂಚಿಸಿದಂತಾಯಿತು. 'ಏತಮೇವ' ಎನ್ನುವ ಅವಧಾರಣದಿಂದ ಇತರರಿಗೆ ಶತರ್ಚ್ಯಾದಿ ಶಬ್ದಗಳ ಮುಖ್ಯಾರ್ಥವನ್ನು ನಿಷೇಧಿಸಿದಂತಾಯಿತು.

ವಿಷ್ಣುವಿಗೆ ಸರ್ವಶಬ್ದವಾಚ್ಯತ್ವ

ಬೇರೆ ವಾಕ್ಯಗಳಿಂದಲೂ ವಿಷ್ಣುವಿಗೆ ಸರ್ವಶಬ್ದವಾಚ್ಯತ್ವವನ್ನು ಈಗ ಉಪಪಾದಿಸುತ್ತಾರೆ -

ಅಃ ಇತಿ ಬ್ರಹ್ಮಕಥಿತಂ ತದ್ವ್ಯಾಖ್ಯಾನಾತ್ಮತಾ ತಥಾ ॥೬೮॥

ಶಬ್ದಾನಾಮಪಿ ಸರ್ವೇಷಾಂ ನಾಮವಿತ್ಪತಕೃತ್ಯತಾ ।

'ಅಃ ಇತಿ ಬ್ರಹ್ಮ' ಎನ್ನುವ ಶ್ರುತಿಯಲ್ಲಿ ಅಕಾರವು ಬ್ರಹ್ಮವಾಚಕವೆಂದು

ಉಕ್ತವಾಗಿದೆ. ಹಾಗೆಯೇ 'ಅಕಾರೋ ವೈ ಸರ್ವಾ ವಾಕ್' ಎನ್ನುವ ಶ್ರುತಿಯಲ್ಲಿ ಅಕಾರದ ವ್ಯಾಖ್ಯಾನರೂಪವೇ ಎಲ್ಲ ಶಬ್ದಗಳೂ ಎಂದು ಹೇಳಲ್ಪಟ್ಟಿದೆ. ನಾಮಮಾತ್ರವನ್ನು ತಿಳಿದವನು ಮುಕ್ತಿಯನ್ನು ಹೊಂದುವನೆಂದು ಅದೇ ಶ್ರುತಿಯಲ್ಲಿ ಹೇಳಲ್ಪಟ್ಟಿದೆ.

ವಿಷ್ಣುನಾಮಾರ್ಥರೂಪತ್ವಂ ಸಂಹಿತಾದೇರಥಾಬ್ರವೀತ್ ॥೩೯॥

ಸಕಲ ವೈದಿಕ ಸಂಹಿತೆಗಳ ಪೂರ್ವೋತ್ತರ ವರ್ಣಗಳೂ ವಿಷ್ಣುನಾಮದ ಅರ್ಥವನ್ನೇ ಪ್ರತಿಪಾದಿಸುತ್ತವೆ ಎಂಬುದಾಗಿ ವೇದವು ಸಾರುತ್ತಿದೆ.

ಣಕಾರಂ ಚ ಷಕಾರಂ ಚ ಬಲಚೇಷ್ಟಾತ್ಮಕನಂ ವದನ್ ।

ತಜ್ಜ್ಞಾನಪೂರ್ವಕತ್ವೇನ ಸಂಹಿತಾಧ್ಯಯನಂ ತಥಾ ॥೪೦॥

'ಣಕಾರೋ ಬಲಂ ಷಕಾರಃ ಪ್ರಾಣ ಆತ್ಮಾ (ಐತರೇಯ ವಾಕ್ಯ)' ಎಂದು ವಿಷ್ಣುನಾಮದಲ್ಲಿರುವ ಣಕಾರ ಮತ್ತು ಷಕಾರಗಳಿಗೆ ಪರಮೇಶ್ವರನ ಬಲ ಮತ್ತು ಚೇಷ್ಟೆಗಳ ಪ್ರತಿಪಾದಕತ್ವವನ್ನು ಹೇಳುವ ವೇದವು ಈರೀತಿಯ ಜ್ಞಾನಪೂರ್ವಕವಾಗಿ ಎಲ್ಲ ವೇದಸಂಹಿತೆಗಳ ಅಧ್ಯಯನವನ್ನು ಮಾಡಬೇಕೆಂದು ಹೇಳಿದೆ.

ಹಾಗಾದರೆ ಎಲ್ಲ ವೇದಗಳಲ್ಲಿರತಕ್ಕ ಪೂರ್ವೋತ್ತರ ವರ್ಣಸಂಹಿತೆಗಳು ಣಕಾರ-ಷಕಾರಾರ್ಥಗಳನ್ನು ಪ್ರತಿಪಾದಿಸುತ್ತವೆ, ವಿಷ್ಣುನಾಮಾರ್ಥವನ್ನಲ್ಲ. ಣಕಾರ, ಷಕಾರಗಳೇ ವಿಷ್ಣುನಾಮಗಳಲ್ಲ ಎಂದು ಹೇಳಿದರೆ -

ಉಪಸರ್ಗತ್ವತೋ ವೇಸ್ತು ತಾಚ್ಛೀಲ್ಯಾರ್ತಾದುನಸ್ತಥಾ ।

ಣಕಾರಶ್ಚ ಷಕಾರಶ್ಚ ನಾಮರೂಪತಯಾ ಮತೌ ॥೪೧॥

ವಿಷ್ಣುನಾಮದಲ್ಲಿ ಬೇರೆ ವರ್ಣಗಳೂ ಇರುತ್ತವೆ ಎನ್ನುವುದು ಸತ್ಯವೇ. ಆದರೂ ವಿ ಎನ್ನುವುದಕ್ಕೆ ಉಪಸರ್ಗತ್ವರೂಪದಿಂದ ಉತ್ತರಪದಾರ್ಥಕ್ಕೆ ವಿಶೇಷವಾದ್ದರಿಂದ ಹಾಗೆಯೇ **ಉನಃ** ಪ್ರತ್ಯಯಕ್ಕೆ ತಾಚ್ಛೀಲ್ಯರೂಪ ಅರ್ಥವಿರುವುದರಿಂದ, ಣಕಾರ, ಷಕಾರಗಳೇ ಪ್ರಧಾನವಾಗಿ ವಿಷ್ಣುನಾಮಗಳ ಸ್ವರೂಪಗಳೆಂಬುದಾಗಿ ವೇದದ ಅಭಿಮತ.

ತಸ್ಮಾತ್ಸಮನ್ವಯೋ ವಿಷ್ಣೌ ಸ್ವರವರ್ಣಪದಾತ್ಮನಃ ।

ಅಪಿ ವೇದಸ್ಯ ಕಿಮುತ ವಾಕ್ಯರೂಪೇಣ ಸಂಗತಿಃ ॥೪೨॥

ಆದಕಾರಣ ಸ್ವರವರ್ಣಪದಸ್ವರೂಪಗಳಾದ ಶಬ್ದಗಳಿಗೆ ವಿಷ್ಣುವಿನಲ್ಲಿಯೇ ಸಮನ್ವಯವು. ಅಂದಮೇಲೆ ವೇದಕ್ಕೆ ವಾಕ್ಯರೂಪದಿಂದಲೂ ಸಂಗತಿಯನ್ನು ಹೇಳುವುದಿನ್ನೇನಿದೆ?

ಶ್ರುತಿಯಿಂದ ಸರ್ವಶಬ್ದವಾಚ್ಯತ್ವ ಸಮರ್ಥನೆ

ಇಲ್ಲಿಯವರೆಗೆ ಉಪಪತ್ತಿಯನ್ನು ಅಪೇಕ್ಷಿಸಿ ಶ್ರೀಹರಿಯು ಸರ್ವಶಬ್ದ-ವಾಚ್ಯನೆಂದು ಹೇಳುವ ಶ್ರುತಿಗಳನ್ನು ಉದಾಹರಿಸಿದರು. ಈಗ ಸ್ಪಷ್ಟವಾಗಿ ಪದವಾಕ್ಯ ಸಮನ್ವಯವನ್ನು ಪ್ರತಿಪಾದಿಸುವ ಶ್ರುತಿಗಳನ್ನು ಉದಾಹರಿಸುತ್ತಾರೆ-

ಘೋಷಾಃ ಸರ್ವೇऽಪಿ ವೇದಾಶ್ಚ ಸರ್ವೇ ವೇದಾಶ್ಚ ಯತ್ಪದಂ ।
ಇಂದ್ರಂ ಮಿತ್ರಂ ಯಮಿಂದ್ರಂ ಚ ಪ್ರಥಮಃ ಸಂಸ್ಕೃತಿಸ್ತಥಾ ॥೪೬॥
ನಾಮಧಾಃ ಸರ್ವದೇವಾನಾಮೇಕ ಇತ್ಯಾದಿಕಾ ಶ್ರುತಿಃ ।
ಪ್ರಮಾಣಮುಕ್ತವಿಷಯೇ.....॥

'ತಾ ವಾ ಏತಾಃ। ಸರ್ವಾ ಋಚಃ। ಸರ್ವೇ ವೇದಾಃ। ಸರ್ವೇ ಘೋಷಾ। ಏಕೈವ ವ್ಯಾಹೃತಿಃ। ಪ್ರಾಣ ಏವ', 'ಸರ್ವೇ ವೇದಾ ಯತ್ಪದಮಾಮನಂತಿ। ತಪಾಂಸಿ ಸರ್ವಾಣಿ ಚ ಯದ್ವದಂತಿ। ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ। ತತ್ತೇ ಪದಂ ಸಂಗ್ರಹೇಣ ಬ್ರವೀಮಿ', 'ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್। ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ', 'ಯಮಿಂದ್ರಮಾಹುರ್ವರುಣಂ ಯಮಾಹುರ್ಯಂ ಮಿತ್ರಮಾಹುರ್ಯಮು ಸತ್ಯಮಾಹುಃ', 'ಸ ಪ್ರಥಮಸಂಸ್ಕೃತಿರ್ವಿಶ್ವಕರ್ಮಾ ಸ ಪ್ರಥಮೋ ಮಿತ್ರೋ ವರುಣೋऽಗ್ನಿಃ', 'ಯೋ ದೇವಾನಾಂ ನಾಮಧಾ ಏಕ ಏವ' ಇತ್ಯಾದಿ ಶ್ರುತಿ ಸಮೂಹವು ಪದಸಮನ್ವಯ ಹಾಗೂ ವಾಕ್ಯಸಮನ್ವಯಗಳಲ್ಲಿ ಪ್ರಮಾಣವು. ಆದಿಪದದಿಂದ 'ನಾಮಾನಿ ಸರ್ವಾಣಿ' ಇತ್ಯಾದಿ ವಾಕ್ಯಗಳನ್ನು ಗ್ರಹಿಸಬೇಕು.

ಎಲ್ಲ ಋಚೆಗಳೂ, ಎಲ್ಲ ವೇದಗಳೂ, ಸಮುದ್ರಾದಿ ಎಲ್ಲ ಘೋಷಗಳೂ ಒಬ್ಬನೇ ಆದ ಪ್ರಾಣನನ್ನೇ ಅಂದರೆ ವಿಷ್ಣುವನ್ನೇ ಪ್ರತಿಪಾದಿಸುತ್ತವೆ ಎಂದು ಐತರೇಯೋಪನಿಷತ್ತು ಹೇಳುತ್ತದೆ. ಸಮಸ್ತವೇದಗಳೂ ಯಾವ ಸ್ವರೂಪವನ್ನು ಪ್ರತಿಪಾದಿಸುತ್ತವೆಯೋ ಅದನ್ನೇ ಸಂಗ್ರಹವಾಗಿ ಹೇಳುವೆವು ಎಂದು

ಕಾಠಕೋಪನಿಷತ್ತಿನಲ್ಲಿ ಉಪಕ್ರಮಿಸಿ, 'ತದ್ವಿಷ್ಣೋಃ ಪರಮಂ ಪದಂ' ಎಂದು ಉಪಸಂಹಾರ ಮಾಡಿರುವುದರಿಂದ ಎಲ್ಲ ವೇದಗಳಿಂದ ವಿಷ್ಣುವೇ ಪ್ರತಿಪಾದ್ಯನು. ಒಬ್ಬನೇ ಆದ ಶ್ರೀಹರಿಯನ್ನು ಇಂದ್ರ, ಸೂರ್ಯ, ವರುಣ, ಅಗ್ನಿ, ಸತ್ಯ ಇತ್ಯಾದಿ ಶಬ್ದಗಳಿಂದ ವಾಚ್ಯನೆಂದು ಜ್ಞಾನಿಗಳು ಬಹುರೀತಿಯಲ್ಲಿ ಹೇಳುತ್ತಾರೆ ಎಂದು ಋಗ್ವೇದದಲ್ಲಿ ಶ್ರೀಹರಿಗೆ ಸರ್ವಶಬ್ದ ವಾಚ್ಯತ್ವವನ್ನು ಹೇಳಲಾಗಿದೆ. ಶ್ರೀಹರಿಯೇ ಸರ್ವೋತ್ತಮ, ಸರ್ವಜಗತ್ಕರ್ತಾ ಎಂಬುದಾಗಿ ಪ್ರಥಮಸಂಸ್ಕೃತಿ ಇತ್ಯಾದಿ ಶ್ರುತಿಯು ಹೇಳುತ್ತದೆ. ಶ್ರೀಹರಿಯೊಬ್ಬನೇ ಎಲ್ಲ ದೇವತೆಗಳ ನಾಮಧಾರಕನು ಎಂದು ಋಗ್ವೇದವು ಹೇಳುತ್ತದೆ.

ಇಂದ್ರಾದಿ ನಾಮಗಳಿಗೆ ಭಗವತ್ಪರತ್ವವಿದ್ದರೆ 'ಇಂದ್ರಸ್ಯ ನು ವೀರ್ಯಾಣಿ' ಇತ್ಯಾದಿ ವಾಕ್ಯಗಳಿಗೂ ಅದು ಸಿದ್ಧಿಸುವುದು.

ಹಾಗಾದರೆ ಈ ಅರ್ಥವನ್ನು ಪ್ರತಿಪಾದಿಸತಕ್ಕ ಸೂತ್ರವೇ ಕಾಣದಿರುವುದರಿಂದ, ಸೂತ್ರಿತವಾಗದ ಅರ್ಥವನ್ನು ಹೇಳುವಿರೇಕೆ ಎಂದರೆ -

.....ತದೇವೋಕ್ತಮುಪಕ್ರಮಾತ್ ॥೪೪॥

ಇತಿ ಸ್ವಯಂ ಭಗವತಾ ಬ್ರುವತಾऽಶೇಷಮನ್ವಯಂ ।

ಈ ವಿಷಯವು ಸೂತ್ರಕಾರರಾದ ಭಗವಾನ್ ವೇದವ್ಯಾಸರಿಂದ ಸಾಕ್ಷಾತ್ತಾಗಿ ಹೇಳಲ್ಪಟ್ಟಿದೆ. 'ಜ್ಯೋತಿರುಪಕ್ರಮಾತ್ತು ತಥಾ ಹ್ಯಧೀಯತೇ ಏಕೇ' ಎನ್ನುವುದೇ ಆ ಸೂತ್ರ. ಜೋತೆಗೆ 'ತತ್ತು ಸಮನ್ವಯಾತ್' ಎನ್ನುವ ಸೂತ್ರದಲ್ಲಿ ಬ್ರಹ್ಮನಲ್ಲಿ ಎಲ್ಲ ಶಬ್ದಗಳಿಗೆ ಸಮನ್ವಯವು ಹೇಳಲ್ಪಟ್ಟಿದೆ.

ಪ್ರಧಾನಕ್ಕೆ ಶಬ್ದವಾಚ್ಯತ್ವ ನಿಷೇಧಿಸಲ್ಪಟ್ಟಿಲ್ಲ

ಈ ಪ್ರಕಾರವಾಗಿ ಸಂಕ್ಷೇಪ ಹಾಗೂ ವಿಸ್ತಾರದಿಂದ 'ಆನುಮಾನಿಕಂ' ಇತ್ಯಾದಿ ಸೂತ್ರಗಳಿಗೆ ವ್ಯಾಖ್ಯಾನಮಾಡಿ, ಈಗ ಇತರರು ಮಾಡಿರುವ ವ್ಯಾಖ್ಯಾನವನ್ನು ತಿರಸ್ಕರಿಸುತ್ತಾರೆ -

ನ ಶಬ್ದವಾಚ್ಯತೈವಾತ್ರ ಪ್ರಧಾನಸ್ಯ ನಿಷಿದ್ಧ್ಯತೇ ॥೪೫॥

ಸರ್ವವೇದೇತಿಹಾಸೇಷು ಪುರಾಣೇಷು ಚ ಸಂಗ್ರಹಾತ್ ।

ಈ ಪ್ರಥಮಾಧ್ಯಾಯದಲ್ಲಿಯೇ ಪ್ರಧಾನಕ್ಕೆ ಶಬ್ದವಾಚ್ಯತ್ವವು ನಿಷೇಧಿಸಲ್ಪಡುತ್ತದೆ ಎನ್ನುವುದು ಕೂಡುವುದಿಲ್ಲ. ಏಕೆಂದರೆ ಎಲ್ಲ ವೇದ,

ಇತಿಹಾಸ ಹಾಗೂ ಪುರಾಣಗಳಲ್ಲಿಯೂ ಪ್ರಧಾನಕ್ಕೆ ಶಬ್ದವಾಚ್ಯತ್ವವು ಸಂಗ್ರಹವಾಗಿ ಪ್ರತಿಪಾದಿತವಾಗಿದೆ.

ಇದಕ್ಕೆ ಸಂವಾದಿಯಾಗಿ ತ್ರಿಗುಣತ್ವಾದಿ ಲಕ್ಷಣಯುಕ್ತವಾದ ಪ್ರಧಾನವನ್ನು ಪ್ರತಿಪಾದಿಸುವ ಇತಿಹಾಸವಾಕ್ಯವನ್ನು ಹೇಳುತ್ತಾರೆ –

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ॥೪೬॥
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ ।
ಇತ್ಯಾದಿವಾಕ್ಯರೂಪೇಣ.....॥

ಜಡಪ್ರಕೃತಿಯಿಂದ ಹುಟ್ಟಿರುವ ಸತ್ವಗುಣ, ರಜೋಗುಣ, ತಮೋಗುಣ ಎನ್ನುವ ಮೂರು ಗುಣಗಳು ದೇಹದಲ್ಲಿರುವ ಸ್ವರೂಪತಃ ನಾಶವಿಲ್ಲದ ದೇಹಾಭಿಮಾನಿಯಾದ ಜೀವನನ್ನು ಬಂಧಿಸುತ್ತವೆ ಎಂದು ಅರ್ಜುನನಿಗೆ ಶ್ರೀಕೃಷ್ಣನು ಉಪದೇಶಿಸಿರುವ ಭಗವದ್ಗೀತೆಯಲ್ಲಿ ತ್ರಿಗುಣಾತ್ಮಕವಾದ ಪ್ರಧಾನವು ಪ್ರತಿಪಾದಿಸಲ್ಪಟ್ಟಿದೆ. ಆದಿಪದದಿಂದ 'ಭೂಮಿರಾಪೋऽನಲೋ ವಾಯುಃ ಖಂ ಮನೋ ಬುದ್ಧಿರೇವ ಚ' ಇತ್ಯಾದಿ ವಾಕ್ಯವನ್ನೂ ಗ್ರಹಿಸಬೇಕು.

'ಅವ್ಯಕ್ತಾತ್ಪುರುಷಃ ಪರಃ' ಎಂದು ಅವ್ಯಕ್ತ ಶಬ್ದವು ಪ್ರಧಾನವನ್ನು ಹೇಳುವುದಿಲ್ಲವಾದರೆ, ಮತ್ತೆ ಬೇರೆ ಯಾವುದು ಅವ್ಯಕ್ತಶಬ್ದವಾಚ್ಯವು ಎಂದು ಕೇಳುತ್ತೇವೆ. ಅವ್ಯಕ್ತ ಶಬ್ದದಿಂದ ಶರೀರವೇ ಮುಖ್ಯವಾಗಿ ಹೇಳಲ್ಪಡುವುದು ಅಥವಾ ಶರೀರಕ್ಕೆ ಮೂಲಭೂತಕಾರಣವಾದ ಭೂತಸೂಕ್ಷ್ಮಗಳೇ ಅವ್ಯಕ್ತ ಶಬ್ದದಿಂದ ವಾಚ್ಯವಾಗಿವೆ ಎಂದು ಹೇಳಿದರೆ, ಉಭಯ ಪಕ್ಷಗಳಲ್ಲಿಯೂ ದೋಷವನ್ನು ತೋರಿಸುತ್ತಾರೆ –

.....ಯತ್ರಾರ್ಥೋ ನಾನ್ಯ ಇಷ್ಯತೇ ॥೪೭॥
ತೇಜೋऽಬನ್ನಾತ್ಮಕ ವಾऽಪಿ ಯದ್ಭೂಪಾದಾನಮಿಷ್ಯತೇ ।
ಅನಾದ್ಯೇವಾಪರಾಧಃ ಕಃ ಪ್ರಧಾನಮಿತಿ ಚೋದಿತೇ ॥೪೮॥

ಅವ್ಯಕ್ತ ಶಬ್ದಕ್ಕೆ ಪರಬ್ರಹ್ಮಪರವಾದ ಅರ್ಥವನ್ನು ಅಂಗೀಕರಿಸದೆ, ಶರೀರಕ್ಕೆ ಉಪಾದಾನಕಾರಣವಾದ ತೇಜಸ್ಸು-ಜಲ-ಪೃಥಿವ್ಯಾತ್ಮಕ ಭೂತಸೂಕ್ಷ್ಮಗಳನ್ನೇ ಅವ್ಯಕ್ತ ಶಬ್ದದಿಂದ ಪ್ರತಿಪಾದಿಸುವುದಾದರೆ, ಪ್ರಧಾನವೇ ಅವ್ಯಕ್ತ ಶಬ್ದದಿಂದ ವಾಚ್ಯ ಎಂದು ಹೇಳಿದರೆ ಯಾವ ದೋಷವಿದೆ?

'ಯದಗ್ನೇ ರೋಹಿತಂ ರೂಪಂ। ತೇಜಸಸ್ತದ್ರೂಪಂ। ಯಚ್ಛುಕ್ಲಂ ತದಪಾಂ। ಯತ್ಕೃಷ್ಣಂ ತದನ್ನಸ್ಯ' ಎನ್ನುವ ಮಂತ್ರದಲ್ಲಿ ತೇಜಸ್ಸು ಜಲ ಪೃಥಿವಿಗಳನ್ನು ಲೋಹಿತಾದಿ ರೂಪವುಳ್ಳವೆಂದು ಕೆಲವರು ವ್ಯಾಖ್ಯಾನಿಸುತ್ತಾರೆ. ಅದರ ಸಮಾಖ್ಯೆಯಿಂದ 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ। ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ। ಅಜೋ ಹ್ಯೇಕೋ ಜುಷಮಾಣೋ೨ನು-ಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋ೨ನ್ಯಃ।' ಎನ್ನುವ ಮಂತ್ರದಲ್ಲಿಯೂ ಅಜಾ ಶಬ್ದವಾಚ್ಯವಾದುದು ಪೃಥಿವಿ-ಜಲ-ತೇಜೋರೂಪವಾದುದೇ ಎಂದು ತಿಳಿಯತಕ್ಕದ್ದು. ಅಜಾ ಶಬ್ದವಾಚ್ಯವಾದುದಕ್ಕೆ ನಾಲ್ಕು ವಿಧದ ಪ್ರಾಣಿವರ್ಗಕ್ಕೆ ಉಪಾದಾನರೂಪದಿಂದ ಅನೇಕ ಪ್ರಜೋತ್ಪಾದಕತ್ವವು ಹಾಗೂ ಭೋಗ್ಯತ್ವವೂ ಕೂಡುವುದು ಎಂದು ಮಾಯಾವಾದಿಗಳು ಹೇಳುತ್ತಾರೆ. ಅದಕ್ಕೆ ದೂಷಣವನ್ನು ಹೇಳುತ್ತಾರೆ -

ಅಜಾಮೇಕಾಮಿತಿ ಪ್ರಾಹ ಶ್ರುತಿರೇತಾಂ ಯದಾ ತದಾ ।
ಕೋ ದೋಷಃ ಸರ್ವಥೈವಾಸ್ತಿ ಪರಿಣಾಮಿ ಜಡಂ ಯದಿ ॥೪೯॥

'ಯದಗ್ನೇ ರೋಹಿತಂ' ಎನ್ನುವ ಮಂತ್ರದಲ್ಲಿ ತೇಜಸ್ಸು-ಜಲ-ಪೃಥಿವೀ ರೂಪವಾದ ಜಡವು ಪ್ರತಿಪಾದ್ಯವೆಂದು ಅಂಗೀಕರಿಸಲ್ಪಡುವುದಾದರೆ, 'ಅಜಾಮೇಕಾಂ' ಎನ್ನುವ ಶ್ರುತಿಯು ಈ ಪ್ರಕೃತಿಯನ್ನು (ಪ್ರಧಾನವನ್ನು) ಹೇಳುತ್ತದೆ ಎಂದು ಹೇಳಿದರೆ ಆಗ ಅಪರಿಹಾರ್ಯವಾದ ಯಾವುದೇ ದೋಷವೂ ಇರುವುದಿಲ್ಲ.

ಅಜಾದಿ ಶಬ್ದಗಳು ಪರಮಮುಖ್ಯವೃತ್ತಿಯಿಂದ ಬ್ರಹ್ಮಪರ

ಅಸ್ಮಾಕಂ ಪರಮಮುಖ್ಯಾರ್ಥೋ ಭಗವಾನೇಕ ಏವ ತು ।
ಮುಖ್ಯಮಾತ್ರತಯಾ ರೂಢಂ ಸರ್ವಮಭ್ಯುಪಗಮ್ಯತೇ ॥೫೦॥
ಸರ್ವೇಷಾಮಪಿ ಶಬ್ದಾನಾಂ ಗೌಣಾದ್ಯಂ ತದಯೋಗತಃ ।

ನಮ್ಮ ಮತದಲ್ಲಾದರೋ ಎಲ್ಲ ಶಬ್ದಗಳಿಗೂ ಶ್ರೀಹರಿಯೊಬ್ಬನೇ ಪರಮ ಮುಖ್ಯವೃತ್ತಿಯಿಂದ ವಾಚ್ಯನು. ಶಬ್ದಗಳಿಗೆ ರೂಢಿಯಿಂದ ಪ್ರಸಿದ್ಧವಾಗಿರುವ ಅರ್ಥವೆಲ್ಲವೂ ಮುಖ್ಯಾರ್ಥಮಾತ್ರವೆಂದು ತಿಳಿಯಲ್ಪಡುವುದು. ಮುಖ್ಯಾರ್ಥವು ಕೂಡದಿದ್ದರೆ ಗೌಣಾರ್ಥವು ಅಂಗೀಕರಿಸಲ್ಪಡುವುದು. ಆದಪ್ರಯುಕ್ತ ಅಜಾದಿ

ಶಬ್ದಗಳು ಪರಮಮುಖ್ಯವೃತ್ತಿಯಿಂದ ಪರಬ್ರಹ್ಮನನ್ನೂ, ಮುಖ್ಯವೃತ್ತಿಯಿಂದ ಪ್ರಧಾನವನ್ನೂ ಪ್ರತಿಪಾದಿಸುವುದೆಂಬುದಾಗಿ ಅಂಗೀಕರಿಸಿದರೆ ಯಾವ ಅನುಪಪತ್ತಿಯೂ ಇರುವುದಿಲ್ಲ.

ನೀವು ಹೇಳಿದ ಅಭಿಪ್ರಾಯವನ್ನಾದರೂ ನಾವು ಏಕೆ ಅಂಗೀಕರಿಸಬೇಕು ಎಂದು ಆಕ್ಷೇಪಿಸಿದರೆ, ಸೂತ್ರಕಾರರೇ ಗ್ರಂಥಾಂತರದಲ್ಲಿ ವೈದಿಕ ಶಬ್ದಗಳಿಗೆ ಈ ಪ್ರಕಾರವಾಗಿ ಅನೇಕಾರ್ಥಗಳನ್ನು ಅಂಗೀಕರಿಸಿದ್ದಾರೆ ಎಂದು ಹೇಳುತ್ತಾರೆ-

ಅರ್ಥದ್ವಯಮಭಿಪ್ರೇತ್ಯ ಪ್ರವೃತ್ತೇ ಹರಿರುಕ್ತವಾನ್ ॥೫೧॥

ಕಾರ್ಯಾಣಾಂ ಕಾರಣಂ ಪೂರ್ವಂ ವಚಸಾಂ ವಾಚ್ಯಮುತ್ತಮಂ ।

ಯೋಗಾನಾಂ ಪರಮಾಂ ಸಿದ್ಧಿಂ ಪರಮಂ ತೇ ಪದಂ ವಿದುಃ ॥೫೨॥

'ವೈದಿಕವಚನಗಳಿಗೆ ಮುಖ್ಯವೃತ್ತಿಯಿಂದ ಪ್ರತಿಪಾದ್ಯವೂ, ಯೋಗವೃತ್ತಿಗಳಿಗೆ ಮುಖ್ಯಫಲರೂಪವೂ, ಮಹದಾದಿ ಎಲ್ಲ ಕಾರ್ಯಗಳಿಗೆ ಮುಖ್ಯಕಾರಣವೂ ಆಗಿರುವ ನಿನ್ನ ಸ್ವರೂಪವನ್ನು ಆ ಜ್ಞಾನಿಗಳು ಸರ್ವೋತ್ಕೃಷ್ಟವೆಂಬುದಾಗಿ ತಿಳಿಯುತ್ತಾರೆ.' ಹೀಗೆ ಶಬ್ದಗಳಿಗೆ ಪರಮಮುಖ್ಯಾರ್ಥ ಮತ್ತು ಮುಖ್ಯಾರ್ಥ ಎಂದು ಎರಡು ರೀತಿಯ ಅರ್ಥಗಳನ್ನು ಪ್ರತಿಪಾದಿಸುವ ಶಕ್ತಿಯಿದೆ ಎಂಬ ಅಭಿಪ್ರಾಯವನ್ನು ಭಗವಾನ್ ವೇದವ್ಯಾಸರು ಪ್ರವೃತ್ತ ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.

ವೈದಿಕ ಶಬ್ದಗಳಿಗೆ ಎರಡು ರೀತಿಯ ಅರ್ಥಗಳಿವೆ ಎನ್ನುವುದಕ್ಕೆ ಪ್ರಮಾಣಾಂತರವನ್ನು ಹೇಳುತ್ತಾರೆ -

ಇತಿ ಬುದ್ಧೌ ಸಮಾರೋಹಾದುಭಯೋರ್ಯೋಗರೂಢಯೋಃ ।

ತ್ಯಾಗೇ ಚ ಕಾರಣಾಭಾವಾದುಭಯಾರ್ಥತ್ವಮಿಷ್ಯತೇ ॥೫೩॥

ಹೀಗೆ ಯೋಗ ಮತ್ತು ರೂಢಿ ಎಂಬ ಎರಡು ಅರ್ಥಗಳೂ ಚೆನ್ನಾಗಿ ನಮ್ಮ ಬುದ್ಧಿಯಲ್ಲಿ ಆರೂಢವಾಗಿರುವುದರಿಂದಲೂ (ಬುದ್ಧಿಯು ಸ್ವತಃ ಪ್ರಮಾಣವಾಗಿರುವುರಿಂದ), ಎರಡು ಅರ್ಥಗಳ ಪರಿತ್ಯಾಗಕ್ಕೆ ಯಾವುದೇ ಕಾರಣವಿಲ್ಲದಿರುವುದರಿಂದಲೂ, ವೈದಿಕವಚನಗಳಿಗೆ ಎರಡು ಅರ್ಥಗಳಿವೆ ಎನ್ನುವುದು ಪ್ರಾಮಾಣಿಕರಿಂದ ಅಂಗೀಕರಿಸಲ್ಪಡುತ್ತದೆ.

ವಿಪರೀತಪ್ರಮಾಭಾವೇ ಪೂರ್ವಾರೋಹಸ್ತು ಕಾರಣಂ ।

ಸಾ ಭವೇದ್ಯತ್ರ ಸ ವ್ಯರ್ಥಃ ಪೂರ್ವಾರೋಹೋ ಭ್ರಮೋ ಯಥಾ ॥೫೪॥

ಅತೋ ಜಗದುಪಾದಾನಂ ಪ್ರಧಾನಂ ವಕ್ತಿ ಸಾ ಶ್ರುತಿಃ ।

ವಿರುದ್ಧವಾದ ಪ್ರಮಾಣವಿಲ್ಲದಿದ್ದರೆ ಪೂರ್ವದಲ್ಲಿ ಬುದ್ಧ್ಯಾರೂಢವಾದ ಅರ್ಥವು ಸ್ವೀಕಾರಾರ್ಹವು ಅಂದರೆ ವ್ಯವಹಾರಕ್ಕೆ ಕಾರಣವು. ವಿರುದ್ಧವಾದ ಪ್ರಮಾಣವು ಕಂಡುಬರುವ ಕಡೆಗಳಲ್ಲಿ ಪೂರ್ವಾರೂಢವಾದ ಅರ್ಥವು, ಶುಕ್ತಿಯನ್ನು ನೋಡಿದಾಗ ಬರುವ 'ಇದಂ ರಜತಂ' ಎಂಬ ಭ್ರಾಂತಿಜ್ಞಾನದಂತೆ, ವ್ಯರ್ಥವಾಗುವುದು. ಆದಕಾರಣ 'ಅಜಾಮೇಕಾಂ' ಎನ್ನುವ ಶ್ರುತಿಯು, ಪ್ರಧಾನವನ್ನು ಜಗತ್ತಿಗೆ ಉಪಾದಾನ ಕಾರಣವನ್ನಾಗಿ ಹೇಳುತ್ತದೆ.

'ನಸಂಖ್ಯೋಪಸಂಗ್ರಹಾತ್' ಎನ್ನುವ ಅಧಿಕರಣವೂ ಕೂಡ ಪ್ರಧಾನಕ್ಕೆ ಶಬ್ದವಾಚ್ಯತ್ವವಿಲ್ಲವೆಂದು ಪ್ರತಿಪಾದಿಸುವುದು ಎಂದು ಸಾಂಖ್ಯರು ವ್ಯಾಖ್ಯಾನ ಮಾಡುವರು. ಅದು ಹೇಗೆಂದರೆ, 'ಯಸ್ಮಿನ್ ಪಂಚ ಪಂಚಜನಾ ಆಕಾಶಶ್ಚ ಪ್ರತಿಷ್ಠಿತಃ ತಮೇವ ಮನ್ಯಮಾತ್ಮಾನಂ ವಿದ್ವಾನ್ ಬ್ರಹ್ಮಾಮೃತೋ ಮೃತಮ್' ಎನ್ನುವ ಮಂತ್ರದಲ್ಲಿ ಪಂಚ ಪಂಚ ಎಂದು ಎರಡಾವರ್ತಿ ಪ್ರಯೋಗವಿದೆ. ಇಲ್ಲಿ ಪಂಚಸಂಖ್ಯೆಯೇ ವಿಷಯವಾಗುಳ್ಳ ಮತ್ತೊಂದು ಪಂಚಸಂಖ್ಯೆಯು ಶ್ರುತವಾಗಿರುವ ಪ್ರಯುಕ್ತ ಪಂಚಪಂಚಕಾಃ ಎಂದರೆ ಇಪ್ಪತ್ತೈದು ಎಂದಾಗುವುದು. ಇಲ್ಲಿ ಸಾಂಖ್ಯಸ್ಮೃತಿ ಪ್ರಸಿದ್ಧವಾದ ಇಪ್ಪತ್ತೈದು ತತ್ವಗಳನ್ನು ಸಂಗ್ರಹಿಸಿರುವುದರಿಂದ ಪ್ರಧಾನಾದಿಗಳಿಗೆ ಶಬ್ದಬೋಧ್ಯತ್ವವು ಪ್ರಾಪ್ತವಾಗುವುದು.

ನ ಸಂಖ್ಯಾಧಿಕರಣದ ಅಪವ್ಯಾಖ್ಯಾನ ನಿರಾಸೆ

ಈ ಅಧಿಕರಣವು ಸಾಂಖ್ಯಮತವನ್ನು ನಿರಾಕರಿಸುವುದು ಎಂದು ಶಾಂಕರಭಾಷ್ಯದಲ್ಲಿ ಪ್ರತಿಪಾದಿಸಿಲಾಗಿದೆ. ಏಕೆಂದರೆ ಸಾಂಖ್ಯಮತದಲ್ಲಿ ಹೇಳಿರುವ ೨೫ ತತ್ವಗಳು ಇಲ್ಲಿ ತೋರುವುದಿಲ್ಲ. ಇಲ್ಲಿ ಪಂಚಪಂಚ ಎಂಬುದಾಗಿ ಐದು ತತ್ವಗಳ ಐದು ವರ್ಗ ಹೇಳಿರುವಂತೆ ತೋರುವುದು. ಈ ಐದೈದಕ್ಕೆ ಸಂಗ್ರಾಹಕವಾದ ಸಾಧಾರಣವಾದ ಧರ್ಮಗಳಿಲ್ಲ. ನಾನಾಭಾವವನ್ನು ಹೊಂದಿರುವ ತತ್ವಗಳು ಒಂದೇ ಗುಂಪಿನಲ್ಲಿ ಸೇರಲು ಸಾಧ್ಯವಿಲ್ಲ. ಜೊತೆಗೆ ಸಾಂಖ್ಯಸ್ಮೃತಿಯಲ್ಲಿ ಹೇಳಿಲ್ಲದ ಆತ್ಮಾ ಹಾಗೂ ಆಕಾಶ

ಎಂಬ ಇನ್ನೂ ಎರಡು ತತ್ವಗಳು ಹೆಚ್ಚಾಗಿ ಇಲ್ಲಿ ಕಂಡುಬರುತ್ತವೆ. ಈಪ್ರಕಾರವಾಗಿ ಸಾಂಖ್ಯಪ್ರಸಿದ್ಧ ತತ್ವಗಳು ಇಲ್ಲಿ ಪ್ರತಿಪಾದಿತವಾಗಿಲ್ಲವಾದ್ದರಿಂದ ಪ್ರಧಾನಾದಿಗಳಿಗೆ ಶಬ್ದಬೋಧ್ಯತ್ವವು ಇರುವುದಿಲ್ಲ ಎಂದು ಅದ್ವೈತಿಗಳು ಹೇಳುತ್ತಾರೆ.

ಹಾಗಾದರೆ ೨೫ ತತ್ವಗಳಿವೆ ಎನ್ನುವ ಪ್ರಕ್ರಿಯೆಯೇ ಸರ್ವಥಾ ಅಪ್ರಾಮಾಣಿಕವೋ ಅಥವಾ ಈ ವಾಕ್ಯವು ಆ ತತ್ವಗಳನ್ನು ಹೇಳುವುದಿಲ್ಲವೋ ಎಂದು ಸಿದ್ಧಾಂತಿಗಳು ಅವರನ್ನು ಪ್ರಶ್ನಿಸಬೇಕು. ಎರಡು ಪಕ್ಷಗಳೂ ಕೂಡುವುದಿಲ್ಲ ಎಂದು ಹೇಳುತ್ತಾರೆ -

ಯತ್ತತ್ತ್ರಿಗುಣಮವ್ಯಕ್ತಂ ನಿತ್ಯಂ ಸದಸದಾತ್ಮಕಂ ॥೫೫॥
ಪ್ರಧಾನಂ ಪ್ರಕೃತಿಂ ಪ್ರಾಹುರವಿಶೇಷಂ ವಿಶೇಷವತ್ ।

ಯಾವುದು ತ್ರಿಗುಣಾತ್ಮಕವೂ, ಅವ್ಯಕ್ತವೂ, ನಿತ್ಯವಾದುದೂ, ಕಾರ್ಯ-ಕಾರಣಾತ್ಮಕವೂ ಆಗಿದ್ದು ಕಾರ್ಯರೂಪ ವಿಶೇಷತ್ವವನ್ನು ಹೊಂದಿಲ್ಲವೋ ಅದನ್ನು ಪ್ರಧಾನವೆಂದೂ, ಕಾರ್ಯರೂಪ ವಿಶೇಷತ್ವವನ್ನು ಹೊಂದಿರುವುದನ್ನು ಪ್ರಕೃತಿ ಎಂದೂ ಹೇಳುತ್ತಾರೆ.

ವಿಶೇಷವುಳ್ಳದ್ದು ಹೇಗೆಂದರೆ, ವಿವರಿಸುತ್ತಾರೆ -

ಪಂಚಭಿಃ ಪಂಚಭಿರ್ಬ್ರಹ್ಮ ಚತುರ್ಭಿರ್ದಶಭಿಸ್ತಥಾ ॥೫೬॥
ಏತಚ್ಚತುರ್ವಿಂಶತಿಕಂ ಗಣಂ ಪ್ರಾಧಾನಿಕಂ ವಿದುಃ ।
ಇತಿ ಭಾಗವತೇ ಪ್ರಾಹ ವಿದ್ಯಾಧೀಶಃ ಸ್ವಯಂ ಪ್ರಭುಃ ॥೫೭॥

ಪಂಚಮಹಾಭೂತಗಳಿಂದ(ಪಂಚಭಿಃ), ಪಂಚತನ್ಮಾತ್ರೆಗಳಿಂದ(ಪಂಚಭಿಃ), ಮಹತ್ತತ್ವ ಅಹಂಕಾರ ಮನಸ್ಸು ಮತ್ತು ಬುದ್ಧಿಯೆಂಬ ನಾಲ್ಕು ತತ್ವಗಳಿಂದ (ಚತುರ್ಭಿಃ), ಹಾಗೆಯೇ ಹತ್ತು ಇಂದ್ರಿಯಗಳಿಂದ (ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು) ಪೂರಿತವಾದ ಒಟ್ಟು ೨೪ ತತ್ವಗಳ ಸಮೂಹವನ್ನು ಪ್ರಧಾನಕಾರ್ಯವನ್ನಾಗಿ ತಿಳಿಯುತ್ತಾರೆ. ಹೀಗೆ ಸೂತ್ರಕಾರರಾದ ವೇದವ್ಯಾಸರು ತಾವೇ ಭಾಗವತದಲ್ಲಿ ಹೇಳಿದ್ದಾರೆ.

'ಕಾರಣತ್ವೇನ ಚಾಕಾಶಾದಿಷು' ಇತ್ಯಾದಿ ಸೂತ್ರಗಳಿಗೆ ಅದ್ವೈತಿಗಳು ಮಾಡಿರುವ ವ್ಯಾಖ್ಯಾನವು ಅಪವ್ಯಾಖ್ಯಾನವೆಂಬುದಾಗಿ ಸ್ಪಷ್ಟವಾಗಿ ದೂಷಿತವೇ

ಆಗಿರುವುದರಿಂದ ('ಅಧ್ಯಾಯಸಂಗತೇಃಪಾದಸಂಗತೇರಪ್ಯಭಾವತಃ । ಪೂರ್ವ-ಪಕ್ಷಾನುತ್ಥಿತೇಶ್ಚ ಸಿದ್ಧಾಂತಸ್ಯಾಪ್ಯಯೋಗತಃ।'ಎಂದು ಚಂದ್ರಿಕಾದಲ್ಲಿ ಹೇಳಿರುವ ಪ್ರಕಾರ ದೂಷಿತವಾಗಿರುವುದರಿಂದ) ಇಲ್ಲಿ ಅದನ್ನು ಮತ್ತೆ ಖಂಡಿಸಿಲ್ಲ.

ಬ್ರಹ್ಮನು ಉಪಾದಾನಕಾರಣನಲ್ಲ

ಪರಬ್ರಹ್ಮನು ಜಗತ್ತಿಗೆ ಉಪಾದಾನಕಾರಣನೆಂದು ಪ್ರತಿಪಾದಿಸುವುದಕ್ಕಾಗಿ ಪ್ರಕೃತ್ಯಧಿಕರಣವು ಎಂಬುದಾಗಿ ಮಾಯಾವಾದಿಗಳು ವ್ಯಾಖ್ಯಾನ ಮಾಡುತ್ತಾರೆ. ಈ ವ್ಯಾಖ್ಯಾನವನ್ನು ನಿರಾಕರಿಸುತ್ತಾರೆ -

ನ ಚ ಪ್ರಕೃತಿಶಬ್ದೇನ ಬ್ರಹ್ಮೋಪಾದನಮುಚ್ಯತೇ ।

ಪ್ರಕೃತಿ ಎನ್ನುವ ಶಬ್ದದಿಂದ ಪರಬ್ರಹ್ಮನು ಉಪಾದಾನಕಾರಣನೆಂದು ಹೇಳಲ್ಪಡುವುದಿಲ್ಲ.

ಏಕೆಂದರೆ ಪ್ರಮಾಣಾಂತರಗಳಿಗೆ ಅವಿರುದ್ಧವಾಗಿ ಸೂತ್ರಾರ್ಥವನ್ನು ವಿವರಿಸಬೇಕು. ಬ್ರಹ್ಮನಿಗೆ ಉಪಾದಾನಕಾರಣತ್ವವನ್ನು ಹೇಳುವುದು ಶ್ರುತ್ಯಾದಿಗಳಿಗೆ ವಿರುದ್ಧವು. ಪರಿಣಾಮಿಕಾರಣವು ಉಪಾದಾನವೆನಿಸುತ್ತದೆ. ಘಟಾದಿಗಳಿಗೆ ಮಣ್ಣು ಇತ್ಯಾದಿಗಳಂತೆ. ಪರಿಣಾಮಿಕಾರಣವು ರೂಪಾಂತರ ಅಥವಾ ವಿಕಾರತ್ವವನ್ನು ಹೊಂದಿಸುತ್ತದೆ. ಬ್ರಹ್ಮನಿಗಾದರೋ ವಿಕಾರತ್ವವನ್ನು ಶ್ರುತ್ಯಾದಿಗಳು ನಿಷೇಧಿಸುತ್ತವೆ. ಈ ಪ್ರಕಾರವಾಗಿ ಶ್ರುತ್ಯಾದಿ ಪ್ರಮಾಣಗಳಿಗೆ ವಿರುದ್ಧವಾದುದನ್ನು ಸೂತ್ರಾರ್ಥವೆಂದು ಹೇಳುವುದು ಕೂಡುವುದಿಲ್ಲ ಎಂದು ಹೇಳುತ್ತಾರೆ -

ಅವಿಕಾರಃ ಸದಾ ಶುದ್ಧೋ ನಿತ್ಯ ಆತ್ಮಾ ಸದಾ ಹರಿಃ ॥೫೮॥
ಸದ್ಯೈಕರೂಪವಿಜ್ಞಾನಬಲ ಆನಂದರೂಪಕಃ ।
ನಿರ್ವಿಕಾರೋಽಕ್ಷರಃ ಶುದ್ಧೋ ನಿರಾತಂಕೋಽಜರೋಽಮರಃ ॥೫೯॥
ಅವಿಶ್ವೋ ವಿಶ್ವಕರ್ತಾಽಜೋ ಯಃ ಪರಃ ಸೋಽಭಿಧೀಯತೇ ।
ನಿರ್ವಿಕಾರಮನೌಪಮ್ಯಂ ಸದ್ಯೈಕರಸಮಕ್ಷಯಂ ॥೬೦॥
ಬ್ರಹ್ಮೇತಿ ಪರಮಾತ್ಮೇತಿ ಯಂ ವಿದುರ್ವೈದಿಕಾ ಜನಾಃ ।
ಇತಿ ಶ್ರುತಿಪುರಾಣೋಕ್ತ್ಯಾ ನ ವಿಕಾರೀ ಜನಾರ್ದನಃ ॥೬೧॥

ಶ್ರೀಹರಿಯು ಯಾವಾಗಲೂ ಪರಿಣಾಮರಹಿತನು. ಯಾವಾಗಲೂ

ಶುದ್ಧನು. ಉತ್ಪತ್ತಿನಾಶಗಳಿಲ್ಲದವನು. ಯಾವಾಗಲೂ ಅಂದರೆ ಮೋಕ್ಷದಲ್ಲೂ ಸ್ವಾಮಿಯು. ಯಾವಾಗಲೂ ಏಕಪ್ರಕಾರವಾದ ವಿಜ್ಞಾನಬಲಗಳಿಂದ ಕೂಡಿರುವನು. ಆನಂದಸ್ವರೂಪನು. ಯಾವುದೇ ರೀತಿಯ ವಿಕಾರವಿಲ್ಲದವನು. ನಾಶರಹಿತನು. ಜಡಗಳಿಂದ ಅಮಿಶ್ರನು. ನಿರ್ಭಯನು. ಮುಪ್ಪಿಲ್ಲದವನು. ಸಾವಿಲ್ಲದವನು. ಪ್ರಪಂಚದಿಂದ ಭಿನ್ನನು ಅಂದರೆ ಪ್ರಪಂಚರೂಪದಿಂದ ಪರಿಣಾಮವಿಲ್ಲದವನು. ಸಕಲಜಗತ್ಕರ್ತನು. ಉತ್ಪತ್ತಿಯಿಲ್ಲದವನು. ಇಂಥಹ ವಿಶ್ವವಿಲಕ್ಷಣನಾದ ಪರಬ್ರಹ್ಮನು ಸರ್ವೋತ್ತಮನೆಂದು ಹೇಳಲ್ಪಡುತ್ತಾನೆ. ನಿರ್ವಿಕಾರನೂ, ಅನುಪಮನೂ, ಯಾವಾಗಲೂ ಸ್ವಗತಭೇದವರ್ಜಿತನೂ ಅಥವಾ ಆನಂದಸ್ವರೂಪನೂ, ನಾಶರಹಿತನೂ ಆಗಿರುವ ಯಾರನ್ನು ವೈದಿಕ ಜನರು ಪರಮಾತ್ಮ ಎಂದು ತಿಳಿಯುತ್ತಾರೋ – ಇವೇ ಮೊದಲಾದ ಶ್ರುತಿ ಹಾಗೂ ಪುರಾಣಗಳ ವಚನದಿಂದ ಶ್ರೀಹರಿಯು ವಿಕಾರಿಯಲ್ಲವೆಂದು ತಿಳಿಯಲ್ಪಡುವನು.

ಧರ್ಮಿಗೆ ಮತ್ತು ಧರ್ಮಕ್ಕೆ ಎಂಬುದಾಗಿ ವಿಕಾರದಲ್ಲಿ ಎರಡು ವಿಧ. ಉದಾಹರಣೆಗೆ, ಮೃದಾದಿಗಳಿಗೆ ಘಟಾದಿ ರೂಪಾಂತರವು ಧರ್ಮಿಗೆ ಸಂಬಂಧಿಸಿದ ವಿಕಾರವಾದರೆ, ಬದರಾದಿ ಫಲಗಳಲ್ಲಿ ವರ್ಣವ್ಯತ್ಯಾಸರೂಪದ ವಿಕಾರವು ಧರ್ಮಕ್ಕೆ ಸಂಬಂಧಿಸಿದ ವಿಕಾರ. ಮೇಲೆ ಉದಾಹರಿಸಲಾಗಿರುವ ಪ್ರಮಾಣ ವಚನಗಳಲ್ಲಿ, 'ಅವಿಕಾರಃ ಸದಾ ಶುದ್ಧಃ' ಎನ್ನುವುದು ಧರ್ಮಿಯ ವಿಕಾರವನ್ನೂ, 'ಸದೈಕರೂಪ' ಎನ್ನುವುದು ಧರ್ಮದ ವಿಕಾರವನ್ನೂ ನಿಷೇಧಿಸುವುದರಿಂದ ಪುನರುಕ್ತಿಯಿಲ್ಲ.

ವಿಕಾರದ ಪ್ರಭೇದಗಳು

ಬ್ರಹ್ಮನಿಗೆ ನಿರ್ವಿಕಾರತ್ವ ಸಮರ್ಥನೆ

ಬ್ರಹ್ಮನಿಗೆ ವಿಕಾರತ್ವವು ಯುಕ್ತಿವಿರುದ್ಧವೂ ಆಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ವಿಕಾರದ ಪ್ರಭೇದಗಳನ್ನು ಹೇಳುತ್ತಾರೆ –

ಪರಾಧೀನವಿಶೇಷಾಪ್ತಿರನಿವರ್ತ್ಯೋ ऽನ್ಯಥಾಭವಃ ।
ಕ್ಷೀರಾದಿವದ್ವಿಕಾರಃ ಸ್ಯಾನ್ನೈವ ಸ ಸ್ಯಾದ್ಧರೇಃ ಕ್ವಚಿತ್ ॥೬೨॥

ಪರಾಧೀನ ವಿಶೇಷಾಪ್ತಿರೂಪವಾದ ವಿಕಾರದಲ್ಲಿ ವಿಶೇಷಾಪ್ತಿ ಹಾಗೂ

ವಿಶೇಷಿಪರಿವೃತ್ತಿ ಎಂದು ಎರಡು ವಿಧ. ವಿಶೇಷಾಪ್ತಿಯೆಂದರೆ ಧರ್ಮಿಯು ಇದ್ದಹಾಗೆಯೇ ಇದ್ದು ಧರ್ಮವು ಮಾತ್ರ ಪರಿಣಾಮ ಹೊಂದುವುದು. ವಿಶೇಷಿಪರಿವೃತ್ತಿಯೆಂದರೆ ಧರ್ಮದ ಸ್ವರೂಪವೇ ಪರಿಣಾಮ ಹೊಂದುವುದು. ಈ ಎರಡು ರೀತಿಯ ವಿಕಾರಗಳಲ್ಲಿ ಅನಿವರ್ತ್ಯ, ನಿವರ್ತ್ಯ ಎಂದು ಪುನಃ ಎರಡು ವಿಧ. ಕ್ಷೀರಾದಿವತ್ ಎನ್ನುವುದು ನಾಲ್ಕು ವಿಧದ ವಿಕಾರಕ್ಕೂ ಉದಾಹರಣೆಯಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲ ರೀತಿಯ ವಿಕಾರವೂ ಪರಾಧೀನವೇ ಆಗಿರುವುದು. ಆದಪ್ರಯುಕ್ತ ಶ್ರೀಹರಿಯಲ್ಲಿ ಎಂದಿಗೂ ಯಾವ ರೀತಿಯ ವಿಕಾರವೂ ಇರುವುದಿಲ್ಲ.

ಈ ವಿಷಯದಲ್ಲಿ ರಾಮಾನುಜಾಚಾರ್ಯರು ಪ್ರಕೃತಿಶ್ಚ ಇತ್ಯಾದಿ ಸೂತ್ರಗಳಿಗೆ 'ಬ್ರಹ್ಮನು ಜಗತ್ತಿಗೆ ಉಪಾದಾನಕಾರಣ' ಎಂದು ವ್ಯಾಖ್ಯಾನ ಮಾಡಲು ನಾವು ಹೇಳಿದ ದೂಷಣಗಳಿಗೆ ಹೆದರಿ, ಸೂತ್ರತಾತ್ಪರ್ಯವನ್ನು ಹೀಗೆ ಹೇಳುತ್ತಾರೆ - ಪರಮಸೂಕ್ಷ್ಮವಾದ ಅಚಿದ್ರೂಪ ಪ್ರಧಾನವೇ ಶರೀರವಾಗುಳ್ಳವನು ಬ್ರಹ್ಮ. ಈ ವಿಷಯವು 'ಯೋಽವ್ಯಕ್ತೇ ತಿಷ್ಠನ್ನವ್ಯಕ್ತಂ ಶರೀರಂ' ಇತ್ಯಾದಿ ಶ್ರುತಿಗಳಿಂದ ಸಿದ್ಧವಾಗಿದೆ. ಬ್ರಹ್ಮಾಧಿಷ್ಠಿತವಾದ ಬ್ರಹ್ಮಾತ್ಮಕವಾದ ಪ್ರಧಾನವು ಜಗತ್ತಿಗೆ ಉಪಾದಾನ ಕಾರಣವಾಗಿರುವುದರಿಂದ ಬ್ರಹ್ಮನೇ ಜಗದುಪಾದಾನಕಾರಣನು ಎಂದು ಅಂಗೀಕರಿಸುತ್ತೇವೆ. ಬ್ರಹ್ಮನಿಗೆ ಜಗದ್ರೂಪವಾದ ವಿಕಾರವಿರುವುದಿಲ್ಲ. ಆದಕಾರಣ ನೀವು ಹಿಂದೆ ಹೇಳಿದ ದೋಷಗಳು ನಮ್ಮ ಸಿದ್ಧಾಂತಕ್ಕೆ ಬರುವುದಿಲ್ಲ ಎಂದು ಹೇಳಿದರೆ -

ಅಪಾದಾನತ್ವಮೇವಾಸ್ಯ ಯದ್ಯುಪಾದಾನತೇಷ್ಯತೇ ।
ಅಂಗೀಕೃತಂ ತತ್ಪಿತೃವನ್ .....॥

ಹೀಗೆ ಹೇಳುವ ಪಕ್ಷದಲ್ಲಿ, ಈ ಜಗದುತ್ಪತ್ತಿಯಲ್ಲಿ ಅಪಾದಾನಕಾರಣನಾದ ಬ್ರಹ್ಮನಿಗೇ, ಪುತ್ರನ ಜನನದಲ್ಲಿ ತಂದೆಯಂತೆ, ಉಪಾದಾನತ್ವವನ್ನು ಹೇಳುವುದಾದರೆ ಅಂಥಹ ಉಪಾದಾನತ್ವವು ನಮಗೆ ಅಂಗೀಕೃತವೇ ಆಗಿದೆ.

ಬ್ರಹ್ಮನಿಗೆ ಉಪಾದಾನತ್ವವನ್ನು ಅಂಗೀಕರಿಸುವುದಾದರೆ ಅದರ ನಿರಾಕರಣೆಯು ಹೇಗೆ ಕೂಡುವುದು ಎಂದು ಆಶಂಕಿಸಿದರೆ -

.....ನ ತು ವಿಶ್ವಾತ್ಮನಾ ಭವಃ ॥೬೩॥

ಶುದ್ಧಚೈತನ್ಯಸ್ವರೂಪನೇ ಆಗಿರುವ ಬ್ರಹ್ಮನಿಗೆ ಭಾಸ್ಕರಾದಿಗಳಿಂದ ಅಂಗೀಕೃತವಾಗಿರುವಂಥಹ ಜಗದಾತ್ಮಕವಾದ ಉತ್ಪತ್ತಿಯು ನಮ್ಮಿಂದ ಅಂಗೀಕರಿಸಲ್ಪಡುವುದಿಲ್ಲ. ಆದಕಾರಣ ಉಪಾದಾನತ್ವ ನಿರಾಕರಣೆಯು ಕೂಡುವುದು.

ಜಗದುಪಾದಾನವಾದ ಪ್ರಧಾನಕ್ಕೆ ಅಧಿಷ್ಠಾತೃವಾಗಿರುವುದರಿಂದ ಬ್ರಹ್ಮನಿಗೆ ಉಪಾದಾನಕಾರಣತ್ವವು ಎಂದು ರಾಮಾನುಜೀಯರು ಹೇಳುವ ಬ್ರಹ್ಮನ ಲಕ್ಷಣವು ನಾವು ಮಾಡುವ ಅರ್ಥಕ್ಕೆ ವಿರೋಧವೇನಲ್ಲ. ಆದರೆ ಇದು ಸೂತ್ರದಿಂದ ಪ್ರತಿಪಾದ್ಯವಾದ ಅರ್ಥವಲ್ಲ. ಜೊತೆಗೆ ಉಪಾದಾನಕ್ಕೆ ನಿಯಾಮಕನಾದವನೇ ಉಪಾದಾನನೆನ್ನುವ ವ್ಯವಹಾರವೂ ಲೋಕದಲ್ಲಿ ಇರುವುದಿಲ್ಲ. ಲೋಕದಲ್ಲಿ ವಿಕಾರವುಳ್ಳದ್ದನ್ನೇ ಉಪಾದಾನ ಎಂದು ಹೇಳುತ್ತಾರೆ. ಉಪಾದಾನನಿಯಾಮಕನನ್ನು ಉಪಾದಾನನೆಂದು ಹೇಳುವುದಿಲ್ಲ.

ತಂದೆಯು ಮಗನಿಗೆ ಉಪಾದಾನಕಾರಣನೇ ಆಗಿರುವುದರಿಂದ, ನೀವು ಕೊಟ್ಟಿರುವ 'ಪಿತೃವತ್' ಎನ್ನುವ ದೃಷ್ಟಾಂತವೇ ಯುಕ್ತವಾಗಲಾರದು ಎಂದು ಬ್ರಹ್ಮಪರಿಣಾಮವಾದಿಯು ಹೇಳುತ್ತಾನೆ. ಬ್ರಹ್ಮನು ಜಗತ್ಕಾರಣವೆನ್ನುವಲ್ಲಿ 'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ' 'ಪಿತಾಹಮಸ್ಯ ಜಗತೋ ಮಾತಾ' ಇತ್ಯಾದಿ ಶ್ರುತಿಯು ಊರ್ಣನಾಭಿಯ (ಜೇಡರ ಹುಳುವಿನ) ದೃಷ್ಟಾಂತವನ್ನು ತೆಗೆದುಕೊಂಡಿರುವುದರಿಂದ ಬ್ರಹ್ಮನಿಗೆ ಉಪಾದಾನ ಕಾರಣತ್ವವೇ ಇಲ್ಲಿ ವಿವಕ್ಷಿತ. ಜೇಡರ ಬಲೆಯ ತಂತುಗಳಿಗೆ ಜೇಡರ ಹುಳುವೇ ಉಪಾದಾನಕಾರಣವಾಗಿದೆ. ಈ ದೃಷ್ಟಾಂತದ ಆಧಾರದಿಂದ ಬ್ರಹ್ಮನೇ ಜಗತ್ತಿಗೆ ಪರಿಣಾಮಿಕಾರಣ ಎಂದು ಬ್ರಹ್ಮಪರಿಣಾಮಿವಾದಿಯು ಹೇಳಿದರೆ -

ನ ಚೋರ್ಣನಾಭಿಜನಿತೃಮಾತೃಣಾಂ ಚ ವಿಕಾರಿತಾ ।
ಚೇತನತ್ವಾತ್ತದನ್ನಂ ಹಿ ಕಾರ್ಯರೂಪತಯಾ ಭವೇತ್ ॥೬೪॥

ಚೇತನವಾದ್ದರಿಂದ ಜೇಡರ ಹುಳುವೇ ತಂತುವಾಗಿ ಪರಿಣಮಿಸುವುದಿಲ್ಲ. ಅದು ತಿಂದ ಆಹಾರವು ತಂತುವಿನ ರೂಪದಲ್ಲಿ ಪರಿಣಾಮ ಹೊಂದುವುದು. ಹಾಗೆಯೇ ತಾಯಿತಂದೆಯರೇ ಮಗುವಾಗಿ ವಿಕಾರ ಹೊಂದುವುದಿಲ್ಲ. ಅವರು

ತಿಂದ ಅನ್ನವು ಶರೀರದ ಧಾತುಗಳ ರೂಪದಲ್ಲಿ ಪರಿಣಾಮ ಹೊಂದಿ ಪುತ್ರಾದಿಗಳ ಅಚೇತನಾತ್ಮಕ ಶರೀರಕ್ಕೆ ಉಪಾದಾನಕಾರಣವಾಗುತ್ತದೆ. ತಂತುವಿಗೆ ಜೇಡರಹುಳುವು ನಿಮಿತ್ತಕಾರಣವಷ್ಟೆ. ಅದೇರೀತಿ ಪುತ್ರಾದಿಗಳ ಶರೀರದ ಉತ್ಪತ್ತಿಗೆ ತಂದೆತಾಯಿಯರು ನಿಮಿತ್ತಕಾರಣರಾಗುತ್ತಾರೆ.

ಪ್ರಲಯಕಾಲದಲ್ಲಿ ಪರಮೇಶ್ವರನು ಮಹದಾದಿ ಇಡೀ ಜಗತ್ತನ್ನು ನುಂಗಿ ಪ್ರಧಾನರೂಪದಲ್ಲಿ ತನ್ನ ಅಧೀನದಲ್ಲಿ ಇಟ್ಟುಕೊಂಡಿರುತ್ತಾನೆ. ಸೃಷ್ಟಿಯ ಕಾಲದಲ್ಲಿ ಬ್ರಹ್ಮನ ನಿಮಿತ್ತದಿಂದ ಅಂಥಹ ಪ್ರಧಾನವೇ ಮಹದಾದಿ ಕಾರ್ಯಗಳಿಗೆ ಉಪಾದಾನಕಾರಣವಾಗುವುದು. ಪಿತ್ರಾದಿ ದೃಷ್ಟಾಂತಗಳಿಗೆ ಇದೇ ಸರಿಯಾದ ಅರ್ಥವು. ಆದಪ್ರಯುಕ್ತ ಬ್ರಹ್ಮನು ವಿಶ್ವಾತ್ಮನಾ ಪರಿಣಾಮ ಹೊಂದುವುದಿಲ್ಲ ಎಂಬುದೇ ಸರಿಯಾದ ಸಿದ್ಧಾಂತ.

ಬ್ರಹ್ಮನಿಗೆ ಅಪಾದಾನಕಾರಣತ್ವ ಸಮರ್ಥನೆ

ಈ ಪ್ರಕಾರವಾಗಿ ಶ್ರುತಿ ಪುರಾಣ ಹಾಗೂ ಯುಕ್ತಿಗಳಿಂದ ಬ್ರಹ್ಮನು ನಿರ್ವಿಕಾರನೆಂದು ತಿಳಿದುಬರುವುದರಿಂದ ಜಗತ್ತಿಗೆ ಉಪಾದಾನಕಾರಣ ಎನ್ನುವುದು ಕೂಡುವುದಿಲ್ಲ. ಶ್ರುತಿ-ಸ್ಮೃತಿ-ಪುರಾಣ-ಯುಕ್ತಿಗಳಿಂದ ಬ್ರಹ್ಮನು ನಿಮಿತ್ತಕಾರಣನೆಂದೇ ಪ್ರತೀತವಾಗುವುದೆಂದು ತಿಳಿಸುತ್ತಾರೆ –

ಅಪಾದಾನತಯಾ ವಿಶ್ವಕರ್ತೃತ್ವಂ ಬುದ್ಧಿಪೂರ್ವಕಂ ।
ಉಕ್ತಂ ಭಾಲ್ಲವಶಾಖಾಯಾಂ ಬ್ರಹ್ಮತರ್ಕೇ ಚ ಸಾದರಂ ॥೬೫॥

ಬ್ರಹ್ಮನು ಕುಂಬಾರನಂತೆ ತಟಸ್ಥನಾದ ಕರ್ತನಲ್ಲ. ಅಶೇಷ ವಿಶೇಷಜ್ಞಾನ ಪೂರ್ವಕವಾಗಿ ಅಪಾದಾನತ್ವರೂಪದಲ್ಲಿ ಬ್ರಹ್ಮನಿಗೆ ವಿಶ್ವಕರ್ತೃತ್ವವು ಭಾಲ್ಲವ ಶಾಖೆಯಲ್ಲಿಯೂ, ಬ್ರಹ್ಮತರ್ಕದಲ್ಲಿಯೂ ಆದರಪೂರ್ವಕವಾಗಿ ಹೇಳಲ್ಪಟ್ಟಿದೆ.

ವಿವರಣೆ:

ಮಣ್ಣಿನ ಒಂದು ರಾಶಿಯಿಂದ ಮಡಿಕೆಯುಂಟಾದಾಗ ಅಲ್ಲಿರುವ ಮಣ್ಣೆಲ್ಲ ಪೂರ್ತಿಯಾಗಿ ಮಡಿಕೆಯಾಗುವುದಿಲ್ಲ. ಆ ಮಣ್ಣಿನ ರಾಶಿಯ ಒಂದು ಭಾಗ ಮಾತ್ರ ಮಡಿಕೆಯಾಗಿ ರೂಪುಗೊಳ್ಳುತ್ತದೆ. ಇನ್ನೊಂದು ಭಾಗ ಮಣ್ಣಾಗಿಯೇ ಉಳಿಯುತ್ತದೆ. ಮಣ್ಣಿನ ರಾಶಿಯಿಂದ ಒಂದು ಭಾಗ ಪ್ರತ್ಯೇಕಗೊಂಡು ಮಡಿಕೆಯಾದಾಗ, ಮಣ್ಣೇ ಮಡಿಕೆಯಾಯಿತು ಅಥವಾ ಮಣ್ಣಿನಿಂದ

ಮಡಿಕೆಯಾಗಿದೆ ಎಂಬುದಾಗಿ ಎರಡು ರೀತಿಯಲ್ಲಿ ವ್ಯವಹಾರ ಮಾಡುತ್ತೇವೆ. ಮಡಿಕೆಯಾಗಿ ಪರಿಣಾಮ ಹೊಂದಿದ ಮಣ್ಣಿನ ಭಾಗವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಮಣ್ಣೇ ಮಡಿಕೆಯಾಯಿತೆಂದು ಹೇಳುತ್ತೇವೆ. ಮಡಿಕೆಯಾಗಿ ಪರಿವರ್ತನೆಗೊಳ್ಳದೆ ಹಾಗೆಯೇ ಉಳಿದ ಮಣ್ಣಿನ ಭಾಗವನ್ನು ಮನಸ್ಸಿನಲ್ಲಿಟ್ಟುಕೊಂಡು ಮಣ್ಣಿನಿಂದ ಮಡಿಕೆಯಾಗಿದೆ ಎನ್ನುತ್ತೇವೆ. ಮಡಿಕೆಯಾಗಿ ಪರಿವರ್ತನೆಯಾದ ಮಣ್ಣು ಮಡಿಕೆಯಿಂದ ಪ್ರತ್ಯೇಕ ಅಸ್ತಿತ್ವವನ್ನು ಪಡೆದಿರುವುದಿಲ್ಲ. ಹೀಗೆ ಮಡಿಕೆಯ ಮೂಲದ್ರವ್ಯವಾದ ಮಣ್ಣಿನ ಭಾಗವು ಮಡಿಕೆಯ ಉತ್ಪತ್ತಿಯಲ್ಲಿ **ಉಪಾದಾನಕಾರಣ** ಎನಿಸುತ್ತದೆ. ಪರಿವರ್ತನೆಯಾಗದೆ ಉಳಿದ ಮಣ್ಣಿನ ಭಾಗವು ತನ್ನಿಂದ ಮಡಿಕೆಯು ವಿಭಜನೆಗೊಳ್ಳಲು ಅವಧಿಯಾಗಿದೆ. ಮಡಿಕೆಯಿಂದ ಬೇರೆಯೇ ಆಗಿದ್ದು ಮಡಿಕೆಯ ಉತ್ಪತ್ತಿಗೆ ಅವಧಿಯಾಗಿರುವ ಈ ಮಣ್ಣಿನ ಭಾಗವನ್ನು **ಅಪಾದಾನ ಕಾರಣ** ಎಂದು ಹೇಳುತ್ತಾರೆ. ಈ ಅಪಾದಾನ ಮತ್ತು ಉಪಾದಾನಗಳೆರಡೂ ಬೇರೆಯೇ ಆಗಿವೆ. ಇದೇ ಪ್ರಕಾರವಾಗಿ ಪ್ರಧಾನ ಅಥವಾ ಪ್ರಕೃತಿಯಿಂದ ಜಗತ್ತು ಸೃಷ್ಟಿಗೊಳ್ಳುವಾಗಲೂ ಎರಡು ಭಾಗವನ್ನು ಸ್ವೀಕರಿಸಬೇಕು. ಜಗತ್ತಿನ ಮೂಲದ್ರವ್ಯವಾದ ಪ್ರಕೃತಿಯು ಪೂರ್ತಿಯಾಗಿ ಜಗತ್ತಾಗಿ ರೂಪುಗೊಂಡಿದ್ದರೆ ಪ್ರಕೃತಿಯೇ ಇಲ್ಲದಂತಾಗುವುದು. ಆದರೆ ಹಾಗಾಗುವುದಿಲ್ಲ. ಜಗತ್ತಾಗಿ ಪರಿಣಾಮಗೊಳ್ಳದ ಜಡಪ್ರಕೃತಿಯ ಒಂದು ಭಾಗವು ಹಾಗೆಯೇ ಉಳಿಯುತ್ತದೆ. ಉಳಿದ ಭಾಗವು ಜಗತ್ತಾಗಿ ಪರಿಣಾಮ ಹೊಂದುತ್ತದೆ. ಜಗತ್ತು ಪ್ರತ್ಯೇಕಗೊಳ್ಳಲು ಅವಧಿಯಾದ ಪ್ರಕೃತಿಯ ಭಾಗವು ಜಗತ್ತಿಗೆ ಅಪಾದಾನವಾದರೆ, ಪರಿಣಾಮಗೊಂಡ ಭಾಗವು ಜಗತ್ತಿಗೆ ಮೂಲದ್ರವ್ಯವಾದ ಉಪಾದಾನ ವಸ್ತು. ಅದೇ ಜಗತ್ತಾಗಿ ಪರಿಣಾಮಗೊಂಡಿದೆ. ಉಳಿದ ಭಾಗದಿಂದ ಪ್ರತ್ಯೇಕಗೊಂಡು ಜಗತ್ತು ರೂಪುಗೊಂಡಿದೆ. ಈ ರೀತಿ ಪ್ರಕೃತಿಯಿಂದಲೇ ಜಗತ್ತು ಸೃಷ್ಟಿಯಾಗಿದೆ ಎನ್ನುವುದಾದರೆ, ಪರಮಾತ್ಮನಿಂದ ಜಗತ್ತು ಹುಟ್ಟಿತು ಎನ್ನುವ ವೇದವಾಕ್ಯಗಳಿಗೆ ಅರ್ಥವೇನು? ಜಗತ್ತಿನ ಉತ್ಪತ್ತಿಯಲ್ಲಿ ಭಗವಂತನ ಪಾತ್ರವೇನು? ಎನ್ನುವ ಪ್ರಶ್ನೆಗಳು ಉದ್ಭವ ವಾಗುತ್ತವೆ. ಈ ಪ್ರಶ್ನೆಗಳಿಗೆ ಶ್ರೀಮದಾಚಾರ್ಯರು ಅತ್ಯಂತ ಸೂಕ್ತವಾದ

ರೀತಿಯಲ್ಲಿ ವೇದಸಮ್ಮತವಾದ ವಿವರಣೆ ನೀಡಿದ್ದಾರೆ. ಪರಮಾತ್ಮನು ಪ್ರಕೃತಿಯ ಎರಡು ಭಾಗಗಳಲ್ಲಿಯೂ ನೆಲೆಸಿ, ಅದರ ಒಂದು ಭಾಗವು ಜಗತ್ತಾಗಿ ಪರಿಣಾಮಗೊಳ್ಳುವಂತೆ ಮಾಡುತ್ತಾನೆ. ಪ್ರಕೃತಿಯಿಂದ ಭಿನ್ನನಾಗಿ ಪ್ರಕೃತಿಯಲ್ಲಿ ನಿಂತು ಈ ಕಾರ್ಯವನ್ನು ಮಾಡುತ್ತಾನೆ. ವಿಶ್ವದ ಸೃಷ್ಟಿಯ ವ್ಯಾಪಾರದಲ್ಲಿ ಪರಮಾತ್ಮನನ್ನು ತಂದೆಗೆ ಹೋಲಿಸಬಹುದು. ತಂದೆಯ ಶರೀರದಿಂದ ಒಂದು ಚಿಕ್ಕ ತುಣುಕು (ವೀರ್ಯ) ಪ್ರತ್ಯೇಕಗೊಂಡು ಮಗುವಿನ ದೇಹವಾಗಿ ಪರಿಣಾಮಗೊಳ್ಳುತ್ತದೆ. ಆ ದೇಹದಿಂದ ಭಿನ್ನನಾಗಿದ್ದರೂ ಅದರಲ್ಲಿ ಅಧಿಷ್ಠಿತನಾಗಿ ತಂದೆಯು ಮಗುವಿನ ಉತ್ಪತ್ತಿಗೆ ನಿಮಿತ್ತಕಾರಣನೆನಿಸುವನು. ತಂದೆಯ ದೇಹದ ಭಾಗವಾದ ವೀರ್ಯವು ಮಗುವಿನ ದೇಹದ ಮೂಲದ್ರವ್ಯವಾಗಿ ಉಪಾದಾನಕಾರಣವೆನಿಸುವುದು. ಈ ಮೂಲದ್ರವ್ಯವು ಪ್ರತ್ಯೇಕಗೊಳ್ಳಲು ಅವಧಿಯಾದ ತಂದೆಯ ಶರೀರವು ಅಪಾದಾನವಾಗಿದೆ. ವೀರ್ಯದ ಅಧಿಷ್ಠಾತೃವಾದ ತಂದೆಯು ಮಗುವಿನ ಸೃಷ್ಟಿಕರ್ತನೆನಿಸುವನು. ಜಗತ್ತಿನ ಸೃಷ್ಟಿಯಲ್ಲಿ ಭಗವಂತನ ಪಾತ್ರವೂ ಇದೇ ಆಗಿದೆ. ಪರಬ್ರಹ್ಮನು ಸಕಲಜಗತ್ಕಾರಣ ಎನ್ನುವುದು ಈ ಅರ್ಥದಲ್ಲಿಯೇ. ಪ್ರಧಾನವು ಉಪಾದಾನಕಾರಣವೆಂದೂ ಭಗವಂತನು ಮೇಲೆ ಹೇಳಿದ ರೀತಿಯಲ್ಲಿ ನಿಮಿತ್ತಕಾರಣನೆಂದೂ ತಿಳಿಯಬೇಕು.

ಒಟ್ಟಿನಲ್ಲಿ ಹೇಳುವುದಾದರೆ, ಸಕಲ ಕಾರ್ಯಕ್ರಿಯಾಕಾರಕ ಫಲವಿಷಯಕ ಬುದ್ಧ್ಯಾದಿಯುಳ್ಳ ಪರಬ್ರಹ್ಮನು ಕುಂಬಾರನಂತೆ ಬಾಹ್ಯರೂಪದಿಂದ ಅನುಗ್ರಹ ಮಾಡುತ್ತ, ಪ್ರಧಾನಾದಿಗಳ ಒಳಗೆ ಅಂತರ್ಯಾಮಿರೂಪದಿಂದ ಪರಿಣಾಮಾದಿ ಶಕ್ತಿಗಳನ್ನು ಪ್ರೇರಿಸುತ್ತ, ತನ್ನ ಶರೀರರೂಪಕ ಪ್ರಧಾನಾದಿ ಪರಿಣಾಮಭೂತ ಮಹದಾದಿ ಕಾರ್ಯಗಳು ವ್ಯಕ್ತಗೊಳ್ಳುವುದಕ್ಕೆ ಅವಧಿಯಾಗುತ್ತಾನೆ.

ಮೇಲೆ ಹೇಳಿದ ವಿಷಯವನ್ನೇ ವಿವರಿಸುತ್ತಾರೆ -

ಇಚ್ಛಾಮಾತ್ರಾತ್ಪ್ರಭೋಃ ಸೃಷ್ಟಿರವಿಕಾರಸ್ಯ ಸರ್ವದಾ ।
ಸ್ವಭಾವೋಽಯಮನಂತಸ್ಯ ರಜೋ ಯೇನಾಭವಜ್ಜಗತ್ ॥೬೬॥
ಸ್ವದೇಹಾದಿಚ್ಛಯಾ ವಿಶ್ವಂ ಭುಕ್ತಪೂರ್ವಂ ಜನಾರ್ದನಃ ।
ಸಸರ್ಜ ಮಾತಾಪಿತೃವದೂರ್ಣನಾಭವದೇವ ವಾ ॥೬೭॥

ಪ್ರಧಾನಂ ಪರಿಣಾಮ್ಯೇಶೋ ನಿರ್ವಿಕಾರಃ ಸ್ವಯಂ ಸದಾ ।
ನ ಚೇತನವಿಕಾರಃ ಸ್ಯಾದ್ಕ್ವತ್ರ ಕ್ವಾಪಿ ಹ್ಯಚೇತನಂ ॥೬೮॥
ನಾಚೇತನವಿಕಾರೋಽಪಿ ಚೇತನಃ ಸ್ಯಾತ್ಕದಾಚನ ।
ನ ಚಾನ್ಯಸ್ಯಾನ್ಯರೂಪತ್ವಂ ವಿಕೃತತ್ವೇಽಪಿ ದೃಶ್ಯತೇ ॥೬೯॥
ನ ಕ್ಷೀರಾದನ್ಯಥಾ ದಧ್ನಃ ಕೇನಚಿದ್ದೃಶ್ಯತೇ ಕ್ವಚಿತ್ ।
ಸರ್ವಜ್ಞಾದ್ಬ್ರಹ್ಮಣೋಽನ್ಯತ್ವಂ ಜಗತೋ ಹ್ಯನುಭೂಯತೇ ॥೭೦॥

ಸರ್ವಸ್ವಾಮಿಯಾದ ಶ್ರೀಹರಿಯು ಯಾವಾಗಲೂ ನಿರ್ವಿಕಾರನು. ಕೇವಲ ಇಚ್ಛೆಯಿಂದಲೇ ಅವನ ಸೃಷ್ಟಿಯು. ಈ ಸೃಷ್ಟಿಯು ಪರಿಣಾಮಿ ಕಾರಣದಿಂದಲ್ಲ ಎಂದು ತಿಳಿಸುವ ಸಲುವಾಗಿ ಇಚ್ಛಾಮಾತ್ರ ಎಂದು ಹೇಳಲಾಗಿದೆ. ಈ ಸೃಷ್ಟಿಯು ಅನಂತ ಶಬ್ದವಾಚ್ಯನಾದ ಶ್ರೀಹರಿಯ ಸ್ವಭಾವವೇ ಆಗಿದೆ. ರಜಸ್ ಶಬ್ದದಿಂದ ಉಪಲಕ್ಷಿತವಾದ ತ್ರಿಗುಣಾತ್ಮಕವಾದ ಪ್ರಧಾನವು ಜಗದ್ರೂಪವಾಗಿ ಪರಿಣಮಿಸಿತು. ಪ್ರಲಯಕಾಲದಲ್ಲಿ ಸೂಕ್ಷ್ಮರೂಪದಿಂದ ತನ್ನ ಉದರದಲ್ಲಿ ಸಂರಕ್ಷಿಸಿದ್ದ ವಿಶ್ವವನ್ನು, ಶ್ರೀಹರಿಯು ಸೃಷ್ಟಿಕಾಲದಲ್ಲಿ ಪ್ರಧಾನವನ್ನು ಉಪಾದಾನವನ್ನಾಗಿ ಮಾಡಿಕೊಂಡು, ಸಚ್ಚಿದಾನಂದಾತ್ಮಕವಾದ ತನ್ನ ದೇಹದ ದೆಶೆಯಿಂದ ಸ್ವೇಚ್ಛೆಯಿಂದ ಅವಧಿಭೂತವಾದ ಸ್ಥೂಲರೂಪದಿಂದ ಅಭಿವ್ಯಕ್ತಿಗೊಳಿಸಿದನು. ಯಾವಾಗಲೂ ನಿರ್ವಿಕಾರನಾದ ಶ್ರೀಹರಿಯು ಈ ಜಗತ್ತಿನ ಸೃಷ್ಟಿಗೆ ನಿಮಿತ್ತಕಾರಣನು, ಪ್ರಧಾನವೇ ಉಪಾದಾನಕಾರಣವು. ಮಗುವಿನ ಶರೀರಕ್ಕೆ ತಂದೆತಾಯಿಗಳಂತೆ, ಜೇಡರ ಬಲೆಯ ತಂತುಗಳಿಗೆ ಜೇಡರ ಹುಳುವಿನಂತೆ, ಶ್ರೀಹರಿಯ ಸೃಷ್ಟಿಯು. ಎಂದಿಗೂ ಎಲ್ಲಿಯೂ ಅಚೇತನವು ಚೇತನದ ವಿಕಾರವಾಗಲು ಸಾಧ್ಯವಿಲ್ಲ. ಹಾಗೆಯೇ ಚೇತನವೂ ಅಚೇತನದ ವಿಕಾರವಾಗುವುದು ಅಸಂಭವ. ಒಂದು ವಸ್ತುವಿಗೆ ಮತ್ತೊಂದು ವಸ್ತುವಿನ ವಿಕಾರತ್ವವು ಎಲ್ಲಿಯೂ ಕಂಡುಬರುವುದಿಲ್ಲ. ಹಾಲು ಮೊಸರಾದಾಗ ಇವೆರಡೂ ಬೇರೆ ಬೇರೆಯಾಗಿ ನಮಗೆ ಕಾಣುವುದಿಲ್ಲ. ವಿಕಾರ-ವಿಕಾರಿಗಳು ಪರಸ್ಪರ ವಿಭಿನ್ನಗಳಾಗಿ ಕಂಡುಬರುವುದಿಲ್ಲ. ಹಾಲು ಮೊಸರಾದಂತೆ ಬ್ರಹ್ಮನು ಜಗತ್ತಾಗಿ ಪರಿಣಮಿಸಿದರೆ ಒಂದೇ ಕಾಲದಲ್ಲಿ ಬ್ರಹ್ಮ, ಜಗತ್ತು ಇವೆರಡು ನಮಗೆ ತೋರಲು ಸಾಧ್ಯವಿಲ್ಲ. ಈ ಜಗತ್ತು

ಸರ್ವಜ್ಞನಾದ ಪರಮಾತ್ಮನಿಂದ ಸದಾ ಭಿನ್ನವಾಗಿಯೇ ತಿಳಿಯಲ್ಪಡುವುದು. ಆದ್ದರಿಂದ ಈ ಜಗತ್ತು ಪರಮಾತ್ಮನ ವಿಕಾರವಲ್ಲ. ಆದಪ್ರಯುಕ್ತ ಪರಮಾತ್ಮನು ಜಗತ್ತಿಗೆ ನಿಮಿತ್ತಕಾರಣನೇ ಹೊರತು ಉಪಾದಾನಕಾರಣನಲ್ಲ ಎಂದು ಸಿದ್ಧವಾಗುವುದು.

ಹಾಗಾದರೆ 'ಜಗತ್ ಬ್ರಹ್ಮಣಾऽಭಿನ್ನಂ ಸತ್ವಾತ್ ಬ್ರಹ್ಮವತ್' ಎನ್ನುವ ಅನುಮಾನದಿಂದ ಅಭೇದವು ಸಿದ್ಧವಾಗುವುದು ಎಂದರೆ –

ಅಭೇದಃ ಸತ್ವಮಾತ್ರೇಣ ಸ್ಯಾತ್ಸರ್ವಸ್ವರ್ಣಯೋರಪಿ ॥೭೧॥

ಸತ್ತಾಮಾತ್ರದಿಂದ ಬ್ರಹ್ಮನಿಗೂ ಜಗತ್ತಿಗೂ ಅಭೇದವು ಸಾಧಿಸುವುದಾದರೆ ಅದೇ ರೀತಿಯ ಹೇತುವಿನಿಂದ ಕಬ್ಬಣಕ್ಕೂ ಬಂಗಾರಕ್ಕೂ ಅಭೇದವು ಬರಬೇಕಾಗುವುದು.

ಬ್ರಹ್ಮನಲ್ಲಿ ಎರಡು ಭಾಗಗಳಿವೆ. ಒಂದು ಭಾಗವು ಚಿನ್ಮಯವಾಗಿ ನಿರ್ವಿಕಾರವಾಗಿ ಯಾವಾಗಲೂ ಇರುವುದು. ಇದೇ ಜಗತ್ತಿನ ಕರ್ತೃವಾಗಿದೆ. ಇನ್ನೊಂದು ಭಾಗವು ಮಾತ್ರ ಜಗತ್ತಾಗಿ ಪರಿಣಾಮಗೊಳ್ಳುವ ಜಗತ್ತಿನ ಮೂಲದ್ರವ್ಯವೆನಿಸಿದೆ. ಹೀಗೆ ಎರಡು ಭಾಗಗಳಿರುವುದರಿಂದ ಸಂಸಾರದಲ್ಲಿ ಬ್ರಹ್ಮ, ಜಗತ್ತು ಎರಡನ್ನೂ ಗ್ರಹಿಸಿಕೊಂಡು ಉಪಾಸನೆ ಆರಾಧನೆಗಳನ್ನು ಮಾಡುವುದು ಸಾಧ್ಯವೆಂದು ಹೇಳಿದರೆ –

ಭಾಗೇನ ಪರಿಣಾಮಶ್ಚೇದ್ಭಾಗಯೋರ್ಭೇದ ಏವ ಹಿ ।
ಯೋ ಭಾಗೋ ನ ವಿಕಾರೀ ಸ್ಯಾತ್ಸ ಏವಾಸ್ಮಾಕಮೀಶ್ವರಃ ॥೭೨॥

ಬ್ರಹ್ಮನ ಸದ್ಭಾಗದಿಂದ ಪರಿಣಾಮವೆಂದು ಅಂಗೀಕರಿಸುವುದಾದರೆ ಚಿದ್ಭಾಗಕ್ಕೆ ನಿರ್ವಿಕಾರತ್ವವನ್ನು ಒಪ್ಪಬೇಕಾಗುವುದು. ಎರಡು ಭಾಗಗಳಿಗೆ ಭೇದವೇ ಪ್ರಾಪ್ತವಾಗುವುದು. ಯಾವ ಭಾಗವು ವಿಕಾರ ಹೊಂದಿಲ್ಲವೋ ಆ ಭಾಗವೇ ನಮ್ಮ ಪರಮೇಶ್ವರನು.

ವಿವರಣೆ: ಪರಿಣಾಮಗೊಂಡಿರುವ ಭಾಗವೂ ಪರಿಣಾಮಗೊಳ್ಳದ ನಿರ್ವಿಕಾರವಾದ ಇನ್ನೊಂದು ಭಾಗವೂ ಒಂದೇ ಆಗಿರಲು ಸಾಧ್ಯವಿಲ್ಲ. ಪೂರ್ತಿಯಾಗಿ ಇವೆರಡು ಭಾಗಗಳೂ ಬೇರೆ ಬೇರೆಯೇ ಆಗಿದ್ದರೆ ಇವೆರಡೂ ಪ್ರತ್ಯೇಕವಾದ ವಸ್ತುಗಳೇ ಆಗುತ್ತವೆ. ಅವುಗಳನ್ನು ನಾವು ಭಾಗಗಳೆಂದು

ಕರೆಯುವುದರಲ್ಲಿ ಅರ್ಥವಿಲ್ಲ. ನಿರ್ವಿಕಾರವಾದ ಚೇತನ ವಸ್ತುವು ವಿಶ್ವದ ಕರ್ತೃವಾಗಿದ್ದರೆ ಅದಕ್ಕಿಂತ ಬೇರೆಯಾದ ಇನ್ನೊಂದು ವಸ್ತುವೇ ಜಗತ್ತಾಗಿ ಪರಿಣಾಮ ಹೊಂದುವುದು ಎಂದೇ ಹೇಳಿದಂತಾಯಿತು. ಇದರಿಂದ ವಿಶ್ವದ ಕರ್ತೃವೂ, ವಿಶ್ವದ ಉಪಾದಾನವಾದ ಮೂಲದ್ರವ್ಯವೂ ಬೇರೆ ಬೇರೆ ಎಂಬ ಸಿದ್ಧಾಂತವನ್ನೇ ಹೇಳಿದಂತಾಯಿತು. ಇದು ನಮಗೆ ಒಪ್ಪಿಗೆಯೇ ಆಗಿದೆ.

ಸದ್ರೂಪದಿಂದ ಬ್ರಹ್ಮನು ಉಪಾದಾನಕಾರಣನು, ಚಿದ್ರೂಪದಿಂದ ನಿಮಿತ್ತ ಕಾರಣನು ಎಂದು ಹೇಳುವುದು ಸರಿಯಲ್ಲ. ಸತ್ ಚಿತ್ ಆನಂದ ಇವೇ ಮೊದಲಾದ ಚೈತನ್ಯರೂಪಗಳ ಸಮುದಾಯವೇ ಬ್ರಹ್ಮ ಎಂದು ನಾವು ಹೇಳುತ್ತೇವೆ. ಒಂದು ಭಾಗವು ಬ್ರಹ್ಮ ಮತ್ತೊಂದು ಭಾಗವು ಬ್ರಹ್ಮನಲ್ಲ ಎನ್ನುವುದು ಕೂಡುವುದಿಲ್ಲ ಎಂದು ಹೇಳಿದರೆ –

ಭಿನ್ನಾನಾಂ ಸಮುದಾಯಸ್ಯ ನಾಮ ಬ್ರಹ್ಮೇತಿ ಚೇದ್ಭವೇತ್ ।
ಬ್ರಹ್ಮೋಪಾದಾನತಾ ನ ಸ್ಯಾತ್ತದಾ ವಿಶ್ವಸ್ಯ ಹಿ ಕ್ವಚಿತ್ ॥೭೩॥

ಭಿನ್ನಗಳಾದ ಭಾಗಗಳ ಸಮೂಹಕ್ಕೆ ಬ್ರಹ್ಮ ಎನ್ನುವ ನಾಮಧೇಯವು ಇರುವುದಾದರೆ, ಆಗ ಜಗತ್ತಿಗೆ ಬ್ರಹ್ಮನು ಉಪಾದಾನಕಾರಣನೆನ್ನುವುದು ಯಾವ ರೀತಿಯಿಂದಲೂ ಕೂಡದೇ ಹೋಗುವುದು. ಅದೇರೀತಿ ಒಂದೊಂದು ಭಾಗಕ್ಕೂ ಬ್ರಹ್ಮ ಎನ್ನುವ ನಾಮಧೇಯವಿಲ್ಲವೆಂದರೆ ನಿಮಿತ್ತಕಾರಣವೂ ಕೂಡುವುದಿಲ್ಲ.

'ಅಪಾದಾನೇ ಪಂಚಮೀ' ಎನ್ನುವ ಸೂತ್ರದಿಂದ ಅಪಾದಾನದಲ್ಲಿ ಪಂಚಮಿಯು ವಿಹಿತವಾಗಿದೆ. 'ಜನಿಕರ್ತುಃ ಪ್ರಕೃತಿಃ' ಎನ್ನುವ ಸ್ಮೃತಿಯಿಂದ ಉಪಾದಾನವು ಅಪಾದಾನದ ವಿಶೇಷ ಎಂದು ತಿಳಿದುಬರುವುದು. ಆದಕಾರಣ ಪಂಚಮಿಯು ಉಪಾದಾನಾರ್ಥದಲ್ಲಿಯೂ ವಿಹಿತವಾಗುವುದು. ನಿಯಮೇನ ಅಪಾದಾನಕ್ಕೆ ಉಪಾದಾನತ್ವವು ಸಿದ್ಧಿಸುವುದರಿಂದ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ವಾಕ್ಯಗಳಲ್ಲಿ ಜಾಯಂತೇ ಇತ್ಯಾದಿ ಜನಿವಾಚಕ ಪದಗಳಿಂದ ಅಪಾದಾನ ವಿಶೇಷ, ಅಂದರೆ ಉಪಾದಾನತ್ವವನ್ನೇ ಸ್ವೀಕರಿಸಬೇಕೆಂದರೆ –

ಶೃಂಗಾಚ್ಛರೋಽಏಲೋಮಭ್ಯೋ ದೂರ್ವಾ ಗೋಮಯತಸ್ತಥಾ ।

ವೃಶ್ಚಿಕಶ್ಚೇತ್ಯೇವಮಾದ್ಯೇಷ್ವಪಾದಾನತ್ವಮಿಷ್ಯತೇ ॥೭೪॥

ಕೋಡಿನ ದೆಶೆಯಿಂದ ಶರ ಎಂಬ ತೃಣವಿಶೇಷವು, ಮೇಷ ರೋಮಗಳ ದೆಶೆಯಿಂದ ಗರಿಕೆ ಹುಲ್ಲು, ಗೋಮಯದ ದೆಶೆಯಿಂದ ಚೇಳು, ಇವೇ ಮೊದಲಾದ ಪಂಚಮಿಯಿಂದ ಹೇಳಲ್ಪಟ್ಟ ಉದಾಹರಣಪೂರ್ವಕ ವಾಕ್ಯಗಳಲ್ಲಿ ಶೃಂಗಾದಿಗಳಿಗೆ ಶರಾದಿಗಳನ್ನು ಕುರಿತು ಅಪಾದಾನತ್ವವೇ ಅಂಗೀಕರಿಸಲ್ಪಟ್ಟಿದೆ. ಏಕೆಂದರೆ ಕೋಡು ಅಥವಾ ರೋಮವೇ ಹುಲ್ಲಾಗಿ ಪರಿಣಮಿಸುವುದು, ಸೆಗಣಿಯೇ ಚೇಳಾಗುವುದು ಎಂದಿಗೂ ಸಾಧ್ಯವಿಲ್ಲ. ಆದಕಾರಣ ಈ ದೃಷ್ಟಾಂತವಾಕ್ಯಗಳಲ್ಲಿ ಪಂಚಮಿಯು ಉಪಾದಾನಾರ್ಥದಲ್ಲಿ ಪ್ರಯೋಗವಾಗಿಲ್ಲ. ಇದನ್ನೇ ವಿಸ್ತರಿಸುತ್ತಾರೆ –

ಉಪಾದಾನೈಕದೇಶತ್ವಂ ಯದ್ಯಪ್ಯತ್ರ ಪ್ರದೃಶ್ಯತೇ ।
ಅಪ್ಯಪಾದಾನತೈವಾತ್ರ ದೃಷ್ಟಾಂತೋ ಬ್ರಹ್ಮಣೋ ಭವೇತ್ ॥೭೫॥
ನ ಹ್ಯುಪಾದಾನತೈವಾತ್ರ ಬಾಹ್ಯಾವಯವಗೌರವಾತ್ ।

ಈ ಶೃಂಗಾದಿಗಳಲ್ಲಿ ಏಕದೇಶದಿಂದ ಶರಾದಿಗಳಿಗೆ ಉಪಾದಾನತ್ವವು ತೋರುವುದಾದರೂ, ಇವು ಬ್ರಹ್ಮನ ವಿಷಯದಲ್ಲಿ ಪಂಚಮ್ಯರ್ಥದಲ್ಲಿ ಅಪಾದಾನತ್ವವನ್ನು ಪ್ರತಿಪಾದಿಸುವ ಉದಾಹರಣೆಗಳೇ ಆಗಿವೆ. ಇಲ್ಲಿ ಉಪಾದಾನತ್ವವನ್ನು ಹೇಳಕೂಡದು. ಶೃಂಗದಿಂದ ಹುಟ್ಟಿಕೊಂಡ ಹುಲ್ಲುಗಳಿಗೆ ಬಹುತ್ವವಿರುವುದರಿಂದ ಹಾಗೂ ಉತ್ಪತ್ತಿಯ ನಂತರವೂ ಅವು ಶೃಂಗದಿಂದ ಭಿನ್ನವಾಗಿಯೇ ತೋರುವುದರಿಂದ ಇಲ್ಲಿ ಶೃಂಗಾತ್ ಎನ್ನುವ ಪಂಚಮ್ಯರ್ಥಕ ಪ್ರಯೋಗವು ಕೂಡುತ್ತದೆ.

ಗೋಮಯದಿಂದ ಚೇಳಿನ ಉತ್ಪತ್ತಿಯು ಹೇಳಲ್ಪಟ್ಟಿರುವುದರಿಂದ, ಚೇತನವು ಅಚೇತನದ ವಿಕಾರವಾಗುವುದು ಸಾಧ್ಯವಿಲ್ಲ ಎಂದು ನೀವು ಹೇಳಿದ್ದು ಕೂಡುವುದಿಲ್ಲ ಎಂದರೆ –

ನ ಚಾಚೇತನತಸ್ತತ್ರ ಚೇತನಸ್ಯ ಸಮುದ್ಭವಃ ॥೭೬॥
ಉಪಾದಾನತಯಾ ಕಿಂ ತರ್ಹ್ಯಪಾದಾನಂ ಹ್ಯಚೇತನಂ ।
ಕಾರ್ಯದೇಹಗತಸ್ಯಾಸ್ಯ ಚೇತನಸ್ಯ ಪ್ರದೃಶ್ಯತೇ ॥೭೭॥

ಅಚೇತನದ ದೆಶೆಯಿಂದ ಚೇತನದ ಉತ್ಪತ್ತಿಯು ಇಲ್ಲವೇ ಇಲ್ಲ.

ಆದರೂ ನಾವು ಕಾರಣತ್ವವನ್ನು ಪೂರ್ತಿಯಾಗಿ ನಿಷೇಧಿಸುವುದಿಲ್ಲ. ಕಿಂತು ಉಪಾದಾನಕಾರಣತ್ವವನ್ನು ಮಾತ್ರ ನಿಷೇಧಿಸುತ್ತೇವೆ. ಅಚೇತನವಾದ ಗೋಮಯಾದಿಗಳು ವೃಶ್ಚಿಕಾದಿಗಳಿಗೆ ಏಕದೇಶದಿಂದ ಉಪಾದಾನವೂ ಏಕದೇಶದಿಂದ ಅಪಾದಾನವೂ ಆಗಿರುತ್ತವೆ. ಹೇಗೆಂದರೆ, ಅಚೇತನವಾದ ಶರೀರಕ್ಕೆ ಉಪಾದಾನಕಾರಣವಾಗಿದ್ದರೆ, ಆ ಶರೀರದಲ್ಲಿನ ಚೇತನದ ಉತ್ಪತ್ತಿಗೆ ಅಪಾದನಕಾರಣವಾಗಿರುತ್ತವೆ.

ಈ ಪ್ರಕಾರವಾಗಿ ಬ್ರಹ್ಮನು ಉಪಾದಾನಕಾರಣನಲ್ಲ ಎಂಬುದಕ್ಕೆ ಪ್ರಮಾಣಗಳನ್ನು ನೀಡಿ, ಉಪಾದಾನಕಾರಣತ್ವದ ಪರವಾಗಿ ಇತರರು ಹೇಳಿದ ಪ್ರಮಾಣಗಳನ್ನು ನಿರಾಕರಿಸಿದರು. ಈಗ 'ಆತ್ಮಕೃತೇಃ ಪರಿಣಾಮಾತ್' ಎನ್ನುವ ಸೂತ್ರಾರ್ಥವಾಗಿ ಹೇಳಿದ 'ಸಚ್ಚ ತ್ಯಚ್ಚ' ಶ್ರುತಿಗೆ ಪರಕೀಯರು ಮಾಡಿರುವ ವ್ಯಾಖ್ಯಾನವನ್ನು ನಿರಾಕರಿಸುತ್ತಾರೆ -

ಸಚ್ಚ ತ್ಯಚ್ಚ ಇತ್ಯಾದಿ ಶ್ರುತ್ಯರ್ಥ

ಸಚ್ಚ ತ್ಯಚ್ಚಾಭವದಿತಿ ನಾಸ್ಯ ವಿಶ್ವತ್ವಮುಚ್ಯತೇ ।
ತತ್ಸೃಷ್ಟ್ವೇತಿ ಗಿರ್ಯೈವಾಸ್ಯ ಪೂರ್ವಂ ವಿಶ್ವಸ್ಯ ಸಿದ್ಧಿತಃ ॥೭೮॥

'ಸಚ್ಚ ತ್ಯಚ್ಚಾಭವತ್। ನಿರುಕ್ತಂ ಚಾನಿರುಕ್ತಂ ಚ। ನಿಲಯನಂ ಚಾನಿಲಯನಂ ಚ। ವಿಜ್ಞಾನಂ ಚಾವಿಜ್ಞಾನಂ ಚ। ಸತ್ಯಂ ಚಾನೃತಂ ಚ। ಸತ್ಯಮಭವತ್।' ಎನ್ನುವ ಶ್ರುತಿಯಲ್ಲಿ ಈ ಬ್ರಹ್ಮನಿಗೆ ಸತ್ ತ್ಯತ್ ಮೊದಲಾದ ಶಬ್ದಗಳಿಂದ ವಾಚ್ಯವಾದ ಮೂರ್ತ ಮತ್ತು ಅಮೂರ್ತ ಎಂಬ ಎರಡು ಗುಂಪುಗಳಿಂದ ಕೂಡಿದ ವಿಶ್ವಭಾವವು ಹೇಳಲ್ಪಡುವುದು ಎನ್ನುವುದು ಕೂಡುವುದಿಲ್ಲ. ಏಕೆಂದರೆ, 'ಯ ಇದಂ ಸರ್ವಮಸೃಜತ। ಯದಿದಂ ಕಿಂಚ। ತತ್ಸೃಷ್ಟ್ವಾ ತದೇವಾನುಪ್ರಾವಿಶತ್। ತದನುಪ್ರವಿಶ್ಯ। ಸಚ್ಚ ತ್ಯಚ್ಚಾಭವತ್।' ಎನ್ನುವ ವಚನದಿಂದ ಸತ್ ತ್ಯದಾದಿಗಳು ಉತ್ಪತ್ತಿಯಾಗುವ ಮುಂಚೆಯೇ ಬ್ರಹ್ಮನಿಗೆ ಈ ಮೂರ್ತಾಮೂರ್ತರೂಪ ಜಗತ್ತಿನ ಉತ್ಪತ್ತಿಯು ತಿಳಿದಿರುವುದು.

ಈ ಶ್ರುತಿಯ ಒಟ್ಟು ತಾತ್ಪರ್ಯವೇನೆಂದರೆ, ಸತ್ ತ್ಯದಾದಿಗಳ ಉತ್ಪತ್ತಿಗೆ ಮುಂಚಿತವಾಗಿಯೇ ಹುಟ್ಟಿರುವ ಪ್ರಯುಕ್ತ, ಈ ಜಗತ್ತು ಸತ್

ತ್ಯತ್ ಮೊದಲಾದ ಶಬ್ದಾರ್ಥವೆಂದು ಇಲ್ಲಿ ವಿವಕ್ಷಿತವಾಗಿಲ್ಲ.

ಹಾಗಾದರೆ ಶ್ರುತ್ಯರ್ಥವು ಯಾವುದೆಂದರೆ -

ಸತ್ತಾತ್ತತೇರ್ವೈದಿಕತ್ವಾತ್ ಸಮ್ಯಗ್ವಕ್ತುಮಶಕ್ಯತಃ ।
ಆಶ್ರಯತ್ವಾತ್ಸ್ವಾಶ್ರಯತ್ವಾತ್ ಜ್ಞಾನತ್ವಾದ್ದುರ್ವಿದತ್ವತಃ ॥೭೯॥
ಸತ್ತತೇರ್ಯಾತನಾಚ್ಚೈವ ಹ್ಯಪ್ರಾಪ್ಯತ್ವಾಚ್ಚ ದುರ್ಜನೈಃ ।
ನಿತ್ಯಸಾಧುಗುಣವ್ಯಾಪ್ತಿ ಯಂತೃರೂಪತ್ವತಃ ಸದಾ ॥೮೦॥
ಜಗದ್ಗತೇನ ರೂಪೇಣ ಬ್ರಹ್ಮೈವ ಹಿ ತಥೋಚ್ಯತೇ ।

ಜಗದ್ರೂಪವಾಗಿ ಪರಿಣಾಮವಿಲ್ಲದೇ ಸತ್ವ ಮೊದಲಾದ ಧರ್ಮಗಳ ಯೋಗದಿಂದ, ಪರಬ್ರಹ್ಮನೇ ಸತ್ ತ್ಯತ್ ಮೊದಲಾದ ಶಬ್ದಗಳಿಂದ ಹೇಳಲ್ಪಡುತ್ತಾನೆ. ಸರ್ವೋತ್ತಮನಾದ್ದರಿಂದ ಸತ್ ಎಂದೂ, ವ್ಯಾಪ್ತನಾದ್ದರಿಂದ ತ್ಯತ್ ಎಂದೂ, ವೇದಗಮ್ಯನಾದ್ದರಿಂದ ನಿರುಕ್ತನೆಂದೂ, ಪೂರ್ಣವಾಗಿ ಹೇಳಲಿಕ್ಕೆ ಅಶಕ್ಯವಾದ್ದರಿಂದ ಅನಿರುಕ್ತನೆಂದೂ, ಜಗತ್ತಿಗೆ ಆಶ್ರಯನಾದ್ದರಿಂದ ನಿಲಯನನೆಂದೂ, ಸ್ವಾಶ್ರಯನಾದ್ದರಿಂದ ಅಂದರೆ ತನಗೆ ಮತ್ತೊಬ್ಬನು ಆಶ್ರಯನಾಗಿಲ್ಲವಾದ್ದರಿಂದ ಅನಿಲಯನನೆಂದೂ, ವಿಶೇಷಜ್ಞಾನರೂಪನಾದ್ದರಿಂದ ವಿಜ್ಞಾನನೆಂದೂ, ದುರ್ಜ್ಞೇಯನಾದ್ದರಿಂದ ಅವಿಜ್ಞಾನನೆಂದೂ, ಚೆನ್ನಾಗಿ ವ್ಯಾಪ್ತನು ಹಾಗೂ ಪ್ರವೃತ್ತಿ ಮಾಡಿಸುವವನು ಎನ್ನುವ ವ್ಯುತ್ಪತ್ತಿಯಿಂದ ಸತ್ಯನೆಂದೂ, ದುರ್ಜನರು ಇವನನ್ನು ಹೊಂದಲು ಸಾಧ್ಯವಿಲ್ಲವಾದ್ದರಿಂದ ಅನೃತನೆಂದೂ ಹೇಳಲ್ಪಡುತ್ತಾನೆ. ಸದಾಕಾಲವೂ ನಿತ್ಯವಾದ ಸದ್ಗುಣಗಳಿಂದ ವ್ಯಾಪ್ತನಾಗಿದ್ದು ಭಕ್ತರಲ್ಲಿ ಸಾಧುಗುಣಗಳ ಬಾಹುಲ್ಯವನ್ನು ಪ್ರೇರಿಸುವುದರಿಂದ ಸತ್ಯನೆನಿಸುತ್ತಾನೆ. ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ ಆವಾವ ರೂಪಗಳಿಂದಲೇ ಇದ್ದು ನಿಯಮನ ಮಾಡುವುದರಿಂದ ಪರಬ್ರಹ್ಮನು ಆವಾವ ಶಬ್ದಗಳಿಂದ ವಾಚ್ಯನಾಗಿದ್ದಾನೆ.

ಹಾಗಾದರೆ 'ಸತ್ ತ್ಯತ್' ಇತ್ಯಾದಿ ಧರ್ಮಗಳು ಅನಾದಿಯಾದ್ದರಿಂದ 'ಸಚ್ಚತ್ಯಚ್ಚ ಅಭವತ್' ಎನ್ನುವ ಪ್ರಯೋಗವು ಹೇಗೆ ಕೂಡುವುದು ಎಂದರೆ -

ವ್ಯಕ್ತಿರುಕ್ತಗುಣಾನಾಂ ಹಿ ಪುರುಷಾಪೇಕ್ಷಯಾ ನೃಣಾಂ ॥೮೧॥
ಭವೇದಭವದಿತ್ಯಾದ್ಯಃ ಪ್ರಯೋಗಾಶ್ಚಾತ್ರ ಯುಜ್ಯತೇ ।

ಮನುಷ್ಯರಿಗೆ ಉಪದೇಷ್ಟೃ ಪುರುಷನನ್ನು ಅಪೇಕ್ಷಿಸಿ ಅಥವಾ ಶ್ರೋತೃವಿನ ಬುದ್ಧಿಯನ್ನು ಅಪೇಕ್ಷಿಸಿ ಸದಾದಿ ಶಬ್ದೋಕ್ತ ಧರ್ಮಗಳಿಗೆ ಪ್ರತೀತಿಯು ಆಗುವುದು. ಈ ಕಾರಣದಿಂದ ನಿತ್ಯಗುಣವುಳ್ಳವನಾದ ಬ್ರಹ್ಮನಲ್ಲಿಯೂ ಸತ್ ಮೊದಲಾದವು ಉಂಟಾದವು ಎನ್ನುವ ಪ್ರಯೋಗವು ಕೂಡುವುದು. ಅಂದರೆ ಸೃಷ್ಟಿಗೆ ಮುಂಚೆ ಉಪದೇಶ ಮಾಡುವವರೂ ಉಪದೇಶ ಪಡೆಯುವವರೂ ಇರಲಿಲ್ಲ. ಪರಮಾತ್ಮನ ನಿತ್ಯವಾದ ಗುಣಗಳು ಅಪ್ರತೀತವಾಗಿದ್ದವು. ಸೃಷ್ಟಿಯ ಅನಂತರ ಪರಮಾತ್ಮನು ಸಜ್ಜನರಿಂದ ಪ್ರತೀತವಾದ ಗುಣಗಳುಳ್ಳವನಾದನು ಎಂದು ತಾತ್ಪರ್ಯ.

ಪರಿಣಾಮವಾದದ ನಿರಾಸೆಯ ಉಪಸಂಹಾರ

ತಸ್ಮಾದಶೇಷಕರ್ತೈಕೋ ನಿರ್ವಿಕಾರೋ ರಮಾಪತಿಃ ॥೮೨॥

ಶಬ್ದೈಃ ಪ್ರಕೃತಿರಿತ್ಯಾದ್ಯೈಃ ಸ್ತ್ರೀಲಿಂಗೈರಭಿಧೀಯತೇ ।

ಲಕ್ಷ್ಮೀಪತಿಯಾದ ಶ್ರೀಹರಿಯೊಬ್ಬನೇ ನಿರ್ವಿಕಾರನಾದದ್ದರಿಂದ ಅಶೇಷ ಜಗತ್ಕರ್ತನು. ಏಕಃ ಎಂಬ ಶಬ್ದವು ಬ್ರಹ್ಮನಲ್ಲಿ ಎರಡು ಭಾಗಗಳಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪ್ರಕೃತಿ ಮೊದಲಾದ ಸ್ತ್ರೀಲಿಂಗದ ಶಬ್ದಗಳಿಂದ ಶ್ರೀಹರಿಯೊಬ್ಬನೇ ವಾಚ್ಯನಾಗಿದ್ದಾನೆ. ಪರಬ್ರಹ್ಮನಲ್ಲಿ ಪ್ರಕೃತಿ ಇತ್ಯಾದಿ ಎಲ್ಲ ಸ್ತ್ರೀಲಿಂಗ ಶಬ್ದಗಳ ಸಮನ್ವಯವೇ ಪ್ರಕೃತ್ಯಧಿಕರಣದಿಂದ ಉದ್ದೇಶ. ಬ್ರಹ್ಮನಿಗೆ ಉಪಾದಾನತ್ವರೂಪವಾದ ಅರ್ಥವು ಇಲ್ಲಿ ವಿವಕ್ಷಿತವಲ್ಲ.

ಬಹುಸ್ಯಾಮಿತಿ ತಸ್ಯೈವ ಹ್ಯುಕ್ತಮಾರ್ಗೇಣ ಯುಜ್ಯತೇ ॥೮೩॥

ತತ್ತದ್ಗತೇನ ರೂಪೇಣ.....।

'ಸೋಽಕಾಮಯತ। ಬಹುಸ್ಯಾಂ ಪ್ರಜಾಯೇಯ। ಸಚ್ಚತ್ಯಚ್ಚಾಭವತ್।' ಎನ್ನುವ ವಾಕ್ಯದಿಂದ ಸಿದ್ಧವಾದ ಬಹುರೂಪತ್ವವು ನಿರ್ವಿಕಾರನಾದ ಶ್ರೀಹರಿಗೇ ಹಿಂದೆ ಹೇಳಿದ ರೀತಿಯಿಂದ ಯುಕ್ತವಾಗುವುದು. ಅನಂತ ಪದಾರ್ಥಗಳಲ್ಲಿ ಆಯಾಯ ರೂಪಗಳಿಂದ ಅಂತರ್ನಿಯಾಮಕನಾಗಿದ್ದು ಅನಂತರೂಪಗಳನ್ನು ಹೊಂದುವೆನು ಎಂದು ಆ ಶ್ರೀಹರಿಯು ಇಚ್ಛೆಪಟ್ಟನು ಎಂಬುದು ಈ ಶ್ರುತ್ಯರ್ಥ.

ಹಾಗಾದರೆ ಪೂರ್ವವಾಕ್ಯದಲ್ಲಿ 'ನಿಯಾಮಕನಾಗಿ ಬಹುರೂಪವನ್ನು

ಹೊಂದುವೆನು' ಎನ್ನುವ ಸಂಕಲ್ಪವನ್ನು ಹೇಳಿ, ಅನಂತರ ಉತ್ತರವಾಕ್ಯದಲ್ಲಿ ಇವೆಲ್ಲವನ್ನೂ ಸೃಷ್ಟಿಸಿದನು ಎನ್ನುವ ಅರ್ಥದಲ್ಲಿ 'ಸ ಇದಂ ಸರ್ವಮಸೃಜತ' ಎಂದು ಹೇಳುವುದು ಅಸಂಗತವಾಗುವದು. ಹಾಗಾದರೆ ಶ್ರೀಹರಿಯು ಸ್ವತಂತ್ರ, ಸತ್ಯಸಂಕಲ್ಪ ಇತ್ಯಾದಿ ಮಾತುಗಳು ಅಪ್ರಮಾಣವಾಗಬೇಕಾಗುವುದು ಎಂದು ಹೇಳಿದರೆ -

.....ತದರ್ಥಂ ಹ್ಯಸೃಜಜ್ಜಗತ್ ॥೮೪॥

ಬಹುರೂಪಗಳಲ್ಲಿ ನಿಯಾಮಕತ್ವವು ಸಿದ್ಧಿಸಬೇಕಾದರೆ ಬಹುರೂಪದಲ್ಲಿ ನಿಯಮ್ಯ ಪದಾರ್ಥಗಳು ಅವಶ್ಯಕವಾದ್ದರಿಂದ, ನಿಯಮ್ಯವಾದ ಜಗತ್ತನ್ನು ಸೃಷ್ಟಿಸಿದನು. ಆದಕಾರಣ ಈ ಶ್ರುತಿಯು ಸುಸಂಗತವಾಗಿಯೇ ಇರುವುದು.

ಅನೇಕ ರೂಪಗಳಿಂದ ಆಯಾಯ ಪದಾರ್ಥಗಳಲ್ಲಿ ಪ್ರವೇಶಿಸಿ ಕ್ರೀಡಿಸುವುದಕ್ಕೋಸ್ಕರ ಶ್ರೀಹರಿಯು ಜಗತ್ತನ್ನು ಸೃಷ್ಟಿಸಿದನು. ಆದಪ್ರಯುಕ್ತ ಶ್ರೀಹರಿಯು ಜಗದಾಕಾರದಿಂದ ಪರಿಣಾಮವನ್ನು ಹೊಂದುವುದಿಲ್ಲ ಎಂದು ಸಿದ್ಧವಾಗುವುದು.

ಈ ಪ್ರಕಾರವಾಗಿ ಅಪವ್ಯಾಖ್ಯಾನವನ್ನು ದೂಷಿಸಿ, ಈಗ ಬ್ರಹ್ಮವಿವರ್ತ ವಾದವನ್ನು ದೂಷಿಸುವುದಕ್ಕಾಗಿ ಅನುವಾದ ಮಾಡುತ್ತಾರೆ -

ವಿವರ್ತವಾದದ ನಿರಾಸೆ

ಯಚ್ಚಾವಿಕೃತಮೇವೈಕಂ ಬ್ರಹ್ಮ ವಿಶ್ವಾತ್ಮನಾ ಮೃಷಾ ।
ದೃಶ್ಯತೇ ಮಂದದೃಷ್ಟ್ಯೈವ ಸ ಸರ್ಗ ಇತಿ ಕಥ್ಯತೇ ॥೮೫॥

ನಿರ್ವಿಕಾರನೂ, ನಿರವಯವನೂ, ಅದ್ವಿತೀಯನೂ ಆದ ಪರಬ್ರಹ್ಮನೇ ಜಗದಾಕಾರನಾಗಿ ಪರಿಣಾಮ ಹೊಂದುವನು. ಅಂದರೆ ಬ್ರಹ್ಮನಲ್ಲಿ ಜಗತ್ತು ಆರೋಪಿತವಾಗಿದೆ ಎಂದರ್ಥ. ಅವಿದ್ಯಾ ನಿಮಿತ್ತವಾದ ಭ್ರಾಂತಿಯಿಂದಾಗಿ ಅದನ್ನೇ ಸೃಷ್ಟಿ ಎನ್ನುತ್ತಾರೆ. ಇದು ಅದ್ವೈತಿಗಳ ಬ್ರಹ್ಮವಿವರ್ತವಾದ. ಈ ವಾದವನ್ನು ಶ್ರೀಮದಾಚಾರ್ಯರು ಇಲ್ಲಿ ದೂಷಿಸುತ್ತಾರೆ -

ಸಾ ಮಂದದೃಷ್ಟಿಸ್ತಸ್ಯೈವ ಬ್ರಹ್ಮಣಃ ಕಿಂ ತತೋಽನ್ಯಗಾ ।
ಬ್ರಹ್ಮಣಶ್ಚೇತ್ಕ್ವ ಸಾರ್ವಜ್ಞ್ಯಮನ್ಯಗಾ ಚೇತ್ಸ್ವತೋಽನ್ಯತಾ ॥೮೬॥

ಬ್ರಹ್ಮನಲ್ಲಿ ಜಗತ್ತು ಆರೋಪಿತವಾಗಿದೆಯೆಂಬ ತಿಳಿವಳಿಕೆಗೆ ಕಾರಣವಾದ

ಆ ಭ್ರಾಂತಿಯು ಯಾರಿಗೆ? ಬ್ರಹ್ಮನಿಗೋ ಅಥವಾ ಜೀವನಿಗೋ? ಬ್ರಹ್ಮನಿಗೆ ಎಂದು ಹೇಳಿದರೆ ಬ್ರಹ್ಮನಿಗೆ ಸರ್ವಜ್ಞತ್ವವನ್ನು ಹೇಳುವ ಶ್ರುತಿಗೆ ವಿರೋಧ ಬರುತ್ತದೆ. ಅಜ್ಞಾನವೇ ಭ್ರಾಂತಿಗೆ ಕಾರಣವಾದ್ದರಿಂದ, ಸರ್ವಜ್ಞನಿಗೆ ಅಜ್ಞಾನವು ಕೂಡುವುದಿಲ್ಲವಾದ್ದರಿಂದ, ಭ್ರಾಂತಿಯೂ ಅಸಂಭವ. ಜೀವನಿಗೆ ಎಂದು ಹೇಳುವ ಹಾಗಿಲ್ಲ. ಏಕೆಂದರೆ ಬ್ರಹ್ಮನಿಂದ ಅನ್ಯನಾದ ಜೀವನ್ನು ಒಪ್ಪಿದರೆ ಅದ್ವೈತಕ್ಕೇ ಭಂಗ ಬರುವುದು.

ಹಾಗಾದರೆ ಜೀವಬ್ರಹ್ಮಭೇದವು ವಾಸ್ತವವೇ ಎಂದು ಒಪ್ಪೋಣ. ಜಡಾತ್ಮಕವಾದ ಪ್ರಪಂಚವು ಬ್ರಹ್ಮನಲ್ಲಿ ಭ್ರಾಂತಿಕಲ್ಪಿತವಾಗಿರಲಿ ಎಂದು ಹೇಳುತ್ತೇನೆ ಎಂದರೆ - (ಈ ರೀತಿಯಾಗಿ ಮಾಯಾವಾದಿಗಳು ಒಪ್ಪುವುದಿಲ್ಲ. ಆದಾಗ್ಯೂ ಸೂತ್ರಾರ್ಥವನ್ನು ನಿರಾಕರಿಸುವುದಕ್ಕಾಗಿ ಹೀಗೆ ವಾದ ಮಾಡಿದರೂ ಅದು ಅಯುಕ್ತವೆಂದು ತೋರಿಸುತ್ತಾರೆ) -

ನಾದೇಹಯೋಗಿನೋ ದೃಷ್ಟೇರಿತಿ ತತ್ಕಾರಣಂ ಸ್ವತಃ ।

ದೇಹಸಂಬಂಧವಿಲ್ಲದವರಿಗೆ ಇಂದ್ರಿಯಗಳ ಅಭಾವದ ಕಾರಣ ಪದಾರ್ಥಗಳ ದರ್ಶನವೇ ಆಗುವುದಿಲ್ಲ. ಆದಕಾರಣ ಆರೋಪಕ್ಕೆ ಕಾರಣವಾದ ಇಂದ್ರಿಯ ಹಾಗೂ ಅದಕ್ಕೆ ಆಶ್ರಯವಾದ ಶರೀರದ ಅಸ್ತಿತ್ವವನ್ನು ಭ್ರಮಾಕಲ್ಪನೆಯಿಲ್ಲದೇ ಅಂಗೀಕರಿಸಬೇಕಾಗುತ್ತದೆ.

ಹಾಗಾದರೆ ಬ್ರಹ್ಮವ್ಯತಿರಿಕ್ತವಾದ ಜೀವರಿಗೂ ಸಕಾರಣವಾದ ದೇಹ ಇಂದ್ರಿಯಾದಿಗಳಿಗೂ ಭ್ರಾಂತಿ ಕಲ್ಪಿತವಲ್ಲದ ಅಸ್ತಿತ್ವವಿರಲಿ. ಆದರೆ ಇವುಗಳಿಂದ ಅತಿರಿಕ್ತವಾದ ಪ್ರಪಂಚವು ಭ್ರಾಂತಿಕಲ್ಪಿತವಾಗಲಿ ಎಂದು ಹೇಳಿದರೆ -

ದೇಹಿನಃ ಕಾರಣಯುತಾ ದೇಹಾಶ್ಚ ಯದಿ ನ ಭ್ರಮಾತ್ ॥೮೭॥

ಕಂ ಭ್ರಾಂತಿಕಲ್ಪಿತಂ ತತ್ರ .....।

ಜ್ಞಾನಕಾರಣವಾದ ದೇಹೇಂದ್ರಿಯಗಳಿಂದ ಕೂಡಿರುವ ಜೀವರೂ, ಇಂದ್ರಿಯಗಳಿಗೆ ಆಶ್ರಯವಾದ ಶರೀರಗಳೂ ಭ್ರಾಂತಿಕಲ್ಪಿತವಲ್ಲ ಎಂದು ಹೇಳುವುದಾದರೆ, ಇವುಗಳಿಗೆ ಅತಿರಿಕ್ತವಾದ ಪ್ರಪಂಚವೇ ಇಲ್ಲವಾದ್ದರಿಂದ, ಭ್ರಾಂತಿಯನ್ನು ಯಾವುದಕ್ಕೆ ಹೇಳಬೇಕು?

ಜೀವಬ್ರಹ್ಮಭೇದ ಭ್ರಾಂತಿಕಲ್ಪಿತವಲ್ಲ

ಜೀವಬ್ರಹ್ಮಭೇದವೂ ಭ್ರಾಂತಿಸಿದ್ಧವಾದ ಪ್ರಯುಕ್ತ 'ಅನ್ಯಗಾ ಚೇತ್ಸ್ವತೋಽನ್ಯತಾ' ಎಂದು ಹೇಳಿದ್ದು ಅಯುಕ್ತ. ಭ್ರಾಂತಿಯಿಂದ ತಾನು ಬ್ರಹ್ಮನಿಂದ ಭಿನ್ನ ಎಂದು ತಿಳಿದ ಜೀವನಿಗೆ ಬಾಹ್ಯ ಮತ್ತು ಆಧ್ಯಾತ್ಮಿಕ ವಿಷಯಕವಾದ ಭ್ರಮೆ ಇರುವುದೆಂದು ಹೇಳುತ್ತೇವೆ ಎಂದರೆ –

.....ಭೇದೋಽಪಿ ಭ್ರಮಜೋ ಯದಿ ।
ಭ್ರಾಂತೇರಜ್ಞಾನಮೂಲತ್ವಾತ್ತಸ್ಯ ಭೇದವ್ಯಪೇಕ್ಷಯಾ ॥೪೪॥
ನಾಜ್ಞಾನಕಲ್ಪಕಂ ಕಿಂಚಿದನ್ಯೋನ್ಯಾಶ್ರಯತಾ ಯತಃ ।

ಕೇವಲ ಪ್ರಪಂಚಮಾತ್ರವಲ್ಲ ಜೀವಬ್ರಹ್ಮರ ಭೇದವೂ ಭ್ರಾಂತಿಸಿದ್ಧ ಎಂದು ಅಂಗೀಕರಿಸುವುದಾದರೆ, ಆಗ ಅನ್ಯೋನ್ಯಾಶ್ರಯ ಹಾಗೂ ಚಕ್ರಕ ಎಂಬ ದೋಷವು ಬರುವುದು. ಅನ್ಯೋನ್ಯೋಶ್ರಾಯ ಬಾಹುಲ್ಯವು ಚಕ್ರಕವೆನಿಸುವುದು. ಅದು ಹೇಗೆಂದರೆ, ಜೀವಬ್ರಹ್ಮರ ಭೇದಕ್ಕೆ ಭ್ರಾಂತಿಯು ಕಾರಣ. ಆ ಭ್ರಾಂತಿಗೆ ಭಾವರೂಪವಾದ ಅಜ್ಞಾನ ಕಾರಣ. ಆ ಅಜ್ಞಾನಕ್ಕೆ ಭೇದವೇ ಆಶ್ರಯ. ಈ ಪ್ರಕಾರವಾಗಿ ಅನ್ಯೋನ್ಯಾಶ್ರಯ ಚಕ್ರಕಾದಿ ದೋಷಗಳು ಬರುವ ಕಾರಣ, ಬ್ರಹ್ಮವ್ಯತಿರಿಕ್ತನಾದ ಜೀವನ ಹೊರತು ಅಜ್ಞಾನಕಲ್ಪಿತವಾದುದು ಬೇರೆ ಯಾವುದೂ ಇರಲು ಸಾಧ್ಯವಿಲ್ಲ.

ದೇಹಾದಿಗಳೂ ಭ್ರಾಂತಿಕಲ್ಪಿತವಾದ ಕಾರಣ ನಾದೇಹಯೋಗಿನಃ ಮೊದಲಾದ ವಾಕ್ಯಗಳಿಂದ ಯಾವುದು ಹೇಳಲ್ಪಟ್ಟಿದೆಯೋ ಅದು ಯುಕ್ತವಲ್ಲ. ಭ್ರಮೆಗೆ ಕಾರಣವಿಲ್ಲ ಎಂದು ಹೇಳಕೂಡದು. ಏಕೆಂದರೆ ಆ ದೇಹಾದಿಗಳ ಭ್ರಮೆಗೂ ಪೂರ್ವದಲ್ಲಿರುವ ದೇಹವೇ ಕಾರಣವಾಗಿರುವುದು. ಹೀಗೆ ಮಾಯಾವಾದಿಯು ಹೇಳಿದರೆ, ಭ್ರಾಂತಿ ಪರಂಪರೆಗೆ ಕೊನೆಯೇ ಇಲ್ಲದಂತಾಗುವುದರಿಂದ ಅಪರಿಹಾರ್ಯವಾದ ಅನವಸ್ಥಾ ದೋಷವು ಉಂಟಾಗುವುದು. ವಾಸ್ತವವಾಗಿ ಭ್ರಾಂತಿ ಪರಂಪರೆಯಲ್ಲಿಯೇ ಪ್ರಮಾಣವಿಲ್ಲ. ಹಾಗಾದರೆ 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತಿಗಳು ಭ್ರಮೆಯ ವಿಷಯದಲ್ಲಿ ಪ್ರಮಾಣವಲ್ಲವೇ ಎಂದು ಮಾಯಾವಾದಿಯು ಕೇಳಿದರೆ –

ಭ್ರಮತ್ವೇ ತ್ವಿಯಮುಕ್ತಿಶ್ಚ ತದಂತಃ ಪತನಾನ್ನಹಿ ।

ಆಕಾಶ ಮೊದಲಾದ ಸಮಸ್ತ ಪ್ರಪಂಚಕ್ಕೆ ಭ್ರಾಂತಿಸಿದ್ಧತ್ವವಿದ್ದರೆ, 'ನೇಹ ನಾನಾಸ್ತಿ ಕಿಂಚನ' ಎನ್ನುವ ವಾಕ್ಯವೂ ಈ ಪ್ರಪಂಚದಲ್ಲಿಯೇ ಸೇರುವ ಕಾರಣ ಮಿಥ್ಯೆಯೇ ಆಗಬೇಕು.

ಈ ಸಮಸ್ತ ಪ್ರಪಂಚವೂ ಭ್ರಾಂತಿಕಲ್ಪಿತವಾದರೂ ವ್ಯಾವಹಾರಿಕವಾಗಲು ಅಡ್ಡಿಯಿಲ್ಲ. ಆದಪ್ರಯುಕ್ತ ಈ ಶ್ರುತಿಯೂ ವ್ಯಾವಹಾರಿಕವೇ ಆಗುವುದರಿಂದ ಅರ್ಥಜ್ಞಾನಕ್ಕೆ ಕಾರಣವಾಗುವುದು ಎಂದು ಹೇಳಿದರೆ -

ವ್ಯಾವಹಾರಿಕತಾ ಚಾಸ್ಯ ಸ್ಯಾದಬಾಧ್ಯತ್ವ ಏವ ಹಿ ॥೮೯॥

ಪ್ರಪಂಚವು ವ್ಯಾವಹಾರಿಕ ಎಂದು ಅಂಗೀಕರಿಸಲ್ಪಡುವುದಾದರೆ ಅಬಾಧ್ಯ ಎಂದು ಅಂಗೀಕರಿಸಬೇಕಾಗುವುದು. ಹಾಗೆ ನೀನು ಅಂಗೀಕರಿಸುವುದಿಲ್ಲ. ಆದಕಾರಣ ವ್ಯಾವಹಾರಿಕವೆಂದೂ ಅಂಗೀಕರಿಸುವುದಕ್ಕೆ ಯೋಗ್ಯವಲ್ಲ.

ಶುಕ್ತಿರಜತಾದಿಗಳು ಬಾಧ್ಯಗಳಾಗಿದ್ದರೂ ಅವು ಅಭಿಜ್ಞಾದಿ ವ್ಯವಹಾರಕ್ಕೆ ವಿಷಯಗಳಾಗುವುದು ಕಂಡಿದೆ. ಆದ್ದರಿಂದ ಎಲ್ಲೆಲ್ಲಿ ವ್ಯಾವಹಾರಿಕವಿಷಯತ್ವವು ಇರುವುದೋ ಅಲ್ಲಲ್ಲಿ ಅಬಾಧ್ಯತ್ವವು ಇರುವುದು ಎನ್ನುವ ತರ್ಕಕ್ಕೆ ವ್ಯಾಪ್ತಿ ಇಲ್ಲವೆಂದರೆ -

ಬಾಧ್ಯಂ ನಾರ್ಥಕ್ರಿಯಾಕಾರಿ .....।

ಶುಕ್ತಿರಜತಗಳು ಬಾಧ್ಯವಾಗಿದ್ದರೂ ಅಭಿಜ್ಞಾದಿ ವ್ಯವಹಾರಕ್ಕೆ ವಿಷಯಗಳು ಎನ್ನುವುದು ಸತ್ಯವೇ. ಆದಾಗ್ಯೂ ಅವು ಅರ್ಥಕ್ರಿಯಾಕಾರಿಗಳಲ್ಲ. ಏಕೆಂದರೆ ಈ ಶುಕ್ತಿರಜತವು ಬೆಳ್ಳಿಯ ಉಂಗುರ ಕಿರೀಟಾದಿಗಳನ್ನು ತಯಾರಿಸುವಂಥಹ ಅರ್ಥಕ್ರಿಯೆಗಳಲ್ಲಿ ಪ್ರಯೋಜಕವಲ್ಲ. ಅರ್ಥಕ್ರಿಯಾಕಾರಿತ್ವವೇ ವ್ಯಾವಹಾರಿಕತ್ವದ ಲಕ್ಷಣ, ಅಭಿಜ್ಞಾದಿ ವಿಷಯತ್ವವಲ್ಲ. ಆದ್ದರಿಂದ ತರ್ಕಕ್ಕೆ ವ್ಯಾಪ್ತಿ ವೈಕಲ್ಯವಿಲ್ಲ.

ಹಾಗಾದರೆ ಅಸತ್ಯವಾದ ಸ್ವಪ್ನದಲ್ಲಿ ಆಗತಕ್ಕ ಸ್ತ್ರೀಸಂಭೋಗಾದಿಗಳಿಂದ ಧಾತುವಿಸರ್ಜನೆ ಮೊದಲಾದ ಅರ್ಥಕ್ರಿಯೆಗಳು ಕಂಡುಬರುವುದರಿಂದ ತರ್ಕಕ್ಕೆ ವ್ಯಾಪ್ತಿಯಿಲ್ಲ ಎಂದು ಹೇಳಿದರೆ -

ಸ್ವಪ್ನ ಮಿಥ್ಯೆಯಲ್ಲ

.....ನ ಚ ಸ್ವಪ್ನೋಽಪಿ ನೋ ಮೃಷಾ ।
ವಾಸನಾಜನಿತತ್ವೇನ ತಸ್ಯಾಪ್ಯಂಗೀಕೃತತ್ವತಃ ॥೯೦॥

ನಮ್ಮ ಬಾದರಾಯಣರ ಮತದಲ್ಲಿ ಸ್ವಪ್ನದಲ್ಲಿ ತೋರುವ ಪದಾರ್ಥಗಳೂ ಮಿಥ್ಯೆ ಅಲ್ಲವೇ ಅಲ್ಲ. ಅನಾದಿಯಾದ ಪೂರ್ವಸಂಸ್ಕಾರದಿಂದ ಹುಟ್ಟಿದ ಪದಾರ್ಥಗಳೇ ಸ್ವಪ್ನದಲ್ಲಿ ಕಂಡುಬರುತ್ತವೆ ಎಂದು ಅಂಗೀಕರಿಸಲ್ಪಟ್ಟಿದೆ. ಆದಕಾರಣ ಸ್ವಾಪ್ನಪದಾರ್ಥವು ಮಿಥ್ಯೆಯಲ್ಲ.

ಬಾದರಾಯಣರ ಸಿದ್ಧಾಂತವು ಶ್ರುತ್ಯನುಸಾರಿಯಾಗಿರುವುದು. ಸ್ವಪ್ನದಲ್ಲಿ ತೋರುವ ಪದಾರ್ಥಗಳಿಗೆ ಕರ್ತಾರನಿದ್ದಾನೆಂದು ಶ್ರುತಿಯು ಹೇಳುತ್ತದೆ. ಶ್ರುತಿಯು ಸ್ವಾಪ್ನಾರ್ಥಕ್ಕೆ ಸತ್ಯತ್ವವನ್ನೇ ಪ್ರತಿಪಾದಿಸುವುದರಿಂದ, ಸ್ವಪ್ನವು ಮಿಥ್ಯೆಯಲ್ಲ ಎನ್ನುವುದೇ ಸೂತ್ರಕಾರರ ಅಭಿಮತವೆಂದು ಹೇಳುತ್ತಾರೆ –

ಸ ಹಿ ಕರ್ತೇತಿ ವಾಕ್ಯಾಚ್ಚ ಜಾಗ್ರತ್ವಮಿತಿ ಹಿ ಭ್ರಮಃ ।
ಸರ್ಪಭ್ರಮಾದಾವಪಿ ಹಿ ಜ್ಞಾನಮಸ್ತ್ಯೇವ ತಾದೃಶಂ ॥
ತದೇವಾರ್ಥಕ್ರಿಯಾಕಾರಿ ತತ್ಸದೇವಾರ್ಥಕಾರಕಂ ॥೯೧॥

'ಸಂಧ್ಯಂ ತೃತೀಯಂ ಸ್ವಪ್ನಸ್ಥಾನಂ' ಎಂದು ಉಪಕ್ರಮಿಸಿ 'ಅಥ ವೇಶಾಂತಾಃ ಪುಷ್ಕರಿಣ್ಯಃ ಸೃಜತೇ ಸ ಹಿ ಕರ್ತಾ' ಎನ್ನುವ ವಾಕ್ಯದಿಂದ ಶ್ರೀಹರಿಯೇ ಸ್ವಾಪ್ನ ಪದಾರ್ಥಗಳ ಸೃಷ್ಟಿಕರ್ತ ಎಂದು ತಿಳಿದುಬರುವುದು. ಪೂರ್ವ ಸಂಸ್ಕಾರವನ್ನು ಉಪಾದಾನವನ್ನಾಗಿ ಮಾಡಿಕೊಂಡು ಪರಮಾತ್ಮನು ಸ್ವಾಪ್ನ ಪದಾರ್ಥಗಳನ್ನು ಸೃಷ್ಟಿ ಮಾಡುತ್ತಾನೆ. ಸ್ವಾಪ್ನ ಪದಾರ್ಥಗಳಿಗೆ ಶ್ರೀಹರಿಯು ನಿಮಿತ್ತಕಾರಣನು. ಆದಕಾರಣ ಸ್ವಾಪ್ನ ಪದಾರ್ಥಗಳು ಸುಳ್ಳಲ್ಲ.

ಹಾಗಾದರೆ 'ಸ್ವಪ್ನಮಾಯಾ ಸರೂಪಾ' ಇತ್ಯಾದಿ ವಾಕ್ಯಗಳಲ್ಲಿ ಸ್ವಪ್ನಕ್ಕೆ ಭ್ರಾಂತಿತ್ವವನ್ನು ಹೇಳಿರುವುದು ಹೇಗೆ ಕೂಡುವುದು ಎಂದರೆ –

ಸ್ವಾಪ್ನ ಪದಾರ್ಥಗಳನ್ನು ನೋಡುತ್ತಿರುವಾಗ ನಾನು ಎಚ್ಚರವಾಗಿಯೇ ಇದ್ದು ಅವುಗಳನ್ನು ನೋಡುತ್ತಿದ್ದೇನೆ ಎಂದು ತಿಳಿಯುವುದು ಅಥವಾ ಜಾಗ್ರದಾವಸ್ಥೆಯಲ್ಲಿ ಕಾಣುವ ಪದಾರ್ಥಕ್ಕೂ ಸ್ವಾಪ್ನ ಪದಾರ್ಥಕ್ಕೂ ಐಕ್ಯವನ್ನು ತಿಳಿಯುವುದು ಅಥವಾ ಹೊರಗಿನ ಮಣ್ಣು ಇತ್ಯಾದಿಗಳಿಂದ ಸ್ವಾಪ್ನ ಪದಾರ್ಥವು ನಿರ್ಮಿತವಾಗಿದೆ ಇತ್ಯಾದಿಯಾಗಿ ತಿಳಿಯುವುದೇ ಭ್ರಮೆ. ಎಚ್ಚರವಾದ ಮೇಲೆ ಬಾಧ ಬರುವುದರಿಂದ ಈ ರೀತಿಯ ಜ್ಞಾನವು ಭ್ರಮೆ ಎನಿಸಿಕೊಳ್ಳುತ್ತದೆ. ಸ್ವಪ್ನದಲ್ಲಿ ಕಂಡ ಹಾವು ಮೊದಲಾದವುಗಳಿಂದ ಭಯ

ನಡುಕ ಬೆವರುವಿಕೆ ಇತ್ಯಾದಿಗಳು ಉಂಟಾಗುವುದು ಎಲ್ಲರಿಗೂ ಅನುಭವವಿದೆ. ಸರ್ಪಜ್ಞಾನವೇ ಭಯಾದಿಗಳಿಗೆ ಕಾರಣ ಹೊರತು ನಿಜವಾದ ಸರ್ಪವಲ್ಲ. ಆದಪ್ರಯುಕ್ತ ಸ್ವಪ್ನದಲ್ಲಿ ಹಾವು ಇತ್ಯಾದಿಗಳ ಜ್ಞಾನವುಂಟಾಗಿದ್ದು ಸುಳ್ಳಲ್ಲ. ಆದರೆ ಅದೇ ನಿಜವಾದ ಹಾವು ಇತ್ಯಾದಿಯಾಗಿ ತಿಳಿಯುವುದು ಸುಳ್ಳು. ಹಗ್ಗದಲ್ಲಿ ಹಾವು ಎನ್ನುವ ಭ್ರಾಂತಿಯಲ್ಲಿಯೂ ನಿಜವಾದ ಸರ್ಪದ ಜ್ಞಾನವು ಇದ್ದೇ ಇರುವುದು. ಸ್ವಪ್ನದಲ್ಲಿ ಕಂಡದ್ದು ನಿಜವಾದ ಹಾವಲ್ಲ ಎಂಬುದು ಸತ್ಯವಾದರೂ ಸ್ವಪ್ನದಲ್ಲಿ ಹಾವನ್ನು ನೋಡಿದೆ ಎನ್ನುವ ಅನುಭವಕ್ಕೆ ಕಾರಣವಾಗುವ ಜ್ಞಾನವು ಸುಳ್ಳಲ್ಲ. ಆ ಜ್ಞಾನವೂ ಸುಳ್ಳಾಗಿದ್ದರೆ ಅದು ಭಯ ಕಂಪನಾದಿಗಳಿಗೆ ಕಾರಣವಾಗುತ್ತಿರಲಿಲ್ಲ. ಆ ಜ್ಞಾನವು ಇದ್ದುದಾಗಿಯೇ ಭಯ ಕಂಪನಾದಿಗಳನ್ನು ಉಂಟುಮಾಡುವುದು. ಯಾವುದು ಅರ್ಥಕ್ರಿಯಾಕಾರಕವಾದ ಜ್ಞಾನವೋ ಅಂಥಹ ಜ್ಞಾನವು ಸತ್ಯವೇ ಆಗಿರುವುದು. ಸ್ವಾಪ್ನಜ್ಞಾನವು ಅರ್ಥಕ್ರಿಯಾಕಾರಿಯಾದುದರಿಂದ ಸ್ವಪ್ನವು ಮಿಥ್ಯೆಯಲ್ಲ.

ಬ್ರಹ್ಮ ತ್ವರ್ಥಕ್ರಿಯಾಕಾರಿ ಪರತಃ ಸ್ವತ ಏವ ವಾ ।
ಅಂಗೀಕೃತಂ ಹಿ ತೇನೈವ ಪರತಶ್ಚೇ ನ ಚ ಪ್ರಮಾ ॥೯॥

ಬ್ರಹ್ಮನಾದರೂ ಅರ್ಥಕ್ರಿಯೆಗಳಿಗೆ ಪ್ರಪಂಚಕ್ಕಿಂತ ಅತಿಶಯನಾಗಿ ಉಪಯುಕ್ತನೆಂದು ಮಾಯಾವಾದಿಯಿಂದಲೇ ಅಂಗೀಕರಿಸಲ್ಪಟ್ಟಿದೆ (ಜನ್ಮಾದಿಸೂತ್ರದಲ್ಲಿ ಬ್ರಹ್ಮನು ಜಗತ್ಕಾರಣನೆಂದು ಮಾಯಾವಾದಿಯಿಂದ ಅಂಗೀಕೃತವಾಗಿದೆ). ಅದು ಸ್ವಾಭಾವಿಕವಾಗಿ ತನ್ನಿಂದಲೇ ಆಗಲಿ ಅಥವಾ ಮತ್ತೊಂದರ ಸಹಾಯದಿಂದಾಗಲೀ ಅಂಗೀಕರಿಸಲ್ಪಟ್ಟಿದೆ ಎಂದು ಹೇಳಿದರೆ, ಅದು ಸರಿಯಲ್ಲ. ನಾನು ಬ್ರಹ್ಮನಲ್ಲಿ ಸ್ವಾಭಾವಿಕ ಅರ್ಥಕ್ರಿಯಾಕಾರಿತ್ವವನ್ನು ಒಪ್ಪಿರುವುದಿಲ್ಲ. ಬ್ರಹ್ಮನಲ್ಲಿ ಮಾಯಾ ಸಂಬಂಧದಿಂದ ಅರ್ಥಕ್ರಿಯೆಯು ತೋರುವದು ಎಂದು ಮಾಯಾವಾದಿಯು ಹೇಳುತ್ತಾನೆ. ಹಾಗೆ ಹೇಳುವುದು ಸರಿಯಲ್ಲ. ಏಕೆಂದರೆ ಬ್ರಹ್ಮನಿಗೆ ಮಾಯಾಸಂಬಂಧದಿಂದ ಅರ್ಥಕ್ರಿಯೆಯನ್ನು ಸಮರ್ಥಿಸಲು ಯಾವುದೇ ಪ್ರಮಾಣವಿಲ್ಲ.

"ಬ್ರಹ್ಮನ ಜಗನ್ನಿರ್ಮಾಣಾದಿ ಅರ್ಥಕ್ರಿಯಾಕಾರಿತ್ವವು ಪ್ರತ್ಯಕ್ಷ ಅನುಮಾನ ಮೊದಲಾದವುಗಳಿಗೆ ವಿಷಯವಾಗುವುದಿಲ್ಲ. ಆದುದರಿಂದ ಶ್ರುತಿಯಿಂದಲೇ

ಪ್ರತೀತವಾಗಬೇಕು. ಶ್ರುತಿಪ್ರತಿಪಾದಿತವೆಲ್ಲವೂ ಬಾಧಕವಿಲ್ಲವಾದರೆ ಸತ್ಯವೇ. ಬ್ರಹ್ಮನಿಗೆ ಅರ್ಥಕ್ರಿಯಾಕಾರಿತ್ವವು 'ನಿಷ್ಕಲಂ ನಿಷ್ಕ್ರಿಯಂ ಶಾಂತಂ' ಇತ್ಯಾದಿ ಶ್ರುತಿಯಿಂದ ಬಾಧಿತವಾಗುವುದು. ಆದಕಾರಣ ಬ್ರಹ್ಮನಿಗೆ ಮಾಯಾ ಸಂಬಂಧದಿಂದ ಅರ್ಥಕ್ರಿಯೆಯನ್ನು ಹೇಳುತ್ತೇವೆ" ಎಂದು ಮಾಯಾವಾದಿಯು ಹೇಳಿದರೆ - 'ಸ ಇದಂ ಸರ್ವಮಸೃಜತ' ಇತ್ಯಾದಿ ಬ್ರಹ್ಮನಿಗೆ ಸ್ವಾಭಾವಿಕ ಜಗತ್ಕಾರಣತ್ವಾದಿಗಳನ್ನು ಹೇಳುವ ಪ್ರಬಲವಾದ ಶ್ರುತಿಗಳಿಂದ ನಿಷ್ಕಲಂ ಇತ್ಯಾದಿ ಶ್ರುತಿಗೆ ಬಾಧಕ ಬರುವುದು. ಆದಕಾರಣ ಬ್ರಹ್ಮನಿಗೆ ಮಾಯಿಕತ್ವ ವಿಷಯದಲ್ಲಿ ಪ್ರಮಾಣವಿಲ್ಲ ಎಂದು ಹೇಳುತ್ತೇವೆ.

ಹಾಗಾದರೆ ಅಬಾಧ್ಯವಾದುದೇ ಅರ್ಥಕ್ರಿಯಾಕಾರಿಯಾಗಲಿ. ಬ್ರಹ್ಮೈಕ್ಯ ಜ್ಞಾನವಾಗುವುದಕ್ಕೆ ಮುಂಚೆ ಪ್ರಪಂಚವೂ ಅಬಾಧ್ಯವೆಂದು ಅಂಗೀಕರಿಸುತ್ತೇವೆ. ಆದಕಾರಣ ಪ್ರಪಂಚದಲ್ಲಿ ಸೇರಿರುವ ಶ್ರುತಿಯೂ ಕೂಡ ಅಮುಖ್ಯ ಸತ್ಯವಾಗಿರುವುದರಿಂದ ಸಾಧಕವಾಗಿರುವುದು ಎಂದರೆ -

ಅಮುಖ್ಯಸತ್ಯಮಾನಸ್ಯ ಸಾಧಕತ್ವೇ ಸದಾ ऽऽವಯೋಃ ।
ನ ಹಿ ಸಂಪ್ರತಿಪತ್ತಿಃ ಸ್ಯಾದತಸ್ತಿಷ್ಠತು ಸಾ ಪ್ರಮಾ ॥೯೩॥

ಅಮುಖ್ಯಸತ್ಯವಾದ ಪ್ರಮಾಣಕ್ಕೆ ಸಾಧಕತ್ವ ವಿಷಯದಲ್ಲಿ ಯಾವಾಗಲೂ ನಮ್ಮಿಬ್ಬರಿಗೆ ಸಮ್ಮತಿಯು ಇರುವುದಿಲ್ಲ. ಆದಕಾರಣ ಬ್ರಹ್ಮಜ್ಞಾನಬಾಧ್ಯವಾದ ಆ ಪ್ರಮಾಣವು ಒಂದು ಕಡೆ ಇರಲಿ. ಅದನ್ನು ಪ್ರಮಾಣವಾಗಿ ಹೇಳಬೇಡ. (ಅಪ್ರಮಾ ಎನ್ನುವ ಪಾಠವನ್ನು ಇಟ್ಟುಕೊಂಡರೆ) ಆ ಶ್ರುತಿಯು ಅಪ್ರಮಾಣವಾದ್ದರಿಂದ ಅದನ್ನು ಪ್ರಮಾಣವಾಗಿ ಹೇಳಬೇಡ ಎಂದರ್ಥ.

ಹೀಗೆ ಸ್ವರೂಪದಿಂದಲೂ ವಿಷಯತ್ವದಿಂದಲೂ ಅಸತ್ಯವಾಗಿರುವುದಕ್ಕೆ ಪ್ರಮಾಣಸಾಧಕತ್ವವನ್ನು ಹೇಳುವ ಶ್ರುತಿಯು ವಿವಾದಾಸ್ಪದ ಎಂದಾಗಲಿ. ಹಾಗಿದ್ದರೂ ಪ್ರಪಂಚಕ್ಕೆ ಮಿಥ್ಯಾತ್ವವನ್ನು ಸಾಧಿಸುವುದಕ್ಕಾಗಿ ಆ ಶ್ರುತಿಯನ್ನು ಏಕೆ ಪ್ರಮಾಣವಾಗಿ ತೆಗೆದುಕೊಳ್ಳಬಾರದು ಎಂದು ಕೇಳಿದರೆ -

ನ ಹಿ ವಿಪ್ರತಿಪನ್ನೇನ ಶಕ್ಯಂ ಸಾಧಯಿತುಂ ಕ್ವಚಿತ್ ।
ಸಾಧಕತ್ವಂ ತು ಸತ್ಯಸ್ಯ ಸಾಕ್ಷಿಣೋ ಹ್ಯಾವಯೋರ್ದ್ವಯೋಃ ॥೯೪॥
ಸಮ್ಯಕ್ಸಂಪ್ರತಿಪನ್ನಂ ತನ್ನ ವಿವರ್ತಮತಂ ಭವೇತ್ ।

ವಿವಾದವಿಷಯಕ ಪ್ರಮಾಣದಿಂದ ಏನನ್ನೂ ಸಾಧಿಸುವುದಕ್ಕೆ ಆಗದು. ಸತ್ಯವಾದ ಸಾಕ್ಷಿಗೆ ಸಾಧಕತ್ವವೆಂಬುದು ನಮ್ಮಿಬ್ಬರಿಗೂ ಪೂರ್ಣವಾಗಿ ಸಮ್ಮತವಾದುದೇ ಆಗಿದೆ. ವಿಶ್ವವು ಆರೋಪಿತವೆನ್ನುವ ಮತವು ಸಾಕ್ಷಿಯಿಂದ ಅಂಗೀಕೃತವಾಗದು. ಆದಕಾರಣ ವಿವರ್ತವಾದವನ್ನು ನಾವು ನಿರಾಕರಿಸುತ್ತೇವೆ. ಜಗತ್ಸತ್ಯತ್ವವು ಸಾಕ್ಷಿಯಿಂದಲೇ ಸಿದ್ಧವಾಗುವುದು ಎಂದು ಅಭಿಪ್ರಾಯ.

ಯಾವುದೇ ರೀತಿಯ ಪ್ರಮಾಣ-ಪ್ರಮೇಯ ವ್ಯವಸ್ಥೆಯನ್ನು ನಾನು ಅಂಗೀಕರಿಸಿಲ್ಲ. ಪರಕೀಯ ರೀತಿಯಿಂದಲೇ ಎಲ್ಲವನ್ನೂ ಹೇಳುತ್ತೇನೆ. ನಾನು ಎಂದೂ ಸಾಕ್ಷಿಗೆ ಸಾಧಕತ್ವವನ್ನು ಅಂಗೀಕರಿಸಿಲ್ಲ. ಹಾಗಿದ್ದರೂ ನನ್ನನ್ನು ಕುರಿತು ನೀನು ಸಾಕ್ಷಿಯನ್ನು ಅಂಗೀಕರಿಸಿರುವೆ ಎಂದು ಹೇಗೆ ಹೇಳುತ್ತೀರಿ ಎಂದರೆ -

ಯದಿ ನಾಂಗೀಕೃತಂ ಕಿಂಚಿದನಂಗೀಕೃತತಾऽಪಿ ಹಿ ॥೯೫॥

ನಾಂಗೀಕೃತೇತಿ ಮೂಕಃ ಸ್ಯಾದಿತಿ ನಾಸ್ಮದ್ವಿವಾದಿತಾ ।

ಯಾವುದೂ ನನ್ನಿಂದ ಅಂಗೀಕರಿಸಲ್ಪಡುವುದಿಲ್ಲವೆಂದು ಹೇಳುವವನಿಂದ ಅವನ ಆ ಹೇಳಿಕೆಯೂ ಅಂಗೀಕರಿಸಲ್ಪಡುವುದಿಲ್ಲ. ಹೀಗೆ ಅವನು ಮೂಕನಾಗುವನು. ಅಂದರೆ ಅವನಿಗೆ ವಾಕ್ ಪ್ರವೃತ್ತಿಯೇ ಕೂಡುವುದಿಲ್ಲ. ಅವನು ನಮಗೆ ಪ್ರತಿವಾದಿಯೇ ಆಗಲಾರನು.

ಹೀಗೆ ಬ್ರಹ್ಮವಿವರ್ತವಾದವನ್ನು (ವಿಶ್ವಮಿಥ್ಯಾತ್ವವನ್ನು) ನಿರಾಕರಿಸಿ, ವಿಶ್ವಸತ್ಯತ್ವಕ್ಕೆ ಸಾಧಕವಾದ ಪ್ರಮಾಣವನ್ನು ಹೇಳುತ್ತಾರೆ -

ವಿಶ್ವಸತ್ಯತ್ವ ಪ್ರತಿಪಾದಕ ಶ್ರುತಿಗಳು

ವಿಶ್ವಂ ಸತ್ಯಂ ಯಚ್ಚಿಕೇತ ಪ್ರಘಾನ್ವಸ್ಯ ಯಥಾರ್ಥತಃ ॥೯೬॥

ಇತ್ಯಾದಿ ಶ್ರುತಯಃ ಸರ್ವಾ ವಿಶ್ವಸತ್ಯತ್ವವಾಚಿಕಾಃ ।

ವಿಶ್ವಂ ಸತ್ಯಂ (ವಿಶ್ವಂ ಸತ್ಯಂ ಮಘವಾನಾ ಯುವೋರಿದಾಪಶ್ಚನ ಪ್ರಮಿನಂತಿ ವ್ರತಂ ವಾಂ), **ಯಚ್ಚಿಕೇತ** (ಯಚ್ಚಿಕೇತ ಸತ್ಯಮಿತ್ತನ್ನ ಮೋಘಂ ವಸುಸ್ಪಾರ್ಹಮುತ ಜೇತೋತ ದಾತಾ), **ಪ್ರಘಾನಸ್ಯ** (ಪ್ರ ಘಾ ನ್ವಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾನಿ ವೋಚಂ), **ಯಥಾರ್ಥತಃ** (ಕವಿರ್ಮನೀಷೀ ಪರಿಭೂಃ ಸ್ವಯಂಭೂಃ ಯಾಥಾತಥ್ಯತೋऽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ) ಇತ್ಯಾದಿ ಎಲ್ಲ ಶ್ರುತಿಗಳು ವಿಶ್ವಕ್ಕೆ

ಸತ್ಯತ್ವವನ್ನು ಹೇಳುತ್ತವೆ. ಈ ಶ್ರುತಿಗಳ ಅರ್ಥವನ್ನು ಕೆಳಗೆ ಕೊಡಲಾಗಿದೆ.

"ಮಘವನ್ ಶಬ್ದವಾಚಕವಾದ ಇಂದ್ರಾದಿ ಭಗವದ್ರೂಪಗಳೇ, ನಿಮ್ಮಿಂದ ರಕ್ಷಿಸಲ್ಪಡುವ ಈ ವಿಶ್ವವು ಸತ್ಯವೇ ಆಗಿದೆ. ನಿಮ್ಮ ಈ ಕಾರ್ಯವನ್ನು ಅಬಭಿಮಾನಿ ದೇವತೆಗಳೂ ಸತ್ಯವೆಂಬುದಾಗಿಯೇ ತಿಳಿಯುತ್ತಾರೆ."

"ಸತ್ಯವಾದ ಸಂಪತ್ತನ್ನು ಬಲ್ಯಾದಿಗಳಿಂದ ಗೆದ್ದು ಪುನಃ ಇಂದ್ರಾದಿಗಳಿಗೆ ತಂದುಕೊಟ್ಟ ಆ ಶ್ರೀಹರಿಯು ಯಾವುದನ್ನು ಸೃಷ್ಟಿ ಮಾಡಿದನೋ ಅದು ಯಥಾರ್ಥವೇ ಆಗಿದೆ, ಮಿಥ್ಯೆಯಲ್ಲ."

"ಸರ್ವೋತ್ತಮನಾದ ಸರ್ವಕರ್ತನಾದ ವಿಷ್ಣುವಿನ ಪಾರಮಾರ್ಥಿಕವಾದ ಸೃಷ್ಟ್ಯಾದಿ ಕರ್ಮಗಳನ್ನು ಸತ್ಯವೆಂಬುದಾಗಿಯೇ ಹೇಳುವೆನು."

"ಸರ್ವಜ್ಞನೂ, ಎಲ್ಲರ ಮನೋಪ್ರೇರಕನೂ, ಸರ್ವಸಂಹಾರಕನೂ ಆದ ಶ್ರೀಹರಿಯು ಮಹದಾದಿ ತತ್ವಗಳನ್ನು ಯಾವಾಗಲೂ ಸತ್ಯವಾಗಿರುವಂತೆಯೇ ಸೃಷ್ಟಿಸಿದನು."

ಈ ಪ್ರಕಾರವಾಗಿ ಆಗಮ ಅನುಮಾನಗಳಿಂದ ಸಿದ್ಧವಾದ ವಿಶ್ವಸತ್ಯತ್ವಕ್ಕೆ ಪ್ರತ್ಯಕ್ಷದ ಸಮ್ಮತಿಯನ್ನೂ ಹೇಳುತ್ತಾರೆ –

ಸಾಕ್ಷಿಪ್ರತ್ಯಕ್ಷ ಅಬಾಧಿತ

ಸತ್ಯತಂ ಗಗನಾದೇಶ್ಚ ಸಾಕ್ಷಿಪ್ರತ್ಯಕ್ಷಸಾಧಿತಂ ॥೯೭॥

ಸಾಕ್ಷಿಸಿದ್ಧಸ್ಯ ನ ಕ್ವಾಪಿ ಬಾಧ್ಯತ್ವಂ ತದದೋಷತಃ ।

ಆಂತರಿಕ ಪದಾರ್ಥಗಳಾದ ಸುಖಾದಿಗಳಿಗೆ ಮಾತ್ರವಲ್ಲದೆ ಬಾಹ್ಯ ಪದಾರ್ಥಗಳಾದ ಗಗನಾದಿಗಳಿಗೂ ಕೂಡ ಸಾಕ್ಷಿಪ್ರತ್ಯಕ್ಷದಿಂದಲೇ ಸತ್ಯತ್ವವು ಸಾಧಿಸಲ್ಪಡುವುದು. ಸಾಕ್ಷಿಗೆ ಯಾವತ್ತೂ ದೋಷವಿಲ್ಲವಾದ್ದರಿಂದ, ಸಾಕ್ಷಿ ಪ್ರತ್ಯಕ್ಷದಿಂದ ಸಿದ್ಧವಾದುದಕ್ಕೆ ಯಾವಾಗಲೂ ಬಾಧ್ಯತ್ವವಿರುವುದಿಲ್ಲ.

ಸರ್ವಕಾಲೇಷ್ವಬಾಧ್ಯತ್ವಂ ಸಾಕ್ಷಿಣೈವ ಪ್ರತೀಯತೇ ॥೯೮॥

ಕಾಲೋ ಹಿ ಸಾಕ್ಷಿಪ್ರತ್ಯಕ್ಷಃ ಸುಷುಪ್ತೌ ಚ ಪ್ರತೀತಃ ।

ಎಲ್ಲ ಕಾಲಗಳಲ್ಲಿಯೂ ಗಗನಾದಿಗಳಿಗೆ ಅಬಾಧ್ಯತ್ವವು ಸಾಕ್ಷಿಯಿಂದಲೇ ವೇದ್ಯವಾಗುವುದು. ಸುಷುಪ್ತಿಯಲ್ಲಿಯೂ ತೋರುವುದರಿಂದ ಕಾಲವು ಸಾಕ್ಷಿ ಪ್ರತ್ಯಕ್ಷಕ್ಕೆ ವಿಷಯವಾಗಿದೆ.

ವಿವರಣೆ:

'ಯದಿ ಸಾಕ್ಷೀ ಸ್ವಯಂಭಾತೋ ನ ಮಾನಂ ಕೇನ ಗಮ್ಯತೇ। ಅಕ್ಷಜಾದೇಶ್ಚ ಮಾನತ್ವಮನವಸ್ಥಾऽನ್ಯಥಾ ಭವೇತ್॥' ಇತ್ಯಾದಿ ವೈಶೇಷಿಕಾಧಿಕರಣದಲ್ಲಿ ಹೇಳಿರುವಂತೆ ಸಾಕ್ಷೀಂದ್ರಿಯವೇ ಸಾಕ್ಷಿನಿಷ್ಠವಾದ ಪ್ರಾಮಾಣ್ಯಗ್ರಾಹಕವಾಗಿದೆ. ಸುಷುಪ್ತಿಯ ಕಾಲದಲ್ಲಿ ಇಂದ್ರಿಯಗಳು ಉಪರತವಾಗಿರುವುದರಿಂದ ಬಾಹ್ಯಪ್ರತ್ಯಕ್ಷಾದಿಗಳಿಗೆ ಆಗ ಪ್ರವೃತ್ತಿ ಇರುವುದಿಲ್ಲ. ಹಾಗಿದ್ದರೂ ಆಗ ಕಾಲದ ಪ್ರತೀತಿ ಇರುವುದು. ಇಷ್ಟು ಕಾಲದವರೆಗೆ ನಾನು ಸುಖವಾಗಿ ನಿದ್ರಿಸಿದ್ದೆನು ಎಂಬುದಾಗಿ ಸುಷುಪ್ತಿಯಿಂದ ಎಚ್ಚೆತ್ತವನಿಗೆ ಪರಾಮರ್ಶೆಯು ಕಂಡಿದೆ. ಅನುಭೂತವಾಗದೇ ಇರುವುದಕ್ಕೆ (ಅನುಭವಕ್ಕೆ ಬರದೇ ಇರುವ ವಿಷಯಕ್ಕೆ) ಪರಾಮರ್ಶೆಯು ಕೂಡುವುದಿಲ್ಲ. ಆದ್ದರಿಂದ ಕಾಲವು ಸಾಕ್ಷಿವೇದ್ಯವೆಂದೇ ತಿಳಿಯುತ್ತದೆ.

ಸುಷುಪ್ತಿಕಾಲದಲ್ಲಿ ಅನುಭೂತವಾದುದಕ್ಕೆ ಇದು ಪರಾಮರ್ಶೆಯಾಗಿದ್ದರೆ ಹೀಗೆ ಹೇಳಿದ್ದು ಸರಿಹೋಗುತ್ತಿತ್ತು. ಆದರೆ ಇದು ಪರಾಮರ್ಶೆಯಲ್ಲ. ಕಿಂತು ಆವಾಗಲೇ ಕಳೆದುಹೋದ ಸುಷುಪ್ತಿಕಾಲವನ್ನು ಅನುಭವಿಸಿ, ಆಗ ಸುಷುಪ್ತಿಕಾಲದಲ್ಲಿದ್ದ ದುಃಖಾನುಭವದ ಅರಿವು ಎಚ್ಚೆತ್ತಮೇಲೆ ಉಂಟಾಗುವುದು ಎಂದು ಹೇಳುತ್ತೇವೆ ಎಂದರೆ –

ಅತೀತಾನಾಗತೌ ಕಾಲಾವಪಿ ನಾಸಾಕ್ಷಿಗೋಚರೌ ।

ಪಕ್ಷೀಕರ್ತುಮಶಕ್ಯತ್ವಾನ್ನಾನುಮಾ ತತ್ರ ವರ್ತತೇ ॥೯೯॥

ಭೂತ ಮತ್ತು ಭವಿಷ್ಯತ್ಕಾಲಗಳೂ ಕೂಡ ಸಾಕ್ಷೀತರ ಇಂದ್ರಿಯ ಗೋಚರವಲ್ಲ. ಅಂದರೆ ಸಾಕ್ಷಿಗೋಚರವೇ ಆಗಿವೆ ಎಂದರ್ಥ. ಪಕ್ಷೀಕರಿಸಲು ಅಶಕ್ಯವಾದುದರಿಂದ ಕಾಲದ ವಿಷಯದಲ್ಲಿ ಅನುಮಾನವು ಪ್ರಮಾಣವಾಗದು.

ವಿವರಣೆ: ಕಾಲವು ರೂಪವಿಲ್ಲದ ದ್ರವ್ಯವಾದುದರಿಂದ ಬಾಕ್ಷುಷ ಪ್ರತ್ಯಕ್ಷಕ್ಕೆ ವೇದ್ಯವಾಗಲಾರದು. ಕಿವುಡರಿಗೂ ಕಾಲವು ಅನುಭವಕ್ಕೆ ಬರುವುದರಿಂದ ಅದು ಆಗಮವೇದ್ಯವೂ ಆಗಲಾರದು. ಕಾಲವನ್ನು ಪಕ್ಷವನ್ನಾಗಿ ಮಾಡಲಿಕ್ಕೆ ಅಶಕ್ಯವಾದುದರಿಂದ ವ್ಯಾಪ್ತಿಸ್ಮರಣ ಪಕ್ಷಧರ್ಮತಾ ಜ್ಞಾನಗಳು ಕೂಡುವುದಿಲ್ಲ. ಆದಕಾರಣ ಕಾಲದ ವಿಷಯದಲ್ಲಿ ಅನುಮಾನವೂ ಪ್ರವೃತ್ತವಾಗಲಾರದು.

ಇದನ್ನೇ ವಿಸ್ತರಿಸುತ್ತಾರೆ –

ತದೇತದಿತಿ ಸರ್ವಂ ಚ ದೃಶ್ಯಂ ವಾ ಸ್ಮೃತಿಗೋಚರಂ ॥೧೦೦॥

ಸಾಕ್ಷಿಸಿದ್ಧೇನ ಕಾಲೇನ ಖಚಿತಂ ಹ್ಯೇವ ವರ್ತತೇ ।

ತಸ್ಮಾನ್ನ ತಂ ವಿನಾ ಕಿಂಚಿತ್ಸ್ಮರ್ತುಂ ದ್ರಷ್ಟುಮಥಾಪಿ ವಾ ॥೧೦೧॥

ಶಕ್ಯಂ ತನ್ನಿತ್ಯಸಿದ್ಧೇರ್ಹಿ ನಾನುಮಾನಾವಸರೋ ಭವೇತ್ ।

ಅತೋಽದೋಷಪ್ರತೀತಸ್ಯ ಸತ್ಯತ್ವಂ ಸಾಕ್ಷಿಣಾ ಮತಂ ॥೧೦೨॥

ಅದು ಎಂದು ಸ್ಮೃತಿಗೆ ಗೋಚರವಾದುದು ಅಥವಾ ಇದು ಎಂದು ಸಮೀಪದಲ್ಲಿಯೇ ಕಾಣತಕ್ಕ ಎಲ್ಲವೂ ಸಾಕ್ಷಿಸಿದ್ಧವಾದ ಕಾಲದಿಂದ ಸಂಬದ್ಧವಾಗಿಯೇ ಇರುತ್ತದೆ. ಆದಕಾರಣ ಕಾಲದ ಜ್ಞಾನವಿಲ್ಲದೆ ಏನನ್ನೂ ಸ್ಮರಿಸುವುದಕ್ಕಾಗಲೀ ಕಾಣುವುದಕ್ಕಾಗಲೀ ಶಕ್ಯವಿಲ್ಲ. ಕಾಲವು ಸಾಕ್ಷಿಯಿಂದ ನಿತ್ಯಸಿದ್ಧವಾಗಿರುವುದರಿಂದ ಕಾಲಾನುಮಾನಕ್ಕೆ ಅವಕಾಶವು ಆಗಲಾರದು. (ಅನಿಶ್ಚಿತ ವಿಷಯದಲ್ಲಿ ಮಾತ್ರ ಅನುಮಾನಕ್ಕೆ ಅವಕಾಶ). ಆದಪ್ರಯುಕ್ತ ನಿರ್ದೋಷವಾದ ಪ್ರತ್ಯಕ್ಷಾದಿ ಪ್ರಮಾಣದಿಂದ ತಿಳಿಯಲ್ಪಟ್ಟ ಗಗನಾದಿ ಪ್ರಪಂಚಕ್ಕೆ ತ್ರೈಕಾಲಿಕ ಅಬಾಧ್ಯರೂಪವಾದ ಸತ್ಯತ್ವವು ಕಾಲತ್ರಯವನ್ನು ಗ್ರಹಿಸತಕ್ಕ ಸಾಕ್ಷಿಯಿಂದಲೇ ಅಂಗೀಕೃತವಾಗುವುದು. (ದೋಷಯುಕ್ತವಾದ ಪ್ರಮಾಣದಿಂದ ಪ್ರತೀತವಾದ ಶುಕ್ತಿರಜತಾದಿಗಳಿಗೆ ಸತ್ಯತ್ವವನ್ನು ಸಾಕ್ಷಿಯು ಅಂಗೀಕರಿಸುವುದಿಲ್ಲ ಎಂದ ತಾತ್ಪರ್ಯ).

ಸಾಕ್ಷಿಯೂ ಕೂಡ ಪ್ರಾಮಾಣ್ಯವನ್ನು ನಿರ್ಧರಿಸಬೇಕಾದರೆ ಪರೀಕ್ಷೆಯಿಂದ ಸಿದ್ಧವಾದ ಜ್ಞಾನವನ್ನೇ ಅವಲಂಬಿಸುವುದಾದರೆ ಅನವಸ್ಥಾ ದೋಷವು ಬರುವುದು ಎಂದು ಹೇಳಿದರೆ –

ಪರೀಕ್ಷಾದೇಶ್ಚ ಸತ್ಯತ್ವಂ ತೇನ ಹ್ಯೇವ ಮತಂ ಭವೇತ್ ।

ಪರೀಕ್ಷಾದಿಗಳಿಗಾದರೂ ಯಾಥಾರ್ಥ್ಯವೂ ಸಾಕ್ಷಿಯಿಂದಲೇ ವೇದ್ಯ ಎಂಬುದು ಅನುಭವದಿಂದ ಸಿದ್ಧವಾಗಿದೆ. ಆದಕಾರಣ ಅನವಸ್ಥೆಯು ಆಗಲಾರದು.

ಜಗತ್ತಿಗೆ ತ್ರೈಕಾಲಿಕ ಅಬಾಧ್ಯತ್ವ ಅಥವಾ ಸತ್ಯತ್ವವು ಸಾಕ್ಷಿಯಿಂದ ಸಿದ್ಧವಾಗಿದೆ ಎಂದು ಅಂಗೀಕರಿಸದಿದ್ದರೆ ಬಾಧಕವನ್ನು ಹೇಳುತ್ತಾರೆ –

ಅನ್ಯಥಾ ಶ್ರುತಿಯುಕ್ತ್ಯಾದಿ ಪ್ರಮಾಣೈಶ್ಚ ಸಹೈವ ತು ॥೧೦೩॥
ಅಕಸ್ಮಾದ್ವಿನಿವೃತ್ತಿಶ್ಚ ಕಿಂ ವಿಶ್ವಸ್ಯ ನ ಶಂಕ್ಯತೇ ।

ಸಾಕ್ಷಿಯು ತ್ರೈಕಾಲಿಕ ಅಬಾಧ್ಯರೂಪವಾದ ಪ್ರಾಮಾಣ್ಯವನ್ನು ಗ್ರಹಿಸದೇ ಹೋದರೆ, ಶ್ರುತಿ ಯುಕ್ತಿ ಮೊದಲಾದ ಪ್ರಮಾಣಗಳಿದ್ದರೂ, ಬ್ರಹ್ಮನಿಗೂ ಪ್ರಪಂಚದಂತೆ ನಿಷ್ಕಾರಣವಾಗಿ ನಿವೃತ್ತಿಯನ್ನು ಏಕೆ ಶಂಕಿಸಬಾರದು?

ಇತಃಪೂರ್ವಂ ತಥಾಭಾವಾದ್ಯದಿ ನೋ ಸಂಸೃತೇರ್ಗತಿಃ ॥೧೦೪॥

ಇದಕ್ಕಿಂತ ಮೊದಲು ನಿವೃತ್ತಿಯಾಗದಿರುವುದರಿಂದ ಬ್ರಹ್ಮನಿಗೆ ನಿವೃತ್ತಿಯು ಇರುವುದಿಲ್ಲ ಎಂದು ಹೇಳುವುದಾದರೆ ಸಂಸಾರಕ್ಕೂ ನಿವೃತ್ತಿಯು ಆಗದೇ ಹೋಗುವುದು.

ವಾಕ್ಯಾನುಮಾದಿತಶ್ಚೇತ್ಸ್ಯಾತ್ತತ್ಪ್ರಮಾಣ್ಯಂ ಚ ಸಾಕ್ಷಿತಃ ।
ತತ್ಪ್ರಮಾಣ್ಯಂ ಯಥಾ ಸಾಕ್ಷೀ ಸ್ಥಾಪಯತ್ಯೇವಮೇವ ಹಿ ॥೧೦೫॥
ಸರ್ವಕಾಲೇಷ್ವಪಿ ಸ್ಥೈರ್ಯಾದ್ವ್ಯಭಿಚಾರಮಪೋಹ್ಯ ಚ ।
ಏವಮಕ್ಷಜಮಾನತ್ವಸಿದ್ಧಾಂ ವಿಶ್ವಸ್ಯ ಸತ್ಯತಾಂ ॥೧೦೬॥
ಕಿಮಿತಿ ಸ್ಥಾಪಯೇನ್ನಾಯಂ ನಿರ್ದೋಷಜ್ಞಾನಶಕ್ತಿತಃ ।

ವಾಕ್ಯ, ಅನುಮಾನ ಮೊದಲಾದ ಪ್ರಮಾಣಗಳಿಂದ ಸಂಸಾರಕ್ಕೆ ನಿವೃತ್ತಿಯು ನಿಶ್ಚಿತವಾಗಿದೆ ಎಂದು ಹೇಳಿದರೆ, ಆಗ ಆ ವಾಕ್ಯಾದಿಗಳ ಪ್ರಾಮಾಣ್ಯವೂ ಕೂಡ ಸಾಕ್ಷಿಯಿಂದಲೇ ಸಿದ್ಧವಾಗುವುದು ಎಂದು ಹೇಳಬೇಕು. ಬ್ರಹ್ಮಸತ್ಯತ್ವಾದಿ ವಾಕ್ಯಗಳಿಗೆ ಪ್ರಾಮಾಣ್ಯವನ್ನು ಸಾಕ್ಷಿಯು ಕೇವಲ ತಾತ್ಕಾಲಿಕವಾಗಿ ಮಾತ್ರವಲ್ಲದೆ ಆತ್ಯಂತಿಕವಾಗಿಯೇ ಗ್ರಹಿಸುತ್ತದೆ. ಅಂದರೆ ಬಾಧಕವನ್ನು ನಿರಾಕರಿಸಿಯೇ ಗ್ರಹಿಸುತ್ತದೆ. ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾದ ಜಗತ್ಸತ್ಯತ್ವವನ್ನು ಸಾಕ್ಷಿಯು ಸಾರ್ವಕಾಲಿಕವಾಗಿಯೇ ಗ್ರಹಿಸುತ್ತದೆ. ಸಾಕ್ಷಿಯು ನಿರ್ದೋಷಜ್ಞಾನರೂಪತ್ವವನ್ನು ಹೊಂದಿರುವ ಕಾರಣ ಅದರ ಪ್ರಾಮಾಣ್ಯವು ಸ್ಥಿರವಾಗಿದೆ. ಹೀಗೆ ಒಪ್ಪದಿದ್ದರೆ ಬ್ರಹ್ಮಸತ್ಯತ್ವವೂ ಸಿದ್ಧವಾಗುವುದಿಲ್ಲ.

ಪ್ರತ್ಯಕ್ಷಾದಿ ಜ್ಞಾನವು ನಿರ್ದೋಷವಾಗಿದ್ದರೆ ಸಾಕ್ಷಿಯು ಅದರ ಪ್ರಾಮಾಣ್ಯವನ್ನು ಶಾಶ್ವತವಾಗಿ ಗ್ರಹಿಸುತ್ತದೆ ಎಂದು ಹೇಳಬಹುದಿತ್ತು. ಆದರೆ ಪ್ರತ್ಯಕ್ಷಾದಿ ಜ್ಞಾನವು ಶುಕ್ತಿರಜತಾದಿ ಜ್ಞಾನದಂತೆ ಅವಿದ್ಯಾರೋಪಿತ ಪ್ರಪಂಚದ

ವಿಷಯವಾಗಿದೆ. ಈ ಅವಿದ್ಯೆ ಅಥವಾ ಅಜ್ಞಾನವು ಜೀವನನ್ನು ಆಶ್ರಯಿಸಿದೆ. ಏಕೆಂದರೆ ಪ್ರಪಂಚವು ಒಬ್ಬ ಜೀವನ ಅಜ್ಞಾನದಿಂದ ಸೃಷ್ಟಿಯಾದುದೆಂದು 'ಅನಾದಿ ಮಾಯಯಾ ಸುಪ್ತೋ ಯದಾ ಜೀವಃ ಪ್ರಬುದ್ಧ್ಯತ' ಇತ್ಯಾದಿ ಶ್ರುತಿಸಿದ್ಧವಾಗಿದೆ ಎಂದು ಮಾಯಾವಾದಿಯು ಹೇಳುತ್ತಾನೆ. ಮಾಯಾವಾದವು ಅಂಗೀಕರಿಸಿರುವ ಬಹಳ ಮುಖ್ಯವಾದ ಪ್ರಮೇಯ ಏಕಜೀವವಾದ. ಅದನ್ನು ನಿರಾಕರಿಸುತ್ತಾರೆ –

ಏಕಜೀವವಾದದ ನಿರಾಸೆ

ಏಕಾಜ್ಞಾನಕೃತಂ ವಿಶ್ವಮಿತಿ ಯಚ್ಚೋಚ್ಯತೇ ಮೃಷಾ ॥೧೦೭॥
ಬಹುಜ್ಞಾನಕೃತಂ ವಿಶ್ವಮಿತಿ ತಸ್ಯೋತ್ತರಂ ಭವೇತ್ ।
ಪರಸ್ಯೈತಾಂ ಜಾನನ್ನಪಿ ಯಃ ಸ್ವಾತ್ಮತಸ್ಕರಃ ॥೧೦೮॥
ಪರೋ ನಾಸ್ತಿ ವದತಿ ಕಿಮಿತ್ಯುನ್ಮತ್ತವದ್ವದೇತ್ ।
ಪರಾಭಾವೇಽಪಿ ವಾಗ್ವ್ಯರ್ಥಾ ಯದಿ ನೇವೋಚ್ಯತೇ ತದಾ ॥೧೦೯॥
ಕಶಾವೇತ್ಯಾದಿಕಂ ತಸ್ಯ ತಸ್ಕರಸ್ಯೋತ್ತರಂ ಭವೇತ್ ।

ಜಗತ್ತು ಒಬ್ಬ ಜೀವನ ಅಜ್ಞಾನದಿಂದ ಸೃಷ್ಟಿಯಾದದ್ದು ಎಂದು ಪ್ರಮಾಣವಿಲ್ಲದೆ ಹೇಳುವ ಬ್ರಹ್ಮವಿವರ್ತವಾದಿಗೆ ಜಗತ್ತು ಬಹುಜೀವರ ಜ್ಞಾನದಿಂದ ಸೃಷ್ಟಿಸಲ್ಪಟ್ಟದ್ದು ಎನ್ನುವುದೇ ಉತ್ತರವಾಗುವುದು. ತನಗಿಂತ ಬೇರೆಯವನಾದ ಪ್ರತಿವಾದಿಯು ಇದ್ದಾನೆಂಬ ಸತ್ಯವನ್ನು ತಿಳಿದವನಾಗಿದ್ದರೂ ಮತ್ತೊಬ್ಬನು ಇಲ್ಲವೇ ಇಲ್ಲ ಎಂದು ಹೇಳುವವನು ತನ್ನ ಅನುಭವವನ್ನೇ ಅಲ್ಲಗಳೆಯುವ ಆತ್ಮತಸ್ಕರನೆನಿಸುವನು. ಹಾಗೆ ವಾದಿಸುವವನು ಹುಚ್ಚನೇ ಸರಿ. ಮತ್ತೊಬ್ಬನು ಇಲ್ಲವೇ ಇಲ್ಲ ಎಂದು ಹೇಳುವವನು ಏನೇ ಮಾತನಾಡಿದರೂ ಅವೆಲ್ಲವೂ ವ್ಯರ್ಥವೇ ಆಗುವುದು. ನನ್ನಿಂದ ಯಾವತ್ತೂ ಏನೂ ಹೇಳಲ್ಪಡುವುದಿಲ್ಲವೆಂದರೆ, ಸ್ವಕ್ರಿಯಾವಿರೋಧಿಯಾದ ಹಾಗೂ ಸಕಲ ಜನರ ತಿಳಿವಳಿಕೆಯನ್ನು ಅಪಲಾಪಮಾಡತಕ್ಕ ಉನ್ಮತ್ತನಾದ ಆ ಕಳ್ಳನಿಗೆ ಚಾಟಿ, ಬೆತ್ತ ಇತ್ಯಾದಿಗಳಿಂದಲೇ ಉತ್ತರ ಕೊಡಬೇಕು.

ಈ ಪ್ರಕಾರವಾಗಿ ವಿಶ್ವಮಿಥ್ಯಾತ್ವವನ್ನು ಪ್ರತಿಪಾದಿಸುವುದಕ್ಕಾಗಿ ಪರರು ಉದಾಹರಿಸಿದ ಶ್ರುತಿಗಳಿಗೆ ಬಾಹ್ಯಯುಕ್ತಿಗಳಿಂದ ವಿರೋಧವನ್ನು ತೋರಿಸಿ

ವಿಶ್ವಸತ್ಯತ್ವವನ್ನು ಸಮರ್ಥಿಸಿದರು. ಈಗ ಆ ಶ್ರುತಿಗಳಿಗೆ ಅವಿರೋಧವಾದ ವಿಶ್ವಸತ್ಯತ್ವ ಪ್ರತಿಪಾದಕವಾದ ಅರ್ಥವನ್ನು ವ್ಯಾಖ್ಯಾನ ಮಾಡುತ್ತಾರೆ -

ಪ್ರಪಂಚೋ ಯದಿ ವಿದ್ಯೇತ ಇತ್ಯಾದಿ ಶ್ರುತ್ಯರ್ಥ

ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ॥೧೧೦॥

ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ।

ಪಂಚಭೇದಾತ್ಮಕವಾದ ಪ್ರಪಂಚವು ಹುಟ್ಟುವುದಾದರೆ ನಾಶವಾಗುವುದು. ಈ ಭೇದವು ಹರಿಯ ಪ್ರಜ್ಞೆಯಿಂದ ಮಿತವೂ ರಕ್ಷಿತವೂ ಆಗಿದೆ. ಹರಿಯೋಬ್ಬನೇ ಸರ್ವೋತ್ತಮನಾದವನು ಎಂಬುದೇ ಅದ್ವೈತ ಶಬ್ದಕ್ಕೆ ಶ್ರೇಷ್ಠವಾದ ಅರ್ಥ.

ಏಕಲ್ಪೋ ಏನಿವರ್ತೇತ ಕಲ್ಪಿತೋ ಯದಿ ಕೇನಚಿತ್ ॥೧೧೧॥

ಉಪದೇಶಾದಯಂ ವಾದೋ ಽಜ್ಞಾತೇ ದ್ವೈತಂ ನ ವಿದ್ಯತೇ ।

ವಿವಿಧ ಭೇದವು ಯಾರಿಂದಲಾದರೂ ಅಜ್ಞಾನದಿಂದ ಕಲ್ಪಿತವಾಗಿದ್ದರೆ ನಾಶವಾಗುತ್ತಿತ್ತು. ಶ್ರುತ್ಯಾದಿಗಳಿಂದ ಉಪದಿಷ್ಟವಾದ ಭೇದಸತ್ಯತ್ವಾದಿ ಜ್ಞಾಪಕವಾದುದೇ ಸಜ್ಜನರ ವಾದ. ಭೇದವಿಲ್ಲವೆನ್ನುವುದು ಅಜ್ಞಾನಿಗಳ ವಾದ.

ಇತ್ಯತ್ರ ಯದಿ ಶಬ್ದೌ ಚ ನಿವರ್ತೇತೇತಿ ಚ ದ್ವಯಂ ॥೧೧೨॥

ವಿಶ್ವಸ್ಯ ಸತ್ಯತಾಮಾಹುರ್ವಿದ್ಯೇತೋತ್ಪತ್ತಿಮೇವ ಚ ।

ಮೇಲಿನ ಎರಡು ಶ್ರುತಿವಾಕ್ಯಗಳಲ್ಲಿ ಬಂದಿರುವ ಎರಡು ಯದಿ ಶಬ್ದಗಳೂ ಮತ್ತು ಎರಡು ನಿವರ್ತೇತ ಎನ್ನುವ ಶಬ್ದಗಳೂ ಜಗತ್ತಿಗೆ ಸತ್ಯತ್ವವನ್ನೂ ಅನಾದಿತ್ವವನ್ನೂ ಕೂಡ ಹೇಳುತ್ತವೆ. ವಿದ್ಯೇತ ಎನ್ನುವ ಶಬ್ದವೂ ಉತ್ಪತ್ತಿ ಎನ್ನುವ ಅರ್ಥವನ್ನೇ ಹೇಳುವುದು. ನಿವರ್ತೇತ ಎನ್ನುವ ಶಬ್ದವು ವಿನಾಶವೆನ್ನುವ ಅರ್ಥವನ್ನೇ ಹೇಳುವುದು, ಬಾಧವೆನ್ನುವ ಅರ್ಥವನ್ನಲ್ಲ.

ವಿದೋತ್ಪತ್ತಾವಿತಿ ಹ್ಯಸ್ಮಾದ್ಧಾತೋರುತ್ಪತ್ತಿರೇವ ಹಿ ॥೧೧೩॥

ನಿವೃತ್ತಿರ್ವ್ಯಾಪ್ತಿಯುಕ್ ಪ್ರಾಯಃ .....

ವಿದವೆನ್ನುವ ಧಾತುವು ಉತ್ಪತ್ತಿ ಎನ್ನುವ ಅರ್ಥದಲ್ಲಿ ವ್ಯಾಖ್ಯಾನ ಮಾಡಲ್ಪಡುವುದರಿಂದ ವಿದ್ಯೇತ ಎಂದರೆ ಹುಟ್ಟುವಿಕೆ ಎಂದೇ ತಿಳಿಯತಕ್ಕದ್ದು. ಯಾವುದಕ್ಕೆ ಉತ್ಪತ್ತಿಯಿದೆಯೋ ಅದಕ್ಕೆ ವಿನಾಶವೂ ಇರುವುದು ಎಂದು

ಹೆಚ್ಚಾಗಿ ವ್ಯಾಪ್ತಿಯು ಇರುವುದು.

ಪಂಚಭೇದ ನಿರೂಪಣೆ

.....ಪ್ರಪಂಚೋ ಭೇದಪಂಚಕಃ ।

ಜೀವೇಶ್ವರಭದಾ ಚೈವ ಜಡೇಶ್ವರಭದಾ ತಥಾ ॥೧೧೪॥

ಜೀವಭೇದೋ ಮಿಥಶ್ಚೈವ ಜಡಜೀವಭದಾ ತಥಾ ।

ಮಿಥಶ್ಚ ಜಡಭೇದೋಽಯಂ ಪ್ರಪಂಚೋ ಭೇದಪಂಚಕಃ ॥೧೧೫॥

ಪ್ರಪಂಚ ಎನ್ನುವ ಶಬ್ದವು ಪಂಚಭೇದಗಳ ಸಮೂಹವನ್ನು ಹೇಳುತ್ತದೆ. ಜೀವರಿಗೂ ಈಶ್ವರನಿಗೂ ಭೇದ, ಜಡಗಳಿಗೂ ಈಶ್ವರನಿಗೂ ಭೇದ, ಜೀವ-ಜೀವರಿಗೆ ಪರಸ್ಪರ ಭೇದ, ಜೀವರಿಗೂ ಜಡಗಳಿಗೂ ಭೇದ, ಜಡ-ಜಡಗಳಿಗೆ ಪರಸ್ಪರ ಭೇದ – ಹೀಗೆ ಉತ್ಕೃಷ್ಟವಾದ ಐದು ವಿಧದ ಭೇದಗಳಿಂದ ಕೂಡಿರುವುದೇ ಪ್ರಪಂಚ ಎನಿಸುವುದು.

ಸೋಽಯಂ ಸತ್ಯೋ ಹ್ಯನಾದಿಶ್ಚ ಸಾದಿಶ್ಚೇನ್ನಾಶಮಾಪ್ನುಯಾತ್ ।

ದ್ವೈತಂ ನ ವಿದ್ಯತ ಇತಿ ತಸ್ಮಾದಜ್ಞಾನಿನಾಂ ಮತಂ ॥೧೧೬॥

ಪಂಚಭೇದಾತ್ಮಕವಾದ ಈ ಪ್ರಪಂಚವು ಸತ್ಯವೂ ಅನಾದಿಯೂ ಆಗಿದೆ. ಸಾದಿಯಾಗಿದ್ದರೆ ನಾಶವನ್ನು ಹೊಂದುತ್ತಿತ್ತು. ಆದುದರಿಂದ ಭೇದವು ಇಲ್ಲವೆನ್ನುವುದು ಅಜ್ಞಾನಿಗಳ ಮತ.

ಇತಿ ಶ್ರುತೇರ್ಮಿತಂ ತ್ರಾತಂ ಮಾಯಾಖ್ಯಹರಿವಿದ್ಯಯಾ ।

ಉತ್ತಮೋಽರ್ಥೋ ಹರಿಸ್ತ್ವೇಕಃ ತದ್ಯನನ್ಮಧ್ಯಮಾಧಮಂ ॥೧೧೭॥

'ಮಾಯಾಮಾತ್ರಮಿದಂ ದ್ವೈತಂ' ಎನ್ನುವ ಶ್ರುತಿಯ ವ್ಯಾಖ್ಯಾನ ಮಾಡುತ್ತಾರೆ. ಈ ಭೇದವು ಮಾಯಾ ಎನ್ನುವ ಶ್ರೀಹರಿಯ ವಿಜ್ಞಪ್ತಿಯಿಂದ ಮಿತವೂ, ರಕ್ಷಿಸಲ್ಪಟ್ಟದ್ದೂ ಆಗಿದೆ. ಈಗ 'ಅದ್ವೈತಂ ಪರಮಾರ್ಥತಃ' ಎನ್ನುವ ಶ್ರುತಿಯ ವ್ಯಾಖ್ಯಾನವನ್ನು ಮಾಡುತ್ತಾರೆ. ಸರ್ವೋತ್ತಮನಾದ ಶ್ರೀಹರಿಯ ದೆಶೆಯಿಂದ ಇತರವಾದುದು ಮಧ್ಯಮ ಹಾಗೂ ಅಧಮಗಳಾಗಿವೆ. ಶ್ರೀತತ್ವವು ಮಧ್ಯಮವೆನಿಸಿದರೆ ಬ್ರಹ್ಮಾದಿಗಳು ಅಧಮರು. ಆದಕಾರಣ ಸರ್ವೋತ್ಕೃಷ್ಟವಾದ ವಸ್ತುವೆಂದರೆ ಶ್ರೀಹರಿಯೊಬ್ಬನೇ.

ಈಗ ಪರಿಣಾಮವಾದಿಯೂ ವಿವರ್ತವಾದಿಯೂ 'ಪ್ರತಿಜ್ಞಾದೃಷ್ಟಾಂತಾಸು-

ಪರೋಧಾತ್' ಎನ್ನುವ ಸೂತ್ರದ ವ್ಯಾಖ್ಯಾನಾವಸರದಲ್ಲಿ ವಿಷಯವಾಕ್ಯವೆಂದು ಸ್ವೀಕರಿಸಿರುವ 'ಉತ ತಮಾದೇಶಮಪ್ರಾಕ್ಷ್ಯ' ಇತ್ಯಾದಿ ಶ್ರುತಿಯನ್ನು ವ್ಯಾಖ್ಯಾನ ಮಾಡುತ್ತಾರೆ -

ಈ ಶ್ರುತಿಗೆ ಪರಿಣಾಮವಾದಿಗಳ ವ್ಯಾಖ್ಯಾನ ಹೀಗಿದೆ -

ಬ್ರಹ್ಮನು ಸಕಲ ವಸ್ತುಗಳಿಗೆ ಉಪಾದಾನಕಾರಣನೆಂದು ತಿಳಿಯದ ಶ್ವೇತಕೇತುವು, "ಒಂದು ವಸ್ತುವಿನ ಜ್ಞಾನದಿಂದ ಮತ್ತೊಂದರ ಜ್ಞಾನವು ಎಲ್ಲಿಯೂ ಕಾಣದಿರುವುದರಿಂದ, ಬ್ರಹ್ಮನನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆಯೇ ಎಂದು ಹೇಗೆ ಹೇಳುತ್ತೀರಿ" (ಕಥಂ ನು ಭಗವಃ ಸ ಆದೇಶೋ ಭವತಿ) ಎಂದು ಗುರುಗಳಾದ ಉದ್ದಾಲಕರನ್ನು ಪ್ರಶ್ನಿಸುತ್ತಾನೆ. ಆಗ ಉದ್ದಾಲಕರು ಶ್ವೇತಕೇತುವನ್ನು ಕುರಿತು, "ಜಗತ್ತಿಗೆ ಬ್ರಹ್ಮನು ಉಪಾದಾನ ಕಾರಣ. ಜಗತ್ತಿಗೂ ಬ್ರಹ್ಮನಿಗೂ ಅಭೇದವಿದೆ. ಆದಕಾರಣ ಬ್ರಹ್ಮನನ್ನು ತಿಳಿದರೆ ಸಕಲ ಜಗತ್ತಿನ ಜ್ಞಾನವಾಗುವುದು" ಎಂದು ಉಪದೇಶಿಸಿ, ಅದನ್ನು ಸ್ಪಷ್ಟೀಕರಿಸಲು ಮೂರು ದೃಷ್ಟಾಂತಗಳನ್ನು ನೀಡುತ್ತಾರೆ.

'ಯಥಾ ಸೋಮ್ಯೈಕೇನ ಮೃತ್ಪಿಂಡೇನ ವಿಜ್ಞಾತೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್।

'ಯಥಾ ಸೋಮ್ಯೈಕೇನ ಲೋಹಮಣಿನಾ ವಿಜ್ಞಾತೇನ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾತ್।'

'ಯಥಾ ಸೋಮ್ಯೈಕೇನ ನಖನಿಕೃಂತನೇನ ವಿಜ್ಞಾತೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್।' (ಛಾಂದೋಗ್ಯ).

ಹೇಗೆ ಒಂದು ಮಣ್ಣಿನ ಮುದ್ದೆಯ ಜ್ಞಾನದಿಂದ ಮಣ್ಣಿನಿಂದ ಮಾಡಲ್ಪಟ್ಟ ಎಲ್ಲ ವಸ್ತುಗಳ ಜ್ಞಾನವಾಗುವುದೋ, ಒಂದು ಲೋಹಮಣಿಯ ಜ್ಞಾನದಿಂದ ಎಲ್ಲ ಲೋಹಮಯ ವಸ್ತುಗಳ ಜ್ಞಾನವಾಗುವುದೋ, ಒಂದು ಉಗುರು-ಕತ್ತರಿಯ ಜ್ಞಾನದಿಂದ ಎಲ್ಲ ಉಕ್ಕಿನ ವಸ್ತುಗಳ ಜ್ಞಾನವಾಗುವುದೋ, ಅದೇ ಪ್ರಕಾರವಾಗಿ ಒಬ್ಬ ಬ್ರಹ್ಮನನ್ನು ತಿಳಿಯುವುದರಿಂದ ಬ್ರಹ್ಮನ ಪರಿಣಾಮರೂಪವಾದ ಜಗತ್ತಿನ ಎಲ್ಲ ವಸ್ತುಗಳ ಜ್ಞಾನವಾಗುವುದು. ಪ್ರತಿಯೊಂದು ದೃಷ್ಟಾಂತ ವಾಕ್ಯದ ಜೊತೆಯಲ್ಲಿ 'ವಾಚಾರಂಭಣಂ ವಿಕಾರೋ

ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' ಇತ್ಯಾದಿಯಾಗಿ ಹೇಳಲಾಗಿದೆ. ಘಟ ಮೊದಲಾದವು ಮಣ್ಣು ಮೊದಲಾದವುಗಳ ವಿಕಾರಗಳು ಹಾಗೂ ಅವುಗಳ ನಾಮಧೇಯಗಳು ವಾಗಿಂದ್ರಿಯದಿಂದ ಹುಟ್ಟಿದಂಥವು. ಆದಕಾರಣ ಘಟಾದಿಗಳು ಮಣ್ಣಿನ ಕಾರ್ಯವೇ ಆಗಿದ್ದರೂ ಮಣ್ಣಿನಿಂದ ಅಭಿನ್ನವೆಂದೇ ತಿಳಿಯಲ್ಪಡುವುದು. 'ಉತ ತಮಾದೇಶಮಪ್ರಾಕ್ಷ್ಯೋ ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಂ' ಇತ್ಯಾದಿ ಶ್ರುತಿಯಿಂದ ಜಗತ್ತು ಬ್ರಹ್ಮನ ಪರಿಣಾಮವಾಗಿರುವುದರಿಂದ ಜಗತ್ತಿಗೆ ಬ್ರಹ್ಮನಿಂದ ಅಭೇದವಿರುವುದೆಂದು ತಿಳಿದುಬರುವುದು. ಆದಪ್ರಯುಕ್ತ ಒಬ್ಬ ಬ್ರಹ್ಮನನ್ನು ತಿಳಿಯುವುದರಿಂದ ಎಲ್ಲ ಜಗತ್ತನ್ನೂ ತಿಳಿದಂತಾಗುವುದು. ಈ ಪ್ರಕಾರವಾಗಿ ಪರಿಣಾಮವಾದಿಗಳು ಬ್ರಹ್ಮಾಭೇದ ಪರವಾಗಿ ಈ ಶ್ರುತಿಗೆ ವ್ಯಾಖ್ಯಾನ ಮಾಡುತ್ತಾರೆ.

ಇದೇ ಶ್ರುತಿಗೆ ವಿವರ್ತವಾದಿಗಳು ಹೀಗೆ ವ್ಯಾಖ್ಯಾನ ಮಾಡುತ್ತಾರೆ –

ಒಂದು ಮಣ್ಣಿನ ಮುದ್ದೆಯನ್ನು ಪಾರಮಾರ್ಥಿಕವಾಗಿ ಮಣ್ಣು ಎಂದು ತಿಳಿದರೆ ಮೃಣ್ಮಯವಾದ ಘಟಾದಿ ಎಲ್ಲ ವಸ್ತುಗಳೂ ಅದೇ ಮಣ್ಣಿನಿಂದಲೇ ಆದಂಥವು ಎಂದು ತಿಳಿಯಲ್ಪಡುವುದು. ಘಟಾದಿಗಳು ಮಣ್ಣೇ ಆಗಿದ್ದರೂ ಘಟ ಇತ್ಯಾದಿ ನಾಮಧೇಯವು ಕೇವಲ ವ್ಯವಹಾರಕ್ಕಾಗಿ ಮಾತ್ರ ಮಾತಿನ ರೂಪದಲ್ಲಿ ಹುಟ್ಟಿಕೊಳ್ಳುವುದು. ಕೇವಲ ವಚನದಲ್ಲಿ ಮಾತ್ರ ವಿಕಾರವು, ವಾಸ್ತವವಾಗಿ ವಿಕಾರ ಎಂಬುದಿಲ್ಲ. ಅಂದರೆ ಘಟಾದಿಗಳು ಸುಳ್ಳು, ಮೃತ್ತಿಕಾ ಎನ್ನುವುದು ಮಾತ್ರ ಸತ್ಯ. ಆದಪ್ರಯುಕ್ತ ಬ್ರಹ್ಮನೊಬ್ಬನೇ ಸತ್ಯ, ಉಳಿದ ಜಗತ್ತೆಲ್ಲವೂ ಕೇವಲ ವ್ಯಾವಹಾರಿಕವಾದ್ದರಿಂದ ಸುಳ್ಳು ಎಂಬುದಾಗಿ ಈ ದೃಷ್ಟಾಂತಗಳಿಂದ ನಿಶ್ಚಿತವಾಗುವುದು. ಇದು ವಿವರ್ತವಾದಿಗಳ ವ್ಯಾಖ್ಯಾನ.

ಇವೆರಡು ವ್ಯಾಖ್ಯಾನಗಳೂ ಶ್ರುತಿಗೆ ಅಭಿಪ್ರೇತವಾದ ಅರ್ಥಕ್ಕೆ ವಿರೋಧವಾಗಿವೆ. ಒಂದು ವಸ್ತುವಿನ ಜ್ಞಾನದಿಂದ ಸರ್ವವಸ್ತುಗಳ ಜ್ಞಾನ ಎನ್ನುವ ಪ್ರತಿಜ್ಞೆಗೆ ಪೂರಕವಾಗಿ ಉಕ್ತವಾಗಿರುವ ಮೃತ್ಪಿಂಡಾದಿ ದೃಷ್ಟಾಂತಗಳು ವಿಕಾರ-ವಿವರ್ತ ಎಂಬ ಅಭಿಪ್ರಾಯದಲ್ಲಿ ಹೇಳಲ್ಪಟ್ಟಿವೆ ಎನ್ನುವುದು ಶ್ರುತಿವಾಕ್ಯದಿಂದ ನೇರವಾಗಿ ತೋರುವುದಿಲ್ಲ. ಆದರೂ ವಾಚಾರಂಭಣಂ

ಎನ್ನುವ ಉಪಪಾದಕ ವಾಕ್ಯದ ಬಲದಿಂದ ಈ ರೀತಿ ಅರ್ಥ ಮಾಡುತ್ತೇವೆ ಎಂದು ಹೇಳಿದರೆ, ಶ್ರುತಿಯ ನಿಜವಾದ ಅರ್ಥವನ್ನು ವಿವರಿಸುವ ಮೂಲಕ ಪರವಾದಿಗಳ ವ್ಯಾಖ್ಯಾನ ಸರಿಯಲ್ಲ ಎಂದು ತೋರಿಸುತ್ತಾರೆ -

ವಾಚಾರಂಭಣಂ ಶ್ರುತ್ಯರ್ಥ

ವಾಚಾರಬ್ಧಂ ತು ಸಾಂಕೇತ್ಯಂ ನಾಮ ಸ್ಯಾದ್ವಿಕೃತಂ ಬಹು ।
ನಿತ್ಯಂ ತು ನಾಮಧೇಯಂ ಯನ್ಮೃತ್ತಿಕೇತ್ಯಾದಿ ವೈದಿಕಂ ॥೧೧೮॥
ಪ್ರಾಧಾನ್ಯಾತ್ತತ್ಪರಿಜ್ಞಾನಾತ್ಪ್ರಾಕೃತಾಜ್ಞೋऽಪಿ ಪೂರುಷಃ ।
ವಿದ್ವಾನಿತ್ಯುಚ್ಯತೇ ಸದ್ಭಿರೇವಂ ನಿತ್ಯಪರಾತ್ಮವಿತ್ ॥೧೧೯॥

ವಾಚಾರಂಭಣ ಶಬ್ದಕ್ಕೆ ವಾಗಿಂದ್ರಿಯದಿಂದ ಉತ್ಪತ್ತಿಯಾದದ್ದು ಎಂದರ್ಥ. ಈ ಶಬ್ದದಿಂದ ಸಾಂಕೇತಿಕ ನಾಮವೇ ವಾಚ್ಯವಾಗುವುದು. ವಿವಿಧಃ ಕಾರಃ ವಿಕಾರಃ ಎನ್ನುವ ವ್ಯುತ್ಪತ್ತಿಯಿಂದ ವಿಕಾರ ಎಂದರೆ ಅನೇಕ ಪ್ರಕಾರವುಳ್ಳದ್ದು ಎಂದರ್ಥವಾಗುವುದು. ಮೃತ್ತಿಕಾ ಲೋಹಮಣಿ ಇವೇ ಮೊದಲಾದ ಸಂಸ್ಕೃತ ನಾಮಧೇಯವು ನಿತ್ಯವಾದದ್ದು. ಶ್ರುತಿಯಲ್ಲಿನ ವೈದಿಕ ಶಬ್ದಕ್ಕೆ ಸಂಸ್ಕೃತವೆಂದೂ ಸತ್ಯ ಎನ್ನುವ ಶಬ್ದಕ್ಕೆ ನಿತ್ಯವೆಂದೂ ಅರ್ಥಮಾಡಬೇಕು. ಸಂಸ್ಕೃತ ಭಾಷೆಗೆ ಪ್ರಾಧಾನ್ಯವಿರುವ ಪ್ರಯುಕ್ತ, ಪ್ರಾಕೃತ ಭಾಷೆಯ ಜ್ಞಾನವಿಲ್ಲದಿದ್ದರೂ ಸಂಸ್ಕೃತ ಭಾಷೆಯ ಜ್ಞಾನವನ್ನು ಹೊಂದಿರುವ ಪುರುಷನನ್ನು ಸಜ್ಜನರು ಎಲ್ಲವನ್ನೂ ತಿಳಿದವನೆಂದು ಹೇಳುತ್ತಾರೆ. ಇದೇ ರೀತಿ ನಿತ್ಯನಾದ ಪ್ರಧಾನನಾದ ಪರಮಾತ್ಮನನ್ನು ತಿಳಿದ ಪುರುಷನೂ ಕೂಡ ಎಲ್ಲವನ್ನೂ ತಿಳಿದವನು ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ.

ವಿವರಣೆ: ಸಾಂಕೇತಿಕ ನಾಮವು ಉತ್ಪತ್ತಿಯನ್ನು ಹೊಂದಿರುವುದರಿಂದ ಅನಿತ್ಯವೆನಿಸುತ್ತದೆ. ಪುರುಷನ ಇಚ್ಛಾನುಸಾರ ಅನೇಕ ವಿಧವಾಗಿರುವುದರಿಂದ ಅದು ವಿಕಾರವೆಂದು ಹೇಳಲ್ಪಡುತ್ತದೆ. ಮೃತ್ತಿಕಾ ಇತ್ಯಾದಿ ನಾಮಧೇಯವು ವೈದಿಕವಾಗಿರುವುದರಿಂದ ನಿತ್ಯವೂ ಅನಾದಿಯೂ ಆಗಿದೆ. ಕೃತಕವೂ, ಅನಿತ್ಯವೂ, ಪರರ ಅಪೇಕ್ಷೆಯನ್ನು ಹೊಂದಿರುವುದೂ ಆಗಿರುವುದರಿಂದ ಸಾಂಕೇತಿಕ ನಾಮಧೇಯವು ಅಪ್ರಧಾನವಾಗಿದೆ. ಸಂಸ್ಕೃತವು ಅನಾದಿನಿತ್ಯವೂ ಪರರ ಅಪೇಕ್ಷೆಯಿಲ್ಲದಿರುವುದೂ ಆಗಿರುವುದರಿಂದ ಪ್ರಧಾನವೆನಿಸಿದೆ.

ಅಪ್ರಧಾನವಾದ ಪ್ರಾಕೃತ ಭಾಷೆಯ ಶಬ್ದಗಳು ಪ್ರಧಾನವಾದ ಸಂಸ್ಕೃತ ಭಾಷೆಯ ವಿಕಾರಗಳೇ ಆಗಿವೆ. ಆದುದರಿಂದ ಪ್ರದಾನವಾದ ಸಂಸ್ಕೃತದ ಜ್ಞಾನದಿಂದ ಅಪ್ರಧಾನವಾದ ಪ್ರಾಕೃತ ಭಾಷೆಯ ಜ್ಞಾನವಾಗುವುದು. ಇದೇ ರೀತಿ ಪರಾನಪೇಕ್ಷನಾದ ಪರಮಾತ್ಮನು ಪ್ರಧಾನ. ಎಲ್ಲ ರೀತಿಯಿಂದಲೂ ಪರಮಾತ್ಮನನ್ನೇ ಅವಲಂಬಿಸಿರುವ ಕಾರಣ ಸಕಲ ಜಗತ್ತು ಅಪ್ರಧಾನ. ಆದಪ್ರಯುಕ್ತ ಪ್ರಧಾನನಾದ ಒಬ್ಬ ಪರಮಾತ್ಮನನ್ನು ತಿಳಿದರೆ ಇಡೀ ಜಗತ್ತನ್ನು ತಿಳಿದಂತೆಯೇ ಎಂದು ಶ್ರುತಿಯು ಹೇಳಿದೆ. ಪರಮಾತ್ಮನೊಬ್ಬನೇ ಸತ್ಯ ಉಳಿದ ಜಗತ್ತೆಲ್ಲವೂ ಸುಳ್ಳು ಎನ್ನುವುದರಲ್ಲಿ ಶ್ರುತಿಗೆ ಸಮ್ಮತವಿಲ್ಲ.

ಸತ್ಯ ಶಬ್ದಕ್ಕೆ ನಿತ್ಯವೆನ್ನುವ ಅರ್ಥವನ್ನು ನಾವು ಒಪ್ಪುವುದಿಲ್ಲ. ಏಕೆಂದರೆ ಸತ್ಯ ಶಬ್ದಕ್ಕೆ ನಿತ್ಯವೆನ್ನುವ ಅರ್ಥದಲ್ಲಿ ರೂಢಿಯೂ ಇಲ್ಲ ಯೋಗವೂ ಇಲ್ಲ ಎಂದು ಹೇಳಿದರೆ –

ಸದಾತನಂ ಸತ್ಯಮಿತಿ ನಿತ್ಯಮೇವೋಚ್ಯತೇ ಬುಧೈಃ ।
ಪ್ರಯೋಗಶ್ಚೋತ್ತರತ್ರಾಸ್ತಿ ಜರಾ ಯದ್ಯೇನಮಾಪ್ನುಯಾತ್ ॥೧೨೦॥
ದೇಹಃ ಪ್ರಧ್ವಂಸತೇ ಚಾಯಂ ಕಿಂ ತತೋಽಸ್ಯಾತಿ(ಏ)ಶಿಷ್ಯತೇ ।
ಹನ್ಯತೇ ನ ವಧೇನಾಯಂ ಜರಯಾ ನ ಚ ಜೀರ್ಯತೇ ॥
ಏತತ್ಸತ್ಯಂ ಬ್ರಹ್ಮಪುರಮಿತಿ ನಿತ್ಯತ್ವ ಏವ ಹಿ ॥೧೨೧॥

ಸದಾತನ ಅಂದರೆ ಯಾವಾಗಲೂ ಇರುವುದು ಸತ್ಯ ಎನ್ನುವ ನಿರ್ವಚನದಿಂದ ಸತ್ಯ ಎನ್ನುವ ಪದದಿಂದ ನಿತ್ಯವಾದುದು ಹೇಳಲ್ಪಡುತ್ತದೆ. ಶಬ್ದ ನಿರ್ವಚನವನ್ನು ಬಲ್ಲ ವೈಯಾಕರಣಿಗಳು ನಿತ್ಯವಾದುದನ್ನು ಸತ್ಯ ಎನ್ನುವ ಪದದಿಂದ ಹೇಳುತ್ತಾರೆ. ಎಂಟನೇ ಪ್ರಘಟ್ಟಕದಲ್ಲಿ ಸತ್ಯಶಬ್ದಕ್ಕೆ ನಿತ್ಯತ್ವದಲ್ಲಿಯೇ ಪ್ರಯೋಗವೂ ಕೂಡ ಇದೆ. ಆ ಪ್ರಯೋಗವನ್ನೇ ತೋರಿಸುವುದಕ್ಕಾಗಿ ಇಲ್ಲಿ 'ಯದೈನಂ ಜರಾವಾಪ್ನೋತಿ ಪ್ರಧ್ವಂಸತೇ ವಾ ಕಿಂ ತತೋಽಸ್ಯಾತಿವಿಶಿಷ್ಯತೇ। ಇತಿ ಸ ಬ್ರೂಯಾನ್ನಾಸ್ಯ ಜರಯೈತಜ್ಜೀರ್ಯತೇ ನ ವಧೇನಾಸ್ಯ ಹನ್ಯತೇ ಏತತ್ಸತ್ಯಂ ಬ್ರಹ್ಮಪುರಂ॥' ಎನ್ನುವ ವಾಕ್ಯವನ್ನು ಅರ್ಥತಃ ಪಠಿಸುತ್ತಾರೆ 'ಜರಾ ಯದ್ಯೇನಂ' ಇತ್ಯಾದಿ. ಈ ವಾಕ್ಯದ ಅರ್ಥ ಕೆಳಕಂಡಂತಿದೆ –

ಈ ಶರೀರವು ಯಾವಾಗ ಮುದಿತನವನ್ನು ಹೊಂದುವುದೋ ಅಥವಾ

ನಷ್ಟವಾಗುವುದೋ, ಆಗ ಈ ಶರೀರದಲ್ಲಿ ಅಂತರ್ಗತನಾದ ಪರಮಾತ್ಮನು ಆಕಾಶದಂತೆ ನಾಶವಾಗದೇ ಇರುವನೋ ಅಥವಾ ಘಟಾದಿಗಳಂತೆ ನಾಶವನ್ನು ಹೊಂದುವನೋ ಎಂದು ಪ್ರಶ್ನೆಯ ರೂಪದಲ್ಲಿ ಈ ವಾಕ್ಯದ ಪೂರ್ವಭಾಗ. ಅದಕ್ಕೆ ಉತ್ತರರೂಪವಾಗಿ ಈ ವಾಕ್ಯದ ಉತ್ತರಭಾಗ. ಈ ಶರೀರಕ್ಕೆ ಮುಪ್ಪು ಬಂದಾಗ ಪರಮಾತ್ಮನಾದರೋ ಮುಪ್ಪನ್ನು ಹೊಂದುವುದಿಲ್ಲ. ಈ ಶರೀರದ ಸಂಹಾರವಾದಾಗಲೂ ಪರಮಾತ್ಮನು ಸಂಹರಿಸಲ್ಪಡುವುದಿಲ್ಲ. ಈ ಪರಮಾತ್ಮನು ಪೂರ್ಣನಾದುದರಿಂದ ಪುರ ಎಂದೂ, ನಿತ್ಯನಾದ್ದರಿಂದ ಸತ್ಯ ಎಂದೂ ಕರೆಯಲ್ಪಡುತ್ತಾನೆ. ಪರಮಾತ್ಮನಿಗೆ ವಿನಾಶವಿಲ್ಲವೆಂಬುದು ಇಲ್ಲಿ ಪ್ರಸಕ್ತವಾಗಿರುವುದರಿಂದ, ಸತ್ಯ ಶಬ್ದಕ್ಕೆ ನಿತ್ಯ ಎಂದೇ ಅರ್ಥ ಮಾಡಬೇಕು. ಪರಮಾತ್ಮನು ಸತ್ಯ ಉಳಿದೆಲ್ಲವೂ ಅಸತ್ಯ ಎಂದು ಹೇಳುವಲ್ಲಿ ಈ ವಾಕ್ಯಕ್ಕೆ ತಾತ್ಪರ್ಯವಿರುವುದಿಲ್ಲ. ದೇಹಾದಿಗಳಿಗೆ ಜರಾಮರಣಾದಿಗಳು ಹೇಳಲ್ಪಟ್ಟಿವೆ. ಆದಪ್ರಯುಕ್ತ ಅವು ಅನಿತ್ಯ ಎಂದೇ ತಾತ್ಪರ್ಯ. ಅವು ಅನೃತವೆಂದು ಅರ್ಥ ಮಾಡಕೂಡದು. ಪರಮಾತ್ಮನಿಗೆ ಜರಾಮರಣಾದಿಗಳು ಇಲ್ಲವಾದ್ದರಿಂದ ಇಲ್ಲಿ ಪ್ರಯೋಗವಾಗಿರುವ ಸತ್ಯ ಶಬ್ದಕ್ಕೆ ನಿತ್ಯತ್ವವನ್ನೇ ತಿಳಿಯಬೇಕು.

ಹೀಗೆ ವಾಚಾರಂಭಣಂ ಇತ್ಯಾದಿ ವಾಕ್ಯಗಳಿಗೆ ತಮ್ಮಮತದ ಪ್ರಕಾರವಾಗಿ ವ್ಯಾಖ್ಯಾನ ಮಾಡಿ, ಈಗ ವಿವರ್ತವಾದಿಗಳ ವ್ಯಾಖ್ಯಾನದಲ್ಲಿನ ದೋಷಗಳನ್ನು ಹೇಳುತ್ತಾರೆ –

ವಾಚಾರಂಭಣಮಿತ್ಯುಕ್ತೇ ಮಿಥ್ಯೇತ್ಯಶ್ರುತಕಲ್ಪನಂ ।
ಪುನರುಕ್ತಿರ್ನಾಮಧೇಯಮಿತೀತ್ಯಸ್ಯ ನಿರರ್ಥತಾ ॥೧೨॥

ವಾಚಾರಂಭಣಂ ಎನ್ನುವ ಶಬ್ದವು ಮಿಥ್ಯೆಯೆಂದು ವ್ಯಾಖ್ಯಾನ ಮಾಡುವುದರಿಂದ ಅಶ್ರುತಕಲ್ಪನಾ ಎನ್ನುವ ದೋಷ ಬರುವುದು. ನಾಮಧೇಯವೆನ್ನುವುದು ಪುನರುಕ್ತಿಯಾಗುವುದು. ಮೃತ್ತಿಕೇತ್ಯೇವ ಎನ್ನುವಲ್ಲಿ ಇರುವ ಇತಿ ಶಬ್ದಕ್ಕೆ ನಿರರ್ಥಕತ್ವವು ಬರುವುದು.

ವಿವರಣೆ: ಪರಕೀಯರ ವ್ಯಾಖ್ಯಾನದ ಪ್ರಕಾರ ವಿಕಾರ ಮತ್ತು ನಾಮಧೇಯ ಇವೆರಡೂ ವಾಚಾರಂಭಣಂ ಎನ್ನುವುದಕ್ಕೆ ವ್ಯಾಖ್ಯಾನವಾಗಿವೆ. ಆದಕಾರಣ ಪುನರುಕ್ತಿಯಾಗುವುದು. ವಾಚಾರಂಭಣಂ ವಿಕಾರಃ ನಾಮಧೇಯಂ ಇವುಗಳಿಗೆ

ಅನ್ವಯವಿಲ್ಲದಿರುವುದರಿಂದ 'ಮಾತ್ರ' ಶಬ್ದವನ್ನು ಅಧ್ಯಾಹಾರ ಮಾಡಿಕೊಂಡು ಮಿಥ್ಯೆ ಎಂದು ಪರರು ವ್ಯಾಖ್ಯಾನ ಮಾಡುತ್ತಾರೆ. ಇದು ಅಶ್ರುತಕಲ್ಪನಾ. ಮೃತ್ತಿಕೆಗೇ ಸತ್ಯತ್ವವನ್ನು ಹೇಳುವುದು ಪರರಿಗೆ ಇಷ್ಟವಾದುದು. ಮಾಯಾವಾದಿಗಳ ಪ್ರಕಾರ ಮಣ್ಣೇ ಸತ್ಯ ಉಳಿದದ್ದೆಲ್ಲ ಮಿಥ್ಯಾ ಎಂದು ಹೇಳಲು 'ಮೃತ್ತಿಕೈವ ಸತ್ಯಂ' ಎಂದು ವಾಚಾರಂಭಣ ಶ್ರುತಿಯಲ್ಲಿ ಹೇಳಬೇಕಾಗಿತ್ತು. ಇತಿ ಶಬ್ದಕ್ಕೆ ಅನೇಕಾರ್ಥಗಳಿವೆ. ಅನ್ಯಾರ್ಥ, ಹೇತ್ವರ್ಥ, ಏವಾರ್ಥ, ಪ್ರಕಾರಾರ್ಥ, ಇತ್ಯಾದಿ, ಮೊದಲಾದ ಅರ್ಥದಲ್ಲಿ ಇತಿ ಶಬ್ದವು ಪ್ರಯೋಗಿಸಲ್ಪಡುತ್ತದೆ. ಅದರಲ್ಲಿ ಯಾವುದೂ ಈ ಸಂದರ್ಭದಲ್ಲಿ ಯುಕ್ತವಾಗುವುದಿಲ್ಲ. ಆದ್ದರಿಂದ 'ಮೃತ್ತಿಕೇತ್ಯೇವ ಸತ್ಯಂ' ಎಂದು ಶ್ರುತಿಯಲ್ಲಿರುವ ಇತಿ ಶಬ್ದವು ವ್ಯರ್ಥವಾಗುವುದು. ಹೀಗೆ ಪರರ ವ್ಯಾಖ್ಯಾನಕ್ಕೆ ಅನೇಕ ದೋಷಗಳು ಬರುತ್ತವೆ.

ಈಗ 'ಯಥಾ ಸೌಮ್ಯ' ಇತ್ಯಾದಿ ದೃಷ್ಟಾಂತ ವಾಕ್ಯಗಳನ್ನು ತಮ್ಮ ಮತದ ಪ್ರಕಾರ ವ್ಯಾಖ್ಯಾನ ಮಾಡುವ ಅವಸರದಲ್ಲಿ ಪರಕೀಯ ವ್ಯಾಖ್ಯಾನದಲ್ಲಿರುವ ದೋಷಗಳನ್ನು ತೋರಿಸುತ್ತಾರೆ –

ಏಕಃ ಪಿಂಡೋ ಮಣಿಶ್ಚೇತಿ ಪದವೈಯರ್ಥ್ಯಮೇವ ಚ ।
ಏಕಾರಿತ್ವವಿವಕ್ಷಾಯಾಂ ನಚೈಕ ನಖಕೃಂತನಂ ॥೧೨೩॥
ಸರ್ವಂ ಕಾರ್ಷ್ಣಾಯಸಂ ಚ ಸ್ಯಾತ್ ಅತಃ ಸಾದೃಶ್ಯ ಏವ ಚ ।
ವಿವಕ್ಷಾಽತ್ರ ತು ನಿತ್ಯತ್ವೇ ಪ್ರಧಾನ್ಯೇ ಚೋಕ್ತವರ್ತ್ಮನಾ ॥೧೨೪॥

ಜಗತ್ತು ಬ್ರಹ್ಮನ ವಿಕಾರ ಅಥವಾ ಬ್ರಹ್ಮನಲ್ಲಿ ಆರೋಪಿತ ಎಂಬ ಅಭಿಪ್ರಾಯದಿಂದ ಒಂದು ವಸ್ತುವಿನ ಜ್ಞಾನದಿಂದ ಎಲ್ಲ ವಸ್ತುಗಳ ಜ್ಞಾನವು ಎಂದು ಹೇಳುವುದಾದರೆ, 'ಮೃದಾ ವಿಜ್ಞಾತಯಾ ಮೃಣ್ಮಯಂ ವಿಜ್ಞಾತಂ ಸ್ಯಾತ್' 'ಲೋಹೇನ ವಿಜ್ಞಾತೇನ ಲೋಹಮಯಂ ವಿಜ್ಞಾತಂ ಸ್ಯಾತ್' 'ಕಾರ್ಷ್ಣಾಯಸಾ ವಿಜ್ಞಾತೇನ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್' ಇಷ್ಟರಿಂದಲೇ ಇಷ್ಟಪೂರ್ತಿಯಾಗುವುದು. ಆದಪ್ರಯುಕ್ತ ಮೂರು ಏಕ ಶಬ್ದಗಳೂ, ಪಿಂಡ, ಮಣಿ, ನಖನಿಕೃಂತನ ಶಬ್ದಗಳೂ, ಮೂರು ಸರ್ವ ಎನ್ನುವ ಶಬ್ದಗಳೂ ಅರ್ಥವಿಲ್ಲದಂತಾಗುವುವು. ಎಲ್ಲ ಮೃಣ್ಮಯಾದಿಗಳಿಗೂ ಒಂದು ಮೃತ್ಪಿಂಡದ

ವಿಕಾರತ್ವವು ಕೂಡುವುದಿಲ್ಲವಾದ್ದರಿಂದ ವಿರುದ್ಧಾರ್ಥವುಳ್ಳ ಶಬ್ದಗಳಾಗುವುವು. ಯಾವ ಒಂದು ಮೃಣ್ಮಯಕ್ಕೂ ಒಂದು ಮೃತ್ಪಿಂಡದಲ್ಲಿ ಆರೋಪಿತತ್ವವು ಇರುವುದಿಲ್ಲ. ಅಂದಮೇಲೆ ಎಲ್ಲ ಮೃಣ್ಮಯಗಳಿಗೆ ಆರೋಪಿತತ್ವವು ಸರ್ವಥಾ ಕೂಡಲಾರದು. ನಖನಿಕೃಂತನ ದೃಷ್ಟಾಂತದಲ್ಲಾದರೋ ಕಾರ್ಯರೂಪವಾದ ಎಲ್ಲ ಕಬ್ಬಿಣದ ವಸ್ತುಗಳಿಗೂ ಒಂದು ಉಗುರುಕತ್ತರಿಯು ಕಾರಣರೂಪವು ಎನ್ನುವುದು ಕೂಡುವುದಿಲ್ಲ. ಏಕೆಂದರೆ ಉಗುರುಕತ್ತರಿಯೂ ಕಾರ್ಯರೂಪವೇ ಆಗಿರುವುದು. ಆದಕಾರಣ ಈ ದೃಷ್ಟಾಂತಗಳಿಗೆ ಆರೋಪಿತತ್ವ ಅಥವಾ ವಿಕಾರಿತ್ವ ,ಎನ್ನುವ ಅರ್ಥದಲ್ಲಿ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಹಿಂದೆ ಹೇಳಿದ ರೀತಿಯಿಂದ ಸಾದೃಶ್ಯಾದಿ ಅರ್ಥದಲ್ಲಿಯೇ ಮೃತ್ಪಿಂಡಾದಿ ದೃಷ್ಟಾಂತಗಳಿಗೆ ವ್ಯಾಖ್ಯಾನ ಮಾಡಬೇಕು. ಮೃತ್ಪಿಂಡದ ದೃಷ್ಟಾಂತವು ಸಾದೃಶ್ಯಾರ್ಥದಲ್ಲಿಯೂ, ಲೋಹಮಣಿಯ ದೃಷ್ಟಾಂತವು ಪ್ರಾಧಾನ್ಯ ಎಂಬ ಅರ್ಥದಲ್ಲಿಯೂ, ನಖನಿಕೃಂತನ ದೃಷ್ಟಾಂತವು ಕೈಮುತ್ಯ ನ್ಯಾಯದಿಂದಲೂ ಹೇಳಲ್ಪಟ್ಟವೆ. ವಾಚಾರಂಭಣ ಇತ್ಯಾದಿ ವಾಕ್ಯಕ್ಕೆ ನಿತ್ಯತ್ವ ಹಾಗೂ ಪ್ರಾಧಾನ್ಯ ವಿಷಯಕವಾಗಿಯೇ ಅರ್ಥವಿವಕ್ಷಾ ಮಾಡಬೇಕು.

ಹಾಗಾದರೆ ಈ ಪಕ್ಷದಲ್ಲಿಯೂ 'ಸದೇವ ಸೌಮ್ಯೇದಮಗ್ರ ಆಸೀತ್' ಇತ್ಯಾದಿ ಉತ್ತರ ಗ್ರಂಥಗಳಿಗೆ ಸಂಗತ್ಯಭಾವವೆಂಬ ದೋಷವಿದೆ. ನಮಗಾದರೋ ಕಾರ್ಯಕಾರಣ ಭಾವಾದಿಗಳನ್ನು ವಿಸ್ತರಿಸುವುದಕ್ಕಾಗಿ ಪ್ರಯೋಜನವಿದೆ ಎಂದು ಹೇಳಿದರೆ –

ಪ್ರಾಧಾನ್ಯಪ್ರತಿಪತ್ತ್ಯರ್ಥೇ(ರ್ಥಂ) ಸೃಷ್ಟ್ಯಾದೇಶ್ಚೈವ(ಪ) ವಿಸ್ತರಃ ।
ತಸ್ಮಾತ್ತೇನಾಪಿ ಮಾರ್ಗೇಣ ನ ವಿವರ್ತಮತಂ ಭವೇತ್ ॥೧೨೫॥

ಬ್ರಹ್ಮನಿಗೆ ಪ್ರಾಧಾನ್ಯರೂಪತ್ವವನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ಸೃಷ್ಟ್ಯಾದಿಗಳನ್ನು ಪ್ರತಿಪಾದಿಸತಕ್ಕ ಗ್ರಂಥದ ವಿಸ್ತಾರವು ಪ್ರವೃತ್ತವಾಗಿದೆ. ಆದಕಾರಣ ಅಸಂಗತಿಯಿಲ್ಲ. ಸಕಲ ಜಗತ್ತು ಬ್ರಹ್ಮನಲ್ಲಿ ಆರೋಪಿತ ಎನ್ನುವ ಮತವು ಯಾವುದೇ ರೀತಿಯಿಂದ ವಿಚಾರ ಮಾಡಿದರೂ ಯುಕ್ತವಾಗಲಾರದು.

ತದಸಂಖ್ಯಾತದೋಷೇತಂ ಹೇಯಮೇವ ಶುಭಾರ್ಥಿಭಃ ।
ಅಸಂಖ್ಯತ್ವೇನ ದೋಷಾಣಾಂ ಗ್ರಂಥಾಧಿಕ್ಯಭಯಾದಪಿ ॥೧೨೬॥

ಉಪರಮ್ಯತೇ .....।

ಆದ್ದರಿಂದ ಅಸಂಖ್ಯಾತ ದೋಷಗಳಿಂದ ಕೂಡಿರುವ ವಿವರ್ತಮತವು ಸತ್ಸಿದ್ಧಾಂತದ ಮಾಲಕ ಶುಭವನ್ನು ಅಪೇಕ್ಷಿಸುವ ಸಜ್ಜನರಿಂದ ತ್ಯಾಜ್ಯವೇ ಆಗುವುದು. ಮಾಯಾವಾದವು ಅಸಂಖ್ಯಾತ ದೋಷಗಳಿಂದ ಕೂಡಿದೆ. ಅವೆಲ್ಲವನ್ನೂ ಇಲ್ಲಿ ವಿವರಿಸಿಲ್ಲ. ಕೆಲವು ಮುಖ್ಯವಾದ ದೋಷಗಳನ್ನು ಮಾತ್ರ ಹೇಳಲಾಗಿದ್ದು, ಉಪಲಕ್ಷಣದಿಂದ ಉಳಿದ ದೋಷಗಳನ್ನು ತಿಳಿಯಬಹುದು. ಎಲ್ಲ ದೋಷಗಳನ್ನೂ ವಿವರಿಸುವುದಾದರೆ ಗ್ರಂಥಾಧಿಕ್ಯವಾಗುವುದು. ಇದರಿಂದ ಜಿಜ್ಞಾಸುಗಳಿಗೆ ಪ್ರವೃತ್ತಿಯು ಬರದೇ ಹೋಗುವುದು ಎನ್ನುವ ಭಯದಿಂದ ಈ ವಿಷಯದ ವ್ಯಾಖ್ಯಾನ ಇಲ್ಲಿಗೇ ಮುಕ್ತಾಯ ಮಾಡಲ್ಪಡುತ್ತದೆ.

ಬ್ರಹ್ಮನು ಪರಿಣಾಮ ಅಥವಾ ವಿಕಾರತ್ವ ರೂಪದಿಂದ ಜಗತ್ಕಾರಣನು ಆಗದಿದ್ದರೆ, ಯಾವ ರೀತಿಯಲ್ಲಿ ಬ್ರಹ್ಮನಿಗೆ ಜಗತ್ಕಾರಣತ್ವವು ಜನ್ಮಾದಿ ಸೂತ್ರದಲ್ಲಿ ಪ್ರತಿಪಾದಿತವಾಗಿದೆ ಎಂದು ಕೇಳಿದರೆ –

.....ತತೋ ವಿಷ್ಣುರಿಚ್ಛಾಪೂರ್ವಕಮಶ್ರಮಃ ।

ಕರೋತಿ ಪಿತೃವದ್ವಿಶ್ವಂ ಪೂರ್ಣಾಶೇಷಗುಣಾತ್ಮಕಃ ॥೧೨॥

ಹಿಂದೆ ಹೇಳಿರುವ ಪ್ರಕಾರ ಪರಿಣಾಮವಾದವೇ ಮೊದಲಾದವು ನಿರಾಸೆ ಮಾಡಲ್ಪಟ್ಟಿರುವುದರಿಂದ, ತಂದೆಯಂತೆ ನಿಮಿತ್ತನಾಗಿ, ಕೇವಲ ತನ್ನ ಇಚ್ಛಾಪೂರ್ವಕವಾಗಿ, ವಿಷ್ಣುವು ಜಗತ್ತಿನ ಸೃಷ್ಟ್ಯಾದಿಗಳನ್ನು ನಿರಾಯಾಸವಾಗಿ ಮಾಡುತ್ತಾನೆ ಎನ್ನುವುದೇ ಜನ್ಮಾದಿ ಸೂತ್ರದ ಸಿದ್ಧಾಂತ. ಶ್ರೀಹರಿಯು ಪ್ರತ್ಯೇಕವಾಗಿಯೂ ನಿರವಧಿಕಗಳಾದ ಸಮಸ್ತಗಳಾದ ಜ್ಞಾನಾನಂದಾದಿ ಗುಣಗಳ ಸ್ವರೂಪನಾಗಿರುವನು.

ಈ ಪ್ರಕಾರವಾಗಿ ಈ ಅಧ್ಯಾಯದಲ್ಲಿ ಅಥಾತೋ ಬ್ರಹ್ಮಜಿಜ್ಞಾಸಾ ಎನ್ನುವ ಪ್ರಥಮ ಸೂತ್ರದಲ್ಲಿ ಜಿಜ್ಞಾಸ್ಯನಾಗಿ ಹೇಳಲ್ಪಟ್ಟಿರುವ ಬ್ರಹ್ಮಾಖ್ಯ ವಿಷ್ಣುವು ಅನಂತಕಲ್ಯಾಣಗುಣಪರಿಪೂರ್ಣನು ಎನ್ನುವ ಪರಮಪ್ರಮೇಯವು ಎಲ್ಲ ಪ್ರಕಾರದ ಶಬ್ದಗಳ ಸಮನ್ವಯದ ಮೂಲಕ ಸಿದ್ಧವಾಯಿತು. ಸರ್ವೋತ್ತಮನಾದ ವಿಷ್ಣುವಿನ ಜಿಜ್ಞಾಸೆಯು ಅವಶ್ಯ ಕರ್ತವ್ಯ ಎನ್ನುವುದು ಇದರಿಂದ ಸಮರ್ಥಿತವಾಯಿತು.

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದನುವ್ಯಾಖ್ಯಾನೇ ಪ್ರಥಮಾಧ್ಯಾಯಸ್ಯ ಚತುರ್ಥಃ ಪಾದಃ ॥
॥ ಪ್ರಥಮೋಽಧ್ಯಾಯಃ ಸಮಾಪ್ತಃ ॥

*

॥ ಇಲ್ಲಿಗೆ ಅಂಗಾರಕುಲೋತ್ಪನ್ನ ಶ್ರೀನಿವಾಸಮೂರ್ತಿಯ ಸುಪುತ್ರ
ವೆಂಕಟೇಶಮೂರ್ತಿಯಿಂದ ಶ್ರೀಮನ್ನ್ಯಾಯಸುಧಾ ಟೀಕಾನುಸಾರಿ ವಿವರಣೆ ಸಹಿತ
ರಚಿತವಾದ ಶ್ರೀಮದನುವ್ಯಾಖ್ಯಾನದ ಮೊದಲನೆಯ ಅಧ್ಯಾಯ
ನಾಲ್ಕನೆಯ ಪಾದದ ಕನ್ನಡಾನುವಾದವು ಮುಕ್ತಾಯವಾಯಿತು ॥

*

॥ ಮೊದಲನೆಯ ಅಧ್ಯಾಯವು ಮುಕ್ತಾಯವಾಯಿತು॥

*

॥ ಶ್ರೀಕೃಷ್ಣಾರ್ಪಣಮಸ್ತು ॥

* * *

ನಮ್ಮ ಪ್ರಕಾಶನದ ಪ್ರಧಾನ ಪೋಷಕರು

೧. ಶ್ರೀ ಎಸ್. ವೆಂಕಟೇಶ ಮೂರ್ತಿ, ಬೆಂಗಳೂರು

೨. ಶ್ರೀ ಎಂ. ಕೆ. ರಾಘವೇಂದ್ರ ರಾವ್, ಬೆಂಗಳೂರು

೩. ಶ್ರೀ ಎಸ್. ಆರ್. ಪಾಂಡುರಂಗಿ, ಬೆಂಗಳೂರು

೪. ಶ್ರೀ ಬಿ. ಎನ್. ವಿಜಯೇಂದ್ರ ರಾವ್, ಬೆಂಗಳೂರು

೫. ಶ್ರೀ ಟಿ. ಕೆ. ನಾರಾಯಣ ಮೂರ್ತಿ, ಬೆಂಗಳೂರು

೬. ಶ್ರೀಮತಿ ಟಿ. ಕೆ. ಮಧುರಾಬಾಯಿ, ಬೆಂಗಳೂರು

೭. ಶ್ರೀ ರಾಘವೇಂದ್ರ ದರ್ಶನ ಕೇಂದ್ರ, ಬೆಂಗಳೂರು

೮. ಶ್ರೀ ಆರ್. ಹೆಚ್. ಕುಲಕರ್ಣಿ, ಗುಲಬರ್ಗಾ

೯. ಶ್ರೀ ಡಿ. ಎಸ್. ರಂಗನಾಥ್, ಬೆಂಗಳೂರು

ನಮ್ಮ ಪುಸ್ತಕಗಳ ಪ್ರಧಾನ ಮಾರಾಟಗಾರರು

೧. ವೇದಾಂತ ಬುಕ್ ಹೌಸ್, ಚಾಮರಾಜಪೇಟೆ, ಬೆಂಗಳೂರು

೨. ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು

೩. ಸಾಹಿತ್ಯ ಕೇಂದ್ರ, ಪಂಜೆ ಮಂಗೇಶ ರಾವ್ ರಸ್ತೆ, ಮಂಗಳೂರು

೪. ನವಭಾರತ ಪುಸ್ತಕ ಭಂಡಾರ, ಪ್ರಧಾನ ಅಂಚೆ ಕಛೇರಿ ಬಳಿ, ಉಡುಪಿ

೫. ಸಮಾಜ ಪುಸ್ತಕಾಲಯ, ಶಿವಾಜಿ ರಸ್ತೆ, ಧಾರವಾಡ

೬. ಗೀತಾ ಬುಕ್ ಹೌಸ್, ಕೆ. ಆರ್. ಸರ್ಕಲ್, ಮೈಸೂರು

೭. ಆರ್. ಜಿ. ಏಜೆನ್ಸೀಸ್, ಸೋಮವಾರಪೇಟೆ, ರಾಯಚೂರು

೮. ಶ್ರೀ ವಾದಿರಾಜ ಪೂಜಾ ಭಂಡಾರ, ನಂ ೩೪, ಬಿ. ಬಿ. ರಸ್ತೆ, ಶಿವಮೊಗ್ಗ

೯. ಚಂದ್ರಿಕಾ ಸ್ಟೋರ್ಸ್, ಸೋಸಲೆ ವ್ಯಾಸರಾಜಮಠ, ಬಸವನಗುಡಿ, ಬೆಂಗಳೂರು

೧೦. ಪೂಜಾ ಬುಕ್ ಹೌಸ್, ಚಾಮರಾಜಪೇಟೆ ೬ನೇ ಮುಖ್ಯರಸ್ತೆ, ಬೆಂಗಳೂರು

೧೧. ಶ್ರೀ ಗುರುರಾಘವೇಂದ್ರ ಬುಕ್ಸ್ ಅಂಡ್ ಕ್ಯಾಸೆಟ್ಸ್, ಶ್ರೀರಾಘವೇಂದ್ರ ಸ್ವಾಮಿ ಮಠ, ಜೇವರ್ಗಿ ರಸ್ತೆ, ಗುಲಬರ್ಗಾ

ಮಿಥ್ಯಾಸಿದ್ಧಾಂತದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ।
ಜಯತೀರ್ಥಾಖ್ಯ ತರಣಿರ್ಭಾಸತಾಂ ನೋ ಹೃದಂಬರೇ ॥

ಶ್ರೀ ಜಯತೀರ್ಥರು

ಪ್ರಕಾಶಕರು :

ಪವನಜ ಪ್ರಕಾಶನ

ನಂ. 1625, 5ನೇ 'ಬಿ' ಕ್ರಾಸ್, ಎರಡನೆಯ ಬ್ಲಾಕ್
ಬನಶಂಕರಿ 1ನೇ ಸ್ಟೇಜ್, ಬೆಂಗಳೂರು-560 050
ದೂರವಾಣಿ : 6600932